₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಸೋಮವಾರ 05.08.2024 ಸಂಪುಟ: 67 ಸಂಚಿಕೆ: 89 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಹಾಕಿ ತಂಡ ಸೆಮಿಫೈನಲ್‌ಗೆ

ಸೆಮಿಫೈನಲ್ ಆಗಸ್ಟ್ 6ಕ್ಕೆ, ಫೈನಲ್ ಪಂದ್ಯ 8ಕ್ಕೆ

ಒಲಿಂಪಿಕ್ ಕ್ರೀಡಾಕೂಟದ ಪುರುಷರ ಹಾಕಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಬ್ರಿಟನ್ ತಂಡವನ್ನು ಮಣಿಸಿರುವ ಭಾರತ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ.

ಪುಟ ತೆರೆದಂತೆ...

ದುರಂತ ನಾಯಕನಾಗಲು ಸಿದ್ದು ತಯಾರಿಲ್ಲ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಪ್ರವಾಸ ಮಾಡದವರು ಪ್ರವಾಸೋದ್ಯಮ ಮಂತ್ರಿಯಾದರೆ...
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ಮಾತಂದ್ರೆ ಮಾತು



ಕುಮಾರಸ್ವಾಮಿ ಕೇವಲ 37 ಸೀಟ್ ಗೆದ್ದು ನಮ್ಮ ಜತೆ ಬಂದಿದ್ದರು. ಅವರದು ಮ್ಯಾಚ್ ಫಿಕ್ಸಿಂಗ್, ಅವರನ್ನು ನಂಬಬೇಡಿ ಅಂತ ಕಾಂಗ್ರೆಸ್‌ನವರಿಗೆ ಅಂದೇ ಹೇಳಿದ್ದೆ. ನಾನು ಅವರನ್ನು ತುಂಬಾ ಹತ್ತಿರದಿಂದ ನೋಡಿದ್ದೇನೆ. ಕುಮಾರಸ್ವಾಮಿ ಪ್ಯಾಂಟ್‌ನಲ್ಲಿ ಖಾಕಿ ಚೆಡ್ಡಿ ಇದೆ. ಬಿಜೆಪಿಗಿಂತ ಬಿಗಿಯಾದ ಖಾಕಿ ಚೆಡ್ಡಿ ಹಾಕಿದ್ದಾರೆ ಎಂದು ನಾನು ಹೇಳಿದಾಗ ಕೆಲವರು ಕೇಳಲಿಲ್ಲ.

ಜಮೀರ್ ಅಹ್ಮದ್
ಸಚಿವ

ದಾರಿದೀಪೋಕ್ತಿ

ಸಂಕಷ್ಟದ ಸಮಯದ ಒಂದು ಉತ್ತಮ ಸಂಗತಿಯೆಂದರೆ ನಿಮ್ಮ ಹತ್ತಿರದಲ್ಲಿರುವವರ ನಿಜವಾದ ಬಣ್ಣ ಗೊತ್ತಾಗುವುದು. ಸ್ನೇಹಿತರ ನಿಜವಾದ ದರ್ಶನ ಆಗುವುದು ಆಗಲೇ. ನೀವು ಕಷ್ಟದಲ್ಲಿದ್ದಾಗ ಅವರು ತೋರುವ ವರ್ತನೆಯೇ ನಿಜವಾದುದು. ಉಳಿದುದೆಲ್ಲ ನಟನೆ.

ವಕ್ರತುಂಡೋಕ್ತಿ

ಮನುಷ್ಯರು ನಿಜಕ್ಕೂ ಬಹಳ ಕ್ರೇಜಿ. ಅವರು ಮರುಭೂಮಿಯಲ್ಲಿ ಕಾಡುಗಳನ್ನು ಸೃಷ್ಟಿಸಬಲ್ಲರು ಮತ್ತು ಕೆರೆ-ಸರೋವರಗಳನ್ನು ಬತ್ತುವಂತೆ ಮಾಡಬಲ್ಲರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಮೈಸೂರು ಚಲೋ ಪಾದಯಾತ್ರೆ ಆರಂಭ



ಸಂಪುಟ ಸಚಿವರಿಗೆ ಹೈಕಮಾಂಡ್ ಖಡಕ್ ಸೂಚನೆ

ಸಿಎಂಗೆ ಬೆಂಬಲ ಕೊಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ-ಜೆಡಿಎಸ್ ದೋಸ್ತಿಗಳು ಸಾಲು ಸಾಲು ಆರೋಪ ಮಾಡುತ್ತಿದ್ದರೂ ಅನೇಕ ಸಚಿವರು ಮೌನವಾಗಿರುವುದಕ್ಕೆ ಕಾಂಗ್ರೆಸ್ ಹೈಕಮಾಂಡ್ ಅಸಮಾಧಾನ ಹೊರಹಾಕಿದೆ. ಸಚಿವ ಸಂಪುಟದ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲಬೇಕು ಎನ್ನುವ ಖಡಕ್ ಸೂಚನೆ ರವಾನಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ಮುಖ್ಯಮಂತ್ರಿಗಳ ನಿವಾಸದಲ್ಲಿ ನಡೆದ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಎಲ್ಲ ಸಚಿವರು ಭಾಗವಹಿಸಿದ್ದರು. ಈ ವೇಳೆ ಸಚಿವರ ಸಾಧನೆಯನ್ನು ಮೌಲ್ಯಮಾಪನ ಮಾಡಿದ ಹೈಕಮಾಂಡ್, ಕೆಲ ಸಚಿವರು ವರ್ತನೆ ಬದಲಾಯಿಸಿಕೊಳ್ಳದಿದ್ದರೆ ಕಠಿಣ ಕ್ರಮವಹಿಸುವುದು ಅನಿವಾರ್ಯ ಎನ್ನುವ ಎಚ್ಚರಿಕೆ ರವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಮುಖವಾಗಿ ಮುಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಗರಣದ ವಿಷಯದಲ್ಲಿ ಬಹುತೇಕ ಸಚಿವರು ಮೌನವಾಗಿದ್ದಾರೆ. ಸಿಎಂ ವಿರುದ್ಧ ಬಿಜೆಪಿಗರು ಆರೋಪ ಮಾಡುತ್ತಿದ್ದರೂ, ತಮಗೂ ಇದಕ್ಕೂ ಸಂಬಂಧವಿಲ್ಲ ಎನ್ನುವ ರೀತಿ ವರ್ತಿಸುತ್ತಿರುವುದಕ್ಕೆ ಹೈಕಮಾಂಡ್ ಆಕ್ಷೇಪ ವ್ಯಕ್ತಪಡಿಸಿದೆ. ಈ ಪ್ರಕರಣದಲ್ಲಿ ಬಿಜೆಪಿಗರು ಸಿಎಂ ಹಾಗೂ ಪಕ್ಷಕ್ಕೆ ಡ್ಯಾಮೇಜ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಆದ್ದರಿಂದ ಸಿಎಂ ಸಿದ್ದರಾಮಯ್ಯ ಅವರ ಬೆನ್ನಿಗೆ ಎಲ್ಲ ಸಚಿವರು ನಿಲ್ಲಬೇಕು ಎಂದು ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಬಿಜೆಪಿ ಭ್ರಷ್ಟಾಚಾರದ ಬಗ್ಗೆ ಮಾತನಾಡಿ: ಕಾಂಗ್ರೆಸ್ ಸರಕಾರದ ಬಗ್ಗೆ ದೋಸ್ತಿ ಪಕ್ಷಗಳು ಟೀಕಿಸುತ್ತಿವೆ. ಆದರೆ ಬಹುತೇಕ ಸಚಿವರು ಅದಕ್ಕೆ ಪ್ರತ್ಯುತ್ತರ ನೀಡುತ್ತಿಲ್ಲ. ಹಿಂದಿನ ಅವಧಿಯಲ್ಲಿ ನಿಮ್ಮ ನಿಮ್ಮ ಇಲಾಖೆಯಲ್ಲಿ ಯಾವೆಲ್ಲ ಹಗರಣಗಳು ನಡೆದಿವೆ ಎನ್ನುವ ಬಗ್ಗೆ ಪಟ್ಟಿ ಮಾಡಿ. ಬಿಜೆಪಿ-ಜೆಡಿಎಸ್ ಅಧಿಕಾರಾವಧಿಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಜನರಿಗೆ ತಿಳಿಸಿ ಎಂದು ಸೂಚನೆ ನೀಡಿದ್ದಾರೆ.

ಶಾಸಕರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ಪಡೆಯಿರಿ: ಹಲವು ಸಚಿವರು ಪಕ್ಷದ ಶಾಸಕರಿಗೆ ಸಿಗುತ್ತಿಲ್ಲ, ಕಾರ್ಯಕರ್ತರ ಕೆಲಸಗಳನ್ನು ಮಾಡಿಕೊಡುತ್ತಿಲ್ಲ ಎನ್ನುವ ಆರೋಪವಿದೆ. ಪಕ್ಷದ ಶಾಸಕರು, ಕಾರ್ಯಕರ್ತರ ಕೆಲಸಗಳಾದೇ ಇದ್ದರೆ ಮುಂದಿನ ದಿನಗಳಲ್ಲಿ ಪಕ್ಷದ ಸಂಘಟನೆಗೆ ಸಮಸ್ಯೆಯಾಗುತ್ತದೆ. ಆದ್ದರಿಂದ ಸಚಿವರು, ಕಾನೂನಾತ್ಮಕವಾಗಿ ಮಾಡಿಕೊಡಬಹುದಾದ ಕೆಲಸಗಳನ್ನು ಮಾಡಿ. ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಪ್ರಮುಖ ನಾಯಕರನ್ನು ವಿಶ್ವಾಸಕ್ಕೆ ಪಡೆಯಬೇಕು ಎಂದು ಸೂಚನೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್. ಈ ವೇಳೆ ರಣದೀಪ್ ಸಿಂಗ್ ಸುರ್ಜೇವಾಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತಿತರರು ಇದ್ದರು.

ಸಚಿವರಿಗೆ ನಾಯಕರ ಪಾಠವೇನು?

- ಸಚಿವರು ತಮ್ಮ ಇಲಾಖೆಯಲ್ಲಿ ಪೂರ್ಣ ತೊಡಗಿಸಿಕೊಳ್ಳಿ
- ಸರಕಾರ, ಪಕ್ಷದ ಪರವಾಗಿ ಸಚಿವರು ಮಾತನಾಡಬೇಕು
- ಶಾಸಕರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ
- ಮುಡಾ, ವಾಲ್ಮೀಕಿ ಪ್ರಕರಣದಲ್ಲಿ ಸಿಎಂ ಹಾಗೂ ಸರಕಾರವನ್ನು ಸಮರ್ಥಿಸಿಕೊಳ್ಳಬೇಕು
- ಬಿಜೆಪಿ-ಜೆಡಿಎಸ್ ಅವಧಿಯಲ್ಲಿನ ಅಕ್ರಮಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡಿ

ಸಿಎಂ ಪದವಿಗೆ ಹೊಸಬರಲ್ಲ. ಅವರ ರಾಜಕೀಯ ಬದುಕು, ತತ್ವ ಸಿದ್ಧಾಂತ, ಹಿನ್ನೆಲೆ ಅವರು ಹಿಂದೆ ಹೇಗಿದ್ದರು, ಈಗ ಹೇಗಿದ್ದಾರೆ ಎಂಬುದು ಕರ್ನಾಟಕದ ಜನತೆಗೆ ಚೆನ್ನಾಗಿ ತಿಳಿದಿದೆ. ಆದರೆ ಬಿಜೆಪಿಯವರು ರಾಜ್ಯಪಾಲರನ್ನು ಪಿತೂರಿಯ ಸಾಧನವಾಗಿಸಿಕೊಂಡಿದ್ದಾರೆ. ನೋಟಿಸ್ ಕೊಟ್ಟು ಸರಕಾರ ಅಸ್ಥಿರಗೊಳ್ಳಲಿದೆ ಎಂಬ ಭಾವನೆ ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ.

- ಕೆ.ಸಿ.ವೇಣುಗೋಪಾಲ್
ಎಐಸಿಸಿ ಪ್ರಧಾನ ಕಾರ್ಯದರ್ಶಿ

ಸ್ಥಾನ ಕಳೆದುಕೊಳ್ಳುವ ಆರೇಳು ಸಚಿವರು

ಸಭೆಯಲ್ಲಿ ಆರೇಳು ಸಚಿವರ ಕಾರ್ಯಕ್ಷಮತೆ ಬಗ್ಗೆ ನೇರವಾಗಿಯೇ ಕೆ.ಸಿ.ವೇಣುಗೋಪಾಲ್ ಹಾಗೂ ರಂದೀಪ್ ಸಿಂಗ್ ಸುರ್ಜೇವಾಲ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅಧಿಕಾರಕ್ಕೆ ಬಂದು 15 ತಿಂಗಳು ಕಳೆಯುತ್ತಾ ಬಂದರೂ ಕೆಲ ಸಚಿವರ ಬಗ್ಗೆ ಜನರಿಗೆ ಗೊತ್ತಿಲ್ಲ. ಇಲಾಖೆಯನ್ನು ಸಮರ್ಥವಾಗಿ ನಿಭಾಯಿಸುತ್ತಿಲ್ಲ. ಸಚಿವರು ಈ ಹಂತದಲ್ಲಿಯೂ ತಮ್ಮ ವರ್ತನೆ ಬದಲಾಯಿಸಿಕೊಳ್ಳದಿದ್ದರೆ, ಅನಿವಾರ್ಯವಾಗಿ ಹೊಸಬರಿಗೆ ಅವಕಾಶ ನೀಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

40 ಅಂಶಗಳ ಕುರಿತು ಸಂಪುಟ ಚರ್ಚೆ

ತಿದ್ದುಪಡಿ ವಿಧೇಯಕ ಶೀಘ್ರ ಮಂಡನೆ

ವಕ್ಫ್ ಅಧಿಕಾರಕ್ಕೆ ಮೂಗುದಾರ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಎನ್‌ಡಿಎ ಸರಕಾರ, ವಕ್ಫ್ ಬೋರ್ಡ್ 'ಅಪರಿಮಿತಿ ಅಧಿಕಾರ'ಕ್ಕೆ ಮೂಗುದಾರ ಹಾಕುವ ನಿಟ್ಟಿನಲ್ಲಿ ಶೀಘ್ರದಲ್ಲೇ ತಿದ್ದುಪಡಿ ವಿಧೇಯಕ ಮಂಡನೆಗೆ ಮುಂದಾಗಿದೆ.

ದೆಹಲಿಯಲ್ಲಿ ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ 'ವಕ್ಫ್ ಕಾಯಿದೆ-2013'ಕ್ಕೆ ಮುಖ್ಯವಾಗಿ 40 ತಿದ್ದುಪಡಿಗಳನ್ನು ಮಾಡಬೇಕಿರುವ ಬಗ್ಗೆ ಚರ್ಚಿಸಲಾಗಿದೆ ಎಂದು ಹೇಳಲಾಗಿದೆ. ಕೆಲ ಮೂಲಗಳ ಪ್ರಕಾರ, ವಕ್ಫ್ ಕಾಯಿದೆಯಲ್ಲಿ 40 ತಿದ್ದುಪಡಿಗಳನ್ನು ಮಾಡುವುದಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ. ಮಹತ್ವದ ಈ ತಿದ್ದುಪಡಿ ವಿಧೇಯಕ ಇದೇ ವಾರ ಸಂಸತ್‌ನಲ್ಲಿ ಮಂಡನೆಯಾಗುವ ಸಾಧ್ಯತೆ ಇದೆ.

ಯಾವುದೇ ಆಸ್ತಿಯನ್ನು 'ವಕ್ಫ್ ಆಸ್ತಿ' ಎಂದು ಘೋಷಿಸುವ ವಕ್ಫ್ ಬೋರ್ಡ್‌ಗೆ ಇರುವ ಅಪರಿಮಿತಿ ಅಧಿಕಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕಾಯಿದೆಗೆ ಅಗತ್ಯ ತಿದ್ದುಪಡಿಗಳನ್ನು ತರಲಾಗುವುದು. ವಕ್ಫ್ ಆಸ್ತಿ ಎಂದು ಘೋಷಣೆಗೂ ಮುನ್ನ ಆಸ್ತಿಯ ವ್ಯಾಪ್ತಿ ಹಾಗೂ ಭೂಮಿಯ ಕಡ್ಡಾಯ ಪರಿಶೀಲನೆ, ಬೋರ್ಡ್ ಸಂಯೋಜನೆಯಲ್ಲಿ ಬದಲಾವಣೆ, ಆಸ್ತಿ ಮೇಲೆ ವಕ್ಫ್ ಹಾಗೂ ಮಾಲೀಕರ ನಡುವಿನ ವ್ಯಾಜ್ಯಗಳ ಕಡ್ಡಾಯ ಪರಿಶೀಲನೆ ಎಂಬ ಅಂಶಗಳೂ ಸೇರಿದಂತೆ ಹಲವು ಮುಖ್ಯವಾದ ತಿದ್ದುಪಡಿಗಳನ್ನು ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದು ತಿಳಿದುಬಂದಿದೆ.

→ 4

ಮುಖ್ಯಾಂಶಗಳು

- ವಕ್ಫ್ ಆಸ್ತಿ ಎಂದು ಘೋಷಿಸುವ ಅಪರಿಮಿತಿ ಅಧಿಕಾರಕ್ಕೆ ಕಡಿವಾಣ ಹಾಕಲು ಕಾಯಿದೆಗೆ ತಿದ್ದುಪಡಿ
- ವಕ್ಫ್ ಆಸ್ತಿ ಎಂದು ಘೋಷಣೆಗೂ ಮುನ್ನ ಆಸ್ತಿಯ ವ್ಯಾಪ್ತಿ-ಭೂಮಿಯ ಕಡ್ಡಾಯ ಪರಿಶೀಲನೆ
- ವಕ್ಫ್ ಬೋರ್ಡ್ ಸಂಯೋಜನೆಯಲ್ಲಿ, ಕಾರ್ಯವೈಖರಿಗೆ ಸಮಗ್ರ ಬದಲಾವಣೆ ತರುವ ಯತ್ನ
- ಆಸ್ತಿ ಮೇಲೆ ವಕ್ಫ್ ಬೋರ್ಡ್ ಒಡೆತನ ಹಕ್ಕು-ಮೂಲ ಮಾಲೀಕರ ವ್ಯಾಜ್ಯ ಪರಿಶೀಲನೆ ಕಡ್ಡಾಯ

ವಕ್ಫ್ ಬೋರ್ಡ್ ವಶದಲ್ಲಿ 9.4 ಲಕ್ಷ ಎಕರೆ

ಹಾಲಿ ಇರುವ ಕಾಯಿದೆ ಪ್ರಕಾರ ವಕ್ಫ್ ಮಂಡಳಿ ದೇಶದ ಯಾವುದೇ ಭಾಗದಲ್ಲಿನ ಯಾವುದೇ ಆಸ್ತಿಯನ್ನು 'ವಕ್ಫ್ ಬೋರ್ಡ್'ಗೆ ಸೇರಿದ್ದು ಎಂದು ಘೋಷಿಸಬಹುದಾಗಿದೆ. ಪ್ರಸ್ತುತ ದೇಶಾದ್ಯಂತ ವಕ್ಫ್ ಬೋರ್ಡ್ ವಶದಲ್ಲಿ 9.4 ಲಕ್ಷ ಎಕರೆ ಭೂಮಿ ಹಾಗೂ 8.7 ಲಕ್ಷ ಆಸ್ತಿಗಳು ಇವೆ. ಅವುಗಳ ಮೌಲ್ಯವೇ ಅದೆಷ್ಟೋ ಲಕ್ಷ ಕೋಟಿ ರು. ಗಳಾಗುತ್ತದೆ ಎಂಬ ಅಂದಾಜಿದೆ. ಮುಸ್ಲಿಂ ಕಾನೂನಿನಡಿ ಧಾರ್ಮಿಕ ದೇಣಿಗೆ ಅಥವಾ ದಾನ ರೂಪದಲ್ಲಿ ವ್ಯಕ್ತಿಗಳು ನೀಡುವ ಆಸ್ತಿಗಳ ನಿಯಂತ್ರಣಕ್ಕೆ 1995ರಲ್ಲಿ ವಕ್ಫ್ ಕಾಯಿದೆ ಜಾರಿಗೊಳಿಸಲಾಯಿತು. ಈ ರೀತಿ ನೀಡಲಾದ ಆಸ್ತಿಗಳನ್ನು 'ವಕ್ಫ್ ಬೋರ್ಡ್ ಆಸ್ತಿ' ಎಂದು ಘೋಷಿಸಲಾಗುತ್ತಿತ್ತು. ರಾಜ್ಯ ಸರಕಾರಗಳು ವಕ್ಫ್ ಆಸ್ತಿಗಳ ಸಮೀಕ್ಷೆ ನಡೆಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದನ್ನು ಕೇಂದ್ರ ಸರಕಾರ ಗಮನಿಸಿದೆ. ಹಾಗಾಗಿ, ತಿದ್ದುಪಡಿ ಕಾಯಿದೆ ಜಾರಿ ಬಳಿಕ ಆಸ್ತಿ ದುರುಪಯೋಗ ತಡೆಯಲು ಜಿಲ್ಲಾಧಿಕಾರಿಗೇ ವಕ್ಫ್ ಆಸ್ತಿಗಳ ಪರಿಶೀಲನೆ ಹೊಣೆಗಾರಿಕೆ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ದೊಡ್ಡಗೌಡರ ಮೆಟ್ರೋ ಸಂಚಾರ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಭಾನುವಾರ ದೆಹಲಿ ಮೆಟ್ರೋದಲ್ಲಿ ಪ್ರಯಾಣಿಸಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

2ನೇ ದಿನ 22 ಕಿ.ಮೀ. ನಡಿಗೆ | ಸರಕಾರದ ವಿರುದ್ಧ ಘೋಷಣೆ

ರಾಮನಗರ ತಲುಪಿದ ಪಾದಯಾತ್ರೆ

ಬೆಂಗಳೂರು: ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿದ ಬಿಜೆಪಿ-ಜೆಡಿಎಸ್ ದೋಸ್ತಿ ನಾಯಕ ಪಾದಯಾತ್ರೆ ಕೆಂಗಲ್ ತಲುಪಿದೆ.

ಬಿಡದಿಯಲ್ಲಿ ವಾಸ್ತವ್ಯ ಹೂಡಿದ್ದ ಬಿಜೆಪಿ-ಜೆಡಿಎಸ್ ನಾಯಕರು ಎರಡನೇ ದಿನ ಸುಮಾರು 22 ಕಿ.ಮೀ. ಕ್ರಮಿಸಿ ರಾಮನಗರಕ್ಕೆ ತಲುಪಿ, ಅಲ್ಲೇ ವಾಸ್ತವ್ಯ ಹೂಡಿದ್ದಾರೆ. ದಾರಿ ಮಧ್ಯೆ ಬಿಡದಿಯಲ್ಲಿ ತಟ್ಟೆ ಇಡ್ಲಿ ಸವಿದು ಉಪಹಾರ ಮುಗಿಸಿ ಪಾದಯಾತ್ರೆಯನ್ನು ಮುಂದುವರಿಸಿದರು. ಪಾದಯಾತ್ರೆಯುದ್ದಕ್ಕೂ ಎಲ್ಲ ಮುಖಂಡರು ಕಾರ್ಯಕರ್ತರು ಕಾಂಗ್ರೆಸ್ ಸರಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಎರಡನೇ ದಿನದ ಪಾದಯಾತ್ರೆಗೆ ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ, ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಜೆಡಿಎಸ್ ಸಿ.ಬಿ.ಸುರೇಶ್ ಬಾಬು ಸೇರಿದಂತೆ ಹಲವರಿದ್ದರು.

ರಾಜೀನಾಮೆವರೆಗೂ ಕಿಚ್ಚು ಆರುವುದಿಲ್ಲ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ-ಜೆಡಿಎಸ್ ಪಾದಯಾತ್ರೆ ಪರಿಣಾಮವಾಗಿ ಕಾಂಗ್ರೆಸ್ಸಿಗರಿಗೆ ಚಿಂತೆ ಆರಂಭವಾಗಿದೆ. ನಿದ್ರೆ ಬಾರದ ಸ್ಥಿತಿ ಉಂಟಾಗಿದೆ. ಖುರ್ಚಿ ಕಳೆದುಕೊಳ್ಳುವ ಭಯದಿಂದ ಸಿಎಂಗೆ ನಿದ್ರೆ ಬರುತ್ತಿಲ್ಲ. ಡಿಸಿಎಂಗೆ ಖಾಲಿಯಾದ ಕುರ್ಚಿ ಮೇಲೆ ಕೂರುವ ಆಸೆಯಿಂದ ನಿದ್ರೆ ಬರುತ್ತಿಲ್ಲ. ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗೆ ಇಳಿಸುವವರೆಗೂ ನಮ್ಮ ಹೋರಾಟದ ಕಿಚ್ಚು ಆರುವುದಿಲ್ಲ ಎಂದು ಎಚ್ಚರಿಸಿದರು.

ಬಾಂಗ್ಲಾ ಘರ್ಷಣೆ 79 ಮಂದಿ ಸಾವು

ಢಾಕಾ: ಬಾಂಗ್ಲಾದೇಶದ ಪ್ರಧಾನಮಂತ್ರಿ ಶೇಖ್ ಹಸೀನಾ ರಾಜೀನಾಮೆಗೆ ಒತ್ತಾಯಿಸಿ ವಿದ್ಯಾರ್ಥಿಗಳ ಸಂಘಟನೆಗಳು ಕರೆ ನೀಡಿರುವ ಅಸಹಕಾರ ಚಳವಳಿಯ ಮೊದಲ ದಿನ ಭಾನುವಾರ ಪ್ರತಿಭಟನಾಕಾರರು ಮತ್ತು ಆಡಳಿತಾ ರೂಢ ಅವಾಮಿ ಲೀಗ್ ಬೆಂಬಲಿಗರ ನಡುವಿನ ಸಂಘರ್ಷ ಹಿಂಸಾರೂಪಕ್ಕೆ ತಿರುಗಿದ್ದು, 79 ಮಂದಿ ಮೃತಪಟ್ಟಿದ್ದಾರೆ. ಭಾನುವಾರ ಸಂಜೆಯಿಂದ ಅನಿರ್ದಿಷ್ಟಾವಧಿಗೆ ಕರ್ಫ್ಯೂ ವಿಧಿಸಲು ಗೃಹ ಸಚಿವಾಲಯ ನಿರ್ಧರಿಸಿದೆ. ಫೇಸ್‌ಬುಕ್, ಮೆಸೆಂಜರ್, ವಾಟ್ಸ್ಆ್ಯಪ್, ಇನ್ಸ್ಟಾಗ್ರಾಮ್ ಸ್ಥಗಿತಕ್ಕೆ ಸೂಚಿಸಲಾಗಿದೆ.

ಭಾರತೀಯರಿಗೆ ಎಚ್ಚರಿಕೆ: ಸಿಲಹಟ್‌ನ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಭಾರತದ ವಿದ್ಯಾರ್ಥಿಗಳು, ಪ್ರಜೆಗಳು ಕಚೇರಿಯ ಜತೆ ಸಂಪರ್ಕದಲ್ಲಿ ಇರಬೇಕು ಎಂದು ರಾಯಭಾರ ಕಚೇರಿ ಎಚ್ಚರಿಕೆಯ ಸಂದೇಶ ರವಾನಿಸಿದೆ.

ಒಂದಕ್ಕೊಂದು ಸಾಕ್ಷ್ಯ ಮ್ಯಾಚ್ ಮಾಡುತ್ತಿರುವ ಪೊಲೀಸ್

ಡಿ ಗ್ಯಾಂಗ್ ವಿರುದ್ಧ 200 ಸಾಕ್ಷ್ಯ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆಯನ್ನು ಇನ್ನಷ್ಟು ಚುರುಕುಗೊಳಿಸಿರುವ ಪೊಲೀಸರು ಇಲ್ಲಿಯವರೆಗೆ ಸುಮಾರು 200 ಸಾಕ್ಷ್ಯಗಳನ್ನು ಕಲೆ ಹಾಕಿದ್ದು, ಇದೀಗ ಸಾಕ್ಷ್ಯಗಳನ್ನು ಒದ್ದಕ್ಕೊಂದು ಪೂರಕವಾಗಿರುವಂತೆ ಹೊಂದಿಸಿದ್ದಾರೆ. ಅಲ್ಲದೆ ಪ್ರಕರಣದಲ್ಲಿ ಪೊಲೀಸರು ತಂತ್ರಜ್ಞಾನ ಬಳಕೆ ಮಾಡುತ್ತಿದ್ದು ಸಾಕ್ಷ್ಯವನ್ನು ಇನ್ನಷ್ಟು ಪ್ರಬಲಗೊಳಿಸುತ್ತಿದ್ದಾರೆ.

ಕೊಲೆ ನಡೆದಿರುವ ಶೆಡ್, ದರ್ಶನ್ ಮನೆ, ಸ್ಟೋನಿ ಬ್ರೂಕ್ ರೆಸ್ಟೊರೆಂಟ್, ಶೆಡ್‌ಗೆ ಹೋಗುವ ರಸ್ತೆ ಇನ್ನೂ ಹಲವು ಕಡೆಗಳಿಂದ ಪೊಲೀಸರು ಸಿಸಿಟಿವಿ ದೃಶ್ಯಗಳನ್ನು ಕಲೆ ಹಾಕಿದ್ದಾರೆ. ಮಾತ್ರವಲ್ಲದೆ ಕೊಲೆ ನಡೆದ ಸ್ಥಳದಲ್ಲಿ ಚಿತ್ರೀಕರಣ ಮಾಡಲಾಗಿರುವ ಮೊಬೈಲ್ ವಿಡಿಯೊಗಳನ್ನು ಸಹ ಕಲೆ ಹಾಕಿದ್ದಾರೆ. ಈ ವಿಡಿಯೊ ಸಾಕ್ಷಿಗಳನ್ನು ಇನ್ನಷ್ಟು ಬಲಗೊಳಿಸಲು ವಿಷ್ಯುಯಲ್ ಕಂಪಾರಿಷನ್ ತಂತ್ರಜ್ಞಾನ ಪೊಲೀಸರು ಬಳಸಿದ್ದಾರೆ.

→ 4

- ಶೆಡ್, ದರ್ಶನ್ ಮನೆ, ಸ್ಟೋನಿ ಬ್ರೂಕ್ ರೆಸ್ಟೊರೆಂಟ್, ಶೆಡ್‌ಗೆ ಹೋಗುವ ರಸ್ತೆಯಲ್ಲಿನ ಸಿಸಿಟಿವಿ ದೃಶ್ಯ ಸಂಗ್ರಹ
- ಸಂಗ್ರಹಿಸಿರುವ ವಿಡಿಯೊಗಳನ್ನು ಎಫ್‌ಎಸ್‌ಎಲ್‌ನಲ್ಲಿ ಈಗಾಗಲೇ ಒಮ್ಮೆ ಪರಿಶೀಲನೆಗೆ ಒಳಪಡಿಸಲಾಗಿದೆ

ವಿಸ್ಕಾನ್ಸಿನ್ ಮ್ಯಾಡಿಸನ್ ವಿವಿ ತಂಡ ಸಂಶೋಧನೆ

ಭೂಮಿಯಿಂದ ದೂರ ಸರಿಯುತ್ತಿರುವ ಚಂದ್ರ

ಇನ್ಮುಂದೆ ದಿನಕ್ಕೆ 25 ಗಂಟೆ

ದೆಹಲಿ: ಚಂದ್ರ ಶತಶತಮಾನಗಳಿಂದ ಭೂಮಿಯ ಮೇಲಿನ ಆಕಾಶದಲ್ಲಿದ್ದನು. ಸಾಹಿತಿಗಳು, ಕಲಾವಿದರು, ಕವಿಗಳು ಚಂದ್ರನನ್ನು ಬಗೆಬಗೆಯಲ್ಲಿ ಚಂದ್ರನನ್ನು ವರ್ಣಿಸುತ್ತಾರೆ. ಚಂದ್ರನು ಮಕ್ಕಳನ್ನು ಮೋಡಿ ಮಾಡಿದ್ದಾನೆ. ಆದರೆ ನಮ್ಮ ಭೂಮಿಯ ಉಪಗ್ರಹವಾಗಿರುವ ಚಂದ್ರನು ನಿಧಾನವಾಗಿ ಭೂಮಿಯಿಂದ ದೂರ ಸರಿಯುತ್ತಿದ್ದಾನೆ. ಪರಿಣಾಮವಾಗಿ ಇನ್ಮುಂದೆ ದಿನಕ್ಕೆ 24 ಗಂಟೆ ಬದಲಾಗಿ 25 ಗಂಟೆಯಾಗಲಿದೆ.

ಹೌದು..! ವಿಸ್ಕಾನ್ಸಿನ್ ಮ್ಯಾಡಿಸನ್ ವಿಶ್ವವಿದ್ಯಾಲಯದ ಸಂಶೋಧನಾ ತಂಡವೊಂದು ಈ ಕುರಿತು ಸಂಶೋಧನೆ ನಡೆಸಿದ್ದು, ಚಂದ್ರ ನಿಧಾನವಾಗಿ ಭೂಮಿಯಿಂದ ದೂರ ಸರಿಯುತ್ತಿದ್ದು, ಇದು ನಮ್ಮ ಗ್ರಹದಲ್ಲಿನ ದಿನಗಳ ಮೇಲೆ ಪರಿಣಾಮ ಬೀರುತ್ತದೆ. ಇನ್ಮುಂದೆ ದಿನಕ್ಕೆ 24 ಗಂಟೆ ಬದಲಾಗಿ 25 ಗಂಟೆಯಾಗಲಿದೆ. ಚಂದ್ರನ ಜರುಗುವಿಕೆಯು ಹೊಸದೇನಲ್ಲ, ಇದು ಹಲವು ದಶಕಗಳಿಂದಲೂ ನಡೆದುಕೊಂಡು ಬಂದಿದೆ. 1.4 ಶತಕೋಟಿ ವರ್ಷಗಳ ಹಿಂದೆ ಭೂಮಿಯ ಮೇಲೆ ಒಂದು ದಿನ ಕೇವಲ 18 ಗಂಟೆಗಳು ಮಾತ್ರ ಇತ್ತು. ಈಗ ವರ್ಷಕ್ಕೆ ಸರಿಸುಮಾರು 3.8 ಸೆಂ.ಮೀ.ಗಳಷ್ಟು ಅಂತರದಲ್ಲಿ ಚಂದ್ರ ಭೂಮಿಯಿಂದ ಹಿಂದೆ ಸರಿಯುತ್ತಿದೆ. ಅಂತಿಮವಾಗಿ ಇದು 200 ಮಿಲಿಯನ್ ವರ್ಷಗಳಲ್ಲಿ ಭೂಮಿಯ ದಿನಗಳನ್ನು 25 ಗಂಟೆಗಳ ಕಾಲ ಉಂಟುಮಾಡುತ್ತದೆ ಎಂದು ಸಂಶೋಧನಾ ತಂಡ ತಿಳಿಸಿದೆ.

- 1.4 ಶತಕೋಟಿ ವರ್ಷಗಳ ಹಿಂದೆ ಭೂಮಿಯ ಮೇಲೆ ಒಂದು ದಿನ ಕೇವಲ 18 ಗಂಟೆ ಮಾತ್ರ ಇತ್ತು
- ಈಗ ವರ್ಷಕ್ಕೆ ಸುಮಾರು 3.8 ಸೆಂ. ಮೀ. ಅಂತರದಲ್ಲಿ ಚಂದ್ರ ಭೂಮಿಯಿಂದ ಹಿಂದೆ ಸರಿಯುತ್ತಿದೆ
- ಅಂತಿಮವಾಗಿ 200 ಮಿಲಿಯನ್ ವರ್ಷಗಳಲ್ಲಿ ಭೂಮಿಯ ದಿನಗಳನ್ನು 25 ಗಂಟೆ ಕಾಲ ಮಾಡುತ್ತದೆ



ಚಂದ್ರ ದೂರ ಸರಿಯುತ್ತಿದ್ದಂತೆ ಭೂಮಿಯು ತಿರುಗುವ ಫಿಗರ್ ಸ್ಕೆಟರ್‌ನಂತಿದೆ. ನಮ್ಮ ತೋಳುಗಳನ್ನು ಚಾಚಿದಂತೆ ನಿಧಾನಗೊಳಿಸುತ್ತದೆ. ಇದು ಭೂಮಿಯ ತಿರುಗುವಿಕೆಯ ವೇಗ ಮತ್ತು ಭೂಖಂಡದ ದಿಕ್ಸೂಚಿ ಸೇರಿದಂತೆ ವಿವಿಧ ಅಂಶಗಳಿಂದ ಭೂ ವೈಜ್ಞಾನಿಕ ಸಮಯದ ಮಾಪಕಗಳ ಮೇಲೆ ಏರಿಳಿತಗೊಂಡಿದೆ.

- ಸ್ಟಿಫನ್ ಮೇಯರ್ಸ್
ವಿಸ್ಕಾನ್ಸಿನ್ ಮ್ಯಾಡಿಸನ್ ವಿವಿ ಭೂ ವಿಜ್ಞಾನದ ಪ್ರಾಧ್ಯಾಪಕ

ಪಿಎಸ್‌ಐ ಸಾವು: ಯಾದಗಿರಿಗೆ ಸಿಐಡಿ

ಯಾದಗಿರಿ: ನಗರ ಠಾಣೆ ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವಿನ ಪ್ರಕರಣವನ್ನು ರಾಜ್ಯ ಸರಕಾರ ಸಿಐಡಿಗೆ ವಹಿಸುತ್ತಿದ್ದಂತೆ ಭಾನುವಾರ ಸಿಡಿಐ ಡಿವೈಎಸ್‌ಪಿ ಪುನೀತ್ ಅವರ ತಂಡ ಯಾದಗಿರಿಗೆ ಆಗಮಿಸಿದೆ. ಯಾದಗಿರಿ ನಗರ ಪೊಲೀಸರಿಂದ ಪ್ರಕರಣದ ಫೈಲ್ ಸಿಐಡಿ ತಂಡ ಪಡೆಯಲಿದ್ದು, ಎಫ್ಐಆರ್ ಪ್ರತಿ, ಪಂಚನಾಮೆ ವರದಿ ಸೇರಿದಂತೆ ವಿವಿಧ ಆಯಾಮಗಳ ಮಾಹಿತಿಯನ್ನು ತಂಡ ಪಡೆಯಲಿದೆ.

ಪದಕ ವಿಜೇತರಿಗೆ ಸರಕಾರಿ ನೌಕರಿ

ಬೆಂಗಳೂರು: ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪದಕ ವಿಜೇತ 12 ಕ್ರೀಡಾಪಟುಗಳಿಗೆ ಸರಕಾರ ನೌಕರಿ ಕೊಡಲಾಗಿದ್ದು, ಸಿಎಂ ಸಿದ್ದರಾಮಯ್ಯ ಅವರು ಭಾನುವಾರ ನೇಮಕ ಆದೇಶ ಭಾನುವಾರ ವಿತರಿಸಿದರು. ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಪ್ಯಾರಾ ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್‌ಗಳಲ್ಲಿ ಪದಕ ವಿಜೇತ ಸಾಧಕ ಕ್ರೀಡಾಪಟುಗಳಿಗೆ ವಿವಿಧ ಇಲಾಖೆಗಳಲ್ಲಿ ಗ್ರೂಪ್ ಎ, ಬಿ, ಇತರ ಹುದ್ದೆಗಳಿಗೆ ಪತ್ರ ವಿತರಿಸಿದರು.

19,300 ಡೆಂಘೀ ಪ್ರಕರಣ ದಾಖಲು

ಬೆಂಗಳೂರು: ಡೆಂಘೀ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದ್ದು, ಆಗಸ್ಟ್ 3ರವರೆಗೆ ರಾಜ್ಯದಲ್ಲಿ ಒಟ್ಟು 19,300 ಪ್ರಕರಣಗಳು ದಾಖಲಾಗಿದೆ. ಒಟ್ಟು ಡೆಂಘೀ ಪ್ರಕರಣಗಳಲ್ಲಿ ಶೇ.50ರಷ್ಟು ಪ್ರಕರಣಗಳು ಕಳೆದ 2 ವಾರಗಳಲ್ಲಿ ದಾಖಲಾಗಿರುವುದು ತೀವ್ರ ಆತಂಕಕ್ಕೀಡು ಮಾಡಿದೆ. ಶೇ.46ರಷ್ಟು ಪ್ರಕರಣಗಳು ಬೆಂಗಳೂರುವೊಂದರಲ್ಲೇ ಬೆಳಕಿಗೆ ಬಂದಿವೆ.

ಹನಿಯೆ, ಹಿಜ್ಬುಲ್ಲಾ ಕಮಾಂಡರ್‌ನ ಹತ್ಯೆ | ಇರಾನ್-ಇಸ್ರೇಲ್ ನಡುವೆ ಬಿಕ್ಕಟ್ಟು

ಮಧ್ಯಪ್ರಾಚ್ಯದಲ್ಲಿ ಯುದ್ಧ ಭೀತಿ

ಟೆಹರಾನ್: ಇರಾನ್ ದೇಶದ ಒಳಗಡೆಯೇ ಹನಿಯೆ ಮತ್ತು ಹಿಜ್ಬುಲ್ಲಾ ಕಮಾಂಡರ್‌ನನ್ನು ಹತ್ಯೆ ಮಾಡಿದ್ದು ಇರಾನ್ ನಾಯಕತ್ವಕ್ಕೆ ಭಾರಿ ಮುಜುಗರ ಉಂಟುಮಾಡಿದ್ದು, ಮಧ್ಯಪ್ರಾಚ್ಯ ದಲ್ಲಿ ಯುದ್ಧದ ಭೀತಿ ಆವರಿಸಿದೆ.

ಹನಿಯೆ ಉಳಿದುಕೊಂಡಿದ್ದ ಅತಿಥಿ ಗೃಹದಲ್ಲಿ ವ್ಯಾಪಕ ಭದ್ರತೆ ಮಾಡಲಾಗಿತ್ತು. ಇದನ್ನು ಭೇದಿಸಿ ಇಸ್ರೇಲ್ ಪಡೆ ಹತ್ಯೆ ಮಾಡಿತ್ತು. ಈ ಘಟನೆ ಬಳಿಕ ಭದ್ರತೆಯಲ್ಲಿ ಉಂಟಾದ ಲೋಪಕ್ಕೆ ಸಂಬಂಧಿಸಿದಂತೆ ಗುಪ್ತಚರ ಇಲಾಖೆಯ ಹಿರಿಯ ಅಧಿಕಾರಿಗಳು, ಸೇನಾಧಿಕಾರಿಗಳು ಹಾಗೂ ರಾಜಧಾನಿಯ ಸೇನೆಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಮಂದಿಯನ್ನು ಇರಾನ್ ಸರಕಾರ ಬಂಧಿಸಿದೆ.

ಹನಿಯೆ ಹತ್ಯೆಗೆ ಇಸ್ರೇಲ್ ಕಾರಣ ಎಂದು ಹಮಾಸ್ ಇರಾನ್‌ನ ಪ್ಯಾರಾ ಮಿಲಿಟರಿ ರೆವಲ್ಯೂಷನರಿ ಗಾರ್ಡ್ ತಿಳಿಸಿದೆ. ಇದಕ್ಕೆ ಪ್ರತೀಕಾರ ತಿರಿಸಿಕೊಳ್ಳುವುದಾಗಿ ಅದು ಹೇಳಿದೆ. ಈ ನಡುವೆ ಲೆಬನಾನ್ ರಾಜಧಾನಿ ಬೈರುತ್ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿ ಬಿಕ್ಕಟ್ಟನ್ನು ಮತ್ತಷ್ಟು ಸಂಕೀರ್ಣ ಗೊಳಿಸಿದೆ. ಈ ಘಟನೆ ಬಳಿಕ ಇರಾನ್ ನೆರವಿನೊಂದಿಗೆ ಸೇಡು ತೀರಿಸಿಕೊಳ್ಳಲು ಮುಂದಾಗಿರುವ ಹಿಜ್ಬುಲ್ಲಾ ಪಡೆ ಇಸ್ರೇಲ್ ಮೇಲಿನ ದಾಳಿಗೆ ಸಿದ್ಧವಾಗಿವೆ.

ಈ ಎರಡು ಪ್ರಮುಖ ಕಾರಣಗಳು ಇರಾನ್-ಇಸ್ರೇಲ್ ನಡುವಿನ ಯುದ್ಧಕ್ಕೆ ಕಾರಣವಾಗಿವೆ. ಇರಾನ್ ಪರವಾಗಿ ಲೆಬನಾನ್ ಕೂಡ ನಿಲ್ಲಲ್ಲಿದೆ ಎಂದು ಪ್ಯಾರಾ ಮಿಲಿಟರಿ ರೆವಲ್ಯೂಷನರಿ ಗಾರ್ಡ್ ತಿಳಿಸಿದೆ. ಈಗಾಲೇ ಈ ಎರಡು ರಾಷ್ಟ್ರಗಳು ಮಿಲಿಟರಿ ಸಿದ್ಧತೆ ಮಾಡಿಕೊಂಡಿದೆ. ಇಸ್ರೇಲ್ ಮೇಲೆ ಯಾವುದೇ ಕ್ಷಣದಲ್ಲಿ ಇರಾನ್ ದಾಳಿ ಮಾಡುವ ಸಾಧ್ಯತೆ ಇದೆ. ರಷ್ಯಾ-ಉಕ್ರೇನ್, ಇಸ್ರೇಲ್-ಪ್ಯಾಲೆಸ್ತಿನ್ ನಡುವಿನ ಸಮರದ ಬಳಿಕ ಭುಗಿಲೆದ್ದಿರುವ 3ನೇ ಪ್ರಾದೇಶಿಕ ಸಮರ ಇದಾಗಲಿದೆ.

- ಇರಾನ್ ನೆರವಿನೊಂದಿಗೆ ಸೇಡು ತೀರಿಸಿಕೊಳ್ಳಲು ಮುಂದಾಗಿರುವ ಹಿಜ್ಬುಲ್ಲಾ ಪಡೆ
- ಇಸ್ರೇಲ್ ಮೇಲೆ ಯಾವುದೇ ಕ್ಷಣದಲ್ಲಿ ಇರಾನ್ ದಾಳಿ ಮಾಡುವ ಸಾಧ್ಯತೆ ತೀವ್ರ

ಪ್ರತೀಕಾರ ಶತಸಿದ್ಧ: ಇರಾನ್

ಕಡಿಮೆ ಶ್ರೇಣಿಯ ಕ್ಷಿಪಣಿ ಬಳಸಿ ಹಮಾಸ್ ನಾಯಕ ಇಸ್ಮಾಯಿಲ್ ಹನಿಯೆ ಅವರ ಹತ್ಯೆ ಮಾಡಲಾಗಿದೆ. ಇಸ್ರೇಲ್‌ನ ಈ ಕೃತ್ಯಕ್ಕೆ ಅಮೆರಿಕ ಬೆಂಬಲ ನೀಡಿದೆ. ಇದಕ್ಕೆ ಪ್ರತೀಕಾರ ತೀರಿಸಿಕೊಳ್ಳುವುದು ಶತಸಿದ್ಧ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಹೇಳಿದೆ.

ಭಾರತೀಯರಿಗೆ ಎಚ್ಚರಿಕೆ

ಇರಾನ್- ಇಸ್ರೆಲ್ ನಡುವಿನ ಪರಿಸ್ಥಿತಿ ಉದ್ವಿಗ್ನಗೊಂಡಿರುವ ಹಿನ್ನೆಲೆಯಲ್ಲಿ ಇಸ್ರೆಲ್‌ನಲ್ಲಿರುವ ಭಾರತದ ಪ್ರಜೆಗಳಿಗೆ ಕೇಂದ್ರ ಸರಕಾರ ಎಚ್ಚರಿಕೆ ನೀಡಿದ್ದು, ಅನವಶ್ಯಕ ಪ್ರಯಾಣ ರದ್ದುಗೊಳಿಸಿ, ಮನೆಯಲ್ಲಿಯೇ ಸುರಕ್ಷಿತವಾಗಿರುವಂತೆ ಸೂಚಿಸಿದೆ.

ಸಮಾಚಾರ ಸಣ್ಣದಲ್ಲ

ಭೀಮನ ಅಮವಾಸ್ಯೆ ದರ್ಗಾಕ್ಕೆ ಭಕ್ತಸಾಗರ

ಬಸವಕಲ್ಯಾಣ : ಭೀಮನ ಅಮವಾಸ್ಯೆ ಪ್ರಯುಕ್ತ ಸುಪ್ರಸಿದ್ಧ, ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾದ ತಾಲ್ಲೂಕಿನ ಘೋಡವಾಡಿ ಗ್ರಾಮದ ಸೈಯದ್ ಇಸ್ಮಾಯಿಲ್ ಖಾದ್ರಿ ದರ್ಗಾ ದಲ್ಲಿ ರವಿವಾರ ಭಕ್ತ ಸಾಗರವೇ ಹರಿದು ಬಂದಿತು. ಬೆಳಿಗ್ಗೆಯಿಂದಲೇ ನಗರವು ಸೇರಿದಂತೆ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತಾಧಿಗಳು ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದು. ಹರಕೆ ತೀರಿಸಿದರು. ವಿವಿಧೆಡೆಯಿಂದ ಭಕ್ತಾಧಿಗಳು ಆಗಮಿಸಿದ್ದರಿಂದ ದರ್ಗಾ ಆವರಣದಲ್ಲಿ ಜಾತ್ರೆಯ ವಾತಾವರಣ ನಿರ್ಮಾಣವಾಗಿತ್ತು , ಹಾಗೆ ನೋಡಬೇಕಾದರೆ ಇಲ್ಲಿ ವರ್ಷ ಇಡಿ ಜಾತ್ರೆಯ ವಾತಾವರಣ ಇರುತ್ತದೆ. ಈ ದರ್ಗಾದ ವಿಶೇಷ ಏನೆಂದರೆ ಮುಸ್ಲಿಂ ಸಮುದಾಯದ ಭಕ್ತರ ಸಂಖ್ಯೆ ಅಷ್ಟೆ, ಹಿಂದೂ ಧರ್ಮದವರು ಕೂಡ ಅಷ್ಟೇ ಸಂಖ್ಯೆಯಲ್ಲಿ ಸೈಯದ್ ಇಸ್ಮಾಯಿಲ್ ಖಾದ್ರಿ ದರ್ಗಾದ ಭಕ್ತರು ಇದ್ದಾರೆ. ಜಿಲ್ಲೆಯಲ್ಲೇ ಅತ್ಯಂತ ಖ್ಯಾತಿ ಹೊಂದಿರುವ ಈ ದರ್ಗಾ ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾಗಿದೆ, ರವಿವಾರ ಇಲ್ಲಿ ಭಕ್ತ ಸಾಗರವೇ ಹರಿದು ಬಂದಿತು.

ವಿಶೇಷ ಚೇತನರಿಗೆ ಯುಡಿಐಡಿ ಶಿಬಿರ

ಯಾದಗಿರಿ: ಜಿಲ್ಲೆಯ ನೂತನ ಜಿಲ್ಲಾ ಆಸ್ಪತ್ರೆಯಲ್ಲಿ ಯು.ಡಿ.ಐ.ಡಿ ಶಿಬಿರ ಆಯೋಜಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಆಸ್ಪತ್ರೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ಅವರು ತಿಳಿಸಿದ್ದಾರೆ. ವಿಶೇಷಚೇತನರಿಗಾಗಿ ಯು.ಡಿ. ಐ.ಡಿ ಶಿಬಿರವನ್ನು ಪ್ರತಿ ಗುರುವಾರ ಮತ್ತು ಪ್ರತಿ ತಿಂಗಳು 2ನೇ ಶುಕ್ರವಾರ ರಂದು ಮಾತ್ರ ವಯಸ್ಕರ ಬೌಧಿಕ ವಿಕಲತೆ ಹಾಗೂ ಮಾನಸಿಕ ಸಮಸ್ಯೆ ಉಳ್ಳವರಿಗೆ ತಜ್ಞ ವೈದ್ಯರಿಂದ ಯು.ಡಿ.ಐ.ಡಿ ಕಾರ್ಡ್ಗಾಗಿ ತಪಾಸಣೆ ಏರ್ಪಡಿಸಲಾಗಿದೆ. ಇಲ್ಲಿನ ನೂತನ ಜಿಲ್ಲಾ ಆಸ್ಪತ್ರೆ ವಿಶೇಷಚೇತನರಿಗಾಗಿ ಪ್ರತಿ ಗುರುವಾರ ರಂದು ಯು.ಡಿ.ಐ.ಡಿ ಕಾರ್ಡ್‌ಗಳ ತಪಾಸಣೆ ಪ್ರತಿ ತಿಂಗಳು 2ನೇ ಶುಕ್ರವಾರ ರಂದು ಮಾತ್ರ ವಯಸ್ಕರ ಬೌಧಿಕ ವಿಕಲತೆ ಹಾಗೂ ಮಾನಸಿಕ ಕಾಯಿಲೆ ಉಳ್ಳವರಿಗೆ ತಜ್ಞ ವೈದ್ಯರಿಂದ ಯು.ಡಿ.ಐ.ಡಿ ಕಾರ್ಡ್‌ಗಳ ತಪಾಸಣೆ ಇದರ ಯೋಜನೆ ವಿಶೇಷಚೇತನರು ಶಿಬಿರದಲ್ಲಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ವಲಯ ಯೋಜನೆಗೆ ಅರ್ಜಿ ಆಹ್ವಾನ

ಯಾದಗಿರಿ: ಪ್ರಸಕ್ತ ಸಾಲಿನ ಜಿಲ್ಲಾ ಮತ್ತು ರಾಜ್ಯ ವಲಯ ಯೋಜನೆಗೆ ಅರ್ಹ ಫಲಾನುಭವಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿ.ಪಂ ಮೀನುಗಾರಿಕೆ ಉಪ ನಿರ್ದೇಶಕರು ತಿಳಿಸಿದ್ದಾರೆ. ಜಿಲ್ಲಾ ವಲಯ ಯೋಜನೆಯಡಿ ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಯಡಿ ಸಲಕರಣೆ ಕಿಟ್ಟುಗಳ ವಿತರಣೆ, ಮತ್ಸ್ಯ ವಾಹಿನಿ ಯೋಜನೆಯಡಿ ಮೀನು ಮಾರಾಟಕ್ಕಾಗಿ ದ್ವಿ ಚಕ್ರ ಮತ್ತು ಐಸ್ ಬಾಕ್ಸ್ ಖರೀದಿಸುವುದಕ್ಕೆ ಸಹಾಯಧನ ಮತ್ತು ರಾಜ್ಯವಲಯ ಯೋಜನೆ ಕಾರ್ಯಕ್ರಮದಡಿ ಮೀನುಗಾರರಿಗೆ ಉಚಿತವಾಗಿ ಸಲಕರಣೆ ಕಿಟ್ಟುಗಳನ್ನು ವಿತರಿಸಲು, ಮೀನುಮರಿ ಖರೀದಿಗೆ ಸಹಾಯಧನ, ಕೆರೆ, ಜಲಾಶಗಳ ಅಂಚಿನಲ್ಲಿ ನಿರ್ಮಿಸಿರುವ ಮೀನುಮರಿ ಪಾಲನಾಕೊಳಗಳಲ್ಲಿ ಮೀನುಮರಿ ಪಾಲನೆ ಮಾಡಲು ಸಹಾಯಧನಕ್ಕಾಗಿ ಅರ್ಹ ಆಸಕ್ತ ಮೀನುಗಾರರ ಸಹಕಾರ ಸಂಘ, ರೈತ ಮೀನುಗಾರ ಉತ್ಪಾದಕ ಸಂಸ್ಥೆ, ಮೀನುಕೃಷಿಕರ, ಮೀನುಗಾರರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದೆ. ಆನ್‌ಲೈನ್‌ನಲ್ಲಿ 2024ರ ಆ. 17ರ ಒಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ತಾಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರು ಅವರ ಸಂಪರ್ಕಿಸಬೇಕೆಂದು ಪ್ರಕಟಣೆ ಕೋರಿದೆ.

ಶಾಸಕ, ಪುತ್ರನ ಬಂಧನಕ್ಕೆ ಆಗ್ರಹ

ಯಾದಗಿರಿ: ದಕ್ಷ ಪಿಎಸ್‌ಐ ಸಾವಿನ ಪ್ರಕರಣ ಸಿಐಡಿಗೆ ವಹಿಸಿದಲ್ಲಿ ಯಾವುದೇ ಪ್ರಯೋಜನವಿಲ್ಲ ಕೂಲಂಕಶ ತನಿಖೆಗೆ ಸಿಬಿಐಗೆ ಒಪ್ಪಿಸಬೇಕು, ಸಾವಿಗೆ ಕಾರಣರಾದ ಶಾಸಕ ಹಾಗೂ ಅವರ ಪುತ್ರನ ಮಂಪರು ಪರೀಕ್ಷೆ ನಡೆಸಬೇಕು ಮೃತ ಅಧಿಕಾರಿಯ ಮೊಬೈಲ್ ಫೋನ್ ಕರೆ ವಿವರಗಳನ್ನು ಪರಿಗಣಿಸಿ ತನಿಖೆ ನಡೆಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಟಿ.ಎನ್. ಭೀಮುನಾಯಕ ಒತ್ತಾಯಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ಈ ಪ್ರಕರಣವನ್ನು ಸಿಐಡಿಗೆ ವಹಿಸಿರುವುದು ಸರಿಯಲ್ಲ, ಸಿಐಡಿ, ಪೊಲೀಸರ ಇನ್ನೊಂದು ಭಾಗವಷ್ಟೇ ಆದ್ದರಿಂದ ಪೊಲೀಸರೇ ಪೊಲೀಸರಿಗೆ ಆಗಿರುವ ಅನ್ಯಾಯವನ್ನು ಹೇಗೆ ತನಿಖೆ ಮಾಡುತ್ತಾರೆ? ಮೃತ ದಕ್ಷ ಅಧಿಕಾರಿಗೆ ನ್ಯಾಯ ಸಿಗಬೇಕೆಂದರೆ ಪ್ರಕರಣವನ್ನು ಸಿಬಿಐ ಗೆ ವಹಿಸಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ ಬಿ.ವೈ. ರಾಘವೇಂದ್ರ } ಸಂಸದರು

ಶಿಕ್ಷಣ ಸಚಿವ ಮಧು ಬಂಗಾರಪ್ಪ ಎನ್‌ಡಿಎ ಪಾದಯಾತ್ರೆ ಬಗ್ಗೆ ಮಾತನಾಡಿದ್ದಾರೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು 1 ವರ್ಷ 4 ತಿಂಗಳು ಆಗಿದೆ. ವಾಲ್ಮೀಕಿ ಹಗರಣದಲ್ಲಿ ಚಂದ್ರಶೇಖರನ್ ಅವರನ್ನು ಬಲಿ ಪಡೆದಿದೆ. ಮುಡಾ ಹಗರಣದಲ್ಲಿ ಸಿಎಂ ಕುಟುಂಬ ಭಾಗಿಯಾಗಿದೆ. ಪಿಎಸ್‌ಐ ಪರಶುರಾಮ್ ಸಾವಿಗೆ ಲಂಚದ ಬೇಡಿಕೆ ಕಾರಣ ಎಂಬ ದೂರಿದೆ. ಸಚಿವರು ಇವುಗಳ ಬಗ್ಗೆ ಮಾತಾಡಲಿ.

ಕೆಕೆಆರ್ ಡಿಬಿ ಕಾಮಗಾರಿ ಪೂರ್ಣಗೊಳಿಸಿ: ಖಂಡ್ರೆ

ಟೆಂಡರ್ ಕರೆದು ಸೇತುವೆ, ರಸ್ತೆಗಳ ದುರಸ್ತಿಗೊಳಿಸಿ । ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚನೆ

ಬೀದರ್: ಜಿಲ್ಲೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿ ತ್ವರಿತ ಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕೆಕೆಆರ್‌ಡಿಬಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು , ಲೋಕೋಪಯೋಗಿ ಇಲಾಖೆ, ಪಂಚಾಯಿತಿ ರಾಜ್ ಎಂಜಿನಿಯರಿಂಗ್, ಕೆಆರ್ ಐಡಿಎಲ್ ವತಿಯಿಂದ ಕೆಕೆಆರ್‌ಡಿಬಿ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿಗಳು ಬೇಗನೆ ಪೂರ್ಣಗೊಳಿಸಬೇಕು. ಮಳೆಯಿಂದ ಹಾನಿಗೊಳಗಾದ ಸೇತುವೆಗಳು, ರಸ್ತೆಗಳನ್ನು ಕೂಡಲೆ ಟೆಂಡರ ಕರೆದು ದುರಸ್ತಿಗೊಳಿಸಬೇಕು.

ಮಾಂಜ್ರಾ ನದಿಯಿಂದ ಅಕ್ಕ ಪಕ್ಕದ ಜಮೀನಿನಲ್ಲಿ ಹೆಚ್ಚುವರಿ ನೀರು ಬಂದು ಬೆಳೆ ನಾಶ ಆಗಿದೆ, ಅಂತಹ ರೈತರಿಗೆ ಪ್ರಕೃತಿ ವಿಕೋಪದಡಿ ಪರಿಹಾರ ನೀಡಬೇಕು ಮತ್ತು ಮನೆ ಕುಸಿತ ಆದವರಿಗೂ ಆದಷ್ಟು ಬೇಗನೆ ಪರಿಹಾರ ಕೊಡುವ ಕೆಲಸ ಆಗಬೇಕಾಗಿದೆ. ಕಂದಾಯ ಇಲಾಖೆ, ಕೃಷಿ ಇಲಾಖೆ ಅಧಿಕಾರಿಗಳು ಕೂಡಲೇ ಹಾನಿಯ ವರದಿ ಸಲ್ಲಿಸುವಂತೆ ಸೂಚಿಸಿದರು.

ಕಳೆದ ಸಾಲಿನಲ್ಲಿ ಬೆಳೆ ಹಾನಿಯಾದವರಿಗೆ ಇನ್ನು ಪರಿಹಾರ ದೊರಕಿಲ್ಲ ಎಂಬುವುದು ನನ್ನ ಗಮನಕ್ಕೆ ಬಂದಿದೆ. ತಾಂತ್ರಿಕ ಸಮಸ್ಯೆಗಳಿದ್ದರೆ ಕೂಡಲೆ ಸರಿಪಡಿಸಿ ಕ್ರಮ ವಹಿಸಬೇಕು. ಪ್ರಸಕ್ತ ಸಾಲಿನಲ್ಲಿ ಉತ್ತಮ ಮಳೆ ಆಗಿದ್ದು, ಬೆಳೆಗಳು ಉತ್ತಮವಾಗಿದೆ. ರೈತರಿಗೆ ಕಟಾವು ಸಂದರ್ಭದಲ್ಲಿ ಕಟಾವು ಮಷಿನಗಳ ತೊಂದರೆ ಆಗದಂತೆ ಸಂಬಂಧಪಟ್ಟ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕೆಕೆಆರ್‌ಡಿಬಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

> ಕಳೆದ ಸಾಲಿನಲ್ಲಿ ಬೆಳೆ ಹಾನಿಯಾದ ರೈತರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ತಾಂತ್ರಿಕ ಸಮಸ್ಯೆಗಳು ಇದ್ದರೆ ಶೀಘ್ರದಲ್ಲೇ ಸರಿಪಡಿಸಬೇಕು.ರೈತರಿಗೆ ಬೆಳೆ ಕಟಾವು ಸಂದರ್ಭದಲ್ಲಿ ಮಷಿನ್ ಗಳ ಕೊರತೆಯಾಗದಂತೆ ಅಧಿಕಾರಿಗಳು ಎಚ್ಚರ ವಹಿಸಿ.
>
> -ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವ

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ್ ಬದೋಲೆ, ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಅಪರ ಜಿಲ್ಲಾಧಿಕಾರಿ ಶಿವಕುಮಾರ್ ಶೀಲವಂತ, ಸಹಾಯಕ ಆಯುಕ್ತ ಲವೀಶ ಒರಡಿಯಾ, ಬಸವಕಲ್ಯಾಣ ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಸುರೇಖಾ, ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಸಲೀಂ ಪಾಶಾ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಡಾ.ಧ್ಯಾನೇಶ್ವರ ನಿರಗುಡೆ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಸಿಂಧು ಎಚ್.ಎಸ್. ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು

ರೈತರಿಗೆ ಬಾಕಿ ಹಣ ಪಾವತಿಸಿ

ಜಿಲ್ಲೆಯಲ್ಲಿ 5 ಸಕ್ಕರೆ ಕಾರ್ಖಾನೆಗಳಲ್ಲಿ 3 ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬಾಕಿ ಹಣ ಪಾವತಿಸಿದ್ದು ಬಾಕಿ ಉಳಿಸಿಕೊಂಡಿರುವ ಬೀದರ ಕಿಸಾನ ಸಕ್ಕರೆ ಕಾರ್ಖಾನೆ ಮೋಗದಾಳ 3 ಕೋಟಿ 40 ಲಕ್ಷ, ಭಾಲ್ಕೇಶ್ವರ ಸಕ್ಕರೆ ಕಾರ್ಖಾನೆ ಭಾಲ್ಕಿ 3 ಕೋಟಿ 18 ಲಕ್ಷ ರೂ. ರೈತರಿಗೆ ಹಣ ಪಾವತಿಸಬೇಕಾಗಿದ್ದು ಕೂಡಲೆ ಕಾರ್ಖಾನೆಗಳಲ್ಲಿ ದಾಸ್ತಾನು ಇರುವಂತಹ ಸಕ್ಕರೆಯನ್ನು ಜಪ್ತಿ ಮಾಡಿಕೊಂಡು ಹರಾಜು ಮಾಡಿ ರೈತರಿಗೆ ಕೂಡಲೆ ಹಣ ಪಾವತಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಠಾಣಾಧಿಕಾರಿ ಸೇವಾ ನಿವೃತ್ತಿ ಬೀಳ್ಕೊಡುಗೆ ಸಮಾರಂಭ

ನಿವೃತ್ತ ಸಹಾಯಕ ಠಾಣಾಧಿಕಾರಿ ರಾಮಪ್ಪ ಎಲ್. ನಿವೃತ್ತ ಅಗ್ನಿಶಾಮಕ ಸಿಬ್ಬಂದಿ ಮಕ್ಸುದ್ ಅಲೀ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಔರಾದ್: ಇಲ್ಲಿಯ ಅಗ್ನಿಶಾಮಕ ಠಾಣೆಯಲ್ಲಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ರಾಮಪ್ಪ ಎಲ್. ಮಡಕೆ, ಪ್ರಮುಖ ಅಗ್ನಿಶಾಮಕ ಸಿಬ್ಬಂದಿ ಮಕುದ್ ಅಲೀ ಇವರ ಸೇವಾ ನಿವೃತ್ತಿ ಬೀಳ್ಕೊಡುಗೆ ಮತ್ತು ಸತ್ಕಾರ ಸಮಾರಂಭ ಕಾರ್ಯಕ್ರಮ ನಡೆಯಿತು.

ಈ ವೇಳೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಎಂ.ಡಿ ಮುಜಮೀಲ್ ಪಟೇಲ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,

ರಾಮಪ್ಪ ಅವರು ಅಗ್ನಿಶಾಮಕದಲ್ಲಿ ನಾನಾ ಹುದ್ದೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಎಲ್ಲರೊಂದಿಗೆ ಆತ್ಮೀಯವಾಗಿ ಮಾತನಾಡುವ ಸರಳ ವ್ಯಕ್ತಿತ್ವ ಅವರದಾಗಿದೆ ಎಂದರು. ಸೇವೆ ಬಡ್ತಿ ಹೊಂದಿ ಇಲ್ಲಿ ಎಎಸ್ಐ ಸೇವೆ ಸಲ್ಲಿಸಿದರು. ಇಲಾಖೆಯಲ್ಲಿ 32 ವರ್ಷ ಸುದೀರ್ಘ ಸೇವೆ ಸಲ್ಲಿಸಿದ್ದಾರೆ ಎಂದರು.

> ಮಕುದ್ ಅಲೀ ಅವರು ಯೋಧರಾಗಿ ಸೇವೆ ಸಲ್ಲಿಸಿ ನಂತರ ಅಗ್ನಿಶಾಮಕ ಇಲಾಖೆಯ ಸೇವೆಗೆ ಸೇರಿದ್ದಾರೆ. ಅವರ ಸೇವೆ ಎಲ್ಲರೂ ಮೆಚ್ಚುವಂತದಾಗಿದೆ. ಇವರಿಬ್ಬರ ನಿವೃತ್ತಿಯಿಂದ ಇಲಾಖೆ ಒಳ್ಳೆಯ ಕೆಲಸಗಾರರಿಗೆ ಕಳೆದುಕೊಂಡಿದೆ. ಆದರೆ ನಿಯಮಾನುಸಾರ ನಿವೃತ್ತಿ ಆಗಲೇಬೇಕಿದೆ.
>
> - ಎಂ.ಡಿ ಮುಜಮೀಲ್ ಪಟೇಲ್ ಅಗ್ನಿಶಾಮಕ ಅಧಿಕಾರಿ

ಶಿವಾನಂದ ಮೊಕ್ತೆದಾರ್, ರವೀಂದ್ರ ಮೇತ್ರೆ, ಅನಿಲ್‌ಕುಮಾರ ಮೇಲ್ದೊಡ್ಡಿ,ಪಪಂ ಸದಸ್ಯ ಸಂಜುಕುಮಾರ ವಡಿಯಾರ್, ಅಶೋಕ ಶೆಂಬೆಳ್ಳಿ, ಶಶಿಕಾಂತ ರ್‍ಯಾಕಲೆ,.ಪತ್ರಕರ್ತ ಅಂಬಾದಾಸ ನೇಳಗೆ. ಜನನಿ ಸೇರಿದಂತೆ ಅನೇಕರಿದ್ದರು.

ಚಿಗುರು ಕಾರ್ಯಕ್ರಮಕ್ಕೆ ಚಾಲನೆ



ಕಾಲೇಜು ಶಿಕ್ಷಣ ಇಲಾಖೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಔರಾದ ನಲ್ಲಿ ಹಳೆ ವಿದ್ಯಾರ್ಥಿಗಳ ಸಂಘದ ಸಹಭಾಗಿತ್ವದಲ್ಲಿ ಬೇರು- ಚಿಗುರು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಔರಾದ: ಕಾಲೇಜು ಶಿಕ್ಷಣ ಇಲಾಖೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಔರಾದ ನಲ್ಲಿ ಶನಿವಾರ ಹಳೆ ವಿದ್ಯಾರ್ಥಿಗಳ ಸಂಘದ ಸಹಭಾಗಿತ್ವದಲ್ಲಿ ಬೇರು- ಚಿಗುರು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷರಾಗಿ ಕಾಲೇಜಿನ ಪ್ರಾಂಶುಪಾಲರಾದ ಅಂಬಿಕಾ ದೇವಿ ಕೊತ್ಮಿರ್ ಹಾಗೂ ಮುಖ್ಯ ಅತಿಥಿಗಳಾಗಿ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಅಂಬಾದಾಸ ನಳಗೆ, ಎಸ್ ಡಿ ಎಂ ಸಿ ಸದಸ್ಯ ಸಂದೀಪ್ ಪಾಟೀಲ್, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರವಿ ಡೊಳೆ, ಐಕ್ಯೂ ಕೋರ್ಡಿನೇಟರ್ ಡಾ. ಜಯಶೀಲ, ಅಲುಮಿನಿ ಮುಖ್ಯಸ್ಥ ಡಾ. ಅಶೋಕ್ ಕೊರೆ ಉಪನ್ಯಾಸಕರಾದ ವಿನಾಯಕ ಕೊತಮಿರೆ,ದಯಾನಂದ ಬಾವಗೆ ಅವರು ವಿದ್ಯಾ ಮಾತೆ ಸರಸ್ವತಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಉದ್ಘಾಟಿಸಿದರು.

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಹಳೆಯ ವಿದ್ಯಾರ್ಥಿಗಳ ಸಂಘದ ಸಹಭಾಗಿತ್ವದಲ್ಲಿ ನಡೆದ ಬೇರು-ಚಿಗುರು ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಒಂದು ಕುಟುಂಬ ಸರಿಯಾದ ಮಾರ್ಗದಲ್ಲಿ ನಡೆಯಬೇಕಾದರೆ ಹಿರಿಯರ ಮಾರ್ಗದರ್ಶನ ತುಂಬಾ ಅಗತ್ಯವಿದೆ.

ಈ ಸಂದರ್ಭದಲ್ಲಿ ಡಾ. ಅಶೋಕ ಕೋರೆ, ದಯಾನಂದ ಬಾವಗೆ, ಡಸುಬ್ಬಣ್ಣ ಮೂಲಗೆ, ಸಂದೀಪ ಪಾಟೀಲ, ರಿಯಾಜಪಾಶಾ ಕೊಳ್ಳೂರ, ಶಿವು ತೆಲಿ, ತುಳಸಿರಾಮ್ ಮಾನೆ, ವಿಜಯ್ ಠಾಕೂರ್, ವಿದ್ಯಾಸಾಗರ ಉಪ್ಪೆ, ವಿನೋದ ಇದ್ದರು.

ಯುವನಿಧಿ ಯೋಜನೆ ನೋಂದಣಿ ಗುರಿ ಸಾಧಿಸಿ

ಯೋಜನೆಯ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆ: ಜಿಲ್ಲಾಧಿಕಾರಿ ಸೂಚನೆ

ಯಾದಗಿರಿ: ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳಲ್ಲಿನ ಯುವ ನಿಧಿ ಯೋಜನೆಯಲ್ಲಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳನ್ನು ನೋಂದಣಿ ಮಾಡಿ ಗುರಿ ಸಾಧಿಸಿ, ಯೋಜನೆಯ ಸೌಲಭ್ಯವನ್ನು ಅರ್ಹ ಫಲಾನುಭವಿಗಳಿಗೆ ಒದಗಿಸುವಂತೆ ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಯುವನಿಧಿ ಯೋಜನೆಯ ನೋಂದಣಿ ಕುರಿತು ಯೋಜನೆಯ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಇಲ್ಲಿಯವರೆಗೆ 4678 ಫಲಾನುಭವಿಗಳು ನೋಂದಣಿಯಾಗಿದ್ದು, ಇದರಲ್ಲಿ 4830 ಫಲಾನುಭವಿಗಳಿಗೆ ಪುನರಾವರ್ತನೆ ಒಳಗೊಂಡಂತೆ ನೇರ ನಗದು ಡಿಬಿಟಿ ಮೂಲಕ ಜನೇವರಿ ತಿಂಗಳಿಂದ ಮೇ ತಿಂಗಳವರೆಗೆ 1,44,73, 500 ರು ಜಮಾ ಆಗಿರುತ್ತದೆ ಎಂದು ಸಭೆಯಲ್ಲಿ ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲೆಯ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ತಮ್ಮ ಸಂಸ್ಥೆಯಲ್ಲಿ 2022-23 ರಲ್ಲಿ ಪದವಿ/ಡಿಪ್ಲೊಮಾ ಪಡೆದ ವಿದ್ಯಾರ್ಥಿಗಳಿಗೆ ಯೋಜನೆಯ ಬಗ್ಗೆ ಮಾಹಿತಿ ನೀಡುವ ಮೂಲಕ ಜಿಲ್ಲೆಯ ಹೆಚ್ಚಿನ ಸಂಖ್ಯೆಯ ಯುವಜನತೆಗೆ ಇದರ ಪ್ರಯೋಜನ ಪಡೆಯುವಂತೆ ನೋಡಿಕೊಳ್ಳಬೇಕು ಹಾಗೂ ವಿದ್ಯಾರ್ಥಿಗಳ ಮಾಹಿತಿಯನ್ನು ಸಂಬಂಧಪಟ್ಟ ಆಧಿಕಾರಿಗಳಿಗೆ ನೀಡುವಂತೆ ತಿಳಿಸಿ, ಜಿಲ್ಲೆಯ ಅರ್ಹ ಎಲ್ಲಾ ಪದವಿ/ಡಿಪ್ಲೋಮಾ ಪದವೀಧರರು ಸರಕಾರದ ಯೋಜನೆಯ ನೆರವು ಪಡೆಯುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಯುವನಿಧಿ ಯೋಜನೆಯ ನೋಂದಣಿ ಕುರಿತು ಯೋಜನೆಯ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು.

> ಜಿಲ್ಲೆಯಲ್ಲಿನ ಕಾಲೇಜುಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾದ ಅಂಕಪಟ್ಟಿಗಳ ವಿತರಣೆಯಲ್ಲಿ ಸಮಸ್ಯೆಗಳನ್ನು ಕಂಡುಬರುತ್ತಿದ್ದು, ಈ ಸಮಸ್ಯೆ ಬಗ್ಗೆ ಎಲ್ಲಾ ಕಾಲೇಜಿನ ಪ್ರಾಂಶುಪಾಲರು ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮವಹಿಸಿ.
>
> - ಡಾ.ಸುಶೀಲಾ ಬಿ ಜಿಲ್ಲಾಧಿಕಾರಿ

ಜಿಲ್ಲಾಮಟ್ಟದ ವ್ಯಾಪ್ತಿಯಲ್ಲಿ ಇರುವ ಐಟಿಐ ತರಬೇತಿಗಾಗಿ ಪ್ರವೇಶ ಪಡೆಯುವುದಕ್ಕೆ ಐಟಿಐ ಕಾಲೇಜುಗಳ ಪ್ರಾಚಾರ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ವ್ಯಾಪಕ ಪ್ರಚಾರ ಕಾರ್ಯ ಕೈಗೊಳ್ಳಲು ಜಿಲ್ಲಾಧಿಕಾರಿ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಜಹೀರ್ ಅಹ್ಮದ್, ಜಿಲ್ಲಾ ಉದ್ಯೋಗಾಧಿಕಾರಿ ಪ್ರಭಾಕರ್ ವಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ಬಸಪ್ಪ ಎಸ್ ತಳವಾಡಿ, ಕಡೆಚೂರ ಜಿಟಿಟಿಸಿ ಪ್ರಾಚಾರ್ಯ ಅನಿಲಕುಮಾರ, ಕೌಶಲ್ಯಾಭಿವೃದ್ಧಿ ಇಲಾಖೆಯ ಅಭಿಯಾನ ವ್ಯವಸ್ಥಾಪಕ ವಿಜಯಕುಮಾರ್ ಪಾಟೀಲ್, ಪ್ರಭಾರಿ ಡಿಡಿಪಿಐ ಬಸನಗೌಡ ಆಲ್ದಾಳ, ಸರಕಾರಿ ಪದವಿ ಕಾಲೇಜು ಪ್ರಾಂಶುಪಾಲ ಡಾ.ಸುಭಾಶ್ಚಂದ್ರ ಕೌಲಗಿ, ಎಲ್ ಕೆ ಇ ಟಿ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ಜಿ ಎಮ್ ವಿಶ್ವಕರ್ಮ, ಸೇರಿದಂತೆ ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಸಂಬಂಧಿಸಿದ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಾಚಾರ್ಯ ದೇವಿದಾಸ ತುಮಕುಂಟೆ ನಿವೃತ್ತಿ

ಬೀದರ್: ತುಮಕುಂಟೆ ತಮ್ಮ ವೃತ್ತಿಜೀವನದ ಆರಂಭದಿಂದಲೇ ವಿದ್ಯಾರ್ಥಿಗಳಿಗೆ ಉನ್ನತ ಶ್ರೇಣಿಯ ಶಿಕ್ಷಣ ಮತ್ತು ಮಾರ್ಗದರ್ಶನ ನೀಡಲು ಶ್ರಮಿಸಿದರು. ಅವರ ನೇತೃತ್ವದಲ್ಲಿ, ಕಾಲೇಜು ಶೈಕ್ಷಣಿಕ ಕ್ಷೇತ್ರದಲ್ಲಿ ಅನೇಕ ಪ್ರಶಸ್ತಿಗಳನ್ನು ಮತ್ತು ಗೌರವಗಳನ್ನು ಗಳಿಸಿದರು. ಅವರು ಅತ್ಯುತ್ತಮ ಅಧ್ಯಾಪಕರಾಗಿ, ಅರ್ಥಶಾಸ್ತ್ರ ವಿಷಯದ ಸಂಶೋಧಕರಾಗಿ ಹಾಗೂ ನಿರ್ವಹಕರಾಗಿ ತಮ್ಮನ್ನು ಖಾತರಿಪಡಿಸಿಕೊಂಡರು. ಹೀಗಾಗಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ಗೌರವ ಮತ್ತು ಶ್ರದ್ಧೆ ಪಡೆದರು ಎಂದು ಬೀದರ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ತಿಳಿಸಿದರು.

ವಸತಿಯುಕ್ತ ಸರಕಾರಿ ಪ್ರಥಮ ದರ್ಜೆ ಕಾಲೇಜು ಘೋಡಂಪಳ್ಳಿಯಲ್ಲಿ ಹಮ್ಮಿಕೊಂಡ ನಿ. ಪ್ರಾಚಾರ್ಯ ಪ್ರೊ . ದೇವಿದಾಸ್ ತುಮಕುಂಟೆ ನಿವೃತ್ತಿ ಸಮಾರಂಭದಲ್ಲಿ ಮಾತನಾಡಿದರು, ಕಾಲೇಜು ಕ್ಯಾಂಪಸ್ ಒಂದು ವಿಶಿಷ್ಟ ಸಮಾರಂಭಕ್ಕೆ ಸಾಕ್ಷಿಯಾಯಿತು. ಈ ಕಾರ್ಯಕ್ರಮದಲ್ಲಿ, ಪ್ರಿನ್ಸಿಪಾಲ್ ಡಾ. ದೇವಿದಾಸ್ ತುಮ್ಮುಂಟೆ ಅವರಿಗೆ ಅವರ ವೃತ್ತಿಜೀವನದ ಸಾಧನೆಗಳನ್ನು ಪ್ರತಿಸ್ಪರ್ಧಿಸುತ್ತಾ, ಅವರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ಇದೇ ವೇಳೆ ಪ್ರೊ. ಸೈಬಣ್ಣ ತಲ್ವಾರ್ ಎಂಎಲ್ಸಿ , ಪ್ರೊ. ಬಿ.ಎಸ್.ಬಿರಾದಾರ ಕುಲಪತಿಗಳು, ಪ್ರೊ. ಪಿ. ನಾಯಕ್, ಶಕೀಲ ಕುಲಸಚಿವರು ಬೀದರ್ ವಿಶ್ವವಿದ್ಯಾಲಯ ಬೀದರ್ ,ಶಿಕ್ಷಣ ತಜ್ಞರು, ಉನ್ನತ ಅಧಿಕಾರಿಗಳು, ಅನೇಕ ಸ್ನೇಹಿತರು ಮತ್ತು ವಿದ್ಯಾರ್ಥಿಗಳು ಹಾಜರಾಗಿ, ಡಾ. ದೇವಿದಾಸ್ ತುಮ್ಮುಂಟೆ ಅವರ ಶ್ರದ್ಧೆ ಮತ್ತು ಶ್ರೇಷ್ಠ ಸೇವೆಗಳನ್ನು ಮೆಚ್ಚಿ, ಅವರು ಕೈಗೊಳ್ಳುವ ಮುಂದಿನ ಹಂತಗಳಿಗೆ ಶುಭಾಶೆಗಳು ಸಲ್ಲಿಸಿದರು.

ಡಾ. ದೇವಿದಾಸ ತುಮ್ಮುಂಟೆ ಅವರ ಮುಂದಿನ ಜೀವನವು ಸುಖ, ಶಾಂತಿ ನೆಮ್ಮದಿಂದಿರಲಿ ಎಂದು ಉಪನ್ಯಾಸಕರಾದ ಡಾ.ಸಂತೋಷ್ ಕುಮಾರ್ ಬಿ ಹಾಗು ಎಲ್ಲಾ ಸಿಬಂಧಿ ವರ್ಗದವರು ಅಭಿನಂದಿಸಿದರು.

ಪ್ರಥಮ ದರ್ಜೆ ಕಾಲೇಜು ಘೋಡಂಪಳ್ಳಿಯಲ್ಲಿ ಹಮ್ಮಿಕೊಂಡ ನಿ. ಪ್ರಾಚಾರ್ಯ ಪ್ರೊ . ದೇವಿದಾಸ್ ತುಮಕುಂಟೆ ನಿವೃತ್ತಿ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಮಾಧ್ಯಮ ಕ್ಷೇತ್ರ ಉಳಿಸಿ ಬೆಳೆಸೋಣ

ಕೆಂಭಾವಿ: ಮಾಧ್ಯಮ ಕ್ಷೇತ್ರ ಎಲ್ಲ ರಂಗಗಳ ದೊಡ್ಡ ಆಸ್ತಿ ಈ ಕ್ಷೇತ್ರವನ್ನು ಉಳಿಸಿ ಬೆಳೆಸುವ ಕರ್ತವ್ಯ ಇಂದಿನ ಯುವ ಪತ್ರಕರ್ತರ ಮೇಲಿದೆ ಎಂದು ಶಿಕ್ಷಕ, ಸಾಹಿತಿ ಬಂದೇನವಾಜ ನಾಲತವಾಡ ಹೇಳಿದರು.

ಪಟ್ಟಣದ ಸ್ಪಂದನ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪತ್ರಕರ್ತರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಂವಿಧಾನದ ನಾಲ್ಕನೆ ಅಂಗವೆಂದು ಕರೆಸಿಕೊಳ್ಳುವ ಈ ಪತ್ರಿಕಾ ಕ್ಷೇತ್ರ ದೇಶದಲ್ಲಿ ನಡೆಯುವ ಪ್ರತಿಯೊಂದು ಆಗುಹೋಗುಗಳನ್ನು ಜನತೆಯ ಮುಂದೆ ತೆರೆದಿಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಒಬ್ಬ ವ್ಯಕ್ತಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಬೆಳೆಯಲು ಇದೇ ಮಾಧ್ಯಮ ಕ್ಷೇತ್ರ ಅತೀ ಅವಶ್ಯಕವಾಗಿದೆ. ನಮ್ಮ ಕೆಂಭಾವಿ ಪಟ್ಟಣದ ಪತ್ರಕರ್ತರು ಜಿಲ್ಲೆಗೆ ಮಾದರಿ ಪತ್ರಕರ್ತರೆನಿಸಿಕೊಂಡಿದ್ದು ಕಳೆದ ತಿಂಗಳು 29 ರಂದು ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವೇ ಇದಕ್ಕೆ ಸಾಕ್ಷಿ ಎಂದು ಹೇಳಿದರು.

ನಂತರ ಎಲ್ಲ ಪತ್ರಕರ್ತರಿಗೆ ಮತ್ತು ಜಿಲ್ಲಾ ಮಟ್ಟದ ಉತ್ತಮ ವರದಿಗಾರಿಕೆ ಪ್ರಶಸ್ತಿ ಪಡೆದ ಪತ್ರಕರ್ತ ಡಿ. ಸಿ. ಪಾಟೀಲ್ ಅವರನ್ನು ಸ್ಪಂದನ ಸಂಸ್ಥೆ ಮತ್ತು ಪತ್ರಕರ್ತರ ಬಳಗದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಜಿಲ್ಲಾ ಕಾನಿಪ ಉಪಾಧ್ಯಕ್ಷ ಗುಂಡಭಟ್ಟ ಜೋಷಿ, ಹಿರಿಯ ಪತ್ರಕರ್ತ ಪವನ ಕುಲಕರ್ಣಿ, ಉದ್ಯಮಿ ಸಂಗಣ್ಣ ಸಾಹು ತುಂಬಗಿ, ದಸರಾ ಉತ್ಸವ ಸಮಿತಿ ಉಪಾಧ್ಯಕ್ಷ ಪರಶುರಾಮ ನಾರಾಯಣಕರ್, ಹಳ್ಳೇರಾವ ಕುಲಕರ್ಣಿ, ಉಮೇಶ ರೆಡ್ಡಿ, ಹಳ್ಳೆಪ್ಪ ಕವಾಲ್ದಾರ, ನಂದಪ್ಪ ಕವಾಲ್ದಾರ, ಪ್ರವೀಣ ಜಕಾತಿ, ಶರಣು ಪೂಜಾರಿ, ಮಲ್ಲನಗೌಡ ಪಾಟೀಲ ಇದ್ದರು. ವಿಜಯಾಚಾರ್ಯ ಪುರೋಹಿತ ನಿರೂಪಣೆ ಮಾಡಿದರು, ರೇವಣಸಿದ್ದಯ್ಯ ಮಠ ಸ್ವಾಗತಿಸಿದರು, ಗುರುರಾಜ ಕುಲಕರ್ಣಿ ವಂದಿಸಿದರು.

ಪತ್ರಕರ್ತರ ಅಭಿನಂದನಾ ಸಮಾರಂಭದಲ್ಲಿ ಜಿಲ್ಲಾ ಮಟ್ಟದ ಉತ್ತಮ ವರದಿಗಾರಿಕೆ ಪ್ರಶಸ್ತಿ ಪಡೆದ ಪತ್ರಕರ್ತ ಡಿ. ಸಿ. ಪಾಟೀಲ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

> ಜಿಲ್ಲಾ ಮಟ್ಟದ ಪ್ರಶಸ್ತಿ ಬಂದಿರುವುದು ಪಟ್ಟಣದ ಎಲ್ಲ ಪತ್ರಕರ್ತರ ಸಹಕಾರದಿಂದ, ಈ ಪ್ರಶಸ್ತಿ ಮಾಧ್ಯಮ ಕ್ಷೇತ್ರದಲ್ಲಿ ಇನ್ನಷ್ಟು ಹೆಚ್ಚು ಕೆಲಸ ಮಾಡಲು ಉತ್ತೇಜನ ನೀಡಿದ್ದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲೆಯ ಎಲ್ಲ ಪತ್ರಕರ್ತರಿಗೆ ಅಭಿನಂದನೆ.
>
> - ಡಿ. ಸಿ. ಪಾಟೀಲ್ ಪತ್ರಕರ್ತ

ಶಿಫಾರಸ್ಸುಗಳು ಮೇ 2025 ರಿಂದ ಪುರಸ್ಕಾರ

ಯಾದಗಿರಿ: ಪದ್ಮ ಪ್ರಶಸ್ತಿಗಳು 2025ರ ಆನ್‌ಲೈನ್ ನಾಮನಿರ್ದೇಶನ, ಶಿಫಾರಸ್ಸುಗಳು ಮೇ 2025 ರಿಂದ ರಾಷ್ಟ್ರೀಯ ಪುರಸ್ಕಾರ್ ಪೋರ್ಟಲ್‌ನಲ್ಲಿ ಆರಂಭವಾಗಿದೆ ಎಂದು ಯಾದಗಿರಿ ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ ಅವರು ತಿಳಿಸಿದ್ದಾರೆ. ಸಮಾಜದ ಯಾವುದೇ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ, 2025ನೇ ಸಾಲಿನ ಪದ್ಮಶ್ರೇಣಿಯ ಪ್ರಶಸ್ತಿಗಳಾದ ಪದ್ಮ ವಿಭೂಷಣ, ಪದ್ಮ ಭೂಷಣ, ಮತ್ತು ಪದ್ಮ ಶ್ರೀ ಪ್ರಶಸ್ತಿಗಳನ್ನು ಗಣರಾಜ್ಯೋತ್ಸವ ದಿನದ ಹಿಂದಿನ ದಿನದಂದು ಕೇಂದ್ರ ಸರಕಾರದಿಂದ ಪ್ರಕಟಿಸಲಾಗುತ್ತದೆ. ಕ್ಷೇತ್ರಗಳಲ್ಲಿ ಶ್ರೇಷ್ಠತೆಗಳಿಸಿ ಅಸಾಧಾರಣ ಕೊಡುಗೆ ನೀಡಿರುವ ವ್ಯಕ್ತಿಗಳಿಗೆ ಪ್ರಶಸ್ತಿಯನ್ನು ನೀಡಲಾಗುತ್ತದೆ. ಕಲೆ , ಸಮಾಜ ಕಾರ್ಯ , ಸಾರ್ವಜನಿಕ ವ್ಯವಹಾರ , ವಿಜ್ಞಾನ, ತಾಂತ್ರಿಕ ತಂತ್ರಜ್ಞಾನ ಮತ್ತು ಇತರ ಗೌರವಾನ್ವಿತ ವೃತ್ತಿ . ವ್ಯಾಪಾರ ಮತ್ತು ಕೈಗಾರಿಕೆ (ಬ್ಯಾಂಕಿಂಗ್, ಆರ್ಥಿಕ ಚಟುವಟಿಕೆ, ಮ್ಯಾನೇಜ್ಮೆಂಟ್, ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ವಾಣಿಜ್ಯ ಒಳಗೊಂಡಂತೆ). ವೈದ್ಯಕೀಯ. ಸಾಹಿತ್ಯ ಮತ್ತು ಶಿಕ್ಷಣ (ಪತ್ರಿಕೋದ್ಯಮ, ಬೋಧನೆ, ಪುಸ್ತಕ ಬರೆಯುವಿಕೆ, ಸಾಹಿತ್ಯ ವೈದ್ಯ, ಶಿಕ್ಷಣ, ಅಭಿವೃದ್ಧಿ, ಶಿಕ್ಷಣ ಸುಧಾರಣೆ, ಇತ್ಯಾದಿ). 2025ನೇ ಸಾಲಿನ ಪದ್ಮಶ್ರೇಣಿಯ ಪ್ರಶಸ್ತಿಗಳಿಗೆ ತಮ್ಮ ನಾಮ ನಿರ್ದೇಶನವನ್ನು ಸಲ್ಲಿಸಬಯಸುವವರು 2024ರ ಸೆಪ್ಟೆಂಬರ್ 10ರ ಒಳಗೆ ಅರ್ಜಿಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ

ಬೀದರ್: ದೇಶಾದ್ಯಂತ ಸ್ತನ್ಯಪಾನದ ಮಹತ್ವವನ್ನು ತಿಳಿಸಲು ಹಾಗೂ ಶಿಶುಗಳ ಮತ್ತು ತಾಯಂದಿರ ಆರೋಗ್ಯ ಸುಧಾರಣೆಗಾಗಿ ಸ್ತನ್ಯಪಾನವನ್ನು ಮುಂದುವರೆಸಲು, ಉತ್ತೇಜಿಸಲು ಮತ್ತು ಬೆಂಬಲಿಸಲು ''ವಿಶ್ವ ಸ್ತನ್ಯಪಾನ ಸಪ್ತಾಹ'' ವನ್ನು 2024 ಆಗಸ್ಟ್ 1 ರಿಂದ 7ನೇ ದಿನಾಂಕದವರೆಗೆ ''ಕೊರತೆಗಳನ್ನು ಕೊನೆಗೊಳಿಸಿ ಸರ್ವರಿಗೂ ಸ್ತನ್ಯಪಾನದ ಬೆಂಬಲ ನೀಡಿ'' ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ಎಲ್ಲೆಡೆ ಜಾಗತಿಕ ಅಭಿಯಾನವಾಗಿ ಆಚರಿಸಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಧ್ಯಾನೇಶ್ವರ ನೀರಗುಡೆ ಹೇಳಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೀದರ ವತಿಯಿಂದ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ ನೂರು ಹಾಸಿಗೆ ಆಸ್ಪತ್ರೆ ಬೀದರನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದಲ್ಲಿ ಸಸಿಗೆ ನೀರೆರೆಯುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಸ್ತನ್ಯಪಾನ ಸಪ್ತಾಹದ ಬಗ್ಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರು ಆರೋಗ್ಯ ಸಂಸ್ಥೆಗಳ ಉಪಕೇಂದ್ರಗಳ ಗುಂಪು ಸಭೆಗಳಲ್ಲಿ, ಸ್ತನ್ಯಪಾನದ ಮಹತ್ವದ ಬಗ್ಗೆ ತಾಯಂದಿರು ಹಾಗೂ ಗರ್ಭಿಣಿಯರು ಮಾಹಿತಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ವಿನವಿ ಮಾಡಿದರು. ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೆ ಎದೆಹಾಲಿನ ಮಹತ್ವ ಕುರಿತು ಅರಿವು ಮೂಡಿಸಲಾಗುವುದು ಎಂದು ತಿಳಿಸಿದರು.

ಕಾಟಾಚಾರಕ್ಕೆ ಜಯಂತಿ ಆಚರಣೆ ಬೇಡ

ಕಮಲನಗರ: ಮಹಾ ಪುರುಷರ ಜಯಂತಿಗಳನ್ನು ಕಾಟಾಚಾರಕ್ಕೆ ಆಚರಿಸದೆ ಸಮಾಜ ಬಾಂಧವರು ಶಿಕ್ಷಣ ಪಡೆದು ಸಮಾಜದ ಒಳಿತಿಗಾಗಿ ಹೋರಾಟ ಮಾಡಬೇಕು ಎಂದು ಸಮಾಜ ಸೇವಕ ನರಸಿಂಗ ಕರಕರೆ ಯುವಕರಿಗೆ ಕಿವಿ ಮಾತು ಹೇಳಿದರು. ಕಟ್ಟಡ ಕಾರ್ಮಿಕರ ಕಚೇರಿ ಸಮಿಪದಲ್ಲಿ ಸಾಹಿತ್ಯ ರತ್ನ ಸಾಮ್ರಾಟ್ ಅಣ್ಣಾ ಭಾವು ಸಾಠೆ ಅವರ 104 ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಅಣ್ಣಾಭಾವು ಸಾಠೆ ಅವರು ಶಿಕ್ಷಣ ಪಡೆದು ಸಾವಿರಾರು ಗ್ರಂಥ ಪಡೆದು ದೇಶ- ವಿದೇಶಗಳಲ್ಲಿ ಖ್ಯಾತಿ ಪಡೆದಿದ್ದಾರೆ. ತಾವು ಕೂಡ ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ತಮ್ಮ ಕುಟುಂಬದ ಜತೆಗೆ ಸಮಾಜ ಕಾರ್ಯದಲ್ಲಿ ತೊಡಗಿಸಿ ಕೊಳ್ಳಬೇಕು ಎಂದು ಹೇಳಿದರು.ಅವರ ಕನಸು ನನಸು ಮಾಡುಬೇಕಾದರೆ ಶಿಕ್ಷಣ ಮತ್ತು ಹೋರಾಟಗಳೆಂಬ ಪ್ರಬಲ ಅಸ್ತ್ರಗಳನ್ನು ಬಳಸಬೇಕು. ದಲಿತರ ಆರ್ಥಿಕ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಇನ್ನೂ ಪ್ರಗತಿ ಸಾಧಿಸಬೇಕಾಗಿದೆ. ಸಮಾಜದಲ್ಲಿ ಶಾಂತಿಯಿಂದ ಬದಕಲು ಕಲಿಯಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಿದ್ದಾರ್ಥ ಶಿಂದೆ, ಅವಿನಾಶ ಶಿಂದೆ, ವಿಶಾಲ ಘೋಡೆ, ಅನಿಲ ಕಾಂಬಳೆ, ಸುಜಿತ ಮೋರೆ, ಪ್ರಶಾಂತ ಸರೋದೆ, ಅರ್ಜುನ ಸೂರ್ಯವಂಶಿ, ನಂದು ಹಂಗರೆಗೆ, ಸಚಿನ ಫಾಗರೆ, ಜೋಶವಾ ಫಿರಂಗೆ, ಅಜಯ ಸೂರ್ಯವಂಶಿ, ಅನಿಕೇತನ ಗಾಯಕವಾಡ, ಸಂಗಮೇಶ, ಆನಂದ ಸೂರ್ಯವಂಶಿ, ಸುಜೀತ ಸೂರ್ಯವಂಶಿ, ರಾಜು ಸೂರ್ಯವಂಶಿ ಉಪಸ್ಥಿತರಿದ್ದರು.

ಒಳ ಮೀಸಲು: ವಿಜಯೋತ್ಸವ ಆಚರಣೆ

ಶಹಾಪುರ: ತಾಲೂಕಿನ ದೋರನಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ,ಪಂಗಡಗಳಲ್ಲಿ ಹಿಂದುಳಿದ ಜಾತಿಗಳಿಗೆ ಉದ್ಯೋಗ ಶಿಕ್ಷಣ ಮೀಸಲಾತಿಯಲ್ಲಿ ಸರಕಾರ ಒಳಮೀಸಲು ಸುಪ್ರಿಂಕೋರ್ಟ್ ತೀರ್ಪು ನೀಡಿದ ಹಿನ್ನಲೆಯಲ್ಲಿ ಮಾದಿಗ ಸಮಾಜದ ಪ್ರಮುಖರು ವಿಜಯೋತ್ಸವ ಆಚರಿಸಿದರು. ನ್ಯಾಯಾಲಯ ತೀರ್ಪು ಪ್ರಕಟವಾಗುತ್ತಿದ್ದಂತೆ ಸಮಾಜದ ಮುಖಂಡರು ಪಟಾಕಿ ಸಿಡಿಸಿ ,ಪರಸ್ಪರ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು. ಮಾದಿಗ ದಂಡೋರ ರಿಜೆರ್ವೇಷನ್ ಹೋರಾಟ ಸಮಿತಿ ತಾಲೂಕ ಅಧ್ಯಕ್ಷ ಶ್ರೀನಿವಾಸ ಗೊಬ್ಬೂರ ಮಾತನಾಡಿ ಪರಿಶಿಷ್ಟ ಜಾತಿ, ಪಂಗಡಗಳಲ್ಲಿ ಅತೀ ಹಿಂದುಳಿದ ಜಾತಿಗಳಿಗೆ ಉದ್ಯೋಗ ಮತ್ತು ಶಿಕ್ಷಣದ ಮೀಸಲಾತಿಯಲ್ಲಿ ರಾಜ್ಯ ಸರ್ಕಾರ ಒಳಮೀಸಲು ನೀಡಬಹುದು ಎಂದು ಸುಪ್ರಿಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಒಳ ಮೀಸಲು ನೀಡುವಂತೆ ಕಳೆದ ಹಲವು ವರ್ಷಗಳಿಂದ ಮಾಡಿದ ಹೋರಾಟ ಫಲವಾಗಿ ಇದೀಗ ತೀರ್ಪು ನೀಡಿದ್ದು ಖುಷಿ ತಂದಿದೆ. ರಾಜ್ಯ ಸರಕಾರಗಳಿಗೆ ಮನವಿ ಸಲ್ಲಿಸಲಾಗಿತ್ತು. ಈ ಬಗ್ಗೆ ದೇಶದ್ಯಂತ ಜಾಗ್ರತಿ ಮೂಡಿಸಲಾಗಿತ್ತು. ಪ್ರಮುಖರಾದ ಶಂಕ್ರಣ್ಣ ಶ್ಯಾಣೆನೂರ, ಹಯ್ಯಾಳಪ್ಪ ದೊಡ್ಮನಿ, ಅನಿಲಕುಮಾರ ಗೊಬ್ಬೂರ, ಹನುಮಂತ, ಭೀಮರಾಯ ಸಲವೂರ, ಮಲ್ಲಿಕಾರ್ಜುನ ಸಾವೂರ, ವಿಜಯಕುಮಾರ ಚಟ್ನಳ್ಳಿ, ಚಂದ್ರು ಶ್ಯಾಣೆನೂರ, ನಿಂಗಪ್ಪ ಮೂಗಿನ, ಮರಲಿಂಗಪ್ಪ ಕೌದಿ, ಚಂದ್ರು ಹಲಗಿ ಸೇರಿದಂತೆ ಸಮಾಜದ ಮುಖಂಡರು ಇದ್ದರು.

ರೈತರಿಗೆ ಸ್ಪಂದಿಸದ ಅಧಿಕಾರಿಗಳ ವರ್ಗಾವಣೆಗೆ ಒತ್ತಾಯ

ಉಪ ಕಾಲುವೆಗಳಿಗೆ ನೀರು ಬಿಡಿ: ಜಿಲ್ಲಾಧಿಕಾರಿಗೆ ಮನವಿ

ಮಾನ್ವಿ ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಸಮಿತಿ ವತಿಯಿಂದ ಕೆಳಭಾಗದ ಕಾಲುವೆಗಳಿಗೆ ನೀರುಹರಿಸುವಂತೆ ಒತ್ತಾಯಿಸಿ ನೂರಾರು ರೈತರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಮಾನ್ವಿ: ನೀರಮಾನ್ವಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಸಮಿತಿ ವತಿಯಿಂದ ಕಾಲುವೆ ಕೆಳಭಾಗದ ರೈತರ ಜಮೀನುಗಳಿಗೆ ನೀರುಹರಿಸುವಂತೆ ಒತ್ತಾಯಿಸಿ ನೂರಾರು ರೈತರು ರಸ್ತೆ ತಡೆ ನಡೆಸಿ ಪ್ರತಿಭಟನೆ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ಮಾತನಾಡಿ, ಮುಂಗಾರಿನಲ್ಲಿ ರೈತರು ಕೃಷಿ ನಡೆಸುವುದಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದು ಈ ಭಾಗದ ಭತ್ತದ ಬೆಳೆಗೆ ತುಂಗಭದ್ರ ಜಲಾಶಯ ತುಂಬಿರುವುದರಿಂದ ತುಂಗಭದ್ರಾ ಎಡದಂಡೆ ನಾಲೆಯ ಮುಖ್ಯ ಕಾಲುವೆಗೆ 10 ದಿನದ ಕೆಳಗೆ ನೀರು ಬಿಟ್ಟಿದರು ಕೂಡ ಇನ್ನು ಕೂಡ ಮೈಲ್ ನಂ.69 ಹಾಗೂ 104ರಲ್ಲಿ ನೀರಿನ ಗುಣಮಟ್ಟವನ್ನು ಕಾಯ್ದು ಉಪಕಾಲುವೆಗಳಾದ ನಂ.76,82,85,89,90,92, ಈ ಕಾಲುವೆಗಳಿಗೆ ಇದುವರೆಗೂ ಕೂಡ ನೀರು ಹರಿಸಲು ನೀರಾವರಿ ಇಲಾಖೆಯ ಅಧಿಕಾರಿಗಳು ವಿಫಲರಾಗಿರುವುದರಿಂದ ರೈತರು ಭತ್ತ ಸೇರಿದಂತೆ ಇತರ ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ ಆದರಿಂದ ನೀರಾವರಿ ಇಲಾಖೆಯ ಅಧಿಕಾರಿಗಳು ಅಕ್ರಮ ನೀರಾವರಿಯನ್ನು ತಡೆಯಬೇಕು. ವಾರಬಂದಿಯ ಪ್ರಕಾರ ಸಮಗ್ರವಾಗಿ ನೀರು ನಿರ್ವಹಣೆ ಮಾಡಬೇಕು. ನಿಗಧಿತ ಗೇಜ್ ಕಾಯ್ದು ಕೊಳ್ಳಬೇಕು. ಕೊನೆಯ ಭಾಗದ ರೈತರ ಜಮೀನಿಗೆ ನೀರನ್ನು ತಲುಪಿಸಬೇಕು ರೈತರಿಗೆ ಸ್ಪಂದಿಸದೆ ಇರುವ ಸಿರವಾರ ವಿಭಾಗದ ನಂ1 ಕಾಲುವೆಯ ಸಹಾಯಕ ಕಾರ್ಯನಿರ್ವಹಕ ಅಭಿಯಂತರರನ್ನು ಬೇರೆಕಡೆ ವರ್ಗಾಯಿಸಬೇಕು ಎಂದು ಒತ್ತಾಯಿಸಿದರು.

ಮಾನ್ವಿ ಪೊಲೀಸ್ ಠಾಣೆಯ ಪಿ.ಐ. ವೀರಭದ್ರಯ್ಯ ಹಿರೇಮಠ ಹಾಗೂ ಪೊಲೀಸ್ ಸಿಬ್ಬಂದಿ ಯಾವುದೆ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಭದ್ರತೆ ಕಲ್ಪಿಸಿದರು.

ಆಗಸ್ಟ್ 7 ರಂದು ನೀರಾವರಿ ಇಲಾಖೆ ಸಭೆಯಲ್ಲಿ ನಿರ್ಧಾರ

ನೂರಾರು ರೈತರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರಿಂದ ರಾಯಚೂರು -ಸಿಂಧನೂರು ರಸ್ತೆಯಲ್ಲಿ ಕೆಲವು ಗಂಟೆಗಳ ಕಾಲ ವಾಯನ ಸಂಚಾರಕ್ಕೆ ಅಡೆತಡೆ ಉಂಟಾಯಿತು ಸಿಂಧನೂರು ಡಿ.ವೈ.ಎಸ್.ಪಿ. ಬಾಳಪ್ಪ ತಳವಾರ ಹಾಗೂ ಮಾನ್ವಿ ತಹಸೀಲ್ದಾರ್ ರಾಜು ಪಿರಂಗಿ, ಹಿರೆಕೋಟ್ನೆಕಲ್ ನಿರಾವರಿ ಇಲಾಖೆಯ ಎ.ಇ.ಇ.ಶಾಂತರಾಜು ಪ್ರತಿಭಟನ ನಿರತ ರೈತರ ಮನವೊಲಿಸಿ ರೈತರ ಎಲ್ಲಾ ಬೇಡಿಕೆಗಳನ್ನು ಚರ್ಚೆ ನಡೆಸುವುದಕ್ಕೆ ಜಿಲ್ಲಾಧಿಕಾರಿಗಳು ಸಿದ್ದರಿದ್ದು ನೀರಾಮಾನ್ವಿ ಗ್ರಾಮದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿ ಆ.7ರಂದು ರೈತರ ಹಾಗೂ ಮುನೀರಾಬಾದ್ ಮುಖ್ಯ ನೀರಾವರಿ ಇಲಾಖೆಯ ಅಧಿಕಾರಿಗಳ ಜತೆ ಸಭೆ ನಡೆಸಿ ಕಾಲುವೆಗಳಿಗೆ ನೀರು ಹರಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ನಂತರವೇ ರೈತರು ಪ್ರತಿಭಟನೆಯನ್ನು ಹಿಂಪಡೆದರು.

ಪ್ರತಿಭಟನೆಯಲ್ಲಿ ರೈತ ಮುಖಂಡ ಶಂಕರಗೌಡ ಹರವಿ, ಕ.ರಾ.ರೈ.ಸಂಘದ ರಾಜ್ಯ ಉಪಾಧ್ಯಕ್ಷ ದೊಡ್ಡಬಸವನಗೌಡ, ರಾಜ್ಯ ಕಾರ್ಯದರ್ಶಿಗಳಾದ ಯಂಕಪ್ಪ ಕಾರಬರಿ, ಸೂಗೂರಯ್ಯಸ್ವಾಮಿ.ಆರ್.ಎಸ್. ಮಠ, ಜಿಲ್ಲಾಧ್ಯಕ್ಷ ಬಸವರಾಜ ಮಾಲಿ ಪಾಟೀಲ್, ಜಿ.ಪ್ರ.ಕಾರ್ಯದರ್ಶಿ ಲಿಂಗರೆಡ್ಡಿ ಪಾಟೀ ಲ್, ಸಿರಾವರ ತಾ. ಅಧ್ಯಕ್ಷ ಹೆಚ್.ಶಂಕ್ರಪ್ಪ ದೇವತ ಗಲ್, ಮಾನ್ವಿ ತಾ.ಅಧ್ಯಕ್ಷ ಸಿದ್ದಯ್ಯಸ್ವಾಮಿ ಗೋರ್ಕಾ ಲ್ ರೈತ ಮುಖಂಡ ವೀರೇಶ ಗವಿಗಟ್, ಉಪಾರ ಬಸವರಾಜ್, ಚಾಮರಸ ಜಾನೇಕಲ್, ದೊಡ್ಡ ದೇವೇಂದ್ರಪ್ಪ ಜಾನೇಕಲ್ ಸೇರಿದಂತೆ ಸುತ್ತ ಲಿನ ಗ್ರಾಮಗಳ ನೂರಾರು ರೈತರು ರಸ್ತೆತಡೆ ಚಳುವಳಿಯಲ್ಲಿ ಭಾಗವಹಿಸಿದರು.

ಮೃತ ಪಿಎಸ್ಐ ಮನೆಗೆ ಬಿಜೆಪಿ ನಿಯೋಗ ಭೇಟಿ

ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ವಿಪಕ್ಷ ನಾಯಕ ಆರ್.ಅಶೋಕ

ಕಾರಟಗಿ/ ಕೊಪ್ಪಳ: ಯಾದಗಿರಿ ಪಿಎಸ್ಐ ಪರಶುರಾಮ ಸಾವು ಪ್ರಕರಣ ರಾಜಕೀಯ ತಿರುವು ಪಡೆದುಕೊಂಡಿದ್ದು, ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಬಿಜೆಪಿ ನಾಯಕರು ಮೃತನ ಮನೆಗೆ ಭಾನುವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಬೆಂಗಳೂರಿನಿಂದ ಆಗಮಿಸಿದ ವಿಪಕ್ಷ ನಾಯಕ ಆರ್ ಅಶೋಕ, ಪರಶುರಾಮ ಸ್ವಗ್ರಾಮ ಕಾರಟಗಿ ತಾಲೂಕು ಸೋಮನಾಳ ಗ್ರಾಮದಲ್ಲಿನ ಮೃತ ಪಿಎಸ್ಐ ಪರಶುರಾಮ ಮನೆಗೆ ತೆರಳಿ, ತಂದೆ- ತಾಯಿ ಅವರೊಂದಿಗೆ ಸುಧೀರ್ಘವಾಗಿ ಚರ್ಚಿಸಿದರು. ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ಮಾಜಿ ಸಚಿವರಾದ ಹಾಲಪ್ಪ ಆಚಾರ್, ರಾಜೂಗೌಡ, ಮಾಜಿ ಶಾಸಕ ಬಸವರಾಜ ದಡೇಸೂಗೂರ ಅವರೊಂದಿಗೆ ಕುಟುಂಬಸ್ಥರು ಮತ್ತು ಸ್ನೇಹಿತರಿಂದಲೂ ಮಾಹಿತಿ ಪಡೆದರು. ತಾಯಿ ಗಂಗಮ್ಮ ಆರ್ ಅಶೋಕ ಎದುರು ಅಳುತ್ತಲೇ ಮಗನ ಬಗ್ಗೆ ಮಾಹಿತಿ ನೀಡಿದರು. ಮರಣೋತ್ತರ ಪರೀಕ್ಷೆಗೆ ನಿಯಮ ಪಾಲನೆ ಮಾಡಿಲ್ಲ. ಈ ಬಗ್ಗೆ ಸೂಕ್ತ ತನಿಖೆ ಆಗಬೇಕು ಎಂದು ಮೃತ ಪರಶುರಾಮ ಸ್ನೇಹಿತರು ಗಮನ ಸೆಳೆದರು.

ವಿಪಕ್ಷ ನಾಯಕ ಆರ್. ಅಶೋಕ ಮುಂದೆ ಅಳಲು ತೋಡಿಕೊಂಡ ಮೃತ ಪಿಎಸ್ಐ ಪರಶುರಾಮ ತಂದೆ ಜನಕಮುನಿ, ' ನನ್ನ ಮಗ ಸಾವಿಗೂ ಮೊದಲೂ ಸಾಕಷ್ಟು ಬೇಸರದಲ್ಲಿ ಇದ್ದ. ಏನಾಯ್ತು ಎಂದು ಕೇಳಿದರೂ ಏನೂ ಹೇಳಲಿಲ್ಲ. ಆತ ತಾಯಿ ಮುಂದೆ ಮಾತ್ರ ಎಲ್ಲವನ್ನೂ ಹೇಳಿಕೊಳ್ಳುತ್ತಿಲ್ಲ. ರೂಂನಲ್ಲಿ ಮಲಗಿದ್ದ ನನ್ನ ಮಗನನ್ನು ಕೆಲ ಹೊತ್ತಿನ ನಂತರ ಮಾತನಾಡಿಸಿದರೂ ಮಾತನಾಡಲಿಲ್ಲ. ಅಷ್ಟರಲ್ಲೇ ದೇಹ ಕಪ್ಪಾಗಿತ್ತು.

ಮೂಗಿನಿಂದ ರಕ್ತ ಬಂದಿತ್ತು' ಎಂದು ಅಳಲು ತೋಡಿಕೊಂಡರು. 'ನನ್ನ ಸೊಸೆ ದೂರು ಆಧರಿಸಿ ಈಗಾಗಲೇ ಎ???ಆರ್ ಆಗಿದೆ. ಪ್ರಕರಣದಲ್ಲಿನ ಆರೋಪಿಗಳನ್ನು ಕೂಡಲೇ ಬಂಧಿಸಿ, ತನಿಖೆ ಮಾಡಬೇಕು. ನನ್ನ ಸೊಸೆಯ ವಿದ್ಯಾರ್ಹತೆಗೆ ತಕ್ಕ ಉದ್ಯೋಗ ಕೊಡಬೇಕು' ಎಂದು ಸರಕಾರಕ್ಕೆ ಒತ್ತಾಯಿಸಿದರು. ಅಳಲು ಆಲಿಸಿದ ಆರ್.ಅಶೋಕ, ನಿಮ್ಮ ಕುಟುಂಬ ಯಾವ ಕ್ಷಣದಲ್ಲಾದರೂ ನನ್ನನ್ನು ಸಂಪರ್ಕಿಸಬಹುದು. ನಿಮ್ಮ ಮಗನ ಸಾವಿಗೆ ನ್ಯಾಯ ಸಿಗುವವರೆಗೆ ನಾವು ನಿಮ್ಮೊಂದಿಗೆ ಹೋರಾಟ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಮನವಿ: ವಿಪಕ್ಷ ನಾಯಕ ಆರ್. ಅಶೋಕ ಅವರಿಗೆ ಮೃತ ಪರಶುರಾಮ ಸಹೋದರ ಹನುಮಂತಪ್ಪ ಮನವಿ ಸಲ್ಲಿಸಿ, ಮೃತ ಪರಶುರಾಮ ಪತ್ನಿಗೆ 50 ಲಕ್ಷ ಪರಿಹಾರ ನೀಡಬೇಕು. ಅವರ ಇಬ್ಬರು ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಸರಕಾರ ಹೊತ್ತುಕೊಳ್ಳಬೇಕು. ನನ್ನ ಸಹೋದರನ ಪತ್ನಿ ಇಂಜಿನಿಯರಿಂಗ್ ಮಾಡಿದ್ದಾಳೆ. ಈ ಹಿನ್ನೆಲೆ ಆಕೆಗೆ ಪಿಎಸ್ಐ ಹುದ್ದೆಯನ್ನೇ ನೀಡಬೇಕು. ಈ ಬಗ್ಗೆ ಸರಕಾರದ ಗಮನ ಸೆಳೆಯಬೇಕು ಎಂದು ಮನವಿ ಮಾಡಿದರು. ಮಾಜಿ ಶಾಸಕ ಬಸವರಾಜ ಧಡೆಸುಗೂರ ಅವರ ನೇತೃತ್ವದಲ್ಲಿ ಇದೇ ಬೇಡಿಕೆ ಒಳಗೊಂಡ ಮನವಿಯನ್ನು ಬಿಜೆಪಿ ಕಾರ್ಯಕರ್ತರು ಆರ್.ಅಶೋಕ ಅವರಿಗೆ ಸಲ್ಲಿಸಿದರು.

ಕಾರಟಗಿ ತಾಲೂಕು ಸೋಮನಾಳ ಗ್ರಾಮದಲ್ಲಿ ಮೃತ ಪಿಎಸ್ಐ ಪರಶುರಾಮ ಕುಟುಂಬಸ್ಥರು ಮನವಿ ಸಲ್ಲಿಸಿದರು.

> ನನ್ನ ಮಗ ತುಂಬಾ ಕಷ್ಟಪಟ್ಟು, ಈ ಹಂತ ತಲುಪಿದ್ದ. ಕಷ್ಟದ ದಿನ ಕಳೆದು ಎಲ್ಲ ಸಂಪತ್ತು ನಮಗೆ ಬಂದಿತ್ತು. ಅದನ್ನು ಊಟ ಮಾಡಲು ದೇವರು ಬಿಡಲಿಲ್ಲ. ವರ್ಗಾವಣೆ ಮತ್ತು ಶಾಸಕ ಮತ್ತವರ ಮಗನ ಒತ್ತಡದ ಬಗ್ಗೆ ನನ್ನ ಬಳಿ ಏನೂ ಮಾತನಾಡಿರಲಿಲ್ಲ. ಪತ್ನಿ ಮುಂದೆ ಏನು ಮಾತನಾಡಿದ್ದಾನೆಯೋ ಗೊತ್ತಿಲ್ಲ.
>
> - ಜನಕಮುನಿ, ಮೃತ ಪರಶುರಾಮ ತಂದೆ

ಪರಶುರಾಮ ಮಾವನಿಂದ ಮಾಹಿತಿ

ವಿಪಕ್ಷ ನಾಯಕ ಆರ್.ಅಶೋಕ ಮೃತ ಪಿಎಸ್ಐ ಪರಶುರಾಮ ಪತ್ನಿಯ ತಂದೆಗೆ ಕರೆ ಮಾಡಿ, ಮಾಹಿತಿ ಪಡೆದರು. ಪರಶುರಾಮ ಪತ್ನಿಯ ಆರೋಗ್ಯ ವಿಚಾರಿಸಿದರು. ನಾನು ಬಂದಿದ್ದೇನೆ ಯಾವುದೇ ಕಾರಣಕ್ಕೂ ಅನ್ಯಾಯ ಆಗಲು ಬಿಡುವುದಿಲ್ಲ. ನಿಮ್ಮ ಜೊತೆಗೆ ನಾನು ನಿಂತುಕೊಳ್ಳುತ್ತೇನೆ. ನನ್ನನ್ನು ಬಂದು ಭೇಟಿ ಮಾಡಿ, ನಿಮ್ಮ ಜೊತೆಗೆ ನಾನು ನಿಂತುಕೊಳ್ಳುತ್ತೇನೆ ಎಂದು ಪರಶುರಾಮ ಪತ್ನಿಯ ತಂದೆಗೆ ಹೇಳಿದರು. ನನ್ನ ಮಗಳು ನೀಡಿದ ದೂರು ಸ್ವೀಕರಿಸಿ, ಪ್ರಕರಣ ದಾಖಲಿಸಲು ಪೊಲೀಸರು ಹಿಂದೇಟು ಹಾಕಿದರು. ಗರ್ಭಿಣಿಯಾಗಿದ್ದ ಮಹಿಳೆ ಪರಶುರಾಮ ಪತ್ನಿ ಮುಖ ನೋಡಿಯಾದರೂ ಎಫ್ ಐ ಆರ್ ದಾಖಲಿಸಲಿಲ್ಲ

ಸಾವಿಗೆ ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ್ ಮತ್ತು ಶಾಸಕರ ಪುತ್ರ ಪಂಪನಗೌಡ ಕಿರುಕುಳ ಕಾರಣ. ಜೊತೆಗೆ ಶಾಸಕರು ಮತ್ತವರ ಪುತ್ರನಿಂದ ಜಾತಿನಿಂದನೆ ಆಗಿದೆ ಎಂದು ಮೃತ ಪರಶುರಾಮ ಪತ್ನಿ ಆರೋಪಿಸಿದ್ದಾರೆ. ಈ ಹಿನ್ನೆಲೆ ಪ್ರಕರಣ ಸಾಕಷ್ಟು ಗಂಭೀರತೆ ಪಡೆದುಕೊಂಡಿದೆ. ಎಂದು ಬೇಸರ ವ್ಯಕ್ತಪಡಿಸಿದರು.

ಸಮಾಚಾರ ಸಣ್ಣದಲ್ಲ

2027ರೊಳಗೆ ರೈಲ್ವೇ ಮಾರ್ಗ ಪೂರ್ಣ

ರಾಯಚೂರು: 2027 ರೊಳಗೆ ಸಿಂಧನೂರು ರಾಯಚೂರು ರೈಲ್ವೇ ಮಾರ್ಗ ನಿರ್ಮಾಣ ಪೂರ್ಣಗೊಳಿಸಲಾಗುವುದೆಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಭರವಸೆ ನೀಡಿದರು. ಅವರು ರೈಲು ಸಂಖ್ಯೆ 22232 ಖಚ್ಚು ಬೆಂಗಳೂರು - ಕಲಬುರಗಿ ವಂದೇ ಭಾರತ್ ಎಕ್ಸ್‌ಪ್ರೆಸ್ ಅನ್ನು ಯಾದಗಿರಿ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ನಿಲುಗಡೆಯೊಂದಿಗೆ ಅಂದರೆ 3ನೇ ಆಗಸ್ಟ್ 2024 (ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಂದ ರಿಮೋಟ್ ವೀಡಿಯೊ ಲಿಂಕ್ ಮೂಲಕ) ಫ್ಲ್ಯಾ ಗ್ ಆಫ್ ಮಾಡಿ ಯಾದಗಿರಿ ಜಿಲ್ಲೆಯ ಜನರಿಗೆ ಇದು ಮೊದಲ ವಂದೇ ಭಾರತ್ ಎಕ್ಸ್ ಆಗಿರುವುದರಿಂದ ಈ ಭಾಗದ ಜನರಿಗೆ ಇದು ಸಂತೋಷದ ದಿನವಾಗಿದೆ. ಇದು ಉತ್ತಮ ಸಾರಿಗೆ ಸೌಕರ್ಯ ಮತ್ತು ಹೆಚ್ಚಿನ ಸುರಕ್ಷತಾ ವೈಶಿಷ್ಟ್ಯಗಳನ್ನು ಒದಗಿಸುತ್ತದೆ ಎಂದು ಅವರು ಮಾಹಿತಿ ನೀಡಿದರು.ಯಾದಗಿರಿಯ ಜನರಿಗೆ ಕಲಬುರಗಿ, ರಾಯಚೂರು, ಮಂತ್ರಾಲಯ, ಗುಂತಕಲ್ ಮುಂತಾದ ಕಡಿಮೆ ದೂರಕ್ಕೆ ಪ್ರಯಾಣಿಸಲು ಮತ್ತು ಅನುಕೂಲಕರ ದಿನದ ಪ್ರಯಾಣದ ಸಮಯದೊಂದಿಗೆ ಹಿಂತಿರುಗಲು ಅನುಕೂಲಕರ ಪ್ರಯಾಣ ಸೌಲಭ್ಯವನ್ನು ಸಹ ಒದಗಿಸುತ್ತದೆ ಎಂದು ಹೇಳಿದರು.

ಲೂರ್ದು ಮಾತೆ ಚರ್ಚ್ ಪಾಲನಾ ಸಮಿತಿಗೆ ಪದಾಧಿಕಾರಿಗಳ ಆಯ್ಕೆ

ಲಿಂಗಸ್ಗೂರು : ಪಟ್ಟಣದ ಲೂರ್ದು ಮಾತೆ ಚರ್ಚ್‌ನ ಪಾಲನಾ ಸಮಿತಿಗೆ ಪದಾಧಿಕಾರಿಗಳ ಆಯ್ಕೆ ಹಾಗೂ ಸೇವಾ ಸ್ವೀಕಾರ ಸಮಾರಂಭ ನಡೆಯಿತ್ತು. ಪಾಲನಾ ಸಮಿತಿಯ ಅಧ್ಯಕ್ಷರಾಗಿ ಚರ್ಚನ ಗುರುಗಳಾದ ವಂ.ಫಾ ಜೋಸ್ ಪ್ರಕಾಶ, ಉಪಾಧ್ಯಕ್ಷರಾಗಿ ಹಾಗೂ ಯುವ ಸಂಘಟನಾ ಸದಸ್ಯ ಅರುಣ್‌ಕುಮಾರ, ಕಾರ್ಯದರ್ಶಿ, ಸಾಮಾಜಿಕ ಅಭಿವೃದ್ಧಿ ಹಾಗೂ ಹಿಂದುಳಿದ ಅಭಿವೃದ್ಧಿ ಯೋಜನೆ ಸದಸ್ಯ ಅಮರೇಶ ಘಂಟಿಯವರನ್ನು ಬಹುಮತದಿಂದ ಆಯ್ಕೆ ಮಾಡಲಾಯಿತ್ತು. ಸಮಿತಿಯ ಜತೆಗೆ ವಿವಿಧ ಸಮಿತಿಗಳಿಗೆ ಸದಸ್ಯರನ್ನು ನೇಮಕ ಮಾಡಲಾಯಿತ್ತು. ಐಸಿವೈಎಂ ಅಧ್ಯಕ್ಷೆ ಸೋನಿ, ಬೈಬಲ್ ಸಮಿತಿ ಸದಸ್ಯೆ ಸಿಸ್ಟರ್ ಅರುಣಾ ಎ.ಸಿ, ಧರ್ಮಾಚರಣೆ, ಆರೋಗ್ಯ ಮತ್ತು ಪರಿಸರ ಸದಸ್ಯೆ ಸಿಸ್ಟರ್ ರೆನ್ನಿ ಡಿಸೋಜಾ ಎ.ಸಿ, ಕ್ಯಾಟೆಟಿಕ್ಸ್ ಸದಸ್ಯ ಮೇರಿ.ಎಸ್, ಧರ್ಮಪ್ರಚಾರ ಸದಸ್ಯ ಪ್ರಾನ್ಸಿಸ್, ಶಿಕ್ಷಣ ಸದಸ್ಯ ಮಾರ್ಟಿನ್, ವಿವಿಧ ಧರ್ಮಗಳ ಸಭೆ ಸಮಾರಂಭ ಸದಸ್ಯ ಮೇಸಕ್, ಕುಟುಂಬ ಭೇಟಿ ಸದಸ್ಯ ಕವಿತಾ, ಮಹಿಳಾ ಅಭಿವೃದ್ಧಿ ಸದಸ್ಯೆ ಕಮಲಾಕ್ಷಿ, ವೃದ್ಧರ ಯೋಗಕ್ಷೇಮ ಸದಸ್ಯ ಜಾನ್ ದಂಡಾವತಿ ಹಾಗೂ ಆರ್ಥಿಕ ಹಾಗೂ ಹಣಕಾಸು ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತ್ತು. ಚರ್ಚ್‌ನ ಗುರುಗಳಾದ ವಂ.ಫಾ.ಜೋಸ್ ಪ್ರಕಾಶರವರು ಸೇವಾ ಸ್ವೀಕಾರ ಪ್ರಮಾಣವಚನ ಬೋಧಿಸಿದರು. ಉಪಾಧ್ಯಕ್ಷ, ಕಾರ್ಯದರ್ಶಿ ಹಾಗೂ ವಿವಿಧ ಸಮಿತಿ ಸದಸ್ಯರು ಸೇವಾ ಸ್ವೀಕಾರ ಪ್ರಮಾಣ ವಚನ ಸ್ವೀಕರಿಸಿದರು.

ಸಾಂಕ್ರಾಮಿಕ ಭೀತಿ: ನಿವಾಸಿಗಳ ಆಗ್ರಹ

ಮುದಗಲ್: ಪಟ್ಟಣದ ವಾರ್ಡ ನಂ 1 ಮತ್ತು 2 ರ ಕೋಶಭಾಗದಲ್ಲಿರುವ ಹಳೇಪೇಟೆಯ ಕೆರೆಯ ಸುತ್ತಲೂ ದುರ್ನಾತ ಬೀರುತ್ತಿದ್ದು ಅದರಿಂದ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗುವ ಸಂಭವದಿಂದ ಕೂಡಲೇ ಪುರಸಭೆ ಅಧಿಕಾರಿಗಳು ಅಲ್ಲಿನ ಸಮಸ್ಯೆಗೆ ಸ್ಪಂದಿಸುವಂತೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಮಂಗಳವಾರ ಪುರಸಭೆಯ ವ್ಯವಸ್ಥಾಪಕ ದೇವರಾಜ ರೆಡ್ಡಿ ಭೇಟಿ ಮಾಡಿದ ಹಳೇಪೇಟೆ ನಿವಾಸಿಗಳು ಕೆರೆಯ ಸುತ್ತಲೂ ಮಲೇರಿಯಾ ಡೆಂಘೀ ಹರಡುವ ಪ್ರಮುಖ ಕೀಟಗಳು ಉತ್ಪತ್ತಿಯಾಗಿ ಹಳೇಪೇಟೆ ರಸ್ತೆ ಮೇಲೆ ತಿರುಗಾಡಲು ಕೂಡ ಮೂಗು ಮುಚ್ಚಿಕೊಂಡು ಹೋಗುವ ಸಂಧಿಗ್ನ ಪರಿಸ್ಥಿತಿ ಎದುರಾಗಿದೆ. ಕೂಡಲೇ ಕೆರೆಯ ಸುತ್ತಲಿನ ಮನೆಗಳ ನಿವಾಸಿಗಳ ಆರೋಗ್ಯ ರಕ್ಷಣೆ ಹಿತದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಂಡು ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಮನವಿ ಮಾಡಿದರು.

30 ವರ್ಷಗಳ ವಿಶ್ವಾಸ, ಅತ್ಯುತ್ತಮವಾದುದರಲ್ಲಿ ನಂಬಿಕೆ
ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ
ಅಡಿಗಾಸ್ ಯಾತ್ರಾ®
ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ
9449478944
email: care@adigasyatra.com website: www.adigasyatra.com
500ಕ್ಕೂ ಅಧಿಕ ವೈವಿಧ್ಯಮಯ ಪ್ರವಾಸಗಳು
ಎಲ್ಲಾ ವಿದೇಶ ಪ್ರವಾಸಗಳಿಗೆ ಮತ್ತು ಕಾಶ್ಮೀರ, ಹಿಮಾಚಲ, ಸಿಕ್ಕಿಂ, ನಾರ್ತ್ ಈಸ್ಟ್, ಉತ್ತರಾಖಂಡ್, ಚಾರ್‌ಧಾಮ್, ಅಮರನಾಥ, ಅಂಡಮಾನ್, ಗುಜರಾತ್, ರಾಜಸ್ಥಾನ, ಒಡಿಶಾ, ಕಾಶಿ-ಗಯಾ, ಉಜ್ಜಯಿನಿ-ಓಂಕಾರೇಶ್ವರ
ಗ್ರಾಹಕಾನುಕೂಲಿತ 3 ದಿನಗಳಿಂದ-ಗರಿಷ್ಠ 21 ದಿನಗಳವರೆಗಿನ ಪ್ರವಾಸಗಳು
EMI FACILITIES AVAILABLE
EASY PAY
GROUP, CUSTOMISED & HONEYMOON TOUR PACKAGES
ಗ್ರೂಪ್ ಪ್ರವಾಸಗಳು
ಶುದ್ಧ ಸಸ್ಯಹಾರಿ ಉಟೋಪಹಾರ, A/C ಬಸ್, A/C ರೂಮ್‌ನಲ್ಲಿ ವಸತಿ, ರೈಲು/ವಿಮಾನ ಪ್ರಯಾಣ, ಟೂರ್ ಮ್ಯಾನೇಜರ್ ಸೇವೆಯೊಂದಿಗೆ ಗ್ರೂಪ್ ಪ್ರವಾಸಗಳು

ಚಾರ್‌ಧಾಮ ಯಾತ್ರಾ — By Flight 14 Days/ By Train 18 Days
ಹರಿದ್ವಾರ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ರುದ್ರ ಪ್ರಯಾಗ, ಗುಪ್ತ ಕಾಶಿ, ಕೇದಾರನಾಥ, ಮಾನಾ, ಬದರಿನಾಥ್, ಋಷಿಕೇಶ
Dep Dates: Sep 4, 18, 25. Oct 2, 9, 16.
ಗುಜರಾತ್ ವಿಶೇಷ ಪ್ರವಾಸ — By Flight 9 Days/ By Train 12 Days
ಅಹಮದಾಬಾದ್, ಕೆವಾಡಿಯಾ-ಸರ್ದಾರ್ ವಲ್ಲಭಭಾಯ್ ಪ್ರತಿಮೆ, ಭಾವನಗರ, ನಿಷ್ಕಳಂಕ್ ಮಹದೇವ್, ಸೋಮನಾಥ್, ವೀರಾವಲ್, ಪೋರಬಂದರ್, ಬೆಟ್ ದ್ವಾರಕಾ, ನಾಗೇಶ್ವರ್, ದ್ವಾರಕ, ಮಾತೃಗಯಾ, ಮೊಧೇರಾ, ಪಟಾನ್.
Dep Dates: Aug 21. Sep 8, 16, 25. Oct 6, 14, 23. Nov 3, 11, 20. Dec 1, 9, 18.
ರಾಜಸ್ಥಾನ್ ವಿಶೇಷ ಪ್ರವಾಸ — By Flight 10 Days/ By Train 14 Days
ಜೈಪುರ, ಪುಷ್ಕರ್, ಚಿತ್ತೋರಗಢ, ಉದಯಪುರ. ಕುಂಭಲ್ಗಢ್, ಜೋಧಪುರ್, ಜೈಸಲ್ಮೇರ್, ಸ್ಯಾಮ್ ಸ್ಯಾಂಡ್ ಡ್ಯೂನ್ಸ್, ಬಿಕಾನೇರ್, ಕರಣೀ ಮಾತಾ.
Dep Dates: Sep 5, 12, 19, 26. Oct 3, 10, 17, 24. Nov 7, 14, 21, 28. Dec 5, 12, 19.
ಮಧ್ಯ ಪ್ರದೇಶ ಪ್ರವಾಸ — By Flight 11 Days/ By Train 15 Days
ಗ್ವಾಲಿಯರ್, ಖಜುರಾಹೋ, ಜಬಲ್‌ಪುರ್, ಭೇದಘಾಟ್, ಪಾಚ್‌ಮಾಡಿ, ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಹೇಶ್ವರ, ಓಂಕಾರೇಶ್ವರ.
Dep Dates: Aug 20. Sep 3, 10, 17, 24. Oct 1, 8, 15, 22, 29. Nov 5, 12, 19, 26. Dec 3, 10, 17.
ಸಪ್ತ ಜ್ಯೋತಿರ್ಲಿಂಗ ದರ್ಶನ — By Flight 10 Days/ By Train 12 Days
ಪುಣೆ, ಭೀಮಾಶಂಕರ, ನಾಸಿಕ್, ತ್ರಯಂಬಕೇಶ್ವರ, ಶಿರಡಿ, ಶನಿ ಶಿಂಗ್ನಾಪೂರ, ಎಲ್ಲೋರಾ, ಗೃಷ್ಣೇಶ್ವರ, ಔರಂಗಾಬಾದ್, ಅಜಂತಾ, ಓಂಕಾರೇಶ್ವರ, ಉಜ್ಜಯಿನಿ, ಔಂಧ ನಾಗನಾಥ, ಪರ್ಲಿ, ವೈಜನಾಥ
Dep Dates: Oct 12, 26. Nov 9, 23. Dec 7, 14.
ಶಿಮ್ಲಾ-ಮನಾಲಿ-ವೈಷ್ಣೋದೇವಿ — By Flight 14 Days/ By Train 17 Days
ಕುರುಕ್ಷೇತ್ರ, ಚಂಡೀಗಢ, ಶಿಮ್ಲಾ, ಕುಲು, ಮನಾಲಿ, ಬೈಜನಾಥ, ಕಾಂಗ್ರಾ ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಕಟ್ರಾ, ವೈಷ್ಣೋದೇವಿ, ಅಮೃತಸರ್,
Dep Dates: Sep 2, 9, 23. Oct 7, 14, 21. Nov 11, 25. Dec 9
ಶಕ್ತಿಪೀಠ-ಹಿಮಾಚಲ — By Flight 13 Days/ By Train 16 Days
ಕುರುಕ್ಷೇತ್ರ, ಭದ್ರಕಾಳಿ (ಶಕ್ತೀಪೀಠ) ಚಂಡೀಗಢ, ಮಾನಸ ದೇವಿ, ಚಿಂತಪೂರ್ಣಿ, ಕಾಂಗ್ರಾ, ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಡಾಲ್‌ಹೌಸಿ, ಖಜಿಯಾರ್, ಧರ್ಮಶಾಲಾ, ಕಟ್ರಾ, ವೈಷ್ಣೋದೇವಿ.
DEP DATES: Oct 14, 21. Nov 11, 25. Dec 9.
ಕಾಶ್ಮೀರ-ವೈಷ್ಣೋದೇವಿ ಯಾತ್ರಾ — By Flight 8 Days/ By Train 14 Days
ಪಹಲ್ಗಾಮ್, ಸೋನಾಮಾರ್ಗ್, ಶ್ರೀನಗರ, ಗುಲ್ಮಾರ್ಗ್, ಕಟ್ರಾ, ವೈಷ್ಣೋದೇವಿ
DEP DATES: Sep 12, 20. Oct 2, 10, 18. Nov 6, 14, 22. Dec 4, 12.
ಕಛ್-ಸೌರಾಷ್ಟ್ರ-ಗಿರ್ — By Flight 13 Days/ By Train 16 Days
ಕೆವಾಡಿಯಾ, ಸರ್ದಾರ್ ವಲ್ಲಭಬಾಯ್ ಸ್ಮಾರಕ, ಭಾವನಗರ, ನಿಷ್ಕಳಂಕ ಮಹಾದೇವ್, ಗಿರ್ ನ್ಯಾಷನಲ್ ಪಾರ್ಕ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ, ದ್ವಾರಕ, ನಾರಾಯಣ ಸರೋವರ, ಕೋಟೇಶ್ವರ, ಮಾಂಡ್ವಿ ಬೀಚ್, ಭುಜ್, ರನ್ ಆಫ್ ಕಛ್, ಧೋರ್ಡ್ಡೋ, ದಸಾಡ, ಮೊಧೇರಾ, ಪಟಾನ್, ಮಾತೃಗಯಾ, ಅಹಮದಾಬಾದ.
DEP DATES: Nov 3, 15, 27. Dec 8.
ನೇಪಾಳ-ಅಯೋಧ್ಯಾ-ಕಾಶಿ — By Flight 12 Days/ By Train 16 Days
ಪ್ರಯಾಗರಾಜ್, ಅಯೋಧ್ಯಾ, ಸುನೌಲಿ ಬಾರ್ಡರ್, ಮನೋಕಾಮನಾ, ಕಠ್ಮಂಡು, ಲುಂಬಿನಿ, ಗೋರಖಪುರ, ಗಯಾ, ಬೋಧಗಯಾ, ವಾರಣಾಸಿ, ಸಾರನಾಥ
DEP DATES: Sep 8, 20, 15. Oct 13, 25. Nov 10, 22. Dec 8, 20
ಅಯೋಧ್ಯಾ-ಕಾಶಿ-ಗಯಾ — By Flight 9 Days/ By Train 13 Days
ನೈಮಿಶಾರಣ್ಯ, ಅಯೋಧ್ಯಾ, ಪ್ರಯಾಗರಾಜ್, ಚಿತ್ರಕೂಟ, ಭೋಧಗಯಾ, ಗಯಾ, ವಾರಣಾಸಿ, ಸಾರನಾಥ.
DEP DATES: Sep 9, 30. Oct 9, 21. Nov 4, 13, 25. Dec 2, 11, 23.
ಪೂರ್ವ & ಈಶಾನ್ಯ

ಪೂರ್ವ ಭಾರತ ಪ್ರವಾಸ
By Flight 6/13 Days & By Train 9/16 Days
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಚಿಲ್ಕಾ ಲೇಕ್, ಕೋನಾರ್ಕ್, ದಕ್ಷಿಣೇಶ್ವರ, ಹೌರಾ, ಕಲ್ಕತ್ತಾ, ಸಿಲಿಗುರಿ, ಮಿರಿಕ್, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗ್‌ಟಕ್,
DEP DATES: Sep 4, 18. Oct 2, 16. Nov 6, 20, 27. Dec 4, 11
ಅಸ್ಸಾಂ-ಅರುಣಾಚಲ-ಮೇಘಾಲಯ
By Flight 13 Days & By Train 18 Days
ಗುವಾಹತಿ, ನೌವ್‌ಗಾವ್, ಮಹಾ ಮೃತ್ಯುಂಜಯ, ತೇಜ್‌ಪುರ್, ಬೊಮ್ದಿಲಾ, ತವಾಂಗ್, ಸೆಲಾ ಪಾಸ್, ಕಾಜೀರಂಗ ನ್ಯಾಶನಲ್ ಪಾರ್ಕ್, ಚಿರಾಪುಂಜಿ, ಶಿಲ್ಲಾಂಗ್
DEP DATES: Oct 25. Nov 7, 20.

For more details call:
ಬಸವನಗುಡಿ : 080-26616678 / 7022259008
ಮಲ್ಲೇಶ್ವರಂ : 080-23346678 / 7022259003
ರಾಜರಾಜೇಶ್ವರಿ ನಗರ : 080-26696678 / 7483366378
ವಿಜಯನಗರ : 080-23356678 / 7022259002
ಹುಬ್ಬಳ್ಳಿ : 0836-2256678 / 7022259001
ಹಾಸನ : 08172-261888 / 8884679122

ಸಮಾಚಾರ ಸಣ್ಣದಲ್ಲ

ಮಗನಿಂದಲೇ ತಾಯಿಯ ಕೊಲೆ

ಬೈಲಹೊಂಗಲ: ಕುಡಿದ ಅಮಲಿನಲ್ಲಿ ಮಗನೊಬ್ಬ ತಾಯಿಯನ್ನು ಕೊಲೆಮಾಡಿದ ಘಟನೆ ತಾಲೂಕಿನ ಉಡಿಕೇರಿಯಲ್ಲಿ ಶನಿವಾರ ತಡರಾತ್ರಿ ನಡೆದಿದೆ. ಕೊಲೆಯಾದ ಮಹಿಳೆಯನ್ನು ಮಹಾದೇವಿ ಗುರಪ್ಪ ತೊಲಗಿ(70) ಎಂದು ಗುರುತಿಸಲಾಗಿದೆ. 34 ವರ್ಷ ದ ಈರಣ್ಣ ಗುರಪ್ಪ ತೊಲಗಿ ಕೊಂದ ಆರೋಪಿ.

ಆರೋಪಿ ಈರಣ್ಣ ಬೆಂಗಳೂರಿನಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡಿಕೊಂಡಿದ್ದ. ಒಂದು ವರ್ಷದ ಹಿಂದೆ ಹೆಂಡತಿ ಜೊತೆ ಜಗಳ ಮಾಡಿಕೊಂಡು ಬಂದು ಉಡಿಕೇರಿಯಲ್ಲಿ ತಾಯಿ ಜೊತೆ ವಾಸವಾಗಿದ್ದು, ಕೂಲಿ ಕೆಲಸ ಮಾಡಿಕೊಂಡಿದ್ದ, ಕುಡಿತದ ದಾಸನಾಗಿದ್ದ. ತಾಯಿ ಜತೆ ಜಗಳ, ಕೊಲೆ ತಾಯಿ ಮಹಾದೇವಿ ಹೆಸರಿನಲ್ಲಿರುವ ಒಂದು ಎಕರೆ ಜಮೀನನ್ನು ತನ್ನ ಹೆಸರಿಗೆ ಮಾಡಿಕೊಡುವಂತೆ ಪದೇ ಪದೇ ಗಲಾಟೆ ಮಾಡುತ್ತಿದ್ದ. ಶನಿವಾರ ರಾತ್ರಿ ಕುಡಿದ ಅಮಲಿನಲ್ಲಿ ಮನೆಗೆ ಬಂದ ಈರಣ್ಣ , ಕುಡಿಯಲು ಹಣ ಕೊಡುವಂತೆ ಪೀಡಿಸಿ, ತಾಯಿಯ ಜತೆ ಜಗಳವಾಡಿದ್ದಾನೆ ಈ ವೇಳೆ ಕಟ್ಟಿಗೆಯಿಂದ ತಾಯಿ ತಲೆಗೆ ಹೊಡೆ ದಿದ್ದು, ಹೊಡೆತದ ರಭಸಕ್ಕೆ ಆಕೆ ಗೋಡೆಗೆ ಡಿಕ್ಕಿ ಹೊಡೆದು ಮೃತಪಟ್ಟಿದ್ದಾಳೆ.

ಪವರ್ ಟಿಲ್ಲರ್ ಚಕ್ರಕ್ಕೆ ಸಿಲುಕಿ ರೈತ ಸಾವು

ಅಂಕೋಲಾ: ರೈತನೋರ್ವ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಪವರ್ ಟಿಲ್ಲರ್ ಚಕ್ರಕ್ಕೆ ಸಿಲುಕಿ ಗಾಯಗೊಂಡು ಸಾವನ್ನಪ್ಪಿದ ಘಟನೆ ತಾಲೂಕಿನ ಮೊರಳ್ಳಿ ಮಾಣಿಗುಡ್ಡ ಬಳಿ ಭಾನುವಾರ ನಡೆದಿದೆ. ಮೊಗಟಾ ಗ್ರಾ.ಪಂ. ವ್ಯಾಪ್ತಿಯ ಮೊರಳ್ಳಿ ಮಾಣಿಗುಡ್ಡ ನಿವಾಸಿ ನಾಗರಾಜ ತಿಮ್ಮಪ್ಪ ಗೌಡ(37) ಮೃತ ದುರ್ದೈವಿ. ರೈತ ನಾಗರಾಜ ಆ.4ರ ಭಾನುವಾರ ಮೊರಳ್ಳಿಯಲ್ಲಿರುವ ಸುರೇಶ ನಾಯಕ ಎಂಬವವರ ಗದ್ದೆಯಲ್ಲಿ ಪವರ್ ಟಿಲ್ಲರ್ ಮೂಲಕ ಉಳುಮೆ ಮಾಡುತ್ತಿದ್ದ ವೇಳೆ ಆತನ ಕಾಲು ಚಕ್ರಕ್ಕೆ ಸಿಲುಕಿ ಗಾಯಗೊಂಡಿದ್ದಾನೆ. ತೀವ್ರ ರಕ್ತಸ್ರಾವದಿಂದ ಗದ್ದೆಯಲ್ಲೇ ಕೊನೆಯುಸಿರೆಳೆದಿದ್ದಾನೆ. ಅಂಕೋಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಡಿಯೊ ಕಳಿಸಿ ಯುವಕ ಆತ್ಮಹತ್ಯೆ

ಕುಣಿಗಲ್: ಜೀವನದಲ್ಲಿ ಜಿಗುಪ್ಸೆಗೊಂಡು ಯುವಕನೊಬ್ಬ ತನ್ನ ಸಹೋದರನಿಗೆ ವಾಟ್ಸ್ಯಾಪ್ ವಿಡಿ ಯೊ ಕಳಿಸಿ ಕುಣಿಗಲ್ ದೊಡ್ಡಕೆರೆಯ ಕೋಡಿ ಹಾಲ ಮಡುವಿನ ನಾಲೆಯ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ನಡೆದಿದೆ. ಪಟ್ಟಣದ ಮಹಾವೀರ ನಗರದ ವಾಸಿ ಬಿ.ಆನಂದ್ (27) ಆತ್ಮಹತ್ಯೆ ಮಾಡಿಕೊಂಡ ಯುವಕ. ಬಿ.ಆನಂದ್ ಕುಣಿಗಲ್ ತಾಲೂಕಿನ ಅಂಚೇಪಾಳ್ಯ ವಸಾಹತು ಪ್ರದೇಶದ ವಿನರ್ ಬರ್ಗರ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದನ್ನು ಆ. 2ರಂದು ಶುಕ್ರವಾರ ಆನಂದ್ ಮನೆಯಿಂದ ತೆರಳಿದವನು ಮನೆಗೆ ವಾಪಸ್ ಬರ ಲಿಲ್ಲ, ಈ ಸಂಬಂಧ ಸಂಬಂಧಿಕರು ಎಲ್ಲೆಡೆ ಹುಡುಕಿ ದರೂ ಆನಂದ್ ಪತ್ತೆ ಆಗಿರಲಿಲ್ಲ. ಆತ್ಮಹತ್ಯೆ ಮಾಡಿ ಕೊಳ್ಳುವ ಮುನ್ನ ತನ್ನ ಸಹೋದರ ಸಾಗರ್‌ಗೆ ವಿಡಿ ಯೊ ಮಾಡಿ ನನ್ನ ಸಾವಿಗೆ ಯಾರು ಕಾರಣರಲ್ಲ, ನನಗೆ ಬದುಕಬೇಕು ಅನಿಸುತ್ತಿಲ್ಲ ಹಾಗಾಗಿ ನಾನು ಸಾಯುತ್ತಿದ್ದೇನೆ ಎಂದು ವಾಟ್ಸ್ಯಾಪ್ ವಿಡಿಯೊ ಕಳಿಸಿ ಕುಣಿಗಲ್ ದೊಡ್ಡಕೆರೆಯ ಕೋಡಿಯ ಹಾಲ ಮಡು ವಿನ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ವಕ್ಫ್ ಅಧಿಕಾರಕ್ಕೆ ಮೂಗುದಾರ

← ಮೊದಲಪುಟದಿಂದ

ವಕ್ಫ್ ಬೋರ್ಡ್ ಯಾವುದೇ ಆಸ್ತಿಯನ್ನು ತನ್ನದೆಂದು ಘೋಷಿಸಿ ಸ್ವಾಧೀನಪಡಿಸಿಕೊಂಡರೆ ಆ ಆಸ್ತಿಯ ಮೂಲ ಮಾಲೀಕರಿಗೂ ಪ್ರಶ್ನಿಸಲು, ತಗಾದೆ ಮಾಡಲು, ದಾವೆ ಹೂಡಲು ಅವಕಾಶವಿರಲಿಲ್ಲ. ಈ ನಿಯಮಕ್ಕೂ ತಿದ್ದುಪಡಿ ತರಲಾಗುತ್ತದೆ ಎನ್ನಲಾಗಿದೆ.ಒಮನ್, ಸೌದಿ ಅರೇಬಿಯ ಸೇರಿದಂತೆ ಇಸ್ಲಾಮಿಕ್ ರಾಷ್ಟ್ರಗಳಲ್ಲೇ ಈ ರೀತಿಯಲ್ಲಿ ಸ್ವಯಂ ಆಸ್ತಿ ಘೋಷಣೆ ಮಾಡಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ವಕ್ಫ್ ಬೋರ್ಡ್‌ಗೆ ನೀಡಲಾಗಿಲ್ಲ. ಹಾಗಾಗಿ ದೇಶದ ಲ್ಲಿನ ವಕ್ಫ್ ಕಾಯಿದೆಗೆ ತಿದ್ದುಪಡಿ ತರಲೇಬೇಕಾದ ಅಗತ್ಯವಿದೆ ಎಂಬ ಮಾತುಗಳು ಕೇಳಿಬಂದಿವೆ.

ಕಾಳಜಿ ಕೇಂದ್ರದಲ್ಲಿ ನಿರಾಶ್ರಿತರ ವಾಸ್ತವ್ಯ | ಜಾನುವಾರುಗಳಿಗೆ ಮೇವು ಸಿಗದೆ ರೈತರ ಪರದಾಟ

ಹಿಗ್ಗದ ಕುಗ್ಗದ ಕೃಷ್ಣಾ ಪ್ರವಾಹ; ಸಂಕಷ್ಟದಲ್ಲಿ ಜನ

ವಿನಾಯಕ ಮಠಪತಿ ಬೆಳಗಾವಿ

ಮಹಾರಾಷ್ಟ್ರ ಘಟ್ಟ ಪ್ರದೇಶಗಳಲ್ಲಿ ನಿರಂತರ ಮಳೆ ಅಬ್ಬರ ಮುಂದುವರಿದ ಪರಿಣಾಮ ಕೃಷ್ಣಾ ನದಿ ಪ್ರವಾಹದಲ್ಲಿ ಏರಿಳಿತ ಕಾಣದಿದ್ದರೂ ಸದ್ಯ ಉಂಟಾಗಿರುವ ಪ್ರವಾಹ ಮುಂದುವರಿದಿದೆ. ಕಳೆದ ಹತ್ತು ದಿನಗಳಿಂದ ಮನೆ ತೊರೆದಿರುವ ನಿರಾಶ್ರಿತರು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದು ಜಾನುವಾರುಗಳು ಮೇವಿಗಾಗಿ ಪರಿತಪಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

- ಐದು ತಾಲೂಕಿನ ಸುಮಾರು 20 ಕ್ಕೂ ಅಧಿಕ ಗ್ರಾಮಗಳು ಪ್ರವಾಹಕ್ಕೆ ತುತ್ತು
- ಸುಮಾರು 10 ಸಾವಿರ ಜನ ನಿರಾಶ್ರಿತರ ಶಿಬಿರ ಸೇರಿದಂತೆ ಬೇರೆ ಸ್ಥಳಗಳಲ್ಲಿ ಆಶ್ರಯ
- ಕಣ್ಣೀರಲ್ಲಿ ಕೈ ತೊಳೆಯುತ್ತಿರುವ 20 ಕ್ಕೂ ಅಧಿಕ ಹಳ್ಳಿ ಜನ

ಕೃಷ್ಣಾ ನದಿ ಪಾತ್ರದ ಚಿಕ್ಕೋಡಿ ಉಪ ವಿಭಾಗದ ಐದು ತಾಲೂಕಿನ ಸುಮಾರು 20 ಕ್ಕೂ ಅಧಿಕ ಗ್ರಾಮಗಳು ಪ್ರವಾಹಕ್ಕೆ ತುತ್ತಾಗಿದ್ದು ಕಳೆದ ಹತ್ತು ದಿನಗಳಿಂದಲೂ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಸದ್ಯ ಕೃಷ್ಣಾ ನದಿ ಪ್ರವಾಹಕ್ಕೆ ಅಥಣಿ, ರಾಯಬಾಗ, ಕಾಗವಾಡ, ಚಿಕ್ಕೋಡಿ ಹಾಗೂ ನಿಪ್ಪಾಣಿ ತಾಲೂಕಿನ 3000 ಕುಟುಂಬಗಳು ಪ್ರವಾಹಕ್ಕೆ ತುತ್ತಾಗಿದ್ದು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಲಾಗಿದ್ದು, ಸುಮಾರು 10 ಸಾವಿರ ಜನ ನಿರಾಶ್ರಿತರ ಶಿಬಿರ ಸೇರಿದಂತೆ ಬೇರೆ ಸ್ಥಳಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಸದ್ಯ ರಾಜ್ಯದ ಕೃಷ್ಣಾ ನದಿಗೆ ಮಹಾರಾಷ್ಟ್ರದ ಕೊಯ್ನಾ ಜಲಾಶಯ ಸೇರಿ ಉಪ ನದಿಗಳಿಂದ 2 ಲಕ್ಷ 87 ಸಾವಿರ ಕ್ಯೂಸೆಕ್ ನೀರಿನ ಒಳಹರಿವಿದೆ. ಅಷ್ಟೇ ಪ್ರಮಾಣದಲ್ಲಿ ಹಿಪ್ಪರಗಿ ಆಣೆಕಟ್ಟು ಮೂಲಕ ನೀರು ಹೊರಬಿಡಲಾಗುತ್ತಿರುವ ಪರಿಣಾಮ ಕೃಷ್ಣಾ ನದಿ ಪ್ರವಾಹ ಯಥಾಸ್ಥಿತಿ ಮುಂದುವರಿದೆ. ಮಹಾರಾಷ್ಟ್ರದ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಮಳೆ ಆರ್ಭಟ ಮುಂದುವರಿದ ಪರಿಣಾಮ ಸದ್ಯ ಕೃಷ್ಣಾ ನದಿ ಪಾತ್ರದ ಚಿಕ್ಕೋಡಿ ಉಪ ವಿಭಾಗದ 20 ಕ್ಕೂ ಅಧಿಕ ಹಳ್ಳಿ ಜನ ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ.

ಕೃಷ್ಣಾ ನದಿ ಪ್ರವಾಹಕ್ಕೆ ಸಿಲುಕಿ ಕಳೆದ 10 ದಿನಗಳಿಂದ ನದಿ ನೀರಲ್ಲಿ ನಿಂತ ಮನೆ.

ಪ್ರವಾಹ ಲೆಕ್ಕಿಸದೆ ಜಾನುವಾರುಗಳಿಗೆ ಮೇವು ತರುತ್ತಿರುವ ಕೃಷ್ಣಾ ಕಿತ್ತೂರು ಗ್ರಾಮದ ರೈತರು.

ಜಾನುವಾರುಗಳ ಮೇವಿಗೆ ರೈತರ ಪರದಾಟ : ಪ್ರವಾಹ ಪೀಡಿತ ಪ್ರದೇಶದ ನಿರಾಶ್ರಿತರು ಕಾಳಜಿ ಕೇಂದ್ರ ಹಾಗೂ ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆದಿದ್ದು ತಮ್ಮ ಜತೆ ತಂದ ಜಾನುವಾರುಗಳ ಮೇವಿಗೆ ಪರಿತಪಿಸುತ್ತಿದ್ದಾರೆ. ಇತ್ತ ಜಿಲ್ಲಾಡಳಿತ ನೀಡುತ್ತಿರುವ ಮೇವು ದನ, ಕರುಗಳಿಗೆ ಸಾಲುತ್ತಿಲ್ಲ. ಒಂದು ಜಾನುವಾರಕ್ಕೆ ಕಡಿಮೆ ಮೇವು ನೀಡುತ್ತಿರುವ ಪರಿಣಾಮ ಅಷ್ಟರಲ್ಲೇ ದಿನ ಕಳೆಯುವುದು ಸಂಕಷ್ಟಕ್ಕೆ ತಂದೊಡ್ಡಿದೆ. ನಮಗೆ ಒಂದು ಹೊತ್ತು ಊಟ ಕಡಿಮೆ ಕೊಟ್ಟರು ಪರವಾಗಿಲ್ಲ ಜಾನುವಾರುಗಳ ಹೊಟ್ಟೆತುಂಬ ಮೇವು ನೀಡಿ ಎಂದು ರೈತರು ಅಧಿಕಾರಿಗಳ ಮುಂದೆ ಅಂಗಲಾಚುವ ಪರಿಸ್ಥಿತಿ ನಿರ್ಮಾಣವಾಗಿದೆ.

ರೋಗದ ಭೀತಿಯಲ್ಲಿ ನಿರಾಶ್ರಿತರು

ಕಳೆದ ಹತ್ತು ದಿನಗಳಿಂದ ಪ್ರವಾಹ ಮುಂದುವರಿದಿದ್ದು ನದಿ ಪಾತ್ರದಲ್ಲಿ ರೋಗದ ಭೀತಿ ನಿರಾಶ್ರಿತರನ್ನು ಕಾಡುತ್ತಿದೆ. ಕೃಷಿ ಭೂಮಿಯಲ್ಲಿನ ಬೆಳೆಗಳು ಜಲಾವೃತಗೊಂಡ ಪರಿಣಾಮ ರೋಗ ಹರಡುವ ಭೀತಿ ಎದುರಾಗಿದೆ. ಅಷ್ಟೇ ಅಲ್ಲದೆ ನಿರಾಶ್ರಿತರ ಶಿಬಿರಗಳಲ್ಲಿ ಸ್ವಚ್ಛತೆ ಮಾಯ ವಾಗಿದ್ದು ಜನ ಭಯದಿಂದಲೇ ದಿನಗಳೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರವಾಹಕ್ಕೆ ಜಿಲ್ಲೆಯಲ್ಲಿ ಒಟ್ಟು 38 ಕ್ಕೂ ಅಧಿಕ ಸೇತುವೆಗಳು ಜಲಾವೃತಗೊಂಡಿದ್ದು 48 ಮನೆಗಳು ಕುಸಿದಿವೆ.

ಇಂದು ಮುಖ್ಯಮಂತ್ರಿ ಭೇಟಿ

ಘಟಪ್ರಭಾ ಹಾಗೂ ಕೃಷ್ಣಾ ನದಿ ಪ್ರವಾಹಕ್ಕೆ ತುತ್ತಾದ ಪ್ರದೇಶಗಳಿಗೆ ಇಂದು ಸಿಎಂ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಗೋಕಾಕ್ ಹಾಗೂ ಕಾಗವಾಡ ತಾಲೂಕಿಗೆ ಸಿಎಂ ಭೇಟಿ ನೀಡಲಿದ್ದು, ಶಾಶ್ವತ ಪರಿಹಾರಕ್ಕೆ ನಿರಾಶ್ರಿತರು ಆಗ್ರಹಿಸಬಹುದು. ಈ ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನೀಡಿದ್ದ ಭರವಸೆಯನ್ನು ಸಿಎಂ ಸಿದ್ದರಾಮಯ್ಯ ಈಡೇರಿಸುತ್ತಾರೆ ಎಂಬ ನಿರೀಕ್ಷೆಯಲ್ಲಿ ಜನರಿದ್ದಾರೆ.

ಹಳ್ಳಕ್ಕೆ ಬಿದ್ದ ಬೈಕ್ : ಯುವಕ ಸಾವು

ಶ್ರಾವಣ ಮಾಸದ ಹಿನ್ನೆಲೆಯಲ್ಲಿ ಹೇರ್ ಕಟಿಂಗ್‌ಗಾಗಿ ತೆರಳಿದ್ದ ಸಹೋದರರು ಶನಿವಾರ ರಾತ್ರಿ ಅಲತಗಾ ಬಳಿ ಹಳ್ಳದ ಪ್ರವಾಹಕ್ಕೆ ಸಿಲುಕಿ ಬೈಕ್ ಸಮೇತ ನೀರುಪಾದ ಘಟನೆಯಲ್ಲಿ ಓರ್ವ ಯುವಕ ಮೃತಪಟ್ಟ ಘಟನೆ ನಡೆದಿದೆ.ಬೆಳಗಾವಿ ತಾಲೂಕಿನ ಅಲತಗಾ ಗ್ರಾಮದ ಯುವಕರು ಕಂಗ್ರಾಳಿ ಗ್ರಾಮಕ್ಕೆ ತೆರಳುವ ಸಂದರ್ಭದಲ್ಲಿ ಆಯತಪ್ಪಿ ಹಳ್ಳಕ್ಕೆ ಬಿದ್ದಿದ್ದರು. ಈ ಸಂದರ್ಭದಲ್ಲಿ ಜ್ಯೋತಿನಾಥ್ ಪಾಟೀಲ ಈಜಿ ದಡ ಸೇರಿದ್ದರೆ ಓಂಕಾರ ಪಾಟೀಲ (23) ನೀರಿನಲ್ಲಿ ಕೊಚ್ಚಿ ಹೋಗಿದ್ದ. ಶನಿವಾರ ರಾತ್ರಿಯಿಂದ ಮಾರ್ಕಂಡೇಯ ನದಿಯಲ್ಲಿ ಶೋಧ ಕಾರ್ಯಾಚರಣೆ ಮಾಡಿದ್ದ ಎಸ್‌ಡಿಆರ್ ಎಫ್ ತಂಡಕ್ಕೆ ಭಾನುವಾರ ಯುವಕನ ಮೃತದೇಹ ಪತ್ತೆಯಾಯಿತು. ಕಾಕತಿ ಪೊಲೀಸ್ ಠಾಣೆಯಲ್ಲಿ ಘಟನೆ ಸಂಭವಿಸಿದೆ.

ರಾಜ್ಯದ ಜಲಾಶಯಗಳ ಮಟ್ಟ				
	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	123.20	76836
2.	ಕಬಿನಿ	2282	2281.33	19606
3.	ಹಾರಂಗಿ	2859	2854.77	7756
4.	ಹೇಮಾವತಿ	2922	2920.60	17070
5.	ಆಲಮಟ್ಟಿ	1704.81	1693.09	313387
6.	ತುಂಗಭದ್ರಾ	1633	1631.26	136574
7.	ನಾರಾಯಣಪುರ	1615	1607.13	270322

ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಾರೋಹಳ್ಳಿಗೆ ಶಾಶ್ವತ ಸೇತುವೆ ಹಾಗೂ ರಸ್ತೆ ನಿರ್ಮಿಸಬೇಕೆಂದು ಒತ್ತಾಯಿಸಿ ರೈತರು ನೀರಿಗಿಳಿದು ಭಾನುವಾರ ಪ್ರತಿಭಟನೆ ನಡೆಸಿದರು.

ಗಂಗಾವಳಿ ನದಿಯಲ್ಲಿ ಇನ್ನೂ ಪತ್ತೆಯಾಗದ ಮೂವರ ಶವ

ಮಲ್ಪೆ ತಂಡದ ಕಾರ್ಯಾಚರಣೆಗೆ ತಡೆ

ಅಂಕೋಲಾ: ಶಿರೂರು ಸಮೀಪ ಗುಡ್ಡ ಕುಸಿತ ಸಂಭವಿಸಿದ ಸ್ಥಳದ ಗಂಗಾವಳಿ ನದಿಯಲ್ಲಿ ಶೋಧನೆ ನಡೆಸಲು ಭಾನುವಾರ ಮುಳುಗುತಜ್ಞ ಈಶ್ವರ್ ಮಲ್ಪೆ ಆಗಮಿಸಿದಾಗ ಉತ್ತರ ಕನ್ನಡ ಜಿಲ್ಲಾಡಳಿತ ಅನುಮತಿ ನೀಡದ ಹಿನ್ನೆಲೆ ಕಾರ್ಯಾಚರಣೆ ನಡೆಸದೆ ಮರಳಿದ್ದಾರೆ.

ಅಮಾವಾಸ್ಯೆ ದಿನವಾದ ಭಾನುವಾರ ಕಾರ್ಯಾಚರಣೆ ಸೂಕ್ತವಾಗುವ ಹಿನ್ನೆಲೆಯಲ್ಲಿ ಈಶ್ವರ ಮಲ್ಪೆ ತಂಡ ಶಿರೂರಿಗೆ ಆಗಮಿಸಿತ್ತು. ಈ ಸಂದರ್ಭದಲ್ಲಿ ನೀರಿನ ಹರಿವು ಹೆಚ್ಚಾಗಿದ್ದರಿಂದ ಜಿಲ್ಲಾಡಳಿತ ಅನುಮತಿ ನೀಡಲು ನಿರಾಕರಿಸಿದೆ. ಯಲ್ಲಾಪುರ ಭಾಗದಲ್ಲಿ ಮಳೆ ಹೆಚ್ಚಾಗಿದ್ದರ ಪರಿಣಾಮವಾಗಿ ನೀರಿನ ಹರಿವು ಹೆಚ್ಚಾಗಿದೆ.

ಇನ್ನೂ ಪತ್ತೆಯಾಗದ ಮೂವರ ಶವ: ಜು.16 ರಂದು ಅಂಕೋಲಾ ತಾಲೂಕಿನ ಶಿರೂರು ಗ್ರಾಮದಲ್ಲಿ ಭೂಕುಸಿತ ಉಂಟಾಗಿತ್ತು. ಘಟನೆಯಲ್ಲಿ 11 ಜನರು ನಾಪತ್ತೆಯಾಗಿದ್ದರು. ಎನ್ ಡಿಆರ್‌ಎಫ್, ಎಸ್‌ಡಿಆರ್ ಎಫ್, ಸೇನೆ ಕಾರ್ಯಾಚರಣೆ ನಡೆಸಿದಲ್ಲದೆ ಈಶ್ವರ್ ಮಲ್ಪೆ ತಂಡ ಕೂಡ ಗಂಗಾವಳಿ ನದಿಯ ಆಳಕ್ಕೆ ಇಳಿದು ಎರಡು ದಿನಗಳ ಕಾಲ ಶೋಧ ನಡೆಸಿತ್ತು. ಆದರೆ ಇನ್ನೂ ಮೂವರ ಮೃತದೇಹ ಪತ್ತೆಯಾಗಿಲ್ಲ. ಹೀಗಾಗಿ ಅಮವಾಸ್ಯೆ ಆಗಿದ್ದರಿಂದ ನದಿಯ ನೀರು ಸಹಜಸ್ಥಿತಿಗೆ ಬರುವ ಕಾರಣಕ್ಕೆ ಈಶ್ವರ್ ಮಲ್ಪೆ ತಂಡ ಆಗಮಿಸಿ, ಶೋಧ ಕಾರ್ಯಾಚರಣೆಗೆ ಬೇಕಾಗುವ ದೋಣಿಗಳೊಂದಿಗೆ ಮೀನುಗಾರರು ಸಿದ್ಧರಾಗಿದ್ದರು. ಆದರೆ ಜಿಲ್ಲಾಡಳಿತ, ಪೊಲೀಸ್ ಇಲಾಖೆಯಿಂದ ಶೋಧಕ್ಕೆ ಅನುಮತಿ ನೀಡಿಲ್ಲ. ಇದರಿಂದ ಮಲ್ಪೆ ತಂಡ ಮತ್ತು ಮೀನುಗಾರರು ವಾಪಸ್ ಹೋಗಿದ್ದಾರೆ.

ನದಿಯಲ್ಲಿ ಪ್ರವಾಹದ ಒತ್ತಡ ಅಧಿಕಾರಿಗಳ ಎಚ್ಚರಿಕೆ

ಅಮಾವಾಸ್ಯೆಯ ದಿನವಾದ ಭಾನುವಾರ ನದಿಯ ಅಬ್ಬರ ಇಳಿದಿರಬಹುದು.ಹೀಗಾಗಿ ಕಾರ್ಯಾಚರಣೆ ನಡೆಸಬಹುದು ಅಂದುಕೊಂಡ ಈಶ್ವರ್ ತಂಡಕ್ಕೆ ನಿರಾಶೆಯಾಗಿದೆ. ಘಟ್ಟದ ಮೇಲ್ಭಾಗದಲ್ಲಿ ಮಳೆ ಅಧಿಕವಾಗಿದ್ದರಿಂದ ನದಿಯ ನೀರಿನ ಒತ್ತಡ ಜಾಸ್ತಿಯಿದೆ. ಈ ಕಾರಣಕ್ಕೆ ಅಧಿಕಾರಿಗಳು ಅಪಾಯ ತೆಗೆದುಕೊಳ್ಳದಂತೆ ಸೂಚಿಸಿದ್ದಾರೆ. ಮುಂದೆ ಮಳೆ ಕಡಿಮೆಯಾದಾಗ, ಕರೆದಾಗ ಖಂಡಿತ ಬರುವುದಾಗಿ ಈಶ್ವರ ಮಲ್ಪೆ ತಿಳಿಸಿದ್ದಾರೆ.

ದರ್ಶನ್ ಮತ್ತು ಗ್ಯಾಂಗ್ ವಿರುದ್ಧ 200 ಸಾಕ್ಷ್ಯ

← ಮೊದಲಪುಟದಿಂದ

ವಿಷ್ಯುಯಲ್ ಕಂಪಾರಿಷನ್ ತಂತ್ರಜ್ಞಾನ

ಬಳಕೆ: ಇಲ್ಲಿಯವರೆಗೆ ಸಂಗ್ರಹಿಸಿರುವ ಎಲ್ಲ ವಿಡಿಯೊಗಳನ್ನು ಎಫ್‌ಎಸ್‌ಎಲ್‌ನಲ್ಲಿ ಈಗಾಗಲೇ ಒಮ್ಮೆ ಪರಿಶೀಲನೆಗೆ ಒಳಪಡಿಸಲಾಗಿದೆ. ಅದರ ಜತೆಗೆ ಪರಸ್ಪರ ಎಲ್ಲ ವಿಡಿಯೊಗಳ ವಿಶುಯಲ್ ಕಂಪಾರಿಷನ್ (ವಿಡಿಯೋಗಳಲ್ಲಿನ ವ್ಯಕ್ತಿಗಳ ಹೋಲಿಕೆ) ಸಹ ಮಾಡಿಸಲಾಗುತ್ತಿದೆ. ಈ ವಿಷ್ಯುಲ್ ಕಂಪಾರಿಷನ್‌ನಿಂದ ಬೇರೆ ಬೇರೆ ವಿಡಿಯೊಗಳಲ್ಲಿರುವ ವ್ಯಕ್ತಿಗಳು ಒಬ್ಬರೇ ಹೌದೇ ಅಲ್ಲವೆ ಎಂಬುದು ತಿಳಿಯುತ್ತದೆ. ಹಾಗೂ ವಿಡಿಯೋ ನಕಲಿಯೇ, ಅಸಲಿಯೇ, ಗ್ರಾಫಿಕ್ ಮಾಡಲಾಗಿದೆಯೇ ಇನ್ನಿತರೆ ವಿಷಯಗಳು ಸಹ ತಿಳಿದು ಬರಲಿದೆ.

ಸಿಸಿಟಿವಿಯಲ್ಲಿ ಸೆರೆಯಾಗಿರುವ ಫೋಟೋಗಳು ಹಾಗೂ ಬಂಧಿಸಿದ ಸಮಯದಲ್ಲಿ ತೆಗೆದ ಫೋಟೋಗಳು ಹೋಲಿಕೆ ಆಗುತ್ತಿವೆಯೇ ಎಂಬುದು ಸಹ ಈ ಪರೀಕ್ಷೆಯಿಂದ ಗೊತ್ತಾಗುತ್ತದೆ. ವಿಡಿಯೊದಲ್ಲಿರುವ ವ್ಯಕ್ತಿಗಳ ಕಣ್ಣುಗಳ ಆಕಾರ, ಕಣ್ಣುಗಳ ಬಣ್ಣ, ಕಣ್ಣುಗಳ ನಡುವಿನ ಅಂತರ, ದೇಹದ ಆಕಾರ, ಬಾಯಿ ಹಾಗೂ ತುಟಿಯ ಆಕಾರ, ಮೂಗಿನ ಆಕಾರ ಹಾವಭಾವಗಳನ್ನು ಹೋಲಿಕೆ ಮಾಡಿ ನೋಡಲಾಗುತ್ತದೆ. ಇದರಿಂದಾಗಿ ನ್ಯಾಯಾಲಯದಲ್ಲಿ ವಿಡಿಯೋಗಳು ನಕಲಿ ಅಥವಾ ತಿದ್ದಿದ ವಿಡಿಯೋಗಳು ಅಲ್ಲ ಅನ್ನೋದು ಧೃಡ ಆಗುತ್ತದೆ. ಸಂಗ್ರಹಿಸಿದ ದೃಶ್ಯದಲ್ಲಿ ಇರುವ ವ್ಯಕ್ತಿ ಯಾರು? ಆತನ ಗುರುತೇನು ಎಂಬುದು ಖಾತ್ರಿ ಆಗುತ್ತದೆ. ಇದು ಬಲವಾದ ಸಾಕ್ಷಿಯಾಗಿ ಪರಿಗಣನೆಯಾಗುತ್ತದೆ.

ಸೋಮನಾಳ ಗ್ರಾಮಕ್ಕೆ ಆರ್.ಅಶೋಕ ಭೇಟಿ | ಮೃತ ಪರಶುರಾಮ್ ಕುಟುಂಬಕ್ಕೆ ಸಾಂತ್ವನ

ಪಿಎಸ್‌ಐ ಸಾವು: ಅಧಿಕಾರಿ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

ಕಾರಟಗಿ: ಕೇವಲ 7 ತಿಂಗಳಿಗೆ ಪಿಎಸ್‌ಐ ಪರಶುರಾಮ ಅವರನ್ನು ಯಾದಗಿರಿ ಠಾಣೆಯಿಂದ ವರ್ಗಾವಣೆ ಮಾಡಿದ ಆದೇಶಕ್ಕೆ ಸಹಿ ಹಾಕಿದ ಅಧಿಕಾರಿ ವಿರುದ್ಧ ಕ್ರಮ ಆಗಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.

ಕಾರಟಗಿ ತಾಲೂಕು ಸೋಮನಾಳ ಗ್ರಾಮದ ಮೃತ ಪೊಲೀಸ್ ಅಧಿಕಾರಿ ಮನೆಗೆ ಭಾನುವಾರ ಭೇಟಿನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದ ನಂತರ ಸುದ್ದಿಗಾರರೊಂದಿಗೆ ಅಶೋಕ್ ಮಾತನಾಡಿ, ಕನಿಷ್ಠ ಎರಡು ವರ್ಷ ವರ್ಗಾವಣೆ ಮಾಡಬಾರದು ಎಂಬ ನಿಯಮ ಇದ್ದರೂ 7 ತಿಂಗಳಿಗೇ ಹೇಗೆ ವರ್ಗಾವಣೆ ಮಾಡಿದರು. ಒಬ್ಬ ದಲಿತ ಅಧಿಕಾರಿಗೆ ಈ ರೀತಿ ಮಾಡಿರುವುದು ಅನ್ಯಾಯ. ವರದಿ ಬರುವ ಮೊದಲೇ ಗೃಹ ಸಚಿವ ಪರಮೇಶ್ವರ್ , ಇದು ಸಹಜ ಸಾವು ಎಂದು ಘೋಷಿಸಿದ್ದಾರೆ. ಅವರದೇ ಸಮಾಜದ ಯುವಕನಿಗೆ ಹೀಗಾಗಿದೆ. ಸಚಿವರು ಜಾರಿಕೆಯ ಉತ್ತರ ಕೊಡಬಾರದಿತ್ತು. ಹಣದ ವ್ಯವಹಾರ ನಡೆದಿರುವುದು ಸತ್ಯ. ನಾನು ಖಿನ್ನತೆಗೆ ಒಳಗಾಗಿದ್ದೇನೆ. ನನಗೆ ಅವಮಾನ ಆಗಿದೆ ಎಂದು ಪರಶುರಾಮ್ ಹೇಳಿಕೊಂಡಿದ್ದ ರು ಎಂದು ಕುಟುಂಬದವರು ಹೇಳಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು.

ಪರಶುರಾಮ್ ಅವರ ಕುಟುಂಬಸ್ಥರಿಗೆ ಆರ್. ಅಶೋಕ್ ಸೇರಿದಂತೆ ಬಿಜೆಪಿ ನಾಯಕರು ಸಾಂತ್ವನ ಹೇಳಿದರು.

ಮಿತಿ ಮೀರಿದ ಲಂಚಾವತಾರ

ಕಾಂಗ್ರೆಸ್ ಸರಕಾರದಲ್ಲಿ ಲಂಚಾವತಾರ ಮಿತಿಮೀರಿದೆ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎನ್ನುವಂತೆ, ಸಿಎಂ ಮಾಡುವ ಭ್ರಷ್ಟಾಚಾರ ಎಲ್ಲರಿಗೂ ಪಾಠ ಆಗಿದೆ. ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರ್ ದಕ್ಷ ಅಧಿಕಾರಿ. ಆದರೆ, ಹಣ ಲಪಟಾಯಿಸಲು ಸಹಕಾರ ನೀಡಿಲ್ಲ ಎಂದು ಕಿರುಕುಳಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡರು. ದಲಿತ ಅಧಿಕಾರಿಗಳ ಸರಣಿ ಸಾವುಗಳು ಆಗುತ್ತಿವೆ. ಶಾಸಕ ಹಾಗೂ ಅವರ ಮಗ ಎಲ್ಲ ಇಲಾಖೆ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂಬ ಮಾಹಿತಿ ಇದೆ. ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗಿದೆ ಎಂದು ಆರ್. ಅಶೋಕ್ ಟೀಕಿಸಿದರು.

ಪರಶುರಾಮ ಅವರ ಪತ್ನಿ ಸದ್ಯ ತುಂಬು ಗರ್ಭಿಣಿ. ಆಕೆ ದೂರು ಕೊಡಲು ಹೋದಾಗ ಎಫ್‌ಐಆರ್ ಮಾಡಲು 14 ಗಂಟೆ ಕಾಯಿಸಿದ್ದಾರೆ. ಇಂಥ ಅನ್ಯಾಯ ನೋಡಿಕೊಂಡು ಸರಕಾರ ಸುಮ್ಮನಿದೆ ಎಂದರೆ, ನಾವು ಎಲ್ಲಿದ್ದೇವೆ ಎಂಬುದು ಅರ್ಥ ಆಗುತ್ತಿಲ್ಲ.

– ಆರ್.ಅಶೋಕ್, ವಿರೋಧ ಪಕ್ಷದ ನಾಯಕ

ನೆರೆ ಸಂತ್ರಸ್ತರಿಗೆ ರಾಮಕೃಷ್ಣಾಶ್ರಮ ನೆರವು

ಪಾವಗಡ: ವಿನಾಶಕಾರಿ ಮಳೆ ಮತ್ತು ಭೂಕುಸಿತದಿಂದ ಸಂತ್ರಸ್ತವಾಗಿರುವ ಕೇರಳದ ವಯನಾಡು ಮತ್ತು ಬೆಳಗಾವಿ ಜಿಲ್ಲೆಯ ಗೋಕಾಕ್‌ಗೆ ಭಾರಿ ಪ್ರಮಾಣದಲ್ಲಿ ಪರಿಹಾರ ಸಾಮಗ್ರಿಗಳನ್ನು ರವಾನಿಸಲು ರಾಮಕೃಷ್ಣಾಶ್ರಮ ಸಿದ್ಧವಾಗಿದೆ. ಪಾವಗಡದ ಆಶ್ರಮದಲ್ಲಿ ಬೆಳಗಾವಿ ಮತ್ತು ಕೇರಳ ನೆರೆ ಸಂತ್ರಸ್ತರಿಗೆ ಕಳುಹಿಸಲು ಪರಿಹಾರ ಕಿಟ್‌ಗಳನ್ನು ಸಿದ್ಧಪಡಿಸಲಾಗಿದೆ. 10 ಸಾವಿರ ಕುಟುಂಬಗಳಿಗೆ ನೆರವು ನೀಡಲಾಗುವುದೆಂದು ಪಾವಗಡ ರಾಮಕೃಷ್ಣಾಶ್ರಮದ ಮುಖ್ಯಸ್ಥ ಸ್ವಾಮಿ ಜಪಾನಂದ ಅವರು ತಿಳಿಸಿದ್ದಾರೆ.

ಅಕ್ಕಿ, ಬೇಳೆ, ಸಕ್ಕರೆ, ರವೆ, ಗೋದಿಹಿಟ್ಟು, ಸಾಂಬಾರು ಪದಾರ್ಥಗಳು, ಸೀರೆ, ಟವೆಲ್ , ಪಂಚೆ ಸೇರಿದಂತೆ ಬೆಳಗಾವಿ ಮತ್ತು ಕೇರಳದ ತಲಾ ಐದು ಸಾವಿರ ಕುಟುಂಬಗಳಿಗೆ ಪರಿಹಾರದ ಕಿಟ್ ಪೂರೈಸಲಾಗುವುದು. ಒಂದೆರಡು ದಿನದಲ್ಲೇ ಪರಿಹಾರ ಸಾಮಗ್ರಿ ಹೊತ್ತ ವಾಹನಗಳೊಂದಿಗೆ ಸ್ವಯಂಸೇವಕರು ಪಾವಗಡದಿಂದ ಪ್ರಯಾಣ ಬೆಳೆಸಲಿದ್ದಾರೆ ಎಂದು ಜಪಾನಂದರು ಹೇಳಿದ್ದಾರೆ.

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91–8431186388, ಇ–ಮೇಲ್: sabvmcri@gmail.com
ಸಂಖ್ಯೆ: SABVMCRI/E-TENDER/INS/03/2024-25 ದಿನಾಂಕ: 03–08–2024

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಸರ್ಕಾರಿ ಹೆಚ್.ಎಸ್.ಐ.ಎಸ್ ಘೋಷಾ ಆಸ್ಪತ್ರೆ ಮತ್ತು ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.
ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ **ರೂ. 2,000/–** ಗಳ ಡಿ.ಡಿ. ಯನ್ನು **ನಿರ್ದೇಶಕರು ಹಾಗೂ ಡೀನ್, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ, ಬೆಂಗಳೂರು** ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: **sabvmcri@gmail.com** ಮತ್ತು ದೂರವಾಣಿ ಸಂಖ್ಯೆ: **+91–8431186388** ನ್ನು ಸಂಪರ್ಕಿಸಬಹುದು.
1) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸುವ ದಿನಾಂಕ: **05–08–2024 ರಿಂದ.** 2) ಟೆಂಡರ್ ಬಗ್ಗೆ ಆನ್‌ಲೈನ್ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: **08–08–2024 ರಂದು ಸಂಜೆ 4.00 ಗಂಟೆವರೆಗೆ.** 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **14–08–2024 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): **17–08–2024 ರಂದು ಬೆಳಿಗ್ಗೆ 10.30 ಗಂಟೆಗೆ.** ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/1268/ಅಡ್ವರ್ಟೋರ್ಜ್/2024–25

ಒತ್ತುವರಿ ತೆರವು ಮಾಡಲು ಪಶ್ಚಿಮಘಟ್ಟ ಅರಣ್ಯ ಒತ್ತುವರಿ ತೆರವು ಕಾರ್ಯಪಡೆ

ಅಕ್ರಮ ಒತ್ತುವರಿ ತೆರವಿಗೆ ಸಚಿವ ಖಂಡ್ರೆ ಸೂಚನೆ

ಬೆಂಗಳೂರು: ಕೇರಳದ ವಯನಾಡಿನಲ್ಲಿ ಸಂಭವಿಸಿದ ಭೂ ಕುಸಿತದಿಂದ ಎಚ್ಚೆತ್ತುಕೊಂಡಿರುವ ರಾಜ್ಯ ಸರಕಾರ, ಪಶ್ಚಿಮ ಘಟ್ಟದ ಭಾಗದಲ್ಲಿ ಅನಧಿಕೃತವಾಗಿ ರೆಸಾರ್ಟ್, ಹೋಂ ಸ್ಟೇ ಹಾಗೂ ಅರಣ್ಯ ಒತ್ತುವರಿ ತೆರವುಗೊಳಿಸಲು ಸಿದ್ಧತೆ ನಡೆಸಿಕೊಂಡಿದೆ.

ಈ ಬಗ್ಗೆ ಮಾತನಾಡಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ, ರಾಜ್ಯದ 10 ಜಿಲ್ಲೆಗಳಲ್ಲಿ ಆವರಿಸಿರುವ ಪಶ್ಚಿಮಘಟ್ಟ ಪ್ರದೇಶದಲ್ಲಿ ಅಕ್ರಮವಾಗಿ ತಲೆ ಎತ್ತಿರುವ ರೆಸಾರ್ಟ್, ಹೋಂ ಸ್ಟೇ ಮತ್ತು ಇಲ್ಲಿನ ಎಲ್ಲ ಅರಣ್ಯ ಒತ್ತುವರಿಗಳನ್ನು ತೆರವು ಮಾಡಲು ಪಶ್ಚಿಮಘಟ್ಟ ಅರಣ್ಯ ಒತ್ತುವರಿ ತೆರವು ಕಾರ್ಯಪಡೆ ರಚಿಸಿರುವುದಾಗಿ ಪ್ರಕಟಿಸಿದ್ದಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಕಾರ್ಯಪಡೆ ಮುಖ್ಯಸ್ಥರ ನೇತೃತ್ವದಲ್ಲಿ ಈ ಕಾರ್ಯಪಡೆ ರಚಿಸಲಾಗಿದ್ದು, ಸೋಮವಾರದಿಂದಲೇ ಪಶ್ಚಿಮ ಘಟ್ಟದಲ್ಲಿನ ಅರಣ್ಯ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಿದೆ. ಪಶ್ಚಿಮಘಟ್ಟದಲ್ಲಿನ ಅರಣ್ಯದಲ್ಲಿ 2015ರ ನಂತರ ಆಗಿರುವ ಒತ್ತುವರಿಗೆ ಸಂಬಂಧಿಸಿದಂತೆ 64ಎ ಪ್ರಕ್ರಿಯೆ ಪೂರ್ಣಗೊಂಡಿರುವ ಎಲ್ಲ ಪ್ರಕರಣಗಳಲ್ಲಿ ತೆರವು ಕಾರ್ಯಾಚರಣೆ ಮಾಡಲು ಸ್ಪಷ್ಟ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಶೀಘ್ರ ಇತ್ಯರ್ಥಕ್ಕೆ ಆದೇಶಕ್ಕೆ ಸೂಚನೆ: ಎಸಿಎಫ್, ಡಿಸಿಎಫ್, ಸಿಎಫ್, ಸಿಸಿಎಫ್, ಎಪಿಸಿಸಿ ಎಫ್‌ಗಳಿಗೂ ಅರಣ್ಯ ಒತ್ತುವರಿ ಪ್ರಕರಣಗಳ ವಿಚಾರಣೆ ನಡೆಸಿ 64ಎ ಅಡಿಯಲ್ಲಿ ಆದೇಶ ನೀಡಲು ಅವಕಾಶವಿದ್ದು, ಬಾಕಿಯಿರುವ ಎಲ್ಲ 64 ಎ ಪ್ರಕರಣಗಳನ್ನು ಶೀಘ್ರ ಇತ್ಯರ್ಥ ಗೊಳಿಸಲು ಎಸಿಎಫ್ ಮೇಲ್ಪಟ್ಟ ದರ್ಜೆಯ ಎಲ್ಲ ಅಧಿಕಾರಿಗಳಿಗೂ ವಾರದಲ್ಲಿ ಎರಡು ದಿನ ತಮ್ಮ ವಲಯದಲ್ಲಿ ಪ್ರಕ್ರಿಯೆ ನಡೆಸಿ ತ್ವರಿತವಾಗಿ ಆದೇಶ ನೀಡಲು ಸೂಚನೆ ನೀಡಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

ಈಗಾಗಲೇ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಅಡ್ವೊಕೇಟ್ ಜನರಲ್ ಅವರೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಪಶ್ಚಿಮಘಟ್ಟ ಅರಣ್ಯ ಒತ್ತುವರಿ ಕಾರ್ಯಪಡೆಗೆ ಸೂಚನೆ ನೀಡಲಾಗಿದೆ. ಮೊದಲಿಗೆ ದೊಡ್ಡ ಪ್ರಮಾಣದಲ್ಲಿ ಅರಣ್ಯ ಒತ್ತುವರಿ ಮಾಡಿ ನಿರ್ಮಿಸಲಾಗಿರುವ ಅಕ್ರಮ ರೆಸಾರ್ಟ್, ಹೋಂಸ್ಟೇ ಗಳನ್ನು ತೆರವು ಮಾಡಿ, ಬಳಿಕ ತೋಟ, ಕಟ್ಟಡಗಳನ್ನು ತೆರವು ಮಾಡಲು ಸೂಚಿಸಲಾಗಿದೆ. ಎಲ್ಲರೂ ಕಾನೂನಿನ ಮುಂದೆ ಸಮಾನರು. ಪಶ್ಚಿಮ ಘಟ್ಟವನ್ನು ಒತ್ತುವರಿ ಮಾಡಿ ವಾಣಿಜ್ಯ ಚಟುವಟಿಕೆ ನಡೆಸುವವರಿಗೆ ಅವಕಾಶ ನೀಡುವುದಿಲ್ಲ. ಇಂಥಹ ಚಟುವಟಿಕೆಯಿಂದ ಪರಿಸರಕ್ಕೆ ಆಗುವ ಹಾನಿಯನ್ನು ಸರಿದೂಗಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಅವೈಜ್ಞಾನಿಕ ರಸ್ತೆ ಕಾಮಗಾರಿ ವಿರುದ್ಧ ಕ್ರಮ

ಪಶ್ಚಿಮಘಟ್ಟ ಪ್ರದೇಶದಲ್ಲಿ ರಸ್ತೆಗಳ ಮೇಲ್ದರ್ಜೆ, ವಿಸ್ತರಣೆಯ ವೇಳೆ ಅವೈಜ್ಞಾನಿಕವಾಗಿ 90ಡಿಗ್ರಿಗೆ ಗುಡ್ಡ ಕಡಿದಿರುವುದೂ ಕುಸಿತಕ್ಕೆ ಕಾರಣವಾಗಿದ್ದು, ಇಂತಹ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರು ಮತ್ತು ಎಂಜಿನಿಯರುಗಳಿಗೂ ನೋಟಿಸ್ ನೀಡಿ ಕ್ರಮ ಜರುಗಿಸಲು ನಿರ್ದೇಶಿಸಲಾಗಿದೆ. ವಯನಾಡು ಮತ್ತು ಉತ್ತರ ಕನ್ನಡದ ಶಿರೂರಿನಲ್ಲಿ ಘೋರ ದುರಂತ ಸಂಭವಿಸಿದ್ದು ಜೀವಹಾನಿಯಾಗಿದೆ. ಸಹಸ್ರಾರು ವರ್ಷಗಳ ಗುಡ್ಡವೇ ಕಣ್ಮರೆಯಾಗಿದೆ. ಶಿರಾಡಿ ಘಾಟ್, ಚಾರ್ಮಾಡಿ ಘಾಟ್ ಸೇರಿದಂತೆ ರಾಜ್ಯದ ಪಶ್ಚಿಮಘಟ್ಟಗಳಲ್ಲಿ ನಿರಂತರವಾಗಿ ಗುಡ್ಡ ಕುಸಿತಗಳು ಸಂಭವಿಸುತ್ತಿವೆ. ಈಗಲೂ ನಾವು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆ ನಮನ್ನು ಕ್ಷಮಿಸುವುದಿಲ್ಲ ಎಂದು ಎಚ್ಚರಿಸಿದ್ದಾರೆ.

ಪತ್ನಿಯ ಕೊಲೆಗೆ ಪತಿ ಯತ್ನ ಪ್ರಯಾಸದಿಂದ ಆರೋಪಿ ಸೆರೆ

ಉಡುಪಿ: ಪತ್ನಿಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ ಆರೋಪಿಯನ್ನು ಪೊಲೀಸರು ಬಂಧಿಸಿದ ಘಟನೆ ಕುಂದಾಪುರ ತಾಲೂಕಿನ ಬಸ್ರೂರಿ ನಲ್ಲಿ ನಡೆದಿದೆ. ಲಕ್ಷ್ಮಣ (38) ಬಂಧಿತ ಆರೋಪಿ. ಅನಿತಾ (32) ಪತಿಯಿಂದ ಹಲ್ಲೆಗೊಳಗಾದವರು ಎಂದು ಗುರುತಿಸಲಾಗಿದೆ. ದಂಪತಿ ಸಾಗರ ಮೂಲದವರಾಗಿದ್ದು, ಬಸ್ರೂರಿನ ವೃದ್ಧಾಶ್ರಮವೊಂದರ ತೋಟದಲ್ಲಿ ಕೆಲಸಕ್ಕೆಂದು ಬಂದಿದ್ದರು. ಇವರು ಇಲ್ಲಿನ ಕ್ವಾಟ್ರಸ್‌ನ ಒಂದು ರೂಮ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಯಾವುದೋ ವಿಷಯಕ್ಕೆ ಶನಿವಾರ ರಾತ್ರಿ 9 ಗಂಟೆ ಸುಮಾರಿಗೆ ದಂಪತಿ ಮಧ್ಯೆ ಗಲಾಟೆ ಶುರುವಾಗಿದೆ. ಗಲಾಟೆ ವಿಕೋಪಕ್ಕೆ ತಿರುಗಿ ಲಕ್ಷ್ಮಣ, ಪತ್ನಿ ಅನಿತಾ ಮೇಲೆ ಕತ್ತಿಯಿಂದ ಹಲ್ಲೆ ಮಾಡಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕುಂದಾಪುರ (ಕಂಡ್ಲೂರು) ಗ್ರಾಮಾಂತರ ಠಾಣೆ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಸ್ಥಳೀಯರ ಸಹಾಯದೊಂದಿಗೆ ಮಹಿಳೆಯನ್ನು ರಕ್ಷಿಸಿದ್ದಾರೆ.



ಆರೋಪಿ ಬಂಧಿಸಲು ಪೊಲೀಸರ ಹರಸಾಹಸ

ಪತ್ನಿಯ ಕೊಲೆಗೆ ಯತ್ನಿಸಿದ ಆರೋಪಿಯನ್ನು ಹಿಡಿಯಲು ಪೊಲೀಸರು ಹರಸಾಹಸ ಪಟ್ಟಿದ್ದಾರೆ. ಕೈಯಲ್ಲಿ ಕತ್ತಿ ಹಿಡಿದು ಹೆದರಿಸುತ್ತಿದ್ದುದರಿಂದ ಎದುರಿನ ಬಾಗಿಲು ಮುರಿದು ಒಳಗೆ ಹೋಗಲು ಸಾಧ್ಯವಾಗಲಿಲ್ಲ. ಹೀಗಾಗಿ ಪೊಲೀಸರು ಆತನಿದ್ದ ರೂಮ್ ಕಿಟಕಿ ಮೂಲಕ ಖಾರದ ಪುಡಿ ಎರಚಿದ್ದರು, ಇದರಿಂದ ಆತ ತಪ್ಪಿಸಿಕೊಂಡಿದ್ದ. ಬಳಿಕ ಏರ್ಗನ್ ಮೂಲಕ ಗ್ಯಾಸ್ ಸಿಂಪಡಿಸಿದ್ದರು, ಅದರಿಂದಲೂ ತಪ್ಪಿಸಿಕೊಂಡಿದ್ದ. ಕೊನೆಗೆ ಎದುರಿನ ಬಾಗಿಲನ್ನು ಒಡೆಯಲು ಪ್ರಯತ್ನಿಸುತ್ತಿರುವಂತೆ ಮಾಡಿ, ಮತ್ತೊಂದು ತಂಡ ಕಿಟಕಿ ಮೂಲಕ ಒಳಗೆ ಪ್ರವೇಶಿಸಿ ಮಹಿಳೆಯನ್ನು ರಕ್ಷಿಸಿದೆ. ಬಳಿಕ ಆರೋಪಿಯನ್ನು ಸೆರೆಹಿಡಿದ್ದಾರೆ. ಕಂಡ್ಲೂರು ಪೊಲೀಸ್ ಠಾಣೆಯಲ್ಲಿ ಘಟನೆ ಸಂಬಂಧ ಪ್ರಕರಣ ದಾಖಲಾಗಿದೆ.

ಟ್ವೀಟೂ-ಖಾರಾ

ಬಸನಗೌಡ ಪಾಟೀಲ್ ಯತ್ನಾಳ್
ಬಿಜೆಪಿ ಶಾಸಕ

ವಕ್ಫ್ ಅಧಿಕಾರವನ್ನು ಮೊಟಕುಗೊಳಿಸಲು ಕೇಂದ್ರ ಮಸೂದೆ ತರಲಿದೆ. ದೀರ್ಘಕಾಲ ನನೆಗುದಿಗೆ ಬಿದ್ದಿದ್ದ, ಬಹಳ ಕಾಲದಿಂದ ನಿರೀಕ್ಷಿಸುತ್ತಿದ್ದ ತಿದ್ದುಪಡಿ ಮೂಲಕ ಅಸಾಂವಿಧಾನಿಕ ಮತ್ತು ನಿಯಂತ್ರಣಕ್ಕೆ ಸಿಗದ ವಕ್ಫ್ ಮಂಡಳಿಯ ಅಧಿಕಾರಗಳನ್ನು ಕೇಂದ್ರ ಸರಕಾರ ನಿಯಂತ್ರಿಸುತ್ತಿದೆ.



ಕುಮಾರ್ ಸಂಪತ್ ಶೇಟ್
ಬೆಂಗಳೂರು

ಜಾಸ್ತು ಖುಷಿ ಪಡುವ ವಿಚಾರವಲ್ಲ, ಆಲೋಚಿಸಬೇಕಾದ ವಿಚಾರ. ಈಗಾಗಲೇ ನೂರಾರು ಸಂಖ್ಯೆಯಲ್ಲಿ ಹಿಂದುಗಳ ದೇವಾಲಯಗಳನ್ನು , ಚರಾಚರ ಸಂಪತ್ತನ್ನು ವಕ್ಫ್ ಹೆಸರಿನಲ್ಲಿ ಮಾಡಲಾಗಿದೆ.ಈಗ ಸಂಪತ್ತುಗಳನ್ನು ಈ ಆದೇಶದಿಂದ ಪುನಃ ಪಡೆಯಲು ಸಾಧ್ಯವೇ..? ಕಾಯ್ದೆಯನ್ನು ಜಾರಿಗೊಳಿಸುವುದೆಂದರೆ , ಮೊಣಕೈಗೆ ತುಪ್ಪ ಸವರಿ ನೆಕ್ಕಿ ಅಂದ್ಹಂಗೆ..!

ಸಮಾಚಾರ ಸಣ್ಣದಲ್ಲ

ಉರುಳಿ ಬಿದ್ದ ಬಸ್; 45 ಪ್ರಯಾಣಿಕರಿಗೆ ಗಾಯ

ಮಾನ್ವಿ: ಚಾಲಕನ ನಿಯಂತ್ರಣ ತಪ್ಪಿ ಬಸ್ ಜಮೀನಿಗೆ ಉರುಳಿಬಿದ್ದು 45ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡ ಘಟನೆ ತಾಲೂಕಿನ ನಸ್ಲಾಪುರ ಬಳಿ ನಡೆದಿದೆ. ಗಾಯಗೊಂಡ 45 ಪ್ರಯಾಣಿಕರಲ್ಲಿ 8ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಮಾನ್ವಿಯಿಂದ ಗಂಗಾ ವತಿಗೆ ತೆರಳುತ್ತಿದ್ದ ಬಸ್ಸಿನಲ್ಲಿ ಸಿಂಧನೂರು ಮತ್ತು ಗಂಗಾವತಿಗೆ ತೆರಳುತ್ತಿದ್ದ ಬಹುತೇಕ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಅನುಚಿತ ವರ್ತನೆ ಅಧಿಕಾರಿ ಅಮಾನತು

ಹಾವೇರಿ: ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಹೆಗಡೆ ಅವರನ್ನು ಸೇವೆಯಿಂದ ಅಮಾನತು ಮಾಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆದೇಶ ಹೊರಡಿಸಿದೆ.ಬೇಜವಾಬ್ದಾರಿ ವರ್ತನೆ ಹಾಗೂ ಸರಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ದುರ್ನಡತೆ ಎಸಗಿದ ಭರತ್ ಹೆಗಡೆ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಕ್ಷಯ್ ಶ್ರೀಧರ ಅವರು ಹಿರಿಯ ಅಧಿಕಾರಿಗಳಿಗೆ ಪ್ರಸ್ತಾವ ಸಲ್ಲಿಸಿದ್ದರು. ಈ ಪ್ರಸ್ತಾವ ಆಧರಿಸಿ ಇಒ ಹೆಗಡೆ ಅವರನ್ನು ಅಮಾನತುಗೊಳಿಸಿ, ಇಲಾಖೆ ವಿಚಾರಣೆಗೂ ಆದೇಶಿಸಲಾಗಿದೆ. ಭರತ್ ಹೆಗಡೆ ಅವರನ್ನು ದಾಂಡೇಲಿ ತಾ.ಪಂ.ಗೆ ವರ್ಗಾವಣೆ ಮಾಡಿ ಜು. 29ರಂದು ಆದೇಶ ಹೊರಡಿಸಲಾಗಿತ್ತು. 30ರಂದು ಹುದ್ದೆಯಿಂದ ಬಿಡುಗಡೆಗೊಳಿಸಲಾಗಿತ್ತು. ಆದರೆ, ವರ್ಗಾವಣೆ ಆದೇಶ ಪ್ರಶ್ನಿಸಿದ್ದ ಅವರು, ಕರ್ನಾಟಕ ಆಡಳಿತ ನ್ಯಾಯಮಂಡಳಿಯಿಂದ ತಡೆಯಾಜ್ಞೆ ತಂದಿದ್ದರು. ಮೇಲಾಧಿಕಾರಿಗಳ ಗಮನಕ್ಕೆ ತರದೇ ಆ.1ರಂದು ಪುನಃ ಹುದ್ದೆ ಅಲಂಕರಿಸಿದ್ದರು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬೋನಿಗೆ ಬಿದ್ದ ಚಿರತೆ

ಹುಣಸೂರು: ಸಾಕು ಪ್ರಾಣಿಗಳ ಹೊಂಚು ಹಾಕಿ ಕೊಂದು ಹಾಕುತ್ತಿದ್ದ ಸುಮಾರು 6 ವರ್ಷದ ಚಿರತೆ ಬೋನಿನಲ್ಲಿ ಬಂಧಿಯಾಗಿರುವ ಘಟನೆ ತಾಲೂಕಿನ ಕೂಡ್ಲೂರಿನಲ್ಲಿ ನಡೆದಿದೆ. ಗ್ರಾಮದಲ್ಲಿ ಕಳೆದ ಕೆಲವು ದಿನಗಳಿಂದ ನಾಯಿ, ಆಡು ಸೇರಿ ಸಾಕು ಪ್ರಾಣಿಗಳ ಕೊಂದು ಹೊತ್ತೊಯ್ಯುತ್ತಿತ್ತು. ಶನಿವಾರ ಗ್ರಾಮದ ವಿನ್ಸೆಂಟ್‌ಗೆ ಸೇರಿದ ಜಮೀನಿನಲ್ಲಿ ಕರುವನ್ನು ಕೊಂದು ಹಾಕಿತ್ತು. ವಿನ್ಸೆಂಟ್ ನೀಡಿದ ಮಾಹಿತಿ ಮೇರೆಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಬೋನ್ ಇರಿಸಿದ್ದರು. ಶನಿವಾರ ರಾತ್ರಿ ಬೋನಿನಲ್ಲಿರಿಸಿದ್ದ ನಾಯಿಯ ತಿನ್ನುವ ಆಸೆಯಿಂದ ಒಳಹೊಕ್ಕಿದ ಚಿರತೆ ಬೋನಿನಲ್ಲಿ ಬಂಧಿಯಾಗಿದೆ.

{ **ಎಂ.ಬಿ. ಪಾಟೀಲ** } ಬೃಹತ್ ಕೈಗಾರಿಕಾ ಸಚಿವ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಈ ಹಿಂದೆ ಬಿಜೆಪಿ ಜತೆ, ಆಮೇಲೆ ಕಾಂಗ್ರೆಸ್ ಜತೆ ಸೇರಿಕೊಂಡು ಸರಕಾರ ರಚಿಸಿ, ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ್ದರು. ಈಗ ಪುನಃ ಬಿಜೆಪಿ ಜತೆ ಹೋಗಿದ್ದಾರೆ. ಅವರದು ಅವಕಾಶವಾದಿ ಮೈತ್ರಿ. ಅವರು ತಮ್ಮ ಸರಕಾರವನ್ನೇ ಉಳಿಸಿಕೊಳ್ಳಲಿಲ್ಲ. ಈಗ ನಮ್ಮ ಸರಕಾರವನ್ನು ಉರುಳಿಸುವ ಮಾತುಗಳನ್ನು ಆಡುತ್ತಿದ್ದಾರೆ.

ಕೃಷಿ ಜತೆಗೆ ಉದ್ಯಮ ನಡೆಸಿದವನು ನಾನು । ಕುಮಾರಣ್ಣ ಕುಟುಂಬದವರು ಯಾವ ಈರುಳ್ಳಿ, ಆಲೂಗಡ್ಡೆ ಬೆಳೆದು ಸಾವಿರಾರು ಕೋಟಿ ಸಂಪಾದಿಸಿದ್ದಾರೆ?

ಎಚ್‌ಡಿಕೆ ಹಿಟ್ ಆ್ಯಂಡ್ ರನ್, ಬ್ಲ್ಯಾಕ್‌ಮೇಲರ್

ಬೆಂಗಳೂರು: ಡಿ.ಕೆ.ಶಿವಕುಮಾರ್ ವಿರುದ್ಧ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪಗಳಿಗೆ ತಿರುಗೇಟು ನೀಡಿರುವ ಡಿಕೆಶಿ, ಕುಮಾರಸ್ವಾಮಿ, ನಾನು ಕೃಷಿ ಜತೆಗೆ ಉದ್ಯಮವನ್ನು ನಡೆಸುತ್ತಿದ್ದೇನೆ. ನೀನು ಮತ್ತು ನಿಮ್ಮ ಕುಟುಂಬದವರು ಯಾವ ಈರುಳ್ಳಿ, ಆಲೂಗಡ್ಡೆ ಬೆಳೆದು ಸಾವಿರಾರು ಕೋಟಿ ಸಂಪಾದಿಸಿದ್ದೀರಿ? ನೀನು ಹಿಟ್ ಅಂಡ್ ರನ್, ಬ್ಲ್ಯಾಕ್ ಮೇಲರ್ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದ್ದಾರೆ.

ಜನಾಂದೋಲನ ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದ ಡಿಕೆಶಿ, ಕುಮಾರಣ್ಣ ನನ್ನ ಆಸ್ತಿ ಬಗ್ಗೆ ಚರ್ಚೆ ಮಾಡುವ ಬದಲು ಮೊದಲು ನಿಮ್ಮದಾಗಲಿ. ನಿಮ್ಮ ಸಹೋದರ ಬಾಲಕೃಷ್ಣ ಗೌಡ ಅವರ ಕುಟುಂಬ ಅವರ ತಂದೆ ಹಾಗೂ ಮೈಸೂರು, ಶ್ರೀರಂಗಪಟ್ಟಣದ ಅವರ ಸಂಬಂಧಿಗಳು ಬೇನಾಮಿಗಳು ಎಷ್ಟೆಷ್ಟು ಜಮೀನು ಹೊಂದಿದ್ದಾರೆ ಎಂದು ಉತ್ತರ ನೀಡಬೇಕು. ಒಬ್ಬ ಸರಕಾರಿ ನೌಕರ ಎಷ್ಟು ಸಾವಿರ ಕೋಟಿಗಿದ್ದಾನೆ. ಯಾವ ಈರುಳ್ಳಿ, ಆಲೂಗಡ್ಡೆಯಲ್ಲಿ ಅದು ಸಂಪಾದನೆ ಆಯ್ತು? ಎಂದು ಟೀಕಿಸಿದರು.

ನನ್ನ ಮೇಲೆ, ನನ್ನ ಧರ್ಮಪತ್ನಿ, ನನ್ನ ಸಹೋದರಿ, ನನ್ನ ಸಹೋದರನ ಮೇಲೆ ನೀವು ಕೇಸ್ ದಾಖಲಿಸಿ ಏನು ಮಾಡಿದಿರಿ? ಏನು ಮಾಡಲಾಗಿಲ್ಲ. ಮಿಲಿಟರಿಯವರು ಬಂದು ನನ್ನನ್ನು ಕರೆದುಕೊಂಡು ಹೋಗಲಿದ್ದಾರೆ ಎಂದು ಹೇಳಿದ್ದೀಯಾ. ಹಾಗಿದ್ದರೆ ನಾನು ಜೈಲಲ್ಲಿ ಇದ್ದಾಗ ಏಕೆ ಬಂದು ನನ್ನನ್ನು ನೋಡಿದೆ? ನನ್ನ ಪ್ರಕರಣವನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ ಅದು ಗೊತ್ತಿದೆಯೇ? ನನ್ನ ಕುಟುಂಬದವರ ಮೇಲೆ ಹಾಕಿಸಿದ್ದ ಕೇಸು ವಜಾ ಆಗಿದೆ ಗೊತ್ತಿದೆಯಾ? ಎಂದು ವಾಗ್ದಾಳಿ ನಡೆಸಿದರು.

ಹುಟ್ಟಿದ ಕರುಗಳೆಲ್ಲ ಬಸವ ಆಗಲ್ಲ

ನೀವು ರೈತನ ಮಗ ಎಂದು ಹೇಳುತ್ತೀರಿ. ನಮ್ಮ ಹಳ್ಳಿ ಕಡೆ ಒಂದು ಮಾತು ಹೇಳುತ್ತಾರೆ. 'ಹುಟ್ಟಿದವೆಲ್ಲಾ ಬಸವ ಆಗುವುದಿಲ್ಲ' ಎಂದು. ಅಂದರೆ ಹಳ್ಳಿಗಳಲ್ಲಿ ಹುಟ್ಟುವ ಎಲ್ಲಾ ಕರುಗಳು ಬಸವ ಆಗಲು ಸಾಧ್ಯವಿಲ್ಲ. ಅದೇ ರೀತಿ ಎಲ್ಲರೂ ರೈತರು ರೈತರ ಮಕ್ಕಳಾಗಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷ ರೈತರ ರಕ್ಷಣೆಗೆ ಅನೇಕ ಕಾರ್ಯಕ್ರಮಗಳನ್ನು ನೀಡಿದೆ. ಉಳುವವನಿಗೆ ಭೂಮಿ ಕೊಟ್ಟಿದ್ದೇವೆ. ಬಗರ್ ಹುಕುಂ ಸಾಗುವಳಿ ಜಮೀನು ನೀಡಿದ್ದೇವೆ. ಅರಣ್ಯ ಕಾಯ್ದೆಯಲ್ಲಿ ರೈತರಿಗೆ ಜಮೀನು ನೀಡಿದ್ದೇವೆ. ಕುಮಾರಸ್ವಾಮಿ ಅವರೇ, ನೀವು ಒಂದು ಸಭೆ ಮಾಡಿ ಒಬ್ಬ ರೈತನಿಗೆ ಬಗರ್ ಹುಕುಂ ಜಮೀನು ನೀಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ನನ್ನ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ಗೆ 136 ಸೀಟು ಬಂದಿದೆ. ನಿಮ್ಮ ಅಧ್ಯಕ್ಷತೆಯಲ್ಲಿ ನಿಮ್ಮ ಪಕ್ಷಕ್ಕೆ 19 ಸೀಟು ಬಂದಿದೆ. ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿಯೊಂದಿಗೆ ಹೋಗಿದ್ದೀರಾ. ಕುಮಾರಸ್ವಾಮಿ ಕೇವಲ ಹಿಟ್ ಅಂಡ್ ರನ್. ಎಲ್ಲರನ್ನು ಹೆದರಿಸಿದಂತೆ ಬಿಜೆಪಿಯವರನ್ನು ಹೆದರಿಸಲು ಹೋದೆ. ಪಾದಯಾತ್ರೆ ವಿಚಾರವಾಗಿ ಜಿ.ಟಿ ದೇವೇಗೌಡರ ಕೈಯಲ್ಲಿ ಒಂದು ಹೇಳಿಕೆ ಕೊಡಿಸಿದೆ. ಮಗನ ಕೈಯಲ್ಲಿ ಒಂದು ಹೇಳಿಕೆ ಕೊಡಿಸಿದೆ. ನೀವೊಂದು ಹೇಳಿಕೆ ಕೊಟ್ಟಿರಿ. ಈ ನಾಟಕವೇಕೆ ಎಂದು ಪ್ರಶ್ನಿಸಿದರು.

ಬಿಜೆಪಿ ಹಾಗೂ ಜೆಡಿಎಸ್‌ನವರದ್ದು ಪಾಪ ವಿಮೋಚನಾ ಪಾದಯಾತ್ರೆ ಮಾಡುತ್ತಿದ್ದಾರೆ. ಅವರು ಮಾಡಿರುವ ಎಲ್ಲಾ ಪಾಪಗಳನ್ನು ಕಳೆದುಕೊಳ್ಳಲು ಈ ಪಾದಯಾತ್ರೆ ಮಾಡುತ್ತಿದ್ದಾರೆ. ಇದು ಭ್ರಷ್ಟಾಚಾರದಿಂದ ಭ್ರಷ್ಟಾಚಾರಕ್ಕೋಸ್ಕರ, ಭ್ರಷ್ಟಾಚಾರಿಗಳೇ ನಡೆಸುತ್ತಿರುವ ಪಾದಯಾತ್ರೆ.
-ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಎಷ್ಟು ಕಾರ್ಯಕರ್ತರಿಗೆ ಅಧಿಕಾರ ಕೊಟ್ಟಿದ್ದಾರೆ?

ಸಭೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಡಿಕೆಶಿ, ಕುಮಾರಸ್ವಾಮಿ ಈವರೆಗೆ ಎಷ್ಟು ಜನರಿಗೆ ನಿವೇಶನ, ಮನೆ ಹಂಚಿದ್ದಾರೆ. ಎಷ್ಟು ಜನ ಕಾರ್ಯಕರ್ತರಿಗೆ ಅಧಿಕಾರ ಕೊಟ್ಟಿದ್ದಾರೆ? ಎಷ್ಟು ಜನಕ್ಕೆ ಬಗರ್ ಹುಕ್ಕುಂ ಸಾಗುವಳಿ ಜಮೀನು ನೀಡಿದ್ದಾರೆ ಎಂದು ಮತದಾರರಿಗೆ ಹೇಳಬೇಕು. ಶಿವಕುಮಾರ್ ನ್ಯಾಯುತವಾಗಿ ಆಸ್ತಿ ಸಂಪಾದನೆ ಮಾಡಿದ್ದರೆ ಅಜ್ಜಯ್ಯನ ಮೇಲೆ ಆಣೆ ಮಾಡಲಿ ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ಇಂತಹ ವಿಚಾರವನ್ನು ಹಾದಿಬೀದಿಯಲ್ಲಿ ಚರ್ಚೆ ಮಾಡುವುದಲ್ಲ. ಮುಖ್ಯವಾದ ವೇದಿಕೆಗಳಲ್ಲಿ ಚರ್ಚೆ ಮಾಡಬೇಕು. ಈ ವಿಚಾರವಾಗಿ ನಾವು ಮಾಡುವ ಚರ್ಚೆ ದಾಖಲೆಯಾಗಿ ಉಳಿಯಬೇಕು. ಅದಕ್ಕಾಗಿಯೇ ಸದನದಲ್ಲಿ ಚರ್ಚೆ ಮಾಡಲು ಆಹ್ವಾನ ನೀಡುತ್ತಿದ್ದೇನೆ. ಎರಡು ಬಾರಿ ಆಹ್ವಾನ ನೀಡಿದೆ. ಅವರು ಬರಲಿಲ್ಲ. ಈಗ ಅವರ ಸಹೋದರ ಹಾಗೂ ಅವರ ಪಕ್ಷದ ಶಾಸಕರು ಸದನದಲ್ಲಿ ಇದ್ದಾರೆ. ಅವರ ಬಳಿ ದಾಖಲೆಗಳನ್ನು ಕೊಟ್ಟು ಕಳಿಸಿ ಚರ್ಚೆ ಮಾಡಿಸಲಿ. ಇದ್ದೆಲ್ಲವೂ ಮುಂದಿನ ಪೀಳಿಗೆಗಳಿಗೂ ತಿಳಿಯಲಿ. ಸಾರ್ವಜನಿಕವಾಗಿ ಚರ್ಚೆ ಮಾಡಬೇಕೆಂದರೆ ಯಾವುದಾದರೂ ಸುದ್ದಿ ವಾಹಿನಿಯಲ್ಲಿ ಕೂತು ಚರ್ಚೆ ಮಾಡಬೇಕು. ಅವರ ಜತೆ ಚರ್ಚೆ ಮಾಡಲು ನಾನು ಸಿದ್ಧನಾಗಿದ್ದೇನೆ ಎಂದು ತಿಳಿಸಿದರು.

ನಾನು ಗಳಿಸಿದ್ದ ಭೂಮಿ ಸಿನಿಮಾ ವಿತರಕನಾಗಿದ್ದಾಗ । ನಿಮ್ಮ ವ್ಯವಹಾರ ಬಯಲು ಮಾಡಿದರೆ ಪುಟಗಟ್ಟಲೆ ಇದೆ; ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ತಿರುಗೇಟು

ವಂಚಿಸಿ ಭೂಮಿ ಪಡೆದಿದ್ದರೆ ರಾಜಕೀಯ ನಿವೃತ್ತಿ: ಎಚ್‌ಡಿಕೆ

ಬೆಂಗಳೂರು: ನಾನು ಯಾರಿಗೂ ವಂಚಿಸಿ ಭೂಮಿ ಪಡೆದಿಲ್ಲ. ಒಂದು ವೇಳೆ ವಂಚಿಸಿ ಭೂಮಿ ಪಡೆದಿರುವುದನ್ನು ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇವೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ಬಿಡದಿಯಲ್ಲಿ ಆರಂಭಗೊಂಡ ಮೈಸೂರು ಚಲೋ ಪಾದಯಾತ್ರೆ ವೇಳೆ ಮಾತನಾಡಿದ ಅವರು, ಕೇತಗಾನಹಳ್ಳಿಯಲ್ಲಿ ನಾನು ಚಲನಚಿತ್ರ ಪ್ರದರ್ಶಕನಾಗಿದ್ದಾಗ ಚುನಾವಣೆಗೆ ನಿಲ್ಲುವ 15 ವರ್ಷಗಳ ಮುಂಚೆಯೇ 45 ಎಕರೆ ಜಮೀನು ತೆಗೆದುಕೊಂಡಿದ್ದೇನೆ. ಇದನ್ನು ನಾನು ಎಲ್ಲೂ ಮುಚ್ಚಿಟ್ಟಿಲ್ಲ. ಆದರೆ, ದಲಿತರಿಗೆ ಸೇರಬೇಕಾದ 68 ಎಕರೆ ಜಮೀನು ಡಿ.ಕೆ.ಶಿವಕುಮಾರ್ ಲಪಟಾಯಿಸಿದ್ದಾರೆ. ದಲಿತರಿಗೆ ಸಿಗಬೇಕಾದ ನಿವೇಶನಗಳನ್ನು ಅಸಲಿ ಸೊಸೈಟಿ ನಕಲಿ ಮಾಡಿ ದಲಿತರ ಭೂಮಿ ಲಪಟಾಯಿಸಿದ್ದಾರೆ. ಇಂಥವರ ಬಳಿ ನಾನು ಹೇಳಿಸಿಕೊಳ್ಳುವ ಅಗತ್ಯವಿಲ್ಲ ಎಂದು ಟೀಕಿಸಿದರು.

ಹೆಣ್ಣು ಮಗಳೊಬ್ಬಳನ್ನು ಕಿಡ್ನಾಪ್ ಮಾಡಿ ಬೆದರಿಸಿ ಅವರಪ್ಪನಿಂದ ಸದಾಶಿವನಗರದಲ್ಲಿ ಸೈಟು ಬರೆಸಿಕೊಂಡಿದ್ದಾರೆ. ಅದೇನೋ ಬಿಚ್ಚಿಡುತ್ತೇನೆ ಅಂದ್ಯಲ್ಲಪ್ಪ, ಬಿಚ್ಚು ನೋಡೋಣ. ನಾನಿರೋದು ಬೀದಿಯಲ್ಲಿ, ನೀನಿರೋದು ಗಾಜಿನ ಮನೆಯಲ್ಲಿ. ನಾನು ಬಿಚ್ಚೋಕ್ಕೆ ಹೋದರೆ ನಿಮದು ಪುಟ ಗಟ್ಟಲೆ ಇದೆ.ಅಜ್ಜಯ್ಯನ ಬಗ್ಗೆ ಶಿವಕುಮಾರ್‌ಗೆ ಭಕ್ತಿ, ಗೌರವವಿದ್ದರೆ ಪ್ರಾಮಾಣಿಕವಾಗಿ ಬೆಳೆದು ಬಂದರಾ ಎಂದು ಪ್ರಮಾಣ ಮಾಡಲಿ. ನಾನೂ ಪ್ರಮಾಣ ಮಾಡುತ್ತೇವೆ ಎಂದು ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ಮೂಡಾ ಅಕ್ರಮದ ಬಗ್ಗೆ ನಾನು, ನಮ್ಮ ಶಾಸಕರು ದಾಖಲೆಗಳ ಸಮೇತ ಮಾತನಾಡಿದ್ದೇವೆ. ಮೈಸೂರು ನಗರದ ಉಸ್ತುವಾರಿಯನ್ನು ಸಿಎಂ ಅವರೇ ವಹಿಸಿಕೊಂಡಿದ್ದಾರೆ. ಸಿಎಂ ತಮ್ಮ ಪತ್ನಿ ಹೆಸರಲ್ಲಿ 15 ಸೈಟು ಪಡೆಯಲು ನಮ್ಮ ವಿರೋಧ ಇಲ್ಲ. ಆದರೆ ಅಧಿಕಾರ ದುರುಪಯೋಗ ಪಡಿಸಿಕೊಂಡು ಸೈಟು ಪಡೆದಿದ್ದಾರೆ. ಇಲ್ಲಿ ನಿಂಗ, ಜವರ, ದೇವರಾಜ, ದಲಿತ ಅನ್ನೋ ಪ್ರಶ್ನೆ ಇಲ್ಲ. ನಕಲಿ ದಾಖಲೆ ಸೃಷ್ಟಿ 15 ಸೈಟುಗಳನ್ನು ತಗೊಂಡಿದ್ದಾರೆ. ಇದನ್ನು ಸಿಎಂ ಕಾನೂನು ಬಾಹಿರವಾಗಿ ತಗೊಂಡಿದ್ದಾರೆ ಎಂದು ಆರೋಪಿಸಿದರು.

ಈ ಪಾದಯಾತ್ರೆ ಅಸೂಯೆಯಿಂದ ಹಮ್ಮಿಕೊಂಡಿದ್ದಲ್ಲ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ದಿನವೇ ಅಂಗಡಿ ಬಾಗಿಲು ತೆರೆದು ಕೂತಿದೆ. ಗ್ಯಾರಂಟಿಗಳಿಂದ ಬದಲಾವಣೆಗಳನ್ನು ತಂದಿದ್ದೇವೆ ಅನ್ಕೊಂಡಿದ್ದೇವೆ. ಗ್ಯಾರಂಟಿಗಳಿಂದ ರಾಜ್ಯವನ್ನು ಅವನತಿಯತ್ತ ತಗೊಂಡು ಹೋಗಿದ್ದಾರೆ. ಮಂತ್ರಿಗಳಲ್ಲಿ ಭ್ರಷ್ಟಾಚಾರ ನಡೆಸಲು ಪೈಪೋಟಿ ನಡೀತಿದೆ.
- ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವ

ಡಿಕೆಶಿಗೆ ಅಜ್ಜಯ್ಯನ ಶಾಪ ಆರಂಭವಾಗಿದೆ

ಡಿಕೆಶಿಗೆ ಅಜ್ಜಯ್ಯನ ಶಾಪವೂ ಆರಂಭವಾಗಿದೆ. ಎಷ್ಟು ಮನೆಗಳನ್ನು ಒಡೆದು ನೀವು ಬೆಳೆಸಿದ್ದೀರಿ ಎಂದು ನನಗೆ ಗೊತ್ತಿದೆ. ನಾನು ಏನೂ ಮಾಡಿಯೇ ಇಲ್ಲ, ಸ್ವಚ್ಛವಾಗಿದ್ದೇನೆ ಎಂದು ಅಜ್ಜಯ್ಯನ ಮುಂದೆ ನಿಂತು ಪ್ರಮಾಣ ಮಾಡಲಿ. ನಾನು ಯಾರಿಗೂ ದ್ರೋಹ ಮಾಡಲಿಲ್ಲ, ಮಾಡುವುದೂ ಇಲ್ಲ. ಜನರ ಆಶೀರ್ವಾದವೇ ನನ್ನ ಬಲ, ಅದೇ ನನ್ನ ಬೆಳೆಸಿದೆ. ನಾನು ಯಡಿಯೂರಪ್ಪ ಅವರಿಗೂ ದ್ರೋಹ ಮಾಡಲಿಲ್ಲ. ಆ ಸಂದರ್ಭದಲ್ಲಿ ಅನಿವಾರ್ಯ ಕಾರಣಗಳಿಂದ ಅಧಿಕಾರ ಹಂಚಿಕೆ ಆಗಲಿಲ್ಲ. ನಾನು ಯಡಿಯೂರಪ್ಪ ಅವರಿಗೆ ಯಾವತ್ತೂ ದ್ರೋಹ ಮಾಡಿಲ್ಲ. ಬಿಜೆಪಿ-ಜೆಡಿಎಸ್ ಮೈತ್ರಿ ಕಾಂಗ್ರೆಸ್ ನಿದ್ದೆಗೆಡಿಸಿದೆ. ಅದಕೆ ಶಿವಕುಮಾರ್ ನಮ್ಮ ಮೈತ್ರಿ ಬಗ್ಗೆ ಹೊಟ್ಟೆ ಉರಿ ಅನುಭವಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕವಿ,ಕಲಾವಿದ ಡಿ.ಎನ್.ಅಕ್ಕಿ ಅವರ 'ಗೆರೆ ಏಕೆ ಕೊರೆದೆ' ಮತ್ತು 'ಹಕ್ಕಿ ಹಾಂಗೆ' ಕೃತಿಗಳನ್ನು ಭಾನುವಾರ ಬೆಂಗಳೂರಿನಲ್ಲಿ ನಾಡೋಜ ಪ್ರೊ.ಹಂಪ ನಾಗರಾಜಯ್ಯ ಲೋಕಾರ್ಪಣೆಗೊಳಿಸಿದರು. ಹಿರಿಯ ವಿದ್ವಾಂಸ ಡಾ.ಎಸ್.ಪಿ ಪದ್ಮಪ್ರಸಾದ, ನಿವೃತ್ತ ಪ್ರಾಚಾರ್ಯ ಟಿ.ಎಸ್ ಗೋಪಾಲ, ಡಾ.ಚನ್ನಪ್ಪ ಕಟ್ಟಿ, ಲೇಖಕ ಸಂಗಮೇಶ ಬಾದವಾಡಗಿ, ನಿವೃತ್ತ ಎಸ್‌ಪಿ ಸಿ.ಎನ್.ಭಂಡಾರೆ, ಡಾ.ಶಿವಶರಣ ಅರುಣಿ, ಸಂಪಾದಕ ದೇವು ಪತ್ತಾರ, ಗಿರಿಧರ ವಸಂತರಾವ್ ಸರಾಫ್, ಶ್ರೀಧರ ವಸಂತರಾವ್ ಸರಾಫ, ಶ್ರೀಧರ ಬನವಾಸಿ ಮತ್ತಿತರರು ಇದ್ದರು.

ಹಿರಿಯ ಮುಖಂಡ ಕಡೇಚೂರ್ ಮನೆಗೆ ಬಿ.ಎಲ್.ಸಂತೋಷ್ ಭೇಟಿ

ಹಿರಿಯರ ಆದರ್ಶ ಬಿಜೆಪಿಗೆ ನೆಲೆ

ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಕಲಬುರಗಿಯಲ್ಲಿ ಹಿರಿಯ ಕಾರ್ಯಕರ್ತ ಮಹಾದೇವಪ್ಪ ಕಡೆಚೂರ್ ಅವರನ್ನು ಸನ್ಮಾನಿಸಿದರು.

ಕಲಬುರಗಿ: ಜನಸಂಘದಿಂದ ಬೆಳೆದು ಬಂದ ಹಿರಿಯ ಕಾರ್ಯಕರ್ತರು ಭಾರತೀಯ ಜನತಾ ಪಕ್ಷಕ್ಕೆ ತಮ್ಮ ಆದರ್ಶಗಳ ಮೂಲಕ ಭದ್ರ ನೆಲೆಗಟ್ಟನ್ನು ನೀಡಿರುವುದರಿಂದ ಪಕ್ಷ ಇವತ್ತು ಇಷ್ಟು ವಿರಾಜಮಾನವಾಗಿದೆ ಎಂದು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅಭಿಪ್ರಾಯಪಟ್ಟರು.

ಬಿಜೆಪಿಯ ಹಿರಿಯ ಕಾರ್ಯಕರ್ತ ಹಾಗೂ ಸಾಹಿತಿ 94ರ ಹರೆಯದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಹಾದೇವಪ್ಪ ಅವರನ್ನು ಕಲಬುರಗಿಯ ಅವರ ಸ್ವಗೃಹದಲ್ಲಿ ಭೇಟಿಯಾಗಿ ಸನ್ಮಾನಗೈದು ಬಿ.ಎಲ್. ಸಂತೋಷ್ ಮಾತನಾಡಿದರು.

ಆದರ್ಶಮಯ ಅವಿಭಕ್ತ ಕುಟುಂಬ: ತಮ್ಮ ಸಮರ್ಪಣಾ ಮನೋಭಾವದಿಂದ ಮಾದರಿಯಾಗಿ ಪಕ್ಷ ಬೆಳೆಯಲು ಭದ್ರ ತಳಪಾಯ ಒದಗಿಸಿಕೊಟ್ಟ ಹಿರಿಯರು ಅಭಿನಂದನೆಗೆ ಅರ್ಹರು. ಅವರು ಪಕ್ಷಕ್ಕೆ ಸದಾ ಮಾರ್ಗದರ್ಶನ ನೀಡಿ ಆಶೀರ್ವದಿಸುತ್ತಿದ್ದಾರೆ. ಈಗಿನ ನಾಯಕರು ಅವರಿಂದ ಪ್ರೇರಣೆ ಪಡೆದು ಪಕ್ಷಕ್ಕೆ ಶಕ್ತಿ ತುಂಬಬೇಕು. ಮಹದೇವಪ್ಪ ಕಡೇಚೂರ್ ಅವರದು ಅವಿಭಕ್ತ ಕುಟುಂಬವಾಗಿದ್ದು 25 ಜನರು ಒಂದೇ ಮನೆಯಲ್ಲಿ ಆದರ್ಶದ ಜೀವನ ಮಾಡುತ್ತಿರುವುದು ಭಾರತೀಯ ಕುಟುಂಬ ಪದ್ಧತಿಯ ಆದರ್ಶ ಎಂದು ಬಣ್ಣಿಸಿದರು.

ಈ ಸಂದರ್ಭದಲ್ಲಿ ಬಿಜೆಪಿಯ ಹಿರಿಯ ಮುಖಂಡ ಶರಣಪ್ಪ ತಳವಾರ, ಆರ್‌ಎಸ್‌ಎಸ್‌ನ ವಿಭಾಗೀಯ ಸಂಘಟನಾ ಕಾರ್ಯದರ್ಶಿ ವಿಜಯ ಮಹಾಂತೇಶ್, ಸಂಜೀವ್ ಭೋಸಗೀಕರ್,ಭರತ್ ಖಿಮಿತ್‌ರ್, ಮಹೇಶ್ ಕಡೇಚೂರ್, ಡಾ.ಸದಾನಂದ ಪೆರ್ಲ, ಪ್ರಮೀಳಾ ಎಂ ಕೆ.,ದಿನೇಶ್ ಕಡೇಚೂರ್, ಅನೀಶ್ ಕಡೇಚೂರ್ ಮತ್ತಿತರರು ಇದ್ದರು.

ರಾಷ್ಟ್ರ ಕಟ್ಟುವ ಕಾರ್ಯ ಮಾಡಿ

ಮಹಾದೇವಪ್ಪ ಕಡೇಚೂರ್ ತಮಗೆ ನೀಡಿದ ಅಭಿನಂದನೆಗೆ ಕೃತಜ್ಞತೆ ಸಲ್ಲಿಸಿ, ರಾಷ್ಟ್ರಮಟ್ಟದ ನಾಯಕರು ಹಿರಿಯ ಕಾರ್ಯಕರ್ತರನ್ನು ಹುಡುಕಿಕೊಂಡು ಮನೆಗೆ ಬಂದು ಗೌರವಿಸಿರುವುದು, ನಿಷ್ಠಾವಂತರಾಗಿ ದುಡಿದ ಕಾರ್ಯಕರ್ತನಿಗೆ ರಾಷ್ಟ್ರನಾಯಕರು ನೀಡುವ ಅತ್ಯಮೂಲ್ಯವಾದ ಗೌರವವಾಗಿದೆ. ತತ್ವನಿಷ್ಠರಾಗಿ ಪ್ರಾಮಾಣಿಕರಾಗಿ ನಾಯಕರೆಲ್ಲರೂ ಬಿಜೆಪಿ ಮೂಲಕ ರಾಷ್ಟ್ರ ಕಟ್ಟುವ ಕೆಲಸ ಮಾಡುವಂತಾಗಲಿ ಎಂದು ಆಶೀರ್ವದಿಸಿದರು.

ಶಿಕ್ಷಣ ಸಚಿವರಿಗೆ ರಾಘವೇಂದ್ರ ತಾಕೀತು

ಟೀಕೆ ನಿಲ್ಲಿಸಿ ಅಭಿವೃದ್ಧಿ ಕಡೆಗೆ ಗಮನಕೊಡಿ

ಶಿವಮೊಗ್ಗ: ಶಿಕ್ಷಣ ಸಚಿವ ಮಧು ಬಂಗಾರಪ್ಪ ಟೀಕೆ ಮಾಡುವು ದನ್ನು ಬಿಟ್ಟು ಕ್ಷೇತ್ರದ ಅಭಿವೃದ್ಧಿ ಕಡೆ ಗಮನ ಹರಿಸಬೇಕೆಂದು ಸಂಸದ ಬಿ.ವೈ. ರಾಘವೇಂದ್ರ ಸಲಹೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮಧು ಬಂಗಾರಪ್ಪ ಎನ್‌ಡಿಎ ಪಾದಯಾತ್ರೆ ಬಗ್ಗೆ ಮಾತನಾಡಿದ್ದಾರೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು 1 ವರ್ಷ 4 ತಿಂಗಳು ಆಗಿದೆ. ವಾಲ್ಮೀಕಿ ಹಗರಣದಲ್ಲಿ ಚಂದ್ರಶೇಖರನ್ ಅವರನ್ನು ಬಲಿ ತೆಗೆದುಕೊಂಡಿದೆ. ಮುಡಾ ಹಗರಣದಲ್ಲಿ ಸಿಎಂ ಕುಟುಂಬ ಭಾಗಿಯಾಗಿದೆ ಎಂದು ದೂರಿದರು.

ಯಾದಗಿರಿ ಶಾಸಕ ಹಾಗೂ ಅವರ ಮಗ 30 ಲಕ್ಷ ರು. ಬೇಡಿಕೆ ಇಟ್ಟಿದ್ದೇ ಪಿಎಸ್‌ಐ ಪರಶುರಾಮ್ ಸಾವಿಗೆ ಕಾರಣ ಎಂದು ಮೃತನ ಗರ್ಭಿಣಿ ಪತ್ನಿ ಮಾಧ್ಯಮದ ಮುಂದೆ ಹೇಳಿಕೆ ನೀಡಿದ್ದಾರೆ. ನಾವು ವಿರೋಧ ಪಕ್ಷವಾಗಿ ಜನರನ್ನು ಜಾಗೃತಗೊಳಿಸುವ ಕೆಲಸ ಮಾಡುತ್ತಿದ್ದೇವೆ. ವಾಲ್ಮೀಕಿ, ಮುಡಾ ಹಾಗೂ ಯಾದಗಿರಿ ಹಗರಣ ನಡೆದಿದೆ. ಆದರೆ ಇದರ ಬಗ್ಗೆ ಮಾತನಾಡದ ಮಧು ಬಂಗಾರಪ್ಪನವರು ಬಿಜೆಪಿ ರಾಜ್ಯಾಧ್ಯಕ್ಷರದ್ದು, ಬಿಚ್ಚಿಡುತ್ತೇನೆ. ವಿಮಾನ ನಿಲ್ದಾಣದ ಹಗರಣವನ್ನು ಹೊರಗಡೆ ತರುತ್ತೇನೆ ಎಂದು ಹೇಳುತ್ತಿರು ವುದು ಹೊಸದೇನಲ್ಲ ಎಂದು ಹರಿಹಾಯ್ದರು.

ಹಿಂದೆ ಶಿಕ್ಷಣ ಸಚಿವರಾಗಿ ಅನೇಕರು ಕೆಲಸ ಮಾಡಿದ್ದಾರೆ. ಸಚಿವರು ಆಚಾರವಿ ಲ್ಲದ ನಾಲಿಗೆ ಎಂದು ಏನೇನೂ ಹೇಳುತ್ತಿದ್ದಾರೆ. ಅವರಿಗಿಂತ ಚೆನ್ನಾಗಿ ಮಾತನಾಡಲು ನಮಗೂ ಬರುತ್ತದೆ. ಆದರೆ ನಮ್ಮ ಸಂಸ್ಕೃತಿ ಅದಲ್ಲ. ಅವರ ಸರಕಾರ ಬಂದು ಇಷ್ಟು ದಿನವಾದರೂ ಅವರು ಏನೂ ಮಾಡಿಲ್ಲ. ವಿಮಾನ ನಿಲ್ದಾಣದಲ್ಲಿ ರಾತ್ರಿ ಲ್ಯಾಂಡಿಂಗ್ ಮಾಡಿಸಲು ಟೆಂಡರ್ ಮಾಡಿಸಲಾಗಿದೆ. ಆದರೆ ಗುತ್ತಿಗೆದಾರನಿಗೆ ಇವರು ಹಣ ಬಿಡುಗಡೆ ಮಾಡಿಸಿಲ್ಲ ಎಂದು ಆರೋಪಿಸಿದರು.

ಮಧು ಬಂಗಾರಪ್ಪ ವಿಜಯೇಂದ್ರ ಬಗ್ಗೆ ಮಾಡಿರುವ ಆರೋಪ ಸುಳ್ಳು. ಒಂದೆರಡು ಪ್ರಕರಣ ಈಗ ಹೈಕೋರ್ಟ್ ನಲ್ಲಿದೆ. ಉಳಿದಂತೆ ಎಲ್ಲಾ ಪ್ರಕರಣಗಳು ಖುಲಾಸೆಯಾ ಗಿವೆ. ಚೋಟ ಸಹಿ ಅವರು ಮಾಡಿರಬೇಕು, ಚೋಟ ಸಹಿ ಮಾಡುವುದು ನಮಗೆ ಗೊತ್ತಿಲ್ಲ.
-ಬಿ. ವೈ. ರಾಘವೇಂದ್ರ ಸಂಸದ

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆಗ್ರಹ

ನೈತಿಕ ಹೊಣೆ ಹೊತ್ತು ಸಿಎಂ ರಾಜೀನಾಮೆ ನೀಡಲಿ

ಹುಬ್ಬಳ್ಳಿ: ಕಾಂಗ್ರೆಸ್ ಸರಕಾರದಲ್ಲಿ ದಿನದಿಂದ ದಿನಕ್ಕೆ ಭ್ರಷ್ಟಾಚಾರ ಹೆಚ್ಚುತ್ತಿದೆ. ಅಲ್ಲದೇ ಒಂದೂವರೆ ವರ್ಷದ ಒಳಗಾಗಿಯೇ ಸಿಎಂ ಮೇಲೆ ಗಂಭೀರ ಆರೋಪ ಬಂದಿರು ವುದು ದುರ್ದೈವದ ಸಂಗತಿ. ಸಿದ್ದರಾಮಯ್ಯ ರಾಜ್ಯದ ಅತ್ಯಂತ ಲಜ್ಜೆಗೆಟ್ಟ ಮುಖ್ಯಮಂತ್ರಿಯಾಗಿದ್ದು, ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡ ಬೇಕೆಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆಗ್ರಹಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಮುಖ್ಯಮಂತ್ರಿಯೇ ಭ್ರಷ್ಟಾಚಾರದಲ್ಲಿ ಮುಳುಗಿರುವಾಗ ಶಾಸಕರು ಸುಮ್ಮನೇ ಇರುತ್ತಾರೆಯೇ ಎಂದು ಕುಟುಕಿದರು.

ಮುಡಾ ಹಗರಣದಲ್ಲಿ ಸಿಎಂ ಆರೋಪ ಎದುರಿಸುತ್ತಿದ್ದಾರೆ. ವಾಲ್ಮೀಕಿ ನಿಗಮದ ಹಗರಣದ ಬಗ್ಗೆಯೂ ನಾನು ಹಲವಾರು ಬಾರಿ ಹೇಳಿದ್ದೇನೆ. ಈ ಭ್ರಷ್ಟಾಚಾರದ ಹಣವನ್ನು ಕಾಂಗ್ರೆಸ್ ಹೈಕಮಾಂಡ್‌ಗೆ ಮುಟ್ಟಿಸಿಲ್ಲ ಎಂಬುದನ್ನು ಸಾಬೀತುಪಡಿ ಸಲಿ. ಭ್ರಷ್ಟಾಚಾರದ ಹಣದಲ್ಲೂ ಕಾಂಗ್ರೆಸ್ ಹೈಕಮಾಂಡ್ ಪಾಲುದಾರರು ಎಂದು ಜೋಶಿ ಆರೋಪಿಸಿದರು.

ಪಾಲುದಾರಿಕೆ ಇಲ್ಲದಿದ್ದರೆ ಹೈಕಮಾಂಡ್ ಕೂಡಲೇ ಸಿದ್ದರಾಮಯ್ಯ ರಾಜೀನಾಮೆ ಪಡೆಯಲಿ. ಭ್ರಷ್ಟಾಚಾರದಲ್ಲಿ ನ್ಯಾಯಾಂಗ ತನಿಖೆ ಅಂದರೆ ತಪ್ಪಿಸಿಕೊಳ್ಳಲು ರಹದಾರಿ ಇದಾಗಿದ್ದು, ತಪ್ಪಿಸಿಕೊಳ್ಳಲು ಇದೊಂದು ತಂತ್ರ ಎಂಬುದು ಸ್ಪಷ್ಟವಾಗಿದೆ. ಈ ಪ್ರಕರಣವನ್ನು ಸಿಬಿಐಗೆ ನೀಡಬೇಕು, ಎರಡೂ ಭ್ರಷ್ಟಾಚಾರ ಪ್ರಕರಣದಲ್ಲಿ ಕಾಂಗ್ರೆಸ್‌ನ ಹೈಕಮಾಂಡ್ ಪಾತ್ರವಿದೆ ಎಂದು ಕೇಂದ್ರ ಸಚಿವರು ಟೀಕಿಸಿದರು.

ಯಾದಗಿರಿ ಪಿಎಸ್‌ಐ ವರ್ಗಾವಣೆ ವಿಚಾರದಲ್ಲಿ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತಲೆಮರೆಸಿಕೊಂಡಿದ್ದಾರೆ. ಶಾಸಕರು ಸಹ ಭ್ರಷ್ಟಾಚಾರದಲ್ಲಿ ಸಂಪೂರ್ಣವಾಗಿ ಮುಳುಗಿದ್ದಾರೆ. ರಾಜ್ಯದಲ್ಲಿ ವರ್ಗಾವಣೆ ವಿಚಾರದಲ್ಲಿ ಹರಾಜು ಪ್ರಕ್ರಿಯೆ ನಡೆಯುತ್ತಿದ್ದು, ಪೊಲೀಸ್ ಅಧಿಕಾರಿಗಳು ಹಾಗೂ ಬೇರೆ ಬೇರೆ ಅಧಿಕಾರಿಗಳನ್ನು ಹರಾಜು ಮಾಡುವ ಮೂಲಕ ವರ್ಗಾಯಿಸಲಾಗುತ್ತಿದೆ.
-ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ವಿದ್ಯಾರ್ಥಿಗೆ ಹಿಂಸೆ ಸಂಚಾಲಕನ ಬಂಧನ

ರಾಯಚೂರು: ಪೆನ್ನು ಕದ್ದ ಆರೋಪದ ಮೇಲೆ ಎಂಟು ವರ್ಷದ ಬಾಲಕನಿಗೆ ರಾಮಕೃಷ್ಣ ಆಶ್ರಮದ ಸಂಚಾಲಕನೊಬ್ಬ ಕಣ್ಣಿಗೆ ಖಾರದಪುಡಿ ತುಂಬಿ, ಮೈಯೆಲ್ಲ ಥಳಿಸಿ ಗಾಯಗೊಳಿಸಿದ್ದಲ್ಲದೆ, ಕತ್ತಲೆಕೋಣೆಯಲ್ಲಿ ಕೂರಿಸಿ ಚಿತ್ರಹಿಂಸೆ ನೀಡಿದ ಅಮಾನವೀಯ ಘಟನೆ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದು ,ಸಂಚಾಲಕ ವೇಣುಗೋಪಾಲನನ್ನು ಪೊಲೀಸರು ಬಂಧಿಸಿದ್ದಾರೆ.

ಕೊಪ್ಪಳ ಮೂಲದ ಬಡಕುಟುಂಬದ ಬಾಲಕನನ್ನು ಆಶ್ರಮದಲ್ಲಿ ವಿದ್ಯಾಭ್ಯಾಸಕ್ಕೆಂದು ಬಿಡಲಾಗಿತ್ತು. ಮಗನ ವಿಚಾರಿಸಲು ಬಂದಿದ್ದ ತಾಯಿ ಕಣ್ಣಿಗೆ ಈ ಗಾಯ, ಕಂದುಗಟ್ಟಿದ ಕಣ್ಣು, ಮುಖದ ಬಾವು, ಅಸ್ವಸ್ಥತೆ ಕಂಡು ಗಾಬರಿಯಾಗಿದ್ದಾಳೆ. ಈ ಬಗ್ಗೆ ಮಗನನ್ನು ವಿಚಾರಿಸಿದಾಗ ಕಳೆದ ಮೂರು ದಿನದಿಂದಲೂ ಕತ್ತಲೆ ಕೋಣೆಯಲ್ಲಿ ಕೂಡಿ ಹಾಕಿ ಹಲ್ಲೆ ನಡೆಸಿದ ಸಂಗತಿ ಬೆಳಕಿಗೆ ಬಂದಿತು. ಗೆಳೆಯರ ಜೊತೆ ಆಟವಾಡುತ್ತ ಪೆನ್ನು ಕದ್ದನೆಂದು ಬಾಲಕನ ವಿರುದ್ಧ ಇತರ ವಿದ್ಯಾರ್ಥಿಗಳ ದೂರಿನ ಮೇರೆಗೆ ಆಶ್ರಮದ ಸಂಚಾಲಕ ವೇಣುಗೋಪಾಲ್ ಬಾಲಕನನ್ನು ಥಳಿಸಿದರೆಂದು ಹೇಳಲಾಗಿದೆ. ಶನಿವಾರ ರಾತ್ರಿ, ರಾಯಚೂರು ಪಶ್ಚಿಮ ಠಾಣೆಗೆ ದೂರು ನೀಡಲು ಮಹಿಳೆ ಬಂದಾಗ ನಿರಾಕರಿಸಿದ್ದ ಪೊಲೀಸರು, ಸಾಮಾಜಿಕ ಜಾಲತಣದಲ್ಲಿ ವ್ಯಾಪಕ ಟೀಕೆ ಕೇಳಿಬಂದ ಬೆನ್ನಲ್ಲೇ ದೂರು ದಾಖಲಿಸಿ, ಆರೋಪಿಯನ್ನು ಬಂಧಿಸಿದ್ದಾರೆ.

ಹಗರಣದಲ್ಲಿ ಎಲ್ಲ ಸಚಿವರೂ ಪಾಲುದಾರರು: ಸಂಸದ ಬೊಮ್ಮಾಯಿ ಆರೋಪ

ಕೈನಿಂದಲೇ ರಾಜಭವನ ಹೆಚ್ಚು ದುರ್ಬಳಕೆ

ಬೆಂಗಳೂರು: ರಾಜಭವನವನ್ನು ಅತಿ ಹೆಚ್ಚು ದುರಪಯೋಗ ಪಡೆಸಿಕೊಂಡಿರುವ ಶ್ರೇಯಸ್ಸು ಕಾಂಗ್ರೆಸ್ಸಿಗಿದೆ. ಸುಮಾರು 56ಕ್ಕೂ ಹೆಚ್ಚು ಬಾರಿ ರಾಜಭವನವನ್ನು ದುರುಪಯೋಗ ಪಡೆಸಿಕೊಂಡು ಸರಕಾರಗಳನ್ನು ಉರುಳಿಸಿರುವುದು ಕಾಂಗ್ರೆಸ್ ಇತಿಹಾಸ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಹಾಗೂ ಕೇಂದ್ರದ ಬಿಜೆಪಿ ನಾಯಕರು ರಾಜ್ಯಭವನವನ್ನು ರಾಜ್ಯ ಸರಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನ ನಡೆಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ಅತಿ ಹೆಚ್ಚು ವಿವಾದಾತ್ಮಕ ಹಾಗೂ ಪ್ರಶ್ನಾರ್ಹ ರಾಜ್ಯಪಾಲರಾಗಿದ್ದ ಹಂಸರಾಜ ಭಾರದ್ವಾಜ್ ನಮ್ಮ ನಾಯಕ ಯಡಿಯೂರಪ್ಪ ಅವರ ಮೇಲೆ ಏನೂ ಪ್ರಕರಣಯಿಲ್ಲದೇ, ತನಿಖೆಗೆ ಆದೇಶ ನೀಡಿದ್ದರು. ಈಗ ಆ ಪ್ರಕರಣ ಬಿದ್ದುಹೋಗಿದೆ. ಕಾಂಗ್ರೆಸ್ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷಮೆ ಕೇಳುತ್ತದೆಯೇ ಎಂದು ಪ್ರಶ್ನಿಸಿದರು.

ರಾಜಭವನವನ್ನು ಅತಿ ಹೆಚ್ಚು ದುರುಪಯೋಗ ಮಾಡಿಕೊಂಡಿರುವ ಶ್ರೇಯಸ್ಸು ಕಾಂಗ್ರೆಸ್ಸಿಗಿದೆ. ದೇಶದಲ್ಲಿ ಸುಮಾರು 56ಕ್ಕಿಂತಲೂ ಹೆಚ್ಚುಬಾರಿ ರಾಜಭವನ ದುರುಪಯೋಗ ಮಾಡಿಕೊಂಡು ಕೇರಳ ಸೇರಿದಂತೆ ಅನೇಕ ಸರಕಾರಗಳನ್ನು ಉರುಳಿಸಿರುವ ಶ್ರೇಯಸ್ಸು ಕಾಂಗ್ರೆಸ್ಸಿಗಿದೆ. ಅವರೇನು ನಮಗೆ ಪಾಠ ಹೇಳುವುದು ಎಂದು ಟೀಕಿಸಿದರು.

ಯಾವುದೇ ಸಂಸ್ಥೆಯಿಂದ ಬೇಕಾದರೂ ತನಿಖೆ ನಡೆಸಿ

ಹಿಂದಿನ ಸರಕಾರದಲ್ಲಿ ನಡೆದ ಹಗರಣಗಳನ್ನು ಬಹಿರಂಗ ಪಡೆಸುವುದಾಗಿ ಹೇಳುತ್ತಿದ್ದಾರೆ. ಈಗ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿದೆ. ಅವರೇ ಯಾವುದಾದರೂ ತನಿಖೆ ನಡೆಸಲಿ. ಅದಕ್ಕೆ ನಾವು ಸಿದ್ಧ ಎಂದು ಸವಾಲು ಹಾಕಿದರು. ಸರಕಾರ ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೇ ವರ್ಗಾವಣೆ ದಂಧೆ ಆರಂಭವಾಗಿದೆ. ಅಭಿವೃದ್ಧಿಯಲ್ಲಿ ನಯಾಪೈಸೆ ಕೊಡುತ್ತಿಲ್ಲ. ಶಾಸಕರೆಲ್ಲ ಗಂಟು ಬಿದ್ದಿದ್ದಾರೆ. ಮುಖ್ಯಮಂತ್ರಿಯಾದಿಯಾಗಿ ಕಾಂಗ್ರೆಸ್ ನಾಯಕರೆಲ್ಲ ವರ್ಗಾವಣೆಯಲ್ಲಿಯೇ ದುಡ್ಡು ಮಾಡುವಂತೆ ಶಾಸಕರಿಗೆ ಸೂಚನೆ ನೀಡಿದ್ದಾರೆ. ಭ್ರಷ್ಟಾಚಾರಕ್ಕೆ ಸಾಂಸ್ಥಿಕ ರೂಪ ನೀಡಿದ್ದಾರೆ. ವಿಪರೀತ ಹಣ ಕೇಳುವುದರಿಂದ ಇಡೀ ನೌಕರರ ಸಮೂಹ ಒತ್ತಡದಲ್ಲಿದೆ. ಸಾವಿಗೀಡಾದವರಷ್ಟೇ ಅಲ್ಲ. ಬಹಳ ಜನ ತೀವ್ರ ಒತ್ತಡದಲ್ಲಿದ್ದಾರೆ. ಅವರು ಹಣ ಕೊಡಲಾಗುವುದಿಲ್ಲ. ಹಣ ಕೊಟ್ಟವರು ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳುತ್ತಾರೆ. ಭ್ರಷ್ಟಾಚಾರವನ್ನು ಮೇಲಿನಿಂದ ಕೆಳಗೆ ವ್ಯವಸ್ಥಿತವಾಗಿ ಮಾಡಿರುವುದರಿಂದ ಈ ರೀತಿಯ ಸಾವುಗಳು ನಡೆಯುತ್ತವೆ ಎಂದು ಟೀಕಿಸಿದರು.

ಸುಳ್ಳು ದಾಖಲೆ ಅಧಿಕಾರಿ ವಜಾ

ಹಾವೇರಿ: ಸುಳ್ಳು ದಾಖಲೆ ನೀಡಿ ಅಕ್ರಮವಾಗಿ ನೇಮಕವಾಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಹಾವೇರಿ ಸಹಾಯಕ ತೋಟಗಾರಿಕೆ ಅಧಿಕಾರಿ ಬಸವರಾಜಪ್ಪ ನಿಂಗಪ್ಪ ಬರೇಗಾರ ವಜಾಗೊಂಡಿದ್ದಾರೆ.

ಸತ್ಯಾಂಶ ಮರೆಮಾಚಿ ನೇಮಕವಾದ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದ ವೇಳೆ ನಿಯಮಬಾಹಿರವಾಗಿ ನೇಮಕವಾಗಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಅಧಿಕಾರಿಯನ್ನು ವಜಾಗೊಳಿಸಿ ತೋಟಗಾರಿಕಾ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ತೋಟಗಾರಿಕೆ ಇಲಾಖೆಯಲ್ಲಿ ಬಸವರಾಜಪ್ಪ ಬರೇಗಾರ ದಿನಗೂಲಿ ನೌಕರನಾಗಿದ್ದುಕೊಂಡು ಹಾವೇರಿ ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆ ಗೆ ಬಡ್ತಿ ಪಡೆದಿದ್ದರು. 1981 ರಿಂದ 1991ರವರೆಗೆ ದಿನಗೂಲಿ ನೌಕರನಾಗಿ ಸೇವೆ ಸಲ್ಲಿಸಿದ್ದಾಗಿ ಸುಳ್ಳುದಾಖಲೆ ನೀಡಿದ್ದರು. 1992ರಲ್ಲಿ ತೋಟಗಾರ ಹುದ್ದೆಗೆ ನೇಮಕವಾಗಿದ್ದರು. 2012ರಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿಯಾಗಿ ಮುಂಬಡ್ತಿ ನೀಡಲಾಗಿತ್ತು. ಆದರೆ ಅವರ ಹುದ್ದೆಯನ್ನು ನಿಯಮಬಾಹಿರವಾಗಿ ಸಕ್ರಮಗೊಳಿಸಲಾಗಿದೆ ಎಂದು ದೂರು ಸಲ್ಲಿಕೆಯಾಗಿತ್ತು.

ವಿಶ್ವವಾಣಿ

ಸಂಪಾದಕೀಯ

ಪಿಎಸ್‌ಐ ಸಾವು: ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ

ಯಾದಗಿರಿ ನಗರ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪರಶುರಾಮ ಶುಕ್ರವಾರ ಹಠಾತ್ ಹೃದಯಾಘಾತದಿಂದ ನಿಧನರಾಗಿದ್ದು, ಅವರ ಸಾವಿನ ಸುತ್ತ ಅನುಮಾನಗಳು ಶುರುವಾಗಿವೆ. 'ಯಾದಗಿರಿ ನಗರ ಠಾಣೆಗೆ ಪೋಸ್ಟಿಂಗ್‌ಗಾಗಿ ಕಾಂಗ್ರೆಸ್ ಶಾಸಕ ಚೆನ್ನಾರೆಡ್ಡಿ ಪಾಟೀಲ್ 30 ಲಕ್ಷ ರು. ಹಣಕ್ಕೆ ಬೇಡಿಕೆ ಇಟ್ಟಿದ್ದರು. ಹೀಗಾಗಿ ಪರಶುರಾಮ 30 ಲಕ್ಷ ರು. ನೀಡಿ, ಯಾದಗಿರಿ ನಗರಕ್ಕೆ ವರ್ಗಾವಣೆಯಾಗಿದ್ದರು. ಆದರೆ, ಒಂದು ವರ್ಷದ ಪೂರೈಸುವ ಮುನ್ನವೇ ಪರಶುರಾಮ್ ಅವರನ್ನು ಮತ್ತೆ ಯಾದಗಿರಿ ಸೈಬರ್ ಕ್ರೈಮ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ. ಇದರಿಂದ ಒತ್ತಡಕ್ಕೆ ಒಳಗಾಗಿದ್ದ ಪಿಎಸ್‌ಐ ಪರಶುರಾಮ ಸಾಲದ ಸುಳಿಗೆ ಸಿಲುಕಿದ್ದರು' ಎಂದು ಪರಶುರಾಮ ಅವರ ಪತ್ನಿ ಶ್ವೇತಾ ಆರೋಪಿಸಿದ್ದಾರೆ. ಶ್ವೇತಾ ಅವರ ಆರೋಪ ನಿಜವೇ ಆಗಿದ್ದರೆ ವರ್ಗಾವಣೆ ದಂಧೆಯ ಮತ್ತೊಂದು ಕರಾಳಮುಖ ಬಯಲಾದಂತಾಗುತ್ತದೆ. ವರ್ಗಾವಣೆಗಾಗಿ ಪೊಲೀಸ್ ಇಲಾಖೆಯಲ್ಲಿ ಲಕ್ಷ ಲಕ್ಷ ಲಂಚ ಕೊಡಬೇಕಾಗುತ್ತದೆ ಎಂಬ ಆರೋಪಗಳು ಬಹಳ ಹಿಂದಿನಿಂದಲೂ ಕೇಳಿಬರುತ್ತಿವೆ. ಉಪ್ಪಾರಪೇಟೆ, ಚಿಕ್ಕಪೇಟೆ, ಕಬ್ಬನ್ ಪಾರ್ಕ್, ದೇವನಹಳ್ಳಿ, ವೈಟ್ ಫೀಲ್ಡ್, ವರ್ತೂರು ಠಾಣೆಗೆ ವರ್ಗವಾಗಿ ಬರುವ ಅಧಿಕಾರಿಗಳು ₹ 50 ಲಕ್ಷ ಲಂಚ ನೀಡಬೇಕು. ಒಂದಿಷ್ಟು ಜಾಗ ಹೊರತುಪಡಿಸಿ, ಯಾವುದೇ ಠಾಣೆಗೆ ನೇಮಕಗೊಳ್ಳಲು ಕನಿಷ್ಠ 25 ಲಕ್ಷ ರು. ನೀಡಲೇಬೇಕು. ವರ್ಗಾವಣೆಯ ಪ್ರತಿ ಹಂತದಲ್ಲಿ ಲಂಚ ಸಾಮಾನ್ಯವಾಗಿದೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಆಗಾಗ ಕೇಳಿಬರುತ್ತವೆ. ಇಷ್ಟು ದೊಡ್ಡ ಮೊತ್ತದ ಹಣವನ್ನು ರಾಜಕಾರಣಿಗಳಿಗೆ ಕೊಟ್ಟು ಬರುವ ಅಧಿಕಾರಿ ಸಹಜವಾಗಿಯೇ ನ್ಯಾಯ ಕೇಳಿ ಠಾಣೆಗೆ ಬರುವ ಬಡವರ ರಕ್ತ ಹೀರದೇ ಇರಲಾರ. ಬರೀ ಸಂಬಳವನ್ನೇ ನಂಬಿ ಯಾರು ಕೂಡ ಲಕ್ಷ ಲಕ್ಷ ದುಡ್ಡು ಕೊಟ್ಟು ವರ್ಗಾವಣೆಯನ್ನೂ ಮಾಡಿಸಿಕೊಳ್ಳಲಾರರು. ಆದ್ದರಿಂದ ಈ ಅವೈಜ್ಞಾನಿಕ ವರ್ಗಾವಣೆ ದಂಧೆಗೆ ಕಡಿವಾಣ ಬೀಳಬೇಕು. ಶ್ವೇತಾ ಅವರ ಆರೋಪವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರಕಾರ ಈಗಾಗಲೇ ಸಿಐಡಿ ತನಿಖೆಗೆ ಆದೇಶಿಸಿರುವುದು ಸ್ವಾಗತಾರ್ಹ. ಈ ಪ್ರಕರಣದಲ್ಲಿ ಆರೋಪಿಗಳು ಎಷ್ಟೇ ಪ್ರಭಾವಶಾಲಿಯಾಗಿದ್ದರೂ ಪಾರದರ್ಶಕವಾಗಿ ತನಿಖೆ ಮಾಡಿ ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗಬೇಕು.

ಸೊಂಪಾದಕೀಯ

'ಷಟ್ಲ್ ಹೈವೇ' ಅನ್ನೋಣ್ವಾ?

ದೇಶದಲ್ಲಿ ವಿವಿಧ ರೀತಿಯ ರಸ್ತೆಗಳಿವೆ. ಅದರಲ್ಲಿಯೂ ಹೆದ್ದಾರಿಗಳಲ್ಲಿ ರಾಜ್ಯ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿಗಳೆಂಬ ವಿಧಗಳಿವೆ. ಈ ಎರಡನ್ನೂ ಮೀರಿ, 'ಸುಂಯ್ ಟಪಕ್' ಎಂದು ಹೋಗಲು 'ಎಕ್ಸ್‌ಪ್ರೆಸ್ ಹೈವೇ' ಎನ್ನುವ ಪರಿಕಲ್ಪನೆ ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಬಹುದೊಡ್ಡ ಮಟ್ಟಿಗೆ ಸದ್ದು ಮಾಡುತ್ತಿದೆ. ಸಾಮಾನ್ಯವಾಗಿ ಈ ಎಕ್ಸ್‌ಪ್ರೆಸ್ ಹೈವೇಗಳನ್ನು ಎರಡು ಪ್ರಮುಖ ಊರುಗಳ ನಡುವೆ ಸಂಪರ್ಕ ಕೊಂಡಿಯ ರೀತಿಯಲ್ಲಿ ನಿರ್ಮಿಸಲಾಗುತ್ತದೆ. ನೊಯ್ಡ ಎಕ್ಸ್‌ಪ್ರೆಸ್ ವೇ, ವಡೋದರ- ಅಹಮದಾಬಾದ್ ಎಕ್ಸ್‌ಪ್ರೆಸ್ ವೇ ಸೇರಿದಂತೆ ದೇಶದಲ್ಲಿ ಹತ್ತಾರು ಎಕ್ಸ್‌ಪ್ರೆಸ್ ಹೈವೇಗಳಿವೆ. ಕರ್ನಾಟಕದ ಮಟ್ಟಿಗೆ ನೋಡುವುದಾದರೆ, ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಈಗಾಗಲೇ ಕಾರ್ಯಾಚರಣೆ ಆರಂಭಿಸಿದೆ. ಈ ಎಕ್ಸ್‌ಪ್ರೆಸ್ ಹೈವೇ ಆರಂಭಗೊಂಡಾಗ, ಅದೆಷ್ಟೋ ಮಂದಿ ಈ ರಸ್ತೆಯ ಡ್ರೈವಿಂಗ್ ಅನುಭವ ಪಡೆಯಲೆಂದೇ ಬೆಂಗಳೂರಿನಿಂದ ಮೈಸೂರಿಗೆ ಹೋಗಿಬಂದರು. ಎಲ್ಲವೂ ಸರಿಯಾಗಿದೆ ಎನ್ನುವಾಗಲೇ, ಅತಿವೇಗದಿಂದಾಗುವ ಅಪಘಾತಗಳ ಸಂಖ್ಯೆ ತೀವ್ರವಾಗಿ ಏರತೊಡಗಿತು. ಕೆಲವರು ಡ್ರೈವಿಂಗ್ ಕ್ರೇಜ್‌ಗೆ 200 ಕಿ.ಮೀ. ಸ್ಪೀಡ್‌ನಲ್ಲಿ ಕಾರನ್ನು ಓಡಿಸಿ ಗುದ್ದಿದ ಹತ್ತಾರು ಘಟನೆಗಳು ಬೆಳಕಿಗೆ ಬರಲು ಶುರುವಾದವು. ಇದಾಗುತ್ತಿದ್ದಂತೆ, ಎಕ್ಸ್‌ಪ್ರೆಸ್ ಹೈವೇನಲ್ಲಿ ಅಪಘಾತದ ಸಂಖ್ಯೆ ಇಳಿಸಲು ಪೊಲೀಸ್ ಇಲಾಖೆ 'ವೇಗದ ಮಿತಿ' ಕ್ಯಾಮೆರಾ ಅಳವಡಿಸಿತು. ಈ ಕ್ರಮದಿಂದಾಗಿ ಅಪಘಾತಗಳ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಕುಸಿಯಿತು. ಆದರೀಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಸಂಚಾರಿ ಪೊಲೀಸರು, ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇನಲ್ಲಿ ವೇಗದ ಮಿತಿ ನೂರು ಕಿ.ಮೀ. ದಾಟಿದರೆ ಸಾವಿರ ರುಪಾಯಿ ದಂಡ ಎನ್ನುವ ನಿಯಮವನ್ನು ಜಾರಿಗೆ ತಂದಿದ್ದಾರೆ. 102 ಕಿ.ಮೀ. ದೂರವಿರುವ ಈ ಎಕ್ಸ್‌ಪ್ರೆಸ್ ಹೈವೇನಲ್ಲಿ ಏನಾದರೂ ವೇಗದ ಮಿತಿ ನೂರು ಕಿ.ಮೀ. ದಾಟಿ, ಸೀಟ್ ಬೆಲ್ಟ್ ಹಾಕದೇ, ಮೊಬೈಲ್‌ನಲ್ಲಿ ಮಾತಾಡಿಕೊಂಡು ಹೋದರೆ ಬೆಂಗಳೂರಿನಿಂದ ಮೈಸೂರು ತಲುಪುವ ವೇಳೆಗೆ ಬರೋಬ್ಬರಿ 20 ಸಾವಿರದವರೆಗೆ ದಂಡ ಕಟ್ಟಬೇಕಾಗುತ್ತದೆ. ಸುರಕ್ಷತೆಯ ದೃಷ್ಟಿಯಿಂದ ಈ ಯಾವುದೂ ತಪ್ಪು ಎನ್ನಲಾಗುವುದಿಲ್ಲ. ಆದರೆ ಇನ್ನೋವಾದಂಥ ದೊಡ್ಡ ದೊಡ್ಡ ಗಾಡಿಗಳಲ್ಲಿ ಓಡಾಡುವವರು 250 ರು. ಟೋಲ್ ಕಟ್ಟಿ, 100 ಕಿ.ಮೀ. ವೇಗದಲ್ಲಿ ಹೋಗುವ ಬದಲು, ಸರ್ವಿಸ್ ರಸ್ತೆಯಲ್ಲಿ ಹೋದರೆ ಇದಕ್ಕಿಂತ ಬೇಗ ಮೈಸೂರು ತಲುಪಬಹುದು ಅನ್ನುತ್ತಿದ್ದಾರೆ. ಹೀಗಾಗಿ 'ಎಕ್ಸ್‌ಪ್ರೆಸ್' ಹೈವೇ ಮಾಡಲು ಹೋಗಿ, 'ಷಟ್ಲ್' ಹೈವೇ ಮಾಡಿಟ್ಟರಲ್ಲ ಎನ್ನುವುದು ಅನೇಕರ ಅಳಲು!

ಸಂಪಾದಕರ ಸದ್ಯಶೋಧನೆ

ಸಿಬ್ಬಂದಿ ಯೋಚನೆ

ಒಂದು ದೊಡ್ಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮ್ಯಾನೇಜರ್, ಸೂಪರ್‌ವೈಸರ್, ಮಾರಾಟ ಪ್ರತಿನಿಧಿ ಈ ಮೂವರೂ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದರು. 'ಎಷ್ಟು ಅಂಗಡಿಗಳಿಗೆ ಭೇಟಿ ನೀಡಿ ಮಾತನಾಡಿದರೂ ದೊಡ್ಡ ಪ್ರಮಾಣದಲ್ಲಿ ಆರ್ಡರುಗಳು ದೊರಕುತ್ತಿಲ್ಲ' ಎಂದು ಬೇಸರ ಹಾಗೂ ನಿರಾಶೆಯ ಧ್ವನಿಯಲ್ಲಿ ಅಲವತ್ತುಕೊಂಡ ಮಾರಾಟ ಪ್ರತಿನಿಧಿ. 'ಇಲ್ಲಿ ಯಾರೊಬ್ಬರೂ ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲ. ಏಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಕೇಳಿದರೆ ಒಬ್ಬೊಬ್ಬರೂ ಒಂದೊಂದು ಸಬೂಬು ಹೇಳುತ್ತಾರೆ' ಎಂದು ಹಲುಬಿದ ಸೂಪರ್‌ವೈಸರ್. 'ಕೆಲಸ ಮಾಡುವುದಕ್ಕೇ ಗೊತ್ತಿಲ್ಲದ ನಿಮ್ಮನ್ನೆಲ್ಲ ಇಟ್ಟುಕೊಂಡು ನಾನು ಏನು ತಾನೇ ಮಾಡುತ್ತೇನೋ ತಿಳಿಯುತ್ತಿಲ್ಲ' ಎಂದು ಮ್ಯಾನೇಜರ್ ಸಿಟ್ಟಿನಿಂದ ಇಬ್ಬರ ಮೇಲೂ ಹರಿಹಾಯ್ದ. ಹೀಗೆ ಅವರೆಲ್ಲರೂ ಆತಂಕದಿಂದ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿರುವಾಗ, ದಿಢೀರನೆ ಒಂದು ಭೂತ ಇವರ ಮುಂದೆ ಪ್ರತ್ಯಕ್ಷವಾಗಿ, 'ನೀವೇಕೆ ಹೀಗೆ ಕಷ್ಟ ಪಡುತ್ತಿದ್ದೀರಿ? ನಿಮ್ಮ ಆಸೆ ಏನೆಂದು ತಿಳಿಸಿರಿ. ನಾನದನ್ನು ಪೂರೈಸುತ್ತೇನೆ. ಆದರೆ ಒಬ್ಬರು ಒಂದು ಆಸೆಯನ್ನು ಮಾತ್ರವೇ ಹೇಳಬೇಕು' ಎಂದು ಹೇಳಿತು. ಭೂತವನ್ನು ನೋಡಿ ಮೊದಲಿಗೆ ಹೆದರಿಕೊಂಡರೂ ಕೂಡಲೇ ಸಾವರಿಸಿಕೊಂಡ ಮ್ಯಾನೇಜರ್, 'ನೀನು ಹೇಗೆ ಈ ಕಚೇರಿಯೊಳಗೆ ಅನುಮತಿಯಿಲ್ಲದೆ ಪ್ರವೇಶಿಸಿದೆ? ಸೆಕ್ಯೂರಿಟಿ, ಮೊದಲು ಇದನ್ನು ಹೊರಗಟ್ಟಿರಿ' ಎಂದು ಕಿರುಚಿದ. 'ಅವರು ಲಂಡನ್ ಅನ್ನು ಸುತ್ತಿ ನೋಡಬೇಕೆಂದು ಆಸೆಪಟ್ಟರು. ಆದ್ದರಿಂದ ಅಲ್ಲಿಗೆ ಅವರನ್ನು ಕಳಿಸಿದ್ದೇನೆ' ಎಂದು ಉತ್ತರಿಸಿತು ಭೂತ. ಅದನ್ನು ಕೇಳಿ ಎಲ್ಲರೂ ಅಚ್ಚರಿಗೊಂಡರು. ಮೊದಲಿಗೆ ಸೂಪರ್‌ವೈಸರ್ ದಿಗ್ಭ್ರಮೆಯಿಂದ ಹೊರಬಂದು ಸಾವರಿಸಿಕೊಂಡು, 'ಆಸೆಗಳನ್ನು ನೆರವೇರಿಸುವ ಭೂತ ಸರ್ ಇದು... ನಾವೂ ಏನನ್ನಾದರೂ ಕೇಳೋಣ' ಎಂದು ಅವರಿಗೆ ಸಲಹೆ ನೀಡಿ, ತನ್ನ ಆಸೆಯನ್ನು ಅದರ ಮುಂದೆ ಹೇಳಿಕೊಂಡ. 'ಇಲ್ಲಿ ತುಂಬಾ ಬಿಸಿಲು, ಸೆಖೆ. ಆದ್ದರಿಂದ ನಾನು ಅಮೆರಿಕಕ್ಕೆ ಹೋಗಿ ನಯಾಗರಾ ಜಲಪಾತದ ಮುಂದೆ ಆನಂದದಿಂದ ಇರಬೇಕು' ಎಂದು ಹೇಳಿಕೊಂಡ. ಆ ಕೂಡಲೇ ಅವನನ್ನು ನಯಾಗರಾ ಜಲಪಾತದ ಮುಂದೆ ನಿಲ್ಲಿಸಿತ್ತು ಭೂತ! ನಂತರ ಮಾರಾಟ ಪ್ರತಿನಿಧಿಯು, 'ನನಗೆ ಕೆಲಸ ಮಾಡಿ ಮಾಡಿ ಸಾಕಾಗಿಹೋಗಿದೆ. ನಾನು ಮಾಲ್ಡೀವ್ಸ್ ದ್ವೀಪದಲ್ಲಿ ಒಂದು ಬಂಗಲೆಯಲ್ಲಿ ವಾಸಿಸಬೇಕು. ಅಲ್ಲಿ ನನ್ನ ಕೆಲಸಗಳನ್ನೆಲ್ಲ ಮಾಡಲು ಕೆಲಸಗಾರರೂ ಇರಬೇಕು' ಎಂದು ತನ್ನ ಆಸೆಯನ್ನು ಹೇಳಿಕೊಂಡ. ಅವನು ಕೇಳಿದ್ದು ಕೂಡ ನೆರವೇರಿತು. ಕಡೆಯದಾಗಿ, ಮ್ಯಾನೇಜರ್ ತನ್ನ ಆಸೆಯನ್ನು ಹೇಳಿಕೊಂಡ! ಅಲ್ಲಿದ್ದವರೆಲ್ಲರೂ ಮಾಯವಾಗಿ ಹೋದದ್ದರಿಂದ ಅವನಿಗೆ ಕಡುಕೋಪ ಬಂದಿತ್ತು. 'ಮುಂದಿನ ವಾರ ಎಂಡಿ ಜತೆ ಮೀಟಿಂಗ್ ಇದೆ. ಇವರಿಬ್ಬರೂ ಹೀಗೆ ಜಾಲಿಯಾಗಿ ಊರು ಸುತ್ತಾಡಲು ಹೋಗಿಬಿಟ್ಟರೆ ಇಲ್ಲಿ ಕೆಲಸ ಮಾಡುವುದು ಯಾರು? ನನ್ನ ನೆಮ್ಮದಿಯೇ ಕೆಟ್ಟು ಹೋಗುತ್ತದೆ ಅಷ್ಟೆ. ಇವರಿಬ್ಬರು ಮಾತ್ರವೇ ಅಲ್ಲ, ಆ ಸೆಕ್ಯೂರಿಟಿಯವರನ್ನೂ ಸೇರಿಸಿ ಎಲ್ಲರೂ ಕೂಡಲೇ ಆಫೀಸಿಗೆ ಬರಬೇಕು' ಎಂದು ತನ್ನ ಆಸೆಯನ್ನು ಹೇಳಿಕೊಂಡ. ಇದನ್ನು ಕೇಳಿ ಭೂತ ಒಂದು ಕ್ಷಣ ಆಶ್ಚರ್ಯಪಟ್ಟರೂ, ಅವನು ತಿಳಿಸಿದಂತೆಯೇ ಮಾಡಿ ಅಲ್ಲಿಂದ ಮಾಯವಾಗಿ ಹೋಯಿತು. ಮೂವರೂ ಹಿಂದಿನಂತೆ ಅದೇ ಆಫೀಸಿನಲ್ಲಿ ಅದೇ ಕೆಲಸ ಮಾಡಿಕೊಂಡಿದ್ದರು. ಇದು ಮನುಷ್ಯನ ಯೋಚನೆಗೆ ಸಂಬಂಧಿಸಿದ ಒಂದು ಕಥೆ. ಆಫೀಸಿನಲ್ಲಿ ಕೆಲಸಮಾಡುವ ಸಿಬ್ಬಂದಿ ಯಾವ ರೀತಿ ಯೋಚಿಸುತ್ತಾರೆ ಎಂಬುದನ್ನು ಪರಿಣಾಮಕಾರಿಯಾಗಿ ತಿಳಿಸುವ ಒಂದು ಕಾಲ್ಪನಿಕ ಪ್ರಸಂಗ. 'ರಾಮರಾಜ್' ಉಡುಪು ಸಂಸ್ಥೆ ಪ್ರತಿ ತಿಂಗಳು ಪ್ರಕಟಿಸುವ 'ಬಿಳುಪು' ಪತ್ರಿಕೆಯಲ್ಲಿ ಪ್ರಕಟವಾದ ಈ ಕಥೆಯನ್ನು ಓದಿ ನಿಮಗೂ ತಿಳಿಸಬೇಕು ಎನಿಸಿತು. ನೀವು ಯಾವುದಾದರೂ ಸಂಸ್ಥೆಯ ಮುಖ್ಯಸ್ಥರಾಗಿದ್ದರೆ, ನಿಮ್ಮ ಸಿಬ್ಬಂದಿ ಹೇಗೆ ಯೋಚಿಸುತ್ತಾರೆ ಎಂಬುದನ್ನು ಈ ಕಥೆ ಮೂಲಕ ತಿಳಿದುಕೊಳ್ಳಬಹುದು.

ದುರಂತ ನಾಯಕನಾಗಲು ಸಿದ್ದು ತಯಾರಿಲ್ಲ



ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕರ್ನಾಟಕದ ರಾಜಕಾರಣದಲ್ಲಿ ಬಿರುಗಾಳಿ ಎದ್ದಿದೆ. ಈ ಬಿರುಗಾಳಿಗೆ ಮೂಲವಾದವರು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್. ಮುಡಾ ಹಗರಣದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಷೋಕಾಸ್ ನೋಟಿಸ್ ಜಾರಿ ಮಾಡಿದ ಅವರು, 'ನಿಮ್ಮ ವಿರುದ್ಧ ಏಕೆ ವಿಚಾರಣೆಗೆ ಅನುಮತಿ ನೀಡಬಾರದು ಎಂಬುದಕ್ಕೆ ಒಂದು ವಾರದಲ್ಲಿ ಕಾರಣ ಕೊಡಿ' ಎಂದಿದ್ದರು.

ಟಿ.ಜೆ.ಅಬ್ರಹಾಂ ಅವರು ನೀಡಿದ ದೂರಿಗೆ ಪ್ರತಿಯಾಗಿ ರಾಜ್ಯಪಾಲರು ಕಾರಣ ಕೇಳುವುದು ಸಹಜ ಸಂಪ್ರದಾಯ. ಆದರೆ ಅವರು ಸಿದ್ದರಾಮಯ್ಯ ಅವರಿಗೆ ಷೋಕಾಸ್ ನೋಟಿಸ್ ಜಾರಿ ಮಾಡಿದ್ದಲ್ಲದೆ, 'ನಿಮ್ಮ ವಿರುದ್ಧದ ದೂರು ಗಂಭೀರವಾಗಿದ್ದು, ಮೇಲ್ನೋಟಕ್ಕೆ ಸಾಬೀತಾಗುವಂತಿದೆ' ಎಂಬರ್ಥದಲ್ಲಿ ಆಡಿದ ಮಾತು ಸಹಜವಾಗಿಯೇ ಕಾಂಗ್ರೆಸ್ ಪಾಳಯದ ಅನುಮಾನಕ್ಕೆ ಕಾರಣವಾಗಿದೆ ಮತ್ತು ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ವಿರುದ್ಧ ವಿಚಾರಣೆಗೆ ಅನುಮತಿ ನೀಡಲು ಅವರು ಸಜ್ಜಾಗಿದ್ದಾರೆ ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿದೆ. ಹಾಗಂತಲೇ ಸಿದ್ದರಾಮಯ್ಯ ಅವರ ಅನುಪಸ್ಥಿತಿಯಲ್ಲಿ ಆಗಸ್ಟ್ 1ರಂದು ನಡೆದ ಸಂಪುಟ ಸಭೆ, ಈ ಷೋಕಾಸ್ ನೋಟಿಸನ್ನು ಹಿಂಪಡೆಯಲು ರಾಜ್ಯಪಾಲರಿಗೆ ಸಲಹೆ ನೀಡಿದೆ.

ಆದರೆ ಸಂಪುಟದ ಸಲಹೆಯನ್ನು ರಾಜ್ಯಪಾಲರು ಒಪ್ಪುತ್ತಾರಾ? ಗೊತ್ತಿಲ್ಲ. ಒಂದು ವೇಳೆ ಒಪ್ಪಿದರೆ ಪ್ರಕರಣ ಮುಕ್ತಾಯವಾಯಿತು ಅಂತಲೇ ಅರ್ಥ. ಆದರೆ ಭಾನುವಾರ ಸಂಜೆಯ ವೇಳೆಗೆ ಬಂದ ವರ್ತಮಾನ, ಪ್ರಕರಣ ಇಲ್ಲಿಗೆ ಮುಗಿಯುತ್ತದೆ ಎಂಬ ನಂಬಿಕೆಯನ್ನು ಹುಟ್ಟಿಸುತ್ತಿಲ್ಲ. ಕಾರಣ? ಕಾಂಗ್ರೆಸ್ ಪಾಳಯಕ್ಕೆ ತಲುಪುತ್ತಿರುವ ಮಾಹಿತಿಗಳ ಪ್ರಕಾರ, ರಾಜ್ಯಪಾಲ ಗೆಹ್ಲೋಟ್ ಅವರು ಸಿಬಿಐನ ಪ್ರಭಾವಿ ನ್ಯಾಯವಾದಿಯೊಬ್ಬರನ್ನು ಸಂಪರ್ಕಿಸಿದ್ದರಂತೆ. ಹೀಗೆ ಸಂಪರ್ಕಿಸಿದವರು, ಮುಖ್ಯಮಂತ್ರಿಗಳ ವಿರುದ್ಧದ ವಿಚಾರಣೆಗೆ ಅನುಮತಿ ನೀಡುವ ಕಾಲಕ್ಕೆ, ಇದನ್ನು ಸಿಬಿಐ ತನಿಖೆಗೆ ಒಳಪಡಿಸಲು ಆದೇಶ ನೀಡುವ ಪವರ್ ತಮಗಿದೆಯೇ? ಎಂದು ಕೇಳಿದ್ದಾರೆ.

ಆದರೆ ರಾಜ್ಯಪಾಲರ ಈ ಮಾತಿಗೆ ಉತ್ತರಿಸಿದ ಆ ಪ್ರಭಾವಿ ನ್ಯಾಯವಾದಿ, 'ಇಲ್ಲ, ಹಾಗೆ ಆದೇಶ ನೀಡಲು ಸಾಧ್ಯವಿಲ್ಲ. ಆದರೆ ಮುಖ್ಯಮಂತ್ರಿಗಳ ವಿರುದ್ಧದ ವಿಚಾರಣೆಗೆ ಅನುಮತಿ ನೀಡುವ ಕಾಲಕ್ಕೆ ಯಾರಾದರೂ ಹೈಕೋರ್ಟಿಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದರೆ ಇದು ಸಾಧ್ಯವಾಗಬಹುದು. ಕಾರಣ? ಮುಖ್ಯಮಂತ್ರಿಗಳ ವಿರುದ್ಧದ ವಿಚಾರಣೆಗೆ ಅನುಮತಿ ನೀಡಿದರೆ, ತನಿಖೆ ಮಾಡಿ ವರದಿ ಸಲ್ಲಿಸಬೇಕಾದವರು ಪೊಲೀಸರು. ಆದರೆ ಅವರು ಮುಖ್ಯಮಂತ್ರಿಗಳ ಅಧೀನದಲ್ಲಿ ಇರುವುದರಿಂದ ಪ್ರಾಮಾಣಿಕವಾಗಿ ತನಿಖೆ ಮಾಡುವುದು ಕಷ್ಟ. ಹೀಗಾಗಿ ಇದನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ನ್ಯಾಯಾಲಯವನ್ನು ಕೋರಬಹುದು. ಒಂದು ವೇಳೆ ನ್ಯಾಯಾಲಯ ಅದನ್ನು ಪುರಸ್ಕರಿಸಿದರೆ ಸಿಬಿಐ ರಂಗ ಪ್ರವೇಶಿಸಬಹುದು' ಎಂದರಂತೆ.

ಯಾವಾಗ ಇಂಥ ವರ್ತಮಾನಗಳು ಕಿವಿಗೆ ಬೀಳತೊಡಗಿದವೋ, ಕಾಂಗ್ರೆಸ್ ಪಾಳಯಕ್ಕೆ ಒಂದು ಸಂಗತಿ ಖಚಿತವಾಗಿದೆ. ಅರ್ಥಾತ್, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಟಿ.ಜೆ.ಅಬ್ರಹಾಂ ಸಲ್ಲಿಸಿದ ದೂರಿನ ಹಿನ್ನೆಲೆಯಲ್ಲಿ ರಾಜ್ಯಪಾಲರು ಸಿಎಂ ವಿರುದ್ಧದ ವಿಚಾರಣೆಗೆ ಅನುಮತಿ ನೀಡಲಿದ್ದಾರೆ ಎಂಬುದು ಕೈ ಪಾಳಯಕ್ಕೆ ಖಚಿತವಾಗಿದೆ. ಹೀಗಾಗಿ ಅದು ಕಾನೂನು ಸಮರಕ್ಕೆ ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ಸಜ್ಜು ಮಾಡಿಕೊಳ್ಳುತ್ತಿದೆ.

ಅಂದ ಹಾಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡಿದರೂ, ನ್ಯಾಯ ತಮ್ಮ ಪರವಾಗಿದೆ ಎಂಬುದು ಕೈ ಪಾಳಯದ ವಿಶ್ವಾಸ. ಯಾಕೆಂದರೆ ರಾಜ್ಯಪಾಲರು ಮುಖ್ಯಮಂತ್ರಿಗಳಿಗೆ ನೀಡಿದ ಷೋಕಾಸ್ ನೋಟಿಸ್‌ನಲ್ಲಿ, ಇದು ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಬರುತ್ತದೆ ಅಂತ ಹೇಳಲಾಗಿದೆ. ಆದರೆ ಈ ಪ್ರಕರಣದಲ್ಲಿ ಭ್ರಷ್ಟಾಚಾರ ನಡೆದಿರುವುದೆಲ್ಲಿ? ಈ ಹಿಂದೆ ಯಡಿಯೂರಪ್ಪ ಪ್ರಕರಣದಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಪ್ರಸ್ತಾಪ ಬಂದಾಗ ಕಾರಣ ವಾದರೂ ಇತ್ತು. ಅಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿ, ಮತ್ತೊಂದು ಕಡೆ ಚೆಕ್ ರೂಪದಲ್ಲಿ ಹಣ ಪಡೆದ ಆರೋಪವಿತ್ತು. ಆದರೆ ಇಲ್ಲಿ ಸಿದ್ದರಾಮಯ್ಯ ಯಾರಿಂದ ಹಣ ಪಡೆದಿದ್ದಾರೆ? ಅಥವಾ ಯಾರಿಗೆ ಹಣ ಕೊಟ್ಟಿದ್ದಾರೆ? ಹೆಚ್ಚು ಎಂದರೆ ಅವರ ವಿರುದ್ಧ ಸ್ವಜನಪಕ್ಷಪಾತದ ಆರೋಪ ಹೊರಿಸಬಹುದು. ಆದರೆ ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪತ್ನಿ ಭೂಮಿಗೆ ಪ್ರತಿಯಾಗಿ ನಿವೇಶನ ಪಡೆದಿರುವುದು ಬಿಜೆಪಿ ಅಧಿಕಾರದಲ್ಲಿದ್ದ ಕಾಲದಲ್ಲಿ. ಹೀಗಾಗಿ ಸ್ವಜನಪಕ್ಷಪಾತದ ಆರೋಪವೂ ಕ್ಷೀಣವಾಗುತ್ತದೆ. ಆದ್ದರಿಂದ ಟಿ.ಜೆ.ಅಬ್ರಹಾಂ ದೂರಿನ ಹಿನ್ನೆಲೆಯಲ್ಲಿ ರಾಜ್ಯಪಾಲರು ವಿಚಾರಣೆಗೆ ಅನುಮತಿ ನೀಡಿದರೆ ಹೈಕೋರ್ಟ್ ಅದನ್ನು ತಿರಸ್ಕರಿಸುತ್ತದೆ.

ಇದೇ ರೀತಿ ಸುಪ್ರೀಂ ಕೋರ್ಟಿನಲ್ಲಿ ಮುಖ್ಯ ನ್ಯಾಯಮೂರ್ತಿಗಳಾಗಿರುವ ಚಂದ್ರಚೂಡ್ ಅವರು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ನಡೆಗಳನ್ನು ಇಷ್ಟಪಡದವರು. ಹೀಗಾಗಿ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಿದರೆ ರಾಜ್ಯಪಾಲರ ಕ್ರಮವನ್ನು ಅವರು ತಿರಸ್ಕರಿಸುವುದು ಸ್ಪಷ್ಟ. ಆದ್ದರಿಂದ ರಾಜ್ಯಪಾಲರು ಮೇಲಿನ ಪ್ರಭಾವಕ್ಕೊಳಗಾಗಿ ತನಿಖೆಗೆ ಅನುಮತಿ ನೀಡಿದರೂ ಅಂತಿಮವಾಗಿ ನ್ಯಾಯ ಸಿದ್ದರಾಮಯ್ಯ ಅವರ ಪರವಾಗಿರಲಿದೆ ಎಂಬುದು ಅವರ ಆಪ್ತರ ಮಾತು.

ದಲಿತ ಮುಖ್ಯಮಂತ್ರಿ ಬರುತ್ತಾರಾ?

ಇಷ್ಟಾದರೂ ಕಾಂಗ್ರೆಸ್ ಪಾಳಯದ ಮತ್ತೊಂದು ತುದಿಯಲ್ಲಿ ಬೇರೆ ಅಭಿಪ್ರಾಯ ಕೇಳುತ್ತಿದೆ. ಅದರ ಪ್ರಕಾರ, ಸಿದ್ದರಾಮಯ್ಯ ಎಪಿಸೋಡು ವಿಕೋಪಕ್ಕೆ ಹೋದರೆ ಪಕ್ಷದ ಹೈಕಮಾಂಡ್ ಅವರ ರಾಜೀನಾಮೆಯನ್ನು ಬಯಸಬಹುದು. ಹಾಗೇನಾದರೂ ಆದರೆ ಪರ್ಯಾಯ ನಾಯಕನ ಸ್ಥಾನಕ್ಕೆ ರೇಸು ಆರಂಭವಾಗುತ್ತದೆ. ಇಂಥ ರೇಸಿನಲ್ಲಿ ಸಹಜವಾಗಿಯೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಿರುತ್ತಾರೆ.

ಆದರೆ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ತರುವ ವಿಷಯದಲ್ಲಿ ಏನಾದರೂ ತೊಡಕುಗಳಿವೆಯೇ ಅಂತ ವರಿಷ್ಠರು ಗಮನಿಸುತ್ತಾರೆ. ಇವತ್ತು ಸಿದ್ದರಾಮಯ್ಯ ಅವರನ್ನು ಇಕ್ಕಳಕ್ಕೆ ಸಿಲುಕಿಸಲು ಹೊರಟವರು ನಾಳೆ ಡಿ.ಕೆ.ಶಿವಕುಮಾರ್ ಅವರನ್ನು ಬಿಡುತ್ತಾರಾ? ಅಂತ ವರಿಷ್ಠರು ಯೋಚಿಸುವುದು ಸಹಜ. ಇಲ್ಲ, ಯಾವ ತೊಂದರೆಯೂ ಇಲ್ಲ ಎಂಬುದು ಖಚಿತವಾದರೆ ಬೇರೆ ಮಾತು. ಒಂದು ವೇಳೆ ಅಡಚಣೆ ನಿಶ್ಚಿತ ಅನ್ನಿಸಿದರೆ ಸೇಫ್ಟಿ ದೃಷ್ಟಿಯಿಂದ ದಲಿತ ನಾಯಕರೊಬ್ಬರನ್ನು ಹೈಕಮಾಂಡ್ ಮುಖ್ಯಮಂತ್ರಿ ಹುದ್ದೆಯ ಮೇಲೆ ಕೂರಿಸಬಹುದು. ಇಂಥ ಸನ್ನಿವೇಶದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮತ್ತು ಸತೀಶ್ ಜಾರಕಿಹೊಳಿ ಹೆಸರು ಮುಂದೆ ಬರಬಹುದು.

ಅಂದ ಹಾಗೆ, ಪಕ್ಷ ಅಧಿಕಾರಕ್ಕೆ ಬಂದ ಕಾಲದಲ್ಲಿ ಸಿದ್ದರಾಮಯ್ಯ-ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ವಿಷಯವಾಗಿ ಮುಸುಕಿನ ಗುದ್ದಾಟ ಪ್ರಾರಂಭವಾಗಿತ್ತಲ್ಲ? ಈ ಸಂದರ್ಭದಲ್ಲಿ ಕಾಂಗ್ರೆಸ್ ವರಿಷ್ಠರಲ್ಲೊಬ್ಬರಾದ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಪರಮೇಶ್ವರ್ ಮಾತನಾಡಿದ್ದಾರೆ. 'ಎನ್ ಸರ್, ಮುಖ್ಯಮಂತ್ರಿ ಪಟ್ಟವನ್ನು ನೀವು ಇಬ್ಬರಿಗೆ ಹಂಚಿದ್ದೀರಾ?' ಅಂತ ಪರಮೇಶ್ವರ್ ಕೇಳಿದಾಗ ಅಪ್ರತಿಭರಾದ ಕೆ.ಸಿ.ವೇಣುಗೋಪಾಲ್, 'ಓ, ಅದೆಲ್ಲ ಈಗೇಕೆ ಪರಮೇಶ್ವರ್ ಜೀ. ಅದೆಲ್ಲ ಮುಂದಿನ ಮಾತು' ಎಂದಿದ್ದಾರೆ. ಆದರೆ ಪಟ್ಟು ಬಿಡದ ಪರಮೇಶ್ವರ್, 'ಅಂಥದ್ದೇನಾದರೂ ಇದ್ದರೆ ಈಗಲೇ ಹೇಳಿಬಿಡಿ ಸರ್. ಯಾಕೆಂದರೆ ನಾನು ಕೂಡಾ ಪಕ್ಷಕ್ಕಾಗಿ ದುಡಿದವನು. ಒಂದು ಸಲ ನನ್ನ ನೇತೃತ್ವದಲ್ಲೇ ಪಕ್ಷ ಅಧಿಕಾರಕ್ಕೆ ಬಂದಿತ್ತು. ಹೀಗೆ ದುಡಿದು ದುಡಿದು ಒಂದು ಹಂತಕ್ಕೆ ಬಂದಿದ್ದೇನೆ. ಒಂದು ವೇಳೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಪಟ್ಟದಿಂದ ಕೆಳಗಿಳಿಯುವುದೇ ಆದರೆ, ಆ ಜಾಗಕ್ಕೆ ನಾನೂ ಒಬ್ಬ ಸ್ಪರ್ಧಿ. ಬೇಕಿದ್ದರೆ ಶಾಸಕಾಂಗ ಪಕ್ಷದಲ್ಲೇ ನಾಯಕನ ಆಯ್ಕೆಯಾಗಲಿ' ಎಂದಿದ್ದಾರೆ.

ಪರಮೇಶ್ವರ್ ಅವರ ಖಡಕ್ಕು ಮಾತುಗಳನ್ನು ಕೇಳಿದ ಕೆ.ಸಿ.ವೇಣುಗೋಪಾಲ್, 'ಓ, ಅದರ ಬಗ್ಗೆ ಮುಂದೆ ನೋಡೋಣ ಪರಮೇಶ್ವರ್ ಜೀ' ಅಂತ ಹೇಳಿದ್ದರಂತೆ. ಹೀಗೆ ಸಿಎಂ ಹುದ್ದೆಗೆ ತಾವೂ ಒಬ್ಬ ಕಂಟೆಂಡರ್ ಎಂದು ಅವತ್ತೇ ಹೇಳಿದ ಪರಮೇಶ್ವರ್ ಈಗ ಸುಮ್ಮನಿರುತ್ತಾರೆಯೇ? ನಿಶ್ಚಿತವಾಗಿಯೂ ರೇಸಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಇನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ರೇಸಿನಲ್ಲಿ ಕಾಣಿಸುವುದು ಗ್ಯಾರಂಟಿ. ಆದರೆ ಸಿಎಂ ಹುದ್ದೆಯ ವಿಷಯದಲ್ಲಿ ಪೈಪೋಟಿ ಅತಿಯಾದರೆ, ಈ ಎಲ್ಲರನ್ನೂ ಮೀರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ತಂದು ಕೂರಿಸಲು ವರಿಷ್ಠರು ಮುಂದಾಗಬಹುದು. ಯಾಕೆಂದರೆ ಖರ್ಗೆ ಹಿರಿಯರು. ಅವರು ಬರುತ್ತಾರೆ ಎಂದರೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅಂಥವರನ್ನು ಪದಚ್ಯುತಗೊಳಿಸಲು ನಾಳೆ ಬಿಜೆಪಿ ವರಿಷ್ಠರೂ ಹಿಂಜರಿಯುತ್ತಾರೆ ಎಂಬುದು ಕೈ ಪಾಳಯದಿಂದಲೇ ಕೇಳಿಬರುತ್ತಿರುವ ಮಾತು.

ಡಿಸಿಎಂ ಆಗುತ್ತಾರೆ ಪ್ರಿಯಾಂಕ್ ಖರ್ಗೆ

ಆದರೆ ಇಂಥ ಮಾತುಗಳನ್ನು ತಳ್ಳಿಹಾಕುವ ಸಿದ್ದರಾಮಯ್ಯ ಆಪ್ತರು, 'ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಅಸಂಭವ. ಆದರೆ ದಲಿತರ ಕೋಟಾದಿಂದ ಮಲ್ಲಿಕಾರ್ಜುನ ಖರ್ಗೆ ಅವರ ಮಗ ಪ್ರಿಯಾಂಕ್ ಖರ್ಗೆ ಡಿಸಿಎಂ ಆಗಬಹುದು' ಎನ್ನುತ್ತಾರೆ. ಅವರಿಗಿರುವ ಮಾಹಿತಿಯ ಪ್ರಕಾರ, ಕರ್ನಾಟಕದ ಮುಖ್ಯಮಂತ್ರಿಯಾಗಲು ಮಲ್ಲಿಕಾರ್ಜುನ ಖರ್ಗೆ ಈಗ ತಯಾರಿಲ್ಲ. ಇದಕ್ಕಿರುವ ಮುಖ್ಯ ಕಾರಣ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ. 'ಇವತ್ತಲ್ಲ ನಾಳೆ ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆ ಆಗುತ್ತದೆ. ನೀವು ಇದಕ್ಕಿಂತ ಉನ್ನತ ಸ್ಥಾನಕ್ಕೆ ಹೋಗಬೇಕು ಎಂಬುದು ನಮ್ಮಿಚ್ಛೆ' ಅಂತ ಅವರು ಹೇಳಿರುವುದರಿಂದ ಖರ್ಗೆ ಕರ್ನಾಟಕಕ್ಕೆ ಬರುವ ಲೆಕ್ಕಾಚಾರದಿಂದ ಹಿಂದೆ ಸರಿದಿದ್ದಾರೆ. ಹೀಗಾಗಿ ಕರ್ನಾಟಕದಲ್ಲಿ ಪರಿಸ್ಥಿತಿ ತಿಳಿಯಾದ ನಂತರ ಅವರ ಪುತ್ರ ಪ್ರಿಯಾಂಕ್ ಖರ್ಗೆ ಡಿಸಿಎಂ ಆಗಲಿದ್ದಾರೆ ಎಂಬುದು ಸಿದ್ದು ಕ್ಯಾಂಪಿನ ಮಾತು.

ಸಿದ್ದು ಜತೆ ನಿಲ್ಲದಿದ್ದರೆ ಕೈ ಕಟ್

ಈ ಮಧ್ಯೆ, ಸಿದ್ದರಾಮಯ್ಯ ವಿರುದ್ಧದ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿ, ಹೈಕೋರ್ಟ್ ಅದಕ್ಕೆ ತಡೆಯಾಜ್ಞೆ ನೀಡದೆ ಹೋದರೆ ಕಾಂಗ್ರೆಸ್ ವರಿಷ್ಠರು ಪರ್ಯಾಯ ನಾಯಕನ ಆಯ್ಕೆಗೆ ಸಜ್ಜಾಗುವುದಿಲ್ಲವೇ? ಹಾಗಂತ ಕೇಳಿದರೆ ಸಿದ್ದು ಪಾಳಯದಿಂದ, 'ನೋ ಚಾನ್ಸ್' ಎಂಬ ಉತ್ತರ ಸಿಗುತ್ತದೆ. ಅದರ ಪ್ರಕಾರ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯ ಪ್ರಮುಖ ಕಾರಣ. ಹೀಗಾಗಿ ಅವರನ್ನಿಳಿಸಲು ವರಿಷ್ಠರು ಮುಂದಾದರೆ ಕಾಂಗ್ರೆಸ್ ಪಾಲಿಗೆ ಅದು ಬೂಮ್‌ರಾಂಗ್ ಆಗುತ್ತದೆ. ಹಿಂದುಳಿದ ವರ್ಗದ ದೇವರಾಜ ಅರಸರನ್ನು 1980ರಲ್ಲಿ ಪದಚ್ಯುತಗೊಳಿಸಿದ ಪರಿಣಾಮವಾಗಿ 1983ರಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತು. ಇದೇ ರೀತಿ ಕ್ಲಾಸಿಕ್ ಕಂಪ್ಯೂಟರ್ ಹಗರಣದ ಹೆಸರಿನಲ್ಲಿ, ಹಿಂದುಳಿದ ವರ್ಗದ ಎಸ್.ಬಂಗಾರಪ್ಪ ಅವರನ್ನು ಕೆಳಗಿಳಿಸಿದ ಪರಿಣಾಮವಾಗಿ 1994ರ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲನುಭವಿಸಿತು. ಈಗ ಸಿದ್ದರಾಮಯ್ಯ ಅವರ ವಿಷಯದಲ್ಲಿ ವರಿಷ್ಠರು ಹೀಗೇ ನಡೆದುಕೊಂಡರೆ ಕಾಂಗ್ರೆಸ್ ಪಕ್ಷ ಶೋಚನೀಯ ಸ್ಥಿತಿಗೆ ತಲುಪುತ್ತದೆ. ಯಾಕೆಂದರೆ ದೇವರಾಜ ಅರಸು ಮತ್ತು ಎಸ್.ಬಂಗಾರಪ್ಪ ಅವರನ್ನು ಪದಚ್ಯುತಗೊಳಿಸಿದ ಸಂದರ್ಭದಲ್ಲಿ ಶೋಷಿತ ವರ್ಗಗಳ ರಾಜಕೀಯ ಪ್ರಜ್ಞೆ ಪವರ್‌ಫುಲ್ ಆಗಿರಲಿಲ್ಲ. ಆದರೆ ಈಗ ಅದರ ರಾಜಕೀಯ ಪ್ರಜ್ಞೆ ಡೆಡ್ಲಿಯಾಗಿದೆ. ಇದೇ ರೀತಿ ಸಿದ್ದರಾಮಯ್ಯ ಕೂಡಾ ದೇವರಾಜ ಅರಸು ಮತ್ತು ಬಂಗಾರಪ್ಪ ಅವರಂತೆ ದುರಂತ ನಾಯಕರಾಗಲು ತಯಾರಿಲ್ಲ. ಹೀಗಾಗಿ ಈಗ ಸಿದ್ದರಾಮಯ್ಯ ಅವರನ್ನಿಳಿಸುವ ಪ್ರಯತ್ನ ಕಾಂಗ್ರೆಸ್‌ಗೆ ದುಬಾರಿಯಾಗಲಿದೆ. ಆದ್ದರಿಂದ ಅದು ಸದ್ಯದ ಪರಿಸ್ಥಿತಿಯನ್ನು ಸಿದ್ದರಾಮಯ್ಯ ಅವರ ಜತೆ ನಿಂತು ಎದುರಿಸಬೇಕೇ ವಿನಾ ಬೇರೆ ದಾರಿಯಿಲ್ಲ.

ಪಶ್ಚಿಮಘಟ್ಟ ಉಳಿದರೆ ಪಶ್ಚಿಮ ಕರಾವಳಿ ಉಳಿದೀತು



ಕಳಕಳಿ

ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ
vveditoped@gmail.com

ಪ್ರಕೃತಿ ನಮ್ಮ ಕಣ್ಣಿಗೆ ಕಾಣುವ ದೇವರು. ಪ್ರಕೃತಿ ನಮ್ಮ ಪೊರೆವ ತೊಟ್ಟಿಲು. ನಾವೇ ನಾಶಕಾರರು ಎಂಬುದು ಪ್ರಕೃತಿಗೆ ತಿಳಿದಿದೆ. ಇದು ಇನ್ನಷ್ಟು ಮುಂದುವರಿದರೆ ಪ್ರಕೃತಿಯು ಮಾನವನನ್ನು ನಿಯಂತ್ರಿಸುತ್ತದೆ ಎಂದು ಹೇಳುತ್ತಾ ಬಂದಿದ್ದೇವೆ. ಆದರೆ ಪ್ರಕೃತಿಯ ಮೇಲೆ ಮಾನವ ಜನಾಂಗದ ದಬ್ಬಾಳಿಕೆ ಇನ್ನೂ ಕಡಿಮೆಯಾಗಿಲ್ಲ, ಹೆಚ್ಚುತ್ತಲೇ ಇದೆ. ವಯನಾಡು ಮತ್ತು ಅಂಕೋಲಾದ ದುರಂತಗಳು ಇದಕ್ಕೆ ಸಾಕ್ಷಿ. ಮೇಲ್ನೋಟಕ್ಕೆ ಪ್ರಕೃತಿವಿಕೋಪ ಎಂಬ ವರದಿ ಪ್ರಕಟವಾದರೂ, ಮಾನವನ ಅತಿಯಾಸೆಯೇ ಈ ದುರಂತಗಳ ಹಿಂದಿನ ಕಾರಣವೆಂಬುದು ವರದಿಯಾಚೆಗಿನ ಕಟುಸತ್ಯ.

ಪ್ರಕೃತಿ ಎಂಬ ಪದ ಹೆಚ್ಚಿಗೆ ನೆನಪಾಗುವುದು ವಿಕೋಪದ ಸಂದರ್ಭದಲ್ಲಿ. ಅಂಥ ಸಂದರ್ಭಗಳನ್ನು ಹೊರತುಪಡಿಸಿದರೆ ಪ್ರಕೃತಿಯ ಬಗೆಗಿನ ವಿಶೇಷ ಗಮನ ಬಹುಮಟ್ಟಿಗೆ ಶೂನ್ಯವೇ ಆಗಿರುತ್ತದೆ. ಪ್ರಕೃತಿಯ ಮೇಲೆ ನಡೆಯುತ್ತಿರುವ ಅನ್ಯಾಯಗಳು, ಅದನ್ನು ತಡೆಯುವ ನಿಟ್ಟಿನಲ್ಲಿ ಪ್ರಕೃತಿಯ ಸಂರಕ್ಷಣೆ ಮತ್ತು ಅದನ್ನು ಭವಿಷ್ಯದ ತಲೆಮಾರುಗಳಿಗೆ ಸುಸ್ಥಿರವಾಗಿ ಉಳಿಸುವುದು ಮಾನವ ಜನಾಂಗದ ಅತ್ಯವಶ್ಯಕ ಜವಾಬ್ದಾರಿಯಾಗಿದೆ.

ಪ್ರಸಕ್ತ ಸನ್ನಿವೇಶದಲ್ಲಿ ವಿಶ್ವಾದ್ಯಂತ ಚರ್ಚೆಯಾಗುತ್ತಿರುವ ಅತ್ಯಂತ ಮಹತ್ವದ ವಿಚಾರ- ಪ್ರಕೃತಿ ಮತ್ತು ಪರಿಸರ. ಮನುಷ್ಯ ಎಷ್ಟೇ ದೊಡ್ಡ ಸ್ಥಾನಮಾನ ಅಲಂಕರಿಸಿದರೂ, ಆಗರ್ಭ ಶ್ರೀಮಂತನಾದರೂ ಅವನು ಪ್ರಕೃತಿಯ ಒಂದು ಅಂಶ ಮಾತ್ರ. ಪ್ರಕೃತಿದತ್ತ ಸ್ನೇಹಮಯ ಜೀವನದಿಂದ ನಾವು ಹೊರಬಂದು ಭೂಕುಸಿತ, ಬರಗಾಲ, ಅತಿವೃಷ್ಟಿ, ಭೂಕಂಪ, ಬಿಸಿಗಾಳಿ, ಚಂಡಮಾರುತ, ಕಲುಷಿತ ಗಾಳಿ, ಹವಾಮಾನ ವೈಪರೀತ್ಯ, ಜಾಗತಿಕ ತಾಪಮಾನ ಏರಿಕೆಯಂಥ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ನಮ್ಮ ಮುಂದಿನ ದಿನಗಳ ಭವಿಷ್ಯ ಮತ್ತು ಮುಂದಿನ ಜನಾಂಗದ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ನಾವು ಪ್ರಕೃತಿಯನ್ನು ಸಂರಕ್ಷಿಸಲೇಬೇಕು.

'ದೇವರ ಸ್ವಂತ ನಾಡು', 'ಭೂಮಿಯ ಮೇಲಿನ ಸ್ವರ್ಗ' ಎಂದೇ ಕರೆಯಲ್ಪಡುವ ಕೇರಳದ ವಯನಾಡಿನಲ್ಲಿ ಕಂಡು ಬಂದ ಭೂಕುಸಿತ ಮತ್ತು ಪ್ರವಾಹಗಳು ದೊಡ್ಡ ದುರಂತವೇ ಸರಿ. ಹೊರಜಗತ್ತಿಗೆ ಅದು ತಿಳಿಯುವ ಹೊತ್ತಿಗೆ ಘಟನೆ ಸಂಭವಿಸಿ ನಾಲ್ಕು ತಾಸುಗಳೇ ಕಳೆದುಹೋಗಿದ್ದವು. ಗೋಳಾಡುವವರೇ ಇಲ್ಲದಿದ್ದಾಗ ಊರಿಗೆ ಮೂಕ ಆಕ್ರಂದನವೇ ಗತಿಯಾಯಿತು. ನೀರಿನ ರಭಸಕ್ಕೆ ಜನರು, ಮನೆಗಳು, ವಾಹನಗಳು ಎಲ್ಲವೂ ಕೊಚ್ಚಿಹೋಗಿದ್ದವು. ಬದುಕು ಹೂತುಹೋಗಿತ್ತು. ಮುಂಜಾನೆ ಮೂಕಹಕ್ಕಿಯ ಹಾಡಿಗೂ ಅವಕಾಶವಿಲ್ಲದಂಥ ಅನಾಹುತ ಸಂಭವಿಸಿಬಿಟ್ಟಿತ್ತು. ಹಲವಾರು ದೃಶ್ಯಗಳು ಕಲ್ಲು ಹೃದಯಗಳನ್ನೂ ಕಣ್ಣೀರ ಕಡಲಲ್ಲಿ ತೇಲಿಸಿದ್ದವು. ವಯನಾಡಿನ ಮಂಡಕೈ ಮತ್ತು ಚೂರಲ್‌ಮಲದಲ್ಲಿ ಏಕಾಏಕಿ ಉಂಟಾದ ಭೂಕುಸಿತಕ್ಕೆ ಹತ್ತೇ ಹತ್ತು ನಿಮಿಷದಲ್ಲಿ ಎಲ್ಲವೂ ಬದಲಾಗಿ ಹೋಗಿದ್ದವು. ನೀರೇ ಇಲ್ಲದ ಊರಿನಲ್ಲಿ ಊರಿಗೂರೇ ನದಿಯಾಗಿ, ಊರುಗಳು, ಕೆರೆ, ಗುಡ್ಡಗಳಾಗಿ ಮಾರ್ಪಟ್ಟಿವೆ. ಇದ್ದ ಮನೆ, ಮಡದಿ, ಮಕ್ಕಳು, ತಂದೆ, ತಾಯಿ ಯಾರೂ ಸಿಗದೆ ಬದುಕುಳಿದವರ ಆಕ್ರಂದನ ಮುಗಿಲು ಮುಟ್ಟಿದೆ. ಇವೆಲ್ಲಾ ಮನುಷ್ಯರು ಪ್ರಕೃತಿಯ ಮೇಲೆ ಎಸಗಿದ ದೌರ್ಜನ್ಯಗಳ ಪರಿಣಾಮವಲ್ಲವೇ?

13 ವರ್ಷಗಳ ಹಿಂದೆ ಮಾಧವ ಗಾಡ್ಗೀಳ್ ವರದಿಯಲ್ಲಿ, ಈಗ ದುರ್ಘಟನೆ ಸಂಭವಿಸಿದ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾಗಿತ್ತು. ಇದಲ್ಲದೆ 18 ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಲಾಗಿತ್ತು. ಅಲ್ಲದೆ ಪಶ್ಚಿಮ ಘಟ್ಟದ 1.29 ಲಕ್ಷ ಚ.ಕಿ.ಮೀ. ವ್ಯಾಪ್ತಿಯ ಪೈಕಿ ಶೇ.75ರಷ್ಟು ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲು ಅದು ಶಿಫಾರಸು ಮಾಡಿತ್ತು. ತದನಂತರ ಕಸ್ತೂರಿರಂಗನ್ ವರದಿಯು ಸ್ವಲ್ಪ ಸೂಕ್ಷ್ಮ ಪ್ರದೇಶವನ್ನು ಕಡಿಮೆ ಮಾಡಿದರೂ, ಈ ಎರಡೂ ಪ್ರಮುಖ ವರದಿಗಳಿಗೆ ಕೇರಳ ಮತ್ತು ಕರ್ನಾಟಕ ಸರಕಾರಗಳೆರಡೂ ನಿರ್ಲಕ್ಷ್ಯ ತೋರಿ ಪ್ರತಿರೋಧಿಸಿದ್ದವು. ಪರಿಣಾಮವಾಗಿ ಈ ಪ್ರದೇಶಗಳಲ್ಲಿ ಕಲ್ಲು ಕ್ವಾರಿ, ಗಣಿಗಾರಿಕೆ, ಹೊಸ ಕೈಗಾರಿಕೆಗಳ ನಿರ್ಮಾಣ ಸೇರಿದಂತೆ ಇನ್ನಿತರ ನಿರ್ಮಾಣ ಕಾರ್ಯಗಳು ನಿರಾತಂಕವಾಗಿ ನಡೆಯುತ್ತಿದ್ದವು. ಇವುಗಳ ಅಡ್ಡ ಪರಿಣಾಮವೇ ಮಳೆಗಾಲದಲ್ಲಿ ಭೂಕುಸಿತದ ರೂಪದಲ್ಲಾಗುತ್ತಿದೆ. ಅತಿಯಾದ ಮಳೆ, ಭೂಕಂಪನಗಳು, ಮಾನವನಿರ್ಮಿತ ನಿರ್ಮಾಣ ಚಟುವಟಿಕೆಗಳು, ಅರಣ್ಯನಾಶ ಇವು ಭೂಕುಸಿತಕ್ಕೆ ಕಾರಣವಾಗಿ, ಮಣ್ಣು, ಬಂಡೆಗಳು, ಇತರ ಭಗ್ನಾವಶೇಷಗಳ ಹಠಾತ್ ಚಲನೆಯಾಗುತ್ತದೆ. ಕಳೆದ ಕೆಲವು ವರ್ಷಗಳಿಂದ ಪಶ್ಚಿಮಘಟ್ಟ ಶಿಥಿಲಗೊಂಡಂತಿದೆ. ಮಹಾರಾಷ್ಟ್ರ, ಕರ್ನಾಟಕ, ಕೇರಳ ಸೇರಿದಂತೆ ಪಶ್ಚಿಮಘಟ್ಟ ವ್ಯಾಪ್ತಿಯ ರಾಜ್ಯಗಳಲ್ಲಿ ಒಂದರ ಮೇಲೊಂದರಂತೆ ಭೂಕುಸಿತಗಳು ಸಂಭವಿಸುತ್ತಿವೆ. ಭೌಗೋಳಿಕ ವೈವಿಧ್ಯತೆ ಮತ್ತು ಜೀವವೈವಿಧ್ಯತೆಯ ಆಗರವಾಗಿರುವ ಪಶ್ಚಿಮಘಟ್ಟದಲ್ಲಿ ಭೂಕುಸಿತಗಳು ಸಂಭವಿಸಲು ಮಾನವನ ಸ್ವಯಂಕೃತ ಅಪರಾಧಗಳೇ ಕಾರಣವೇ ವಿನಾ, ಇದಕ್ಕೆ ಪ್ರಕೃತಿಯನ್ನು ದೂರಲಾಗದು. 2018ರ ಕೊಡಗಿನ ದುರಂತ, ಉತ್ತರ ಕನ್ನಡದ ಇತ್ತೀಚಿನ ದುರಂತ, ಕರಾವಳಿ ಮತ್ತು ಒಳನಾಡನ್ನು ಬೆಸೆಯುವ ಸಂಪಾಜೆ, ಶಿರಾಡಿ, ಚಾರ್ಮಾಡಿ ಘಾಟಿ ರಸ್ತೆಗಳಲ್ಲಿ ಪದೇಪದೆ ಸಂಭವಿಸುವ ಭೂಕುಸಿತ ಇವು ಕೇವಲ ಕೇರಳ, ಕರ್ನಾಟಕದ ಭವಿಷ್ಯದ ಪ್ರಶ್ನೆ ಮಾತ್ರವಾಗಿರದೆ ಇಡೀ ದೇಶದ ಮುಂದಿರುವ ಗುರುತರ ಸವಾಲು ಮತ್ತು ರಾಷ್ಟ್ರೀಯ ದುರಂತವಾಗಿ ಹೊರಹೊಮ್ಮಿವೆ. ಈ ಸಮಸ್ಯೆಗಳ ನಡುವೆ ಅವೈಜ್ಞಾನಿಕವಾಗಿ, ಗೊತ್ತುಗುರಿಯಿಲ್ಲದೆ ಯೋಜಿಸಿರುವ ಎತ್ತಿನಹೊಳೆ ಯೋಜನೆಯು ಭಯಾನಕ ತೊಂದರೆಗಳಿಗೆ ಆಹ್ವಾನ ನೀಡುವಂಥದ್ದಾಗಿದೆ ಎಂದರೆ ತಪ್ಪಾಗಲಾರದು. ಪ್ರಕೃತಿಯ ಜತೆಗೆ ಹೆಜ್ಜೆಹಾಕುವ ಮನೋಭಾವವನ್ನು ಸಮಾಜ ಮತ್ತು ಆಡಳಿತ ವ್ಯವಸ್ಥೆಗಳು ಮೈಗೂಡಿಸಿಕೊಳ್ಳಬೇಕು.

ಪಶ್ಚಿಮಘಟ್ಟ ಪ್ರದೇಶವು ಜೀವಸಿರಿಯ ವೈವಿಧ್ಯದ ತಾಣವೂ ಹೌದು, ನಿಸರ್ಗವಿಕೋಪಗಳ ಉಗ್ರನೆಲೆಯೂ ಹೌದು. ಅರಣ್ಯ ಮತ್ತು ಕಣಿವೆಗಳ ನಾಶದಿಂದಾಗಿ ಇದು ಭೂಕುಸಿತಕ್ಕೆ ಹೆಚ್ಚು ಪ್ರಶಸ್ತ ತಾಣವಾಗಿ ಮಾರ್ಪಟ್ಟಿದೆ. ಭಾರತದಲ್ಲಿ ಹಿಮಾಲಯದ ಬಳಿಕ ಪಶ್ಚಿಮ ಘಟ್ಟದಲ್ಲಿ ಹೆಚ್ಚು ಭೂಕುಸಿತಗಳು ಸಂಭವಿಸುತ್ತಿವೆ. ಇಲ್ಲಿ ನಡೆಯುತ್ತಿರುವ ಮಾನವನ ಅತಿಯಾದ ಹಸ್ತಕ್ಷೇಪವು ದುರಂತಕ್ಕೆ ದೊಡ್ಡ ಕಾರಣವಾಗಿದೆ. ಭೂಕುಸಿತದಿಂದ ಅಪಾರ ಪ್ರಮಾಣದ ಜೀವಹಾನಿ ಮತ್ತು ಸ್ವತ್ತುನಷ್ಟವಾಗುತ್ತದೆ, ರಸ್ತೆ ಸಂಪರ್ಕ, ಸಂವಹನ ವ್ಯವಸ್ಥೆ ಸ್ಥಗಿತಗೊಳ್ಳುತ್ತವೆ. ಜಲಮೂಲಗಳ ಮೇಲೂ ಅದರ ಪರಿಣಾಮವಾಗುತ್ತದೆ. ಪಶ್ಚಿಮ ಘಟ್ಟಗಳು ನಾಶವಾದರೆ ಕರಾವಳಿ ಪ್ರದೇಶ ಮಾತ್ರವಲ್ಲ, ಇಡೀ ದಕ್ಷಿಣ ಭಾರತವೇ ಸಂಕಷ್ಟಕ್ಕೆ ಸಿಲುಕಲಿದೆ. ಜಗತ್ತಿನ ಜೀವವೈವಿಧ್ಯ ವ್ಯವಸ್ಥೆಯ ಅಸಮತೋಲನಕ್ಕೆ ಅದು ಕಾರಣವಾಗಲಿದೆ. ಆದ್ದರಿಂದ ನಿಸರ್ಗದ ವಿರುದ್ಧ ಹೋಗಲು ನ್ಯಾಯಾಲಯವೂ ಒಪ್ಪಬಾರದು.

ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಅಲ್ಲಲ್ಲಿ ಭೂಕುಸಿತದ ಪ್ರಕರಣಗಳು ವರದಿಯಾಗುತ್ತಲೇ ಇವೆ. ಸಹ್ಯಾದ್ರಿಯ ಪಾಲುದಾರರಾದ ಕೇರಳ, ಕರ್ನಾಟಕ ಮತ್ತು ಗೋವಾ ರಾಜ್ಯಗಳು ಎಷ್ಟು ಅಭಿವೃದ್ಧಿ ಮಾಡಬೇಕು, ಎಂಥ ಜಲಾಶಯಗಳನ್ನು ಕಟ್ಟಬೇಕು ಈ ಯಾವುದನ್ನೂ ಹೊಂದಾಣಿಕೆಯಿಂದ ಮಾಡುತ್ತಿಲ್ಲ. ಆಡಳಿತಾತ್ಮಕವಾಗಿ ಪ್ರತ್ಯೇಕ ರಾಜ್ಯಗಳಾದರೂ ಒಂದೇ ಮಣ್ಣಿನ ಬಂಧವನ್ನು ಹಂಚಿಕೊಂಡಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಈ ಪ್ರವೃತ್ತಿಗೆ ದುಬಾರಿ ಬೆಲೆ ತೆರುವಂತಾಗಿದೆ ಎಂಬುದನ್ನು ವಯನಾಡು ದುರಂತ ತೋರಿಸಿಕೊಟ್ಟಿದೆ.

ಸದ್ಯಕ್ಕೆ ನಮ್ಮ ಭೂಮಿಯ ಮೇಲೆ ಸುಮಾರು 800 ಕೋಟಿ ಜನರಿದ್ದಾರೆ. 2050ರ ವೇಳೆಗೆ ಈ ಸಂಖ್ಯೆ 1,000 ಕೋಟಿಯ ಸುಮಾರಿಗೆ ತಲುಪಲಿದೆ. ಈ ಎಲ್ಲಾ ಜನರು ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವುದರಿಂದ ಬಹುಬೇಗ ಅವುಗಳ ಕೊರತೆ ಉಂಟಾಗಲಿದೆ. ಪ್ರತಿ ವರ್ಷ ಸುಮಾರು 1 ಕೋಟಿ ಹೆಕ್ಟೇರ್ ಅರಣ್ಯ ನಾಶವಾಗುತ್ತಿದೆ. ಮಾನವನ ಚಟುವಟಿಕೆಗಳೇ ಇದಕ್ಕೆ ಪ್ರಮುಖ ಕಾರಣ. ಜಗತ್ತಿನ 150 ಕೋಟಿಗೂ ಹೆಚ್ಚು ಜನರು ಆಹಾರ, ವಸತಿ, ಉದ್ಯೋಗ, ಔಷಧಿ, ಜೀವನೋಪಾಯಕ್ಕೆ ಅರಣ್ಯಗಳನ್ನೇ ಅವಲಂಬಿಸಿದ್ದಾರೆ. 1970ರಿಂದೀಚೆಗೆ ನಾವು ಭೂಮಿಯ ಮೇಲೆ ಹಾಕುತ್ತಿರುವ ಒತ್ತಡವು ಎರಡು ಪಟ್ಟು ಹೆಚ್ಚಾಗಿದೆ. ನಾವು ಅವಲಂಬಿಸಿರುವ ಸಂಪನ್ಮೂಲಗಳ ಪ್ರಮಾಣ ಶೇ.33ಕ್ಕೆ ಇಳಿದಿದೆ. ಹೀಗೆಯೇ ಮುಂದುವರಿದರೆ ನಮ್ಮ ನಾಶಕ್ಕೆ ನಾವೇ ನಾಂದಿ ಹಾಡಿದಂತಾಗುತ್ತದೆ.

'ಪ್ರಕೃತಿಯೇ ಮಹಾಮಾತೆ. ಪ್ರಕೃತಿಯು ಪ್ರತಿಯೊಬ್ಬರ ಅವಶ್ಯಕತೆಗಳನ್ನೂ ಪೂರೈಸಬಲ್ಲದು, ಆದರೆ ಒಬ್ಬ ವ್ಯಕ್ತಿಯ ದುರಾಸೆಯನ್ನಲ್ಲ' ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹೇಳಿದ್ದರು. ಪ್ರಕೃತಿಯು ಮನುಕುಲದ ಬದುಕಿಗೆ ಏನೆಲ್ಲಾ ಬೇಕೋ ಅದೆಲ್ಲವನ್ನೂ ಕೊಡುಗೈ ದಾನಿಯಂತೆ ನೀಡುತ್ತಲೇ ಬಂದಿದೆ. ನಾವು 'ಬದುಕು' ಎಂದು ತಿಳಿದುಕೊಂಡ ವೃತ್ತದ ಅರ್ಧಭಾಗವು ನಿಜಜೀವನವಾದರೆ, ಇನ್ನರ್ಧ ಭಾಗವು ಬದುಕಿನ ಆಚೆಗೆ ದೇಹಕ್ಕೆ ಅತೀತವಾದ ಪ್ರಕೃತಿ ಎಂದರೆ ತಪ್ಪಿಲ್ಲ. ಪ್ರಕೃತಿ ಮತ್ತು ಪರಿಸರ ರಕ್ಷಣೆ ನಮ್ಮ ಮತ್ತು ನಮ್ಮ ಮುಂದಿನ ಜನಾಂಗಕ್ಕೆ ರಕ್ಷಣೆ. ಇದನ್ನರಿತು ಬಾಳಬೇಕಾಗಿದೆ.

(ಲೇಖಕರು ವಿಜಯ ಬ್ಯಾಂಕ್‌ನ ನಿವೃತ್ತ ಮುಖ್ಯ ಪ್ರಬಂಧಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೀಗೊಂದು ಫ್ಲ್ಯಾಷ್‌ಬ್ಯಾಕ್

ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರ ತಂದೆ ಪಾದರಕ್ಷೆಗಳನ್ನು ಹೊಲಿದು ಬದುಕು ಸಾಗಿಸುತ್ತಿದ್ದರು. ಲಿಂಕನ್ನರನ್ನು ಅಪಮಾನಿಸುವ ಉದ್ದೇಶದಿಂದ ಸಂಸತ್ತಿನಲ್ಲಿ ವಿರೋಧಿ ಸದಸ್ಯರು 'ಲಿಂಕನ್ ಒಬ್ಬ ಚಮ್ಮಾರನ ಮಗ' ಎಂದು ಕರೆದರು. ಅದಕ್ಕೆ ಲಿಂಕನ್ನರು, 'ಹೌದು, ನಮ್ಮ ತಂದೆ ಚೆನ್ನಾಗಿ ಮತ್ತು ಅತ್ಯಂತ ಶ್ರದ್ಧೆಯಿಂದ ಪಾದರಕ್ಷೆಗಳನ್ನು ತಯಾರಿಸುತ್ತಿದ್ದರು. ಅದಕ್ಕಾಗಿ ನಾನು ಹೆಮ್ಮೆ ಪಡುತ್ತೇನೆ' ಎಂದು ಉತ್ತರಿಸಿ ವಿರೋಧಿಗಳ ಬಾಯಿ ಮುಚ್ಚಿಸಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಕರಿಯರ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದ ಮಹಾತ್ಮ ಗಾಂಧಿಯವರನ್ನು ಅಲ್ಲಿಯ ಜೈಲಿನಲ್ಲಿ ಇಡಲಾಗಿತ್ತು. ಆಗ ಅವರಿಗೆ ತರಬೇತಿ ಕೊಟ್ಟು ಚಪ್ಪಲಿ ತಯಾರಿಸುವ ಕೆಲಸ ಕೊಡಲಾಯಿತು. ಗಾಂಧೀಜಿ ಆ ಕೆಲಸವನ್ನು ಶ್ರದ್ಧೆಯಿಂದ ಮಾಡಿದರು ಹಾಗೂ ತಾವು ತಯಾರಿಸಿದ ಒಂದು ಜೋಡಿ ಚಪ್ಪಲಿಯನ್ನು ತಮ್ಮನ್ನು ಜೈಲಿಗೆ ಕಳಿಸಿದ್ದ ಬ್ರಿಟಿಷ್ ಅಧಿಕಾರಿ ಜನರಲ್ ಸ್ಮಟ್ಸ್ ಅವರಿಗೆ ಕೊಡುಗೆಯಾಗಿ ನೀಡಿದರು. ಆ ಚಪ್ಪಲಿಗಳನ್ನು ಈಗ ದೆಹಲಿಯ ಗಾಂಧಿ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಸಬರಮತಿ ಆಶ್ರಮದಲ್ಲಿ ಗಾಂಧೀಜಿ ಚಪ್ಪಲಿ ತಯಾರಿಸುವ ಗುಡಿ ಕೈಗಾರಿಕಾ ಘಟಕವನ್ನೂ ಆರಂಭಿಸಿದ್ದರು.

ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿಯವರು, ಉತ್ತರ ಪ್ರದೇಶದ ರಸ್ತೆಬದಿಯ ಅಂಗಡಿಯೊಂದರಲ್ಲಿ ಚಪ್ಪಲಿ ಹೊಲಿಯುತ್ತಿದ್ದ ರಾಮ್ ಚೇತ್ ಎಂಬುವವರ ಬಳಿ ಹೋಗಿ ಚಪ್ಪಲಿ ಹೊಲಿದ ಮತ್ತು ಆ ಜೋಡುಗಳನ್ನು 10 ಲಕ್ಷ ರು. ಕೊಟ್ಟು ಖರೀದಿಸಲು ಅನೇಕರು ಮುಂದೆ ಬಂದರೂ ರಾಮ್ ಚೇತ್ ಅವರು ಮಾರಲು ನಿರಾಕರಿಸಿದ ವರದಿ ಓದಿದಾಗ, ಮೇಲಿನ ಎರಡು ಘಟನೆಗಳು ನೆನಪಾದವು!

- **ಮಲ್ಲಿಕಾರ್ಜುನ ಹೆಗ್ಗಳಗಿ** ಮುಧೋಳ

ಅವರ ಗತಿಯೇನು?

ಕಳೆದ 2 ವಾರಗಳಿಂದ, ಆಗಸವೇ ತೂತಾಗಿದೆಯೇನೋ ಎಂಬಂತೆ ರಾಜ್ಯಾದ್ಯಂತ ಮಳೆ ಸುರಿಯುತ್ತಿದೆ. ಕರಾವಳಿ, ಮಲೆನಾಡು, ಮತ್ತಿತರ ಪ್ರದೇಶಗಳಲ್ಲಿ ಭೂಕುಸಿತ, ಗುಡ್ಡ ಕುಸಿತ ಉಂಟಾಗಿದೆ. ನೂರಾರು ಮನೆಗಳ ನಾಶ, ಜೀವಹಾನಿ, ಸಾವಿರಾರು ಎಕರೆಗಳಷ್ಟು ಬೆಳೆಹಾನಿಯಾಗಿದೆ. ಗಂಜಿಕೇಂದ್ರಗಳಲ್ಲಿ ನೂಕುನುಗ್ಗಲು ಉಂಟಾಗಿದೆ. ಇನ್ನೊಂದೆಡೆ ಮಹಾಮಾರಿ ಡೆಂಘೀ ತನ್ನ ಅಟ್ಟಹಾಸವನ್ನು ಮೆರೆಯುತ್ತಿದೆ, ರೋಗಿಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಆದರೆ, 'ರೋಮ್ ನಗರ ಹೊತ್ತಿ ಉರಿಯುತ್ತಿದ್ದಾಗ ದೊರೆ ನೀರೋ ಪಿಟೀಲು ಬಾರಿಸುತ್ತಿದ್ದ' ಎಂಬಂತೆ ನಮ್ಮ ರಾಜಕೀಯ ಪ್ರಭೃತಿಗಳು ತಮ್ಮದೇ ಹಳವಂಡಗಳಲ್ಲಿ ಮುಳುಗಿದ್ದಾರೆ. ಮುಡಾ, ವಾಲ್ಮೀಕಿ ನಿಗಮ, ಸಿಎಂ ರಾಜೀನಾಮೆ, ನಾಗೇಂದ್ರರ ಸಮರ್ಥನೆ, ಏಟಿಗೆ ಎದುರೇಟು, ಮಾತಿಗೊಂದು ಉತ್ತರ, ಸದನದ ಕಲಾಪ ಸಂಪೂರ್ಣ ಅಪವ್ಯಯ, ರಾಜ್ಯಪಾಲರ ಕುರಿತು ನಿಂದನೆ, ಪ್ರತಿನಿರ್ಣಯ, ಪ್ರಧಾನಿಗೇ ಹಕ್ಕುಚ್ಯುತಿ ನಿರ್ಣಯ ತರುವ ಆಲೋಚನೆ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಯಾವುದೇ ಆರೋಪ ಹೊಮ್ಮಿದರೂ, 'ನೀವು ಆಗ ಮಾಡಿಲ್ಲವಾ? ನನ್ನ ಬಗ್ಗೆ ಈಗ ಏಕೆ ಹೇಳ್ತೀರಾ?' ಎಂಬ ಮಕ್ಕಳಾಟದ ಪ್ರತಿಕ್ರಿಯೆಗಳೂ ಕೇಳಿಬರುತ್ತಿವೆ. ಒಟ್ಟಾರೆ ಹೇಳುವುದಾದರೆ ಸಮರದ ವಾತಾವರಣ. ಯಾರಿಗೂ ನಿರ್ಗತಿಕ ಪ್ರಜೆಗಳ ಬಗ್ಗೆ ಒಂದಿನಿತೂ ಲಕ್ಷ್ಯವಿಲ್ಲ. ನಮ್ಮ ವಿರೋಧ ಪಕ್ಷಗಳೂ ಅಷ್ಟೇ. ಮತ್ತದೇ ರಾಜೀನಾಮೆಗೆ ಆಗ್ರಹ, ಭಾಷಣದ ವೀರತ್ವ! ಇದೀಗ ಪಾದಯಾತ್ರೆಯ ಶೋ ಬೇರೆ ಆರಂಭವಾಗಿದೆ. ಆಡಳಿತ ಪಕ್ಷದವರೂ ಪ್ರತಿಯಾಗಿ ಐದಾರು ಕಡೆ ಸಮಾವೇಶ ನಡೆಸುತ್ತಿದ್ದಾರೆ. ಮನೆ-ಮಠ ಕಳೆದುಕೊಂಡು ಪರದಾಡುತ್ತಿರುವ ಬಡಜನರಿಗೆ ಈ ಭರಾಟೆಯಲ್ಲಿ ನೆರವು ಸಿಕ್ಕುವುದಾದರೂ ಹೇಗೆ? ಅವರ ಗತಿಯೇನು?

- **ಕೆ.ಶ್ರೀನಿವಾಸರಾವ್** ಹರಪನಹಳ್ಳಿ

ಎಲ್ಲಿಂದ ಬರಬೇಕು?

'ಒಲಿಂಪಿಕ್ಸ್- ನಮ್ಮದೇಕೆ ಕಂಚಿನ ತಗಡಿನ ತುತ್ತೂರಿ!' ಎಂಬ ಆಕರ್ಷಕ ಶೀರ್ಷಿಕೆಯ 'ಶಿಶಿರಕಾಲ' ಅಂಕಣ (ವಿಶ್ವವಾಣಿ ಆ.2) 'ಚಿನ್ನದ ಪದಕ' ಗಳಿಸಿದೆ. ಅಂಕಣಕಾರರಂತೆಯೇ ಆಲೋಚಿಸುವ ವ್ಯಕ್ತಿಗಳು ನಮ್ಮಲ್ಲಿ ಪ್ರಧಾನ ಮಂತ್ರಿಗಳಾಗಬೇಕು, ಮುಖ್ಯಮಂತ್ರಿಗಳಾಗಬೇಕು ಅಥವಾ ಕ್ರೀಡಾಮಂತ್ರಿಗಳಾಗಬೇಕು. ಇಲ್ಲವಾದರೆ, 'ಯಥಾ ರಾಜಾ, ತಥಾ ಪ್ರಜಾ' ಅಷ್ಟೇ. ಪ್ರತಿ ಚುನಾವಣೆಯಲ್ಲೂ ರಸ್ತೆ, ನೀರು, ವಿದ್ಯುತ್ ಸೌಕರ್ಯ, ಗರೀಬಿ ಹಟಾವೊ ಎಂಬ ಘೋಷವಾಕ್ಯಗಳೊಡನೆ ಕ್ರೀಡೆಯನ್ನು ಮೇಲಕ್ಕೆತ್ತುವ ಘೋಷಣೆ ಮಾಡುವವರು ನಮ್ಮ ಮಧ್ಯೆ ಕೆಲವರಾದರೂ ಬೇಕು. ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರ ಉತ್ಸಾಹವೊಂದರಿಂದಲೇ ಇವೆಲ್ಲ ಆಗದು. ಇದಕ್ಕಾಗಿ ಪ್ರತ್ಯೇಕ ಅನುದಾನಿತ ಕ್ರೀಡಾಸಂಸ್ಥೆ ಇದ್ದಲ್ಲಿ ಕ್ರೀಡೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಹಾಯಕವಾದೀತು.

ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಗೆ ಮಂತ್ರಿಗಳ ಆದಾಯ ಕೋಟಿ ಕೋಟಿಗಳಲ್ಲಿ ಹೆಚ್ಚುತ್ತಿದ್ದು, ಅಲ್ಲಿ ಚಿನ್ನ ಬಾಚುತ್ತಿರುವವರಿಗೆ ಒಲಿಂಪಿಕ್ ಚಿನ್ನದ ಯೋಚನೆ ಎಲ್ಲಿಂದ ಬರಬೇಕು? ಚಿನ್ನದ ಪದಕ ಗಳಿಸಿದ ದೇಶಗಳ ಪಟ್ಟಿಯಲ್ಲಿ 9 ದೇಶಗಳು ಮಾತ್ರ ಇದುವರೆಗೆ ಇದ್ದು, ಭಾರತವು ಒಂದು ಚಿನ್ನವನ್ನು ಗಳಿಸಿದರೂ ಹತ್ತನೆಯದಾಗಿ ವಿಜೃಂಭಿಸಬಹುದು. ಹಾಗಾಗಲಿ ಎಂದು ಆಶಿಸೋಣ.

- **ಜಯರಾಂ ಪಣಿಯಾಡಿ** ಬೆಂಗಳೂರು

ಇನ್ನಾದರೂ ಬುದ್ಧಿ ಬರಲಿ

ಕೇರಳದಲ್ಲಿ ಕಂಡುಬಂದ ಪ್ರಕೃತಿ ವಿಕೋಪಕ್ಕೆ, ಕರ್ನಾಟಕದ ಶಿರೂರು, ಶಿರಾಡಿ ಘಾಟ್, ಚಾರ್ಮಾಡಿ ಘಾಟ್‌ಗಳಲ್ಲಿ ಕಂಡುಬಂದ ಭೂಕುಸಿತಗಳಿಗೆ ಮನುಷ್ಯನೇ ಕಾರಣವೇ ಹೊರತು ಅವು ಪ್ರಕೃತಿದತ್ತವಾಗಿ ಸಂಭವಿಸಿದ್ದಲ್ಲ ಎಂಬುದನ್ನು ಅರಿಯಬೇಕು. ಪ್ರಕೃತಿಯಲ್ಲಿ ನೈಸರ್ಗಿಕವಾಗಿ ಬದಲಾವಣೆಯಾಗಬೇಕಾದರೆ ಲಕ್ಷಾಂತರ ವರ್ಷಗಳೇ ಬೇಕಾಗುತ್ತವೆ. ಪಶ್ಚಿಮ ಘಟ್ಟದ ಕುರಿತಾದ ಡಾ.ಗಾಡ್ಗೀಳ್ ವರದಿಯನ್ನು ವಿರೋಧಿಸಿದ್ದೇ ಇಷ್ಟೆಲ್ಲಾ ಅನಾಹುತ ಸಂಭವಿಸಲು ಕಾರಣವೆಂದು ಈಗ ಮಾತನಾಡಿಕೊಳ್ಳುವ ನಾವು, ಮಳೆಗಾಲ ಮುಗಿದ ಬಳಿಕ ಎಲ್ಲವನ್ನೂ ಮರೆತು ಮತ್ತೆ ಜೆಸಿಬಿ ಕ್ರಾಂತಿಯನ್ನು ಶುರುಮಾಡುತ್ತೇವೆ. ಕೇರಳದಲ್ಲಿ 2019ರಿಂದ ಇಂಥ ಘಟನೆ ನಡೆಯುತ್ತಲೇ ಇದೆ. ಆದರೂ ಅಲ್ಲಿಯ ಸರಕಾರ ಕಾಡು ಕಡಿದು ಟೀ ಎಸ್ಟೇಟ್ ಮಾಡುವುದನ್ನು, ನೆಡುತೋಪು ಮತ್ತು ಪ್ರವಾಸೋದ್ಯಮದ ಹೆಸರಿನಲ್ಲಿ ಕಾಡು ಸಪಾಟು ಮಾಡುವುದನ್ನು ಬಿಡಲಿಲ್ಲ. ಇದರ ಫಲವಾಗಿ ಇಂದು 360ಕ್ಕೂ ಹೆಚ್ಚು ಅಮಾಯಕರ ಬಲಿಯಾಗಿದೆ. ವಿಶ್ವದ ಜನರು ಇನ್ನಾದರೂ ಇದರಿಂದ ಪಾಠ ಕಲಿಯುತ್ತಾರೆ ಎಂಬ ನಂಬಿಕೆ ನಿಮಗಿದೆಯೇ?

- **ಸುರೇಂದ್ರ ಪೈ** ಭಟ್ಕಳ

ರಂಜನೀಯ ಬರಹ

ಶ್ರೀವತ್ಸ ಜೋಶಿಯವರ 'ತಿಳಿರು ತೋರಣ' ಅಂಕಣ (ವಿಶ್ವವಾಣಿ ಆ.4) ರಂಜನೀಯವಾಗಿ ಮೂಡಿಬಂದಿದೆ. ಪಿಯರ್ಸ್ ಸೋಪಿನ ಹುಟ್ಟು ಮತ್ತು ಬೆಳವಣಿಗೆಯ ಹಿಂದೆ ಇಷ್ಟೆಲ್ಲಾ ಕಥೆಯಿರುವುದು ಗೊತ್ತಿರಲಿಲ್ಲ. ಇಂಥ ಮಾಹಿತಿಪೂರ್ಣ ಬರಹಗಳು ಆಗಾಗ ಮೂಡಿಬರಲಿ.

- **ರಾಮಕೃಷ್ಣ ಶೆಟ್ಟಿಗಾರ್** ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಮನಗೂಳಿ ಭೀಮರಾಯ, ಪವಮಾನಪುರ**
ಪಾದಯಾತ್ರೆ, ನಂತರ ಪಕ್ಷದಲ್ಲಿ ಯಾವ ಸುಧಾರಣೆ ಕಂಡುಬರಬಹುದು, ಭಟ್ರೇ?
- ನಾಯಕರ ದೇಹತೂಕ, ಬಿಪಿ ಮತ್ತು ಶುಗರ್ ಲೆವೆಲ್!

● **ಶೀಲಾ, ಒಂಟಿಕೊಪ್ಪಲು**
ಭಟ್ರೇ, 'ಮನೆಯಲ್ಲಿದ್ದರೆ ಚಿನ್ನಾ ಚಿಂತೆಯು ಏತಕೆ...' ಎನ್ನುವ ಗಂಡನ ಮಾತನ್ನು ಕೇಳಿ ಹೆಂಗಸರು ಮನೆಯಲ್ಲೇ ಕುಳಿತಿರುತ್ತಿದ್ದರೆ ಏನಾಗಿರುತ್ತಿತ್ತು?
- ಒಲಿಂಪಿಕ್ಸ್‌ನಲ್ಲಿ ಬರುವ ಪದಕಗಳೂ ತಪ್ಪಿಹೋಗಿರುತ್ತಿದ್ದವು!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಹೆಂಗಸರಿಗೆ ಸೌಂದರ್ಯಪ್ರಜ್ಞೆ ಇಲ್ಲದಿದ್ದರೆ ಏನಾಗುತ್ತಿತ್ತು?
- ಎಲ್ಲರೂ ಗ್ಯಾಸ್ ಸಿಲಿಂಡರ್ ಥರ ಒಂದೇ ರೀತಿ ಕಾಣುತ್ತಿದ್ದರು!

● **ದಿನಕರ ವಿ.ದೇಸಾಯಿ, ರಾಯಚೂರು**
ಭಟ್ರೇ, ಮನುಷ್ಯನ ಸುಖನಿದ್ದೆಗೆ ತಲೆದಿಂಬೇ ಕಾರಣವಂತೆ?
- ಈ ಕಾರಣದಿಂದಲೇ ನಾನು ಮೊಯಿಲಿ ಮಹಾಕಾವ್ಯವನ್ನು ತಲೆದಿಂಬಾಗಿ ಬಳಸೋದು!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ತಲೆಯಲ್ಲಿ ತುಂಬಾ ಕೂದಲುಗಳಿದ್ದರೆ ಬುದ್ಧಿ ಬೆಳವಣಿಗೆಗೆ ಪೋಷಕಾಂಶ ಕಮ್ಮಿಯಾಗುತ್ತಾ?
- ಆರ್.ಜಿ.ಹಳ್ಳಿ ನಾಗರಾಜನನ್ನು ನೋಡಿಯೂ ಈ ಪ್ರಶ್ನೆಯಾ?!

● **ವೆಂಕಟರೆಡ್ಡಿ, ಬಳ್ಳಾರಿ**
ಭಟ್ರೇ, ರಾಜಕೀಯ ನಾಯಕರಿಗೆ ನೀನು ಕಳ್ಳ ಅಂದ್ರೆ, ಏನಂತಾರೆ?
- ನೀನೇನು ಸಾಚಾನಾ ಅಂತಾರೆ!

● **ಸತೀಶ ಎಲ್.ವಿ., ಮೈಸೂರು**
ಭಟ್ರೇ, ಸುಂದರ ಹುಡುಗಿ ಕಂಡರೆ ಯಾವ ಆಫರ್ ಕೊಡ್ತೀರಿ?
- ಶೆಡ್ಡಿಗೆ ಬಾ ಅಂತ ಕರೆಯೊಲ್ಲ!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಸೂರ್ಯನ ಸುತ್ತ ಸುತ್ತುವ ಭೂಮಿಗೂ, ಹಣದ ಹಿಂದೆ ಸುತ್ತುವ ಮನುಜನಿಗೂ ವ್ಯತ್ಯಾಸವೇನು?
- ಭೂಮಿ ಏನೇ ಆದರೂ ತನ್ನ ಪಥ ಬದಲಿಸುವುದಿಲ್ಲ!

● **ಭರತ್ ಹೆಗ್ಗದ್ದೆ, (ಇಮೇಲ್ ಮೂಲಕ)**
ಭಟ್ರೇ, ಪ್ರತಾಪ ಸಿಂಹ ಯಾವಾಗ ಅಪಾಯಕಾರಿ?
- ಕೆಲಸವಿಲ್ಲದಾಗ!

● **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಹೆಂಡತಿಯ ಕನಸಲ್ಲಿ ಗಂಡ ಬಂದರೆ ಏನರ್ಥ?
- ಅದೊಂದು ದುಃಸ್ವಪ್ನ!

ಪ್ರವಾಸ ಮಾಡದವರು ಪ್ರವಾಸೋದ್ಯಮ ಮಂತ್ರಿಯಾದರೆ...

ಪ್ರವಾಸದಲ್ಲಿರುವಾಗ ಪ್ರತಿಯೊಂದು ನಿಮಿಷವೂ ಮಹತ್ವದ್ದಾಗಿರುತ್ತದೆ. ಜತೆಗೆ ಪ್ರತಿಯೊಂದು ರುಪಾಯಿ ಕೂಡ. ಪ್ರವಾಸಿ ತಾಣದಲ್ಲಿ ನಾವು ಖರ್ಚು ಮಾಡುವ ಕಡೆಗಳಲ್ಲೆಲ್ಲ ಖರ್ಚು ಮಾಡಲೇಬೇಕು. ಅದಕ್ಕೆ ಹಿಂದೆ-ಮುಂದೆ ನೋಡಬಾರದು, ಜಿವಡುತನ ತೋರಿಸಬಾರದು. ಅದರ ಅರ್ಥ ಚೌಕಾಸಿ ಮಾಡಬಾರದು ಎಂದಲ್ಲ. ಆದರೆ ದುಬಾರಿ ಎಂದು ನೋಡಬೇಕಾದ ಸ್ಥಳವನ್ನು ನೋಡದೆ ಹಿಂತಿರುಗಿದರೆ, ಪ್ರವಾಸಕ್ಕೆ ಅರ್ಥವೇನು?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಕೆಲವು ವರ್ಷಗಳ ಹಿಂದಿನ ಮಾತು. ನಾನು ಕರ್ನಾಟಕದ ಪ್ರವಾಸೋದ್ಯಮ ಮಂತ್ರಿಯನ್ನು ಭೇಟಿಯಾಗಿದ್ದೆ. ಕೆಲವು ಬಾರಿ ಶ್ರಮಪಟ್ಟ ನಂತರ ಅವರ ಭೇಟಿಯಾಗುವ ಅವಕಾಶ ನನಗೆ ದೊರಕಿತ್ತು. ಆಗಷ್ಟೇ ನಾನು ವಿಯೆಟ್ನಾಮ್ ಪ್ರವಾಸ ಮುಗಿಸಿ ಹಿಂತಿರುಗಿದ್ದೆ. ಮಲೇಷ್ಯಾ, ಸಿಂಗಪುರ್, ವಿಯೆಟ್ನಾಮ್ ಇತ್ಯಾದಿ ಪೂರ್ವ ರಾಷ್ಟ್ರಗಳಾಗಲಿ, ಬಹುತೇಕ ಯುರೋಪ್ ರಾಷ್ಟ್ರಗಳಾಗಲಿ, ಅಮೆರಿಕ ಆಗಲಿ ಪ್ರವಾಸೋದ್ಯಮಕ್ಕೆ ಮಾಡಿಕೊಂಡ ತಯಾರಿ, ಪ್ರವಾಸೋದ್ಯಮಕ್ಕೆ ಅವರಲ್ಲಿರುವ ಪ್ರೀತಿ, ಆ ದೇಶಗಳು ಪ್ರವಾಸೋದ್ಯಮವನ್ನು ಮುನ್ನಡೆಸುತ್ತಿರುವ ರೀತಿ, ಇದನ್ನೆಲ್ಲ ನಮ್ಮ ಮಂತ್ರಿಗಳಿಗೆ ಒಮ್ಮೆ ತಿಳಿಸಿಕೊಡಬೇಕು ಎಂಬ ಉದ್ದೇಶವಿತ್ತು. ಮಂತ್ರಿಗಳು ಅವರ ಕಚೇರಿಯಲ್ಲಿ ಭೇಟಿಗೆ ಅವಕಾಶವನ್ನೂ ಮಾಡಿಕೊಟ್ಟಿದ್ದರು. ನಾನು ಒಳಗೆ ಹೋಗುತ್ತಿದ್ದಂತೆ ಅವರ ಕಾರ್ಯದರ್ಶಿ ಗೌರವದೊಂದಿಗೆ ನನ್ನನ್ನು ಸ್ವಾಗತಿಸಿ, ಅತಿಥಿ ಸತ್ಕಾರ ಮಾಡಿ ಕೂರಿಸಿದರು. ಲಘು ಉಪಾಹಾರದೊಂದಿಗೆ ಬಿಸಿಬಿಸಿ ಕಾಫಿಯ ಉಪಚಾರವೂ ಆಯಿತು. ನಾನು ಕಾಫಿ ಮುಗಿಸುವಷ್ಟರಲ್ಲಿ ಮಂತ್ರಿಗಳೂ ಬಂದರು. ನಮ್ಮ ಮಾತುಕತೆ ಆರಂಭವಾಯಿತು.

ಒಂದೆರಡು ನಿಮಿಷದ ಕುಶಲೋಪರಿಯ ನಂತರ, ನೇರವಾಗಿ ನಾನು ವಿಷಯವನ್ನು ಆರಂಭಿಸಿದೆ. ವಿದೇಶದಲ್ಲಿ ಇರುವಂತೆಯೇ ನಮ್ಮ ದೇಶದಲ್ಲಿ ಕೂಡ ಪ್ರವಾಸಿಗರಿಗಾಗಿ ಬಸ್ಸಿನ ವ್ಯವಸ್ಥೆಯನ್ನು ಒದಗಿಸಿ ಕೊಡಬೇಕು. ಅದರಲ್ಲೂ 'ಹೊಹೊ'- Hop on Hop off – ಬಸ್‌ನ ವ್ಯವಸ್ಥೆ ಕಲ್ಪಿಸಿಕೊಟ್ಟರೆ ಪ್ರವಾಸೋದ್ಯಮಕ್ಕೆ ಅನುಕೂಲವಾಗುತ್ತದೆ, ಬಹುತೇಕ ದೇಶಗಳಲ್ಲಿ ಈ ವ್ಯವಸ್ಥೆ ಇದೆ, ಅದರಿಂದ ಆ ದೇಶದ ಪ್ರವಾಸೋದ್ಯಮಕ್ಕೆ ಪುಷ್ಟಿ ಸಿಕ್ಕಿದೆ, ಆ ದೇಶಗಳು ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಹೇಗೆ ಸಫಲವಾಗಿವೆ ಎಂದು ನಾಲ್ಕರಿಂದ ಐದು ನಿಮಿಷದವರೆಗೆ ಮಾತನಾಡಿದ್ದೆ. ಇನ್ನೂ ಒಂದಿಷ್ಟು ವಿಷಯ ಹೇಳುವುದು ಬಾಕಿ ಇತ್ತು. ಅಷ್ಟರಲ್ಲಿ ಮಂತ್ರಿಗಳು, 'ಇದು ನಮ್ಮಲ್ಲಿ ಹೊಸತೇನಲ್ಲ, ನಮ್ಮಲ್ಲಿಯೂ ಈ ಪ್ರಯೋಗ ಈಗಾಗಲೇ ಆಗಿಹೋಗಿದೆ, ಅದರಿಂದಾಗಿ ಸಾಕಷ್ಟು ನಷ್ಟ ಅನುಭವಿಸಿದ್ದೇವೆ, ಅದು ವಿದೇಶಗಳಲ್ಲಿ ಯಶಸ್ವಿಯಾಗಬಹುದು ಆದರೆ ನಮ್ಮಂಥ ದೇಶದಲ್ಲಿ ಕಷ್ಟ' ಎಂದರು.

'ಆದರೆ, ಮುಂಬೈ ಮತ್ತು ದಿಲ್ಲಿಯಂಥ ನಗರಗಳಲ್ಲಿ ಇಂದಿಗೂ ಆ ವ್ಯವಸ್ಥೆ ಇದೆಯಲ್ಲ, ಹಾಗೆಯೇ ಕರ್ನಾಟಕದ ಬೆಂಗಳೂರು ಅಥವಾ ಮೈಸೂರಿನಲ್ಲಿಯೂ ಮಾಡಬಹುದಲ್ಲ, ಭಾರತದಲ್ಲಿ ಅದು ಸಾಧ್ಯವೇ ಇಲ್ಲ ಎನ್ನುವುದು ಅಷ್ಟು ಸಮಂಜಸವಾದ ಉತ್ತರವಾಗಲಾರದೇನೋ' ಎಂದೆ.

'ಇಲ್ಲ, ನಾವು ಈಗಾಗಲೇ ಪ್ರಯತ್ನಿಸಿ ಅದು ವಿಫಲವಾಗಿ, ಆ ಸೌಕರ್ಯವನ್ನು ನಿಲ್ಲಿಸಿದ್ದೇವೆ' ಎಂದರು. ಅಲ್ಲಿಂದ ಚರ್ಚೆ ಬೇರೆ ಕಡೆ ತಿರುಗಿತು. ಮಂತ್ರಿಗಳಿಗೆ ಈ ವಿಷಯದಲ್ಲಿ ಉತ್ಸಾಹ ಇಲ್ಲ ಎಂದು ನನಗೂ ಅರ್ಥವಾಗಿತ್ತು. ಮತ್ತೆ ಈ ವಿಷಯ ಮುಂದುವರಿಸಿದರೆ ಯಾವುದೇ ಪ್ರಯೋಜನವಿಲ್ಲ ಎಂದು ನನಗೂ ಮನವರಿಕೆಯಾದದ್ದರಿಂದ, ಮತ್ತೊಂದು ಐದು ನಿಮಿಷ ಬೇರೆ ವಿಷಯಗಳನ್ನು ಮಾತನಾಡಿ ಅಲ್ಲಿಂದ ಹೊರಬಂದಿದ್ದೆ. ಮೊನ್ನೆ ಮೊನ್ನೆಯಷ್ಟೇ ಗುಜರಾತ್ ಪ್ರವಾಸ ಮುಗಿಸಿ ಬಂದ ನಂತರ ಸರ್ದಾರ್ ಪಟೇಲ್ ಅವರ ಪ್ರತಿಮೆ ಮತ್ತು ಕೇವಡಿಯಾ ಎಂಬ ಗ್ರಾಮ 'ಏಕತಾ ನಗರ' ಆಗಿ ಹೇಗೆ ಪರಿವರ್ತನೆಗೊಂಡಿತು, ಪ್ರವಾಸೋದ್ಯಮ ಅಲ್ಲಿ ಹೇಗೆ ಬೆಳೆಯಿತು ಎನ್ನುವುದರ ಕುರಿತು ಅಂಕಣ ಬರೆದಿದ್ದೆ. ಅದಕ್ಕೆ ಪ್ರತಿಕ್ರಿಯಿಸಿದ ಕೆಲವು ಓದುಗರು ತಮ್ಮ ಅಭಿಪ್ರಾಯ ತಿಳಿಸಿದ್ದರು. ಅದರಲ್ಲಿ ಕೆಲವರು ಕರ್ನಾಟಕದಲ್ಲಿ, ಅದರಲ್ಲೂ ಬೆಂಗಳೂರು-ಮೈಸೂರಿನಂಥ ನಗರಗಳಲ್ಲಿ ಪ್ರವಾಸೋದ್ಯಮವನ್ನು ಹೇಗೆ ಬೆಳೆಸಬಹುದು ಎನ್ನುವ ಕುರಿತಾಗಿಯೂ ಕೇಳಿದ್ದರು. ಆಗ ಪ್ರವಾಸೋದ್ಯಮ ಮಂತ್ರಿಯೊಂದಿಗಿನ ನನ್ನ ಸಂಭಾಷಣೆ ಮತ್ತು ಚರ್ಚೆ ಪುನಃ ನೆನಪಾಯಿತು.

ಇರಲಿ ಬಿಡಿ, ಪ್ರವಾಸೋದ್ಯಮ ಎಂದರೆ ಅದು ಒಬ್ಬರೋ-ಇಬ್ಬರೋ ಸೇರಿ ಮಾಡುವಂಥ ಕೆಲಸವಲ್ಲ. ಆ ರೀತಿಯ ಒಂದು ವ್ಯವಸ್ಥೆಯೇ ರೂಪುಗೊಳ್ಳಬೇಕು. ಅದಕ್ಕೆ ಪ್ರವಾಸೋದ್ಯಮ ಇಲಾಖೆ, ಸರಕಾರ, ಪ್ರವಾಸಿಗರು, ಎಲ್ಲರ ಸಹಕಾರವೂ ಬೇಕು. ಅಂದರೆ ಮಾತ್ರ ಅದು ಉದ್ಯಮವಾಗಿ ಬೆಳೆಯುತ್ತದೆ. ಇಲ್ಲವಾದರೆ ಅದೊಂದು ಪ್ರವಾಸಿ ತಾಣವಾಗಿಯೋ, ಪ್ರವಾಸಿ ಸ್ಥಳವಾಗಿಯೋ, ಪ್ರವಾಸಿ ಕ್ಷೇತ್ರವಾಗಿಯೋ ಉಳಿಯುತ್ತದೆಯೇ ವಿನಾ ಉದ್ಯಮವಾಗಿ ಬೆಳೆಯುವುದಿಲ್ಲ.

'ಹೊಹೊ' (Hop on Hop off) ಬಸ್ ಕುರಿತು ಸಂಕ್ಷಿಪ್ತವಾಗಿ ಹೇಳುವುದಾದರೆ, ಇದೊಂದು ರೀತಿಯಲ್ಲಿ ಸಿಟಿಬಸ್ ಇದ್ದಹಾಗೆ. ಪ್ರತಿ ಹದಿನೈದು ನಿಮಿಷಕ್ಕೋ, ಮೂವತ್ತು ನಿಮಿಷಕ್ಕೋ ಅಥವಾ ಒಂದು ಗಂಟೆಗೋ ಒಂದರ ಹಿಂದೆ ಒಂದು ಬಸ್ ಬರುತ್ತಲೇ ಇರುತ್ತದೆ. ಬೆಳಗ್ಗಿನಿಂದ ರಾತ್ರಿವರೆಗೂ ಈ ಬಸ್ ಸೌಕರ್ಯ ನಿರಂತರವಾಗಿರುತ್ತದೆ. ಡಬಲ್ ಡೆಕ್ಕರ್ ಅಥವಾ ಎರಡು ಅಂತಸ್ತಿನ ಈ ಬಸ್‌ನಲ್ಲಿ, ಎರಡನೆಯ ಅಂತಸ್ತಿನಲ್ಲಿ ಚಾವಣಿ ಇರುವುದಿಲ್ಲ. ಆದರೆ ಆಸನದ ವ್ಯವಸ್ಥೆ ಇರುತ್ತದೆ. ಆದಷ್ಟು ಊರು ನೋಡಲು ಅನುಕೂಲವಾಗಲಿ ಎಂದು ಮಾಡಿರುವಂಥ ವ್ಯವಸ್ಥೆ ಇದು. ಮಳೆಗೆ, ಬಿಸಿಲಿಗೆ ರಕ್ಷಣೆ ಹೇಗೆ ಎಂದರೆ ಏನೂ ಇಲ್ಲ. ಅದು ಆಗಸಕ್ಕೆ, ಗಾಳಿಗೆ, ಅಂದಿನ ವಾತಾವರಣಕ್ಕೆ ಸಂಪೂರ್ಣವಾಗಿ ತೆರೆದುಕೊಂಡಿರುತ್ತದೆ. ಹಾಗಂತ ಪ್ರವಾಸಿಗರು ಮಳೆ-ಬಿಸಿಲಿಗೆ ಟೊಪ್ಪಿ, ಕೊಡೆ ಬಳಸಬಹುದು. ಮಳೆಗಾಲದಲ್ಲಿ ರೈನ್ ಕೋಟ್ ತೊಟ್ಟು ಹೋಗಬಹುದು. ಇತ್ತೀಚಿನ ದಿನಗಳಲ್ಲಿ ಬಹಳಷ್ಟು ದೇಶಗಳಲ್ಲಿ ಮಳೆಗಾಲದಲ್ಲಿ ಈ 'ಹೊಹೊ' ಬಸ್‌ನಲ್ಲೇ ರೈನ್ ಕೋಟ್, ಟೊಪ್ಪಿ ಕೊಡುತ್ತಾರೆ. ಅಲ್ಲಿಗೆ, ಅದರ ಕುರಿತಾಗಿಯೂ ಹೆಚ್ಚು ತಲೆ ಕೆಡಿಸಿಕೊಳ್ಳಬೇಕೆಂದಿಲ್ಲ.

ಈ ಬಸ್ ಮುಂಜಾನೆ ಒಂದು ತಾಣದಿಂದ ಹೊರಟರೆ, ಆ ನಗರದ ಎಲ್ಲ ಪ್ರಮುಖ ಪ್ರೇಕ್ಷಣೀಯ ಸ್ಥಳಗಳ ಹತ್ತಿರ ಹೋಗಿ ಒಂದು ಕ್ಷಣ ನಿಂತು, ಪ್ರವಾಸಿಗರನ್ನು ಇಳಿಸಿ ಅಥವಾ ಹತ್ತಿಸಿಕೊಂಡು ಮುಂದುವರಿಯುತ್ತದೆ. ಟೂರ್ ಬಸ್‌ನಂತೆ ಒಂದು ತಾಣದಲ್ಲಿ ಅರ್ಧ-ಮುಕ್ಕಾಲು ಗಂಟೆಯೋ, ಒಂದು-ಎರಡು ಗಂಟೆಯೋ ನಿಂತು ಜನರೆಲ್ಲ ಹಿಂತಿರುಗಿ ಬರುವವರೆಗೆ ಕಾಯುವುದಿಲ್ಲ. ಪ್ರವಾಸಿಗರನ್ನು ಹತ್ತಿಸಿಕೊಳ್ಳುವುದು, ಇಳಿಸುವುದು, ಇಷ್ಟೇ ಈ ಬಸ್‌ನ ಕೆಲಸ. ಬಸ್‌ನೊಂದಿಗೆ ಇರುವ ಗೈಡ್ ಕೂಡ ಎಲ್ಲಿಯೂ ಇಳಿಯುವುದಿಲ್ಲ, ಜನರೊಂದಿಗೆ ಹೋಗುವುದಿಲ್ಲ. ಒಂದು ಪ್ರವಾಸಿ ತಾಣದಲ್ಲಿ ಬಸ್ ನಿಂತಾಗ, ಒಂದೆರಡು ಸಾಲಿನಲ್ಲಿ ಆ ಪ್ರವಾಸಿ ತಾಣದ ವಿಶೇಷತೆ ಅಥವಾ ಆ ಕ್ಷೇತ್ರದ ಮಹತ್ವವನ್ನು ಒಂದೆರಡು ವಾಕ್ಯದಲ್ಲಿ ಹೇಳಿ ಮುಗಿಸುತ್ತಾನೆ. ಅದರಿಂದ ಪ್ರವಾಸಿಗರು ಆ ತಾಣವನ್ನು ನೋಡಬೇಕೋ ಬೇಡವೋ ಎಂದು ನಿರ್ಧರಿಸಲು ಅನುಕೂಲವಾಗುತ್ತದೆ.

'ಹೊಹೊ' ಬಸ್ ಹೊರಡುವ ಸ್ಥಳದಲ್ಲಿ ಪ್ರವಾಸಿಗರಿಗಾಗಿ ಮಾಹಿತಿ ಕೇಂದ್ರ ಇರುತ್ತದೆ. ಆ ಕೇಂದ್ರದಲ್ಲಿ ಬಸ್ ಹೊರಡುವ ಸಮಯ, ದರ, ಮಾರ್ಗಸೂಚಿ, ಭೇಟಿ ನೀಡುವ ತಾಣಗಳ ಪುಟ್ಟ ಮಾಹಿತಿ ಎಲ್ಲವೂ ಇರುತ್ತವೆ. ಪ್ರವಾಸಿಗರಿಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ ವಿವರಿಸಲು ಜನರೂ ಇರುತ್ತಾರೆ. ವಿಯೆಟ್ನಾಮ್‌ನ ಹನೋಯ್ ನಗರದಲ್ಲಂತೂ ಒಂದು ವರ್ತುಲದಲ್ಲಿ ನಾಲ್ಕು ಮಾಹಿತಿ ಕೇಂದ್ರಗಳಿದ್ದುದನ್ನು ನಾನು ಕಂಡಿದ್ದೇನೆ. ನಾನು ಯಾವುದೇ ನಗರಕ್ಕೆ ಹೋದರೂ, ಮೊದಲು ಈ 'ಹೊಹೊ' ಬಸ್ ಏರಿ ಒಂದು ಸುತ್ತು ತಿರುಗುತ್ತೇನೆ. ಯಾವ ತಾಣದಲ್ಲಿಯೂ ಇಳಿಯುವುದಿಲ್ಲ. ಹಾಗೆ ತಿರುಗುವಾಗ ನನಗೆ ನೋಡಬೇಕಾದ ತಾಣ ಮತ್ತು ಅಲ್ಲಿ ನಾನು ಕಳೆಯಬಹುದಾದ ಸಮಯವನ್ನು ಗುರುತಿಸಿಕೊಳ್ಳುತ್ತೇನೆ. ಎರಡನೇ ಸುತ್ತಿನಲ್ಲಿ ಪುನಃ ಅದೇ ಬಸ್ಸಿನಲ್ಲಿ ಹೋಗಿ, ನಾನು ನೋಡಬೇಕಾದ ತಾಣದಲ್ಲಿ ಇಳಿದು, ಮನಸೋ ಇಚ್ಛೆ ಸಮಯವನ್ನು ಕಳೆದು, ಹಿಂದೆ ಬರುವ 'ಹೊಹೊ' ಬಸ್ ಏರಿ ಮುಂದಿನ ತಾಣಕ್ಕೆ ಹೋಗುತ್ತೇನೆ. ಮತ್ತೆ ಅಲ್ಲಿ ಇಳಿದು, ನೋಡಿ, ಇನ್ನೊಂದು ಬಸ್ ಏರುತ್ತೇನೆ. ಹೀಗೆ ಒಂದು ಇಡೀ ದಿನದಲ್ಲಿ, ಎಷ್ಟು ತಾಣಗಳನ್ನು ನೋಡಲು ಸಾಧ್ಯವೋ ಅದನ್ನೆಲ್ಲ 'ಹೊಹೊ' ಬಸ್‌ನಲ್ಲಿಯೇ ಪ್ರಯಾಣಿಸಿ ನೋಡುತ್ತೇನೆ. ಬಹುತೇಕ ಪ್ರವಾಸಿಗರು ಮಾಡುವುದು ಇದನ್ನೇ. ಇದರಿಂದ ಆಗುವ ಅತಿದೊಡ್ಡ

ಪ್ರಯೋಜನವನ್ನು ಹೇಳಿಬಿಡುತ್ತೇನೆ. ನಾವು ಒಂದು ನಗರ ವೀಕ್ಷಣೆಗೆ ಅಥವಾ ಪ್ರವಾಸಿತಾಣಕ್ಕೆ ಹೋದಾಗ ಭೌಗೋಳಿಕವಾಗಿ ಅಲ್ಲಿಯ ನಕ್ಷೆ ನಮಗೆ ತಿಳಿದಿರುವುದಿಲ್ಲ. ಒಂದು ತಾಣವನ್ನು ನೋಡಿ ಅದರ ಪಕ್ಕದಲ್ಲಿದ್ದದ್ದನ್ನೇ ಬಿಟ್ಟು ನಾವು ಮತ್ತೆಲ್ಲೋ ಹೋಗಿ, ಪುನಃ ಮೊದಲು ನೋಡಿದ ಜಾಗದ ಪಕ್ಕದ ತಾಣಕ್ಕೆ ಬರುವುದಿದೆ. ಇದರಿಂದ ಸಾಕಷ್ಟು ಸಮಯ ವ್ಯಯವಾಗುತ್ತದೆ. ಪ್ರವಾಸದಲ್ಲಿರುವಾಗ ಪ್ರತಿಯೊಂದು ನಿಮಿಷವೂ ಮಹತ್ವದ್ದಾಗಿರುತ್ತದೆ. ಜತೆಗೆ ಪ್ರತಿಯೊಂದು ರುಪಾಯಿ ಕೂಡ. ಪ್ರವಾಸಿ ತಾಣದಲ್ಲಿ ನಾವು ಖರ್ಚು ಮಾಡುವ ಕಡೆಗಳಲ್ಲೆಲ್ಲ ಖರ್ಚು ಮಾಡಲೇಬೇಕು. ಅದಕ್ಕೆ ಹಿಂದೆ-ಮುಂದೆ ನೋಡಬಾರದು, ಜಿವಡುತನ ತೋರಿಸಬಾರದು. ಅದರ ಅರ್ಥ ಚೌಕಾಸಿ ಮಾಡಬಾರದು ಎಂದಲ್ಲ. ಆದರೆ ದುಬಾರಿ ಎಂದು ನೋಡಬೇಕಾದ ಸ್ಥಳವನ್ನು ನೋಡದೆ ಹಿಂತಿರುಗಿ ಬಂದರೆ, ಪ್ರವಾಸಕ್ಕೆ ಯಾವ ಪುರುಷಾರ್ಥ ಲಭಿಸಿದಂತಾಯಿತು? ಮೊದಲು ಒಂದು ಸುತ್ತು 'ಹೊಹೊ' ಬಸ್‌ನಲ್ಲಿ ಪ್ರಯಾಣಿಸುವುದರಿಂದ, ಆ ನಗರದ ಒಂದು ನಕ್ಷೆ ನಮ್ಮ ಮನಃಪಟಲದಲ್ಲಿ ಮೂಡುತ್ತದೆ. ಆ ನಗರದ ಮೋಟಾ-ಮೋಟಿ ಚಿತ್ರಣ ನಮಗೆ ಸಿಗುತ್ತದೆ. ಅದು ಮುಂದಿನ ನಮ್ಮ ಪ್ರವಾಸಕ್ಕೆ ಅನುಕೂಲವಾಗುತ್ತದೆ.

ಇದೆಲ್ಲ ಪ್ರವಾಸಿಗರ ಲೆಕ್ಕವಾಯಿತು. ಆದರೆ ಮಂತ್ರಿಗಳು ಹೇಳಿದಂತೆಯೇ, ಇಂಥ ಬಸ್ ವ್ಯವಸ್ಥೆಯಿಂದ ಸರಕಾರಕ್ಕೆ ನಷ್ಟವಾಯಿತು ಎನ್ನುವ ಮಾತನ್ನು ನಂಬಲು ಸಾಧ್ಯವಿಲ್ಲ. ಇದರಲ್ಲಿ ಕಳೆದುಕೊಳ್ಳುವಂಥದ್ದು ಏನೂ ಇಲ್ಲ. ಅಷ್ಟಕ್ಕೂ ಇದು ಪ್ರವಾಸಿಗರಿಗೆ ಪುಕ್ಕಟೆಯಾಗಿ ಒದಗಿಸಿಕೊಡುವ ವ್ಯವಸ್ಥೆಯೂ ಅಲ್ಲ. ಇದಕ್ಕಾಗಿ ಒಂದು ಮೊತ್ತವನ್ನು ನಿಗದಿಪಡಿಸಲಾಗಿರುತ್ತದೆ. ಆದ್ದರಿಂದ ವಾಹನಕ್ಕೆ ಬೇಕಾದ ಇಂಧನ, ವಾಹನ ಚಾಲಕರಿಗೆ ಹಾಗೂ ಮಾಹಿತಿ ನೀಡುವ ವ್ಯಕ್ತಿಗೆ ಸಂಬಳವನ್ನು ಹೇಗೋ ಹೊಂದಿಸಬಹುದು ಎಂದೆನಿಸುತ್ತದೆ. ಸರಿ, ಬಸ್‌ನಲ್ಲಿ ನಷ್ಟವಾಗುತ್ತದೆ ಎಂಬ ವಾದವನ್ನೂ ಸಂಪೂರ್ಣವಾಗಿ ಒಪ್ಪಿಕೊಳ್ಳೋಣ. ಆದರೆ ಪ್ರವಾಸೋದ್ಯಮ ಎನ್ನುವುದು ಒಂದು ವಿಭಾಗಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಬಸ್ ವ್ಯವಸ್ಥೆಯಲ್ಲಿ ನಷ್ಟವಾದರೂ ಬೇರೆ ಬೇರೆ ಪ್ರವಾಸಿ ತಾಣಗಳ ಪ್ರವೇಶ ದರ ಇರುತ್ತದೆ. ಅದು ಈ ನಷ್ಟವನ್ನು ಭರಿಸುತ್ತದೆ. ಮೂಲಭೂತ ಸೌಕರ್ಯವನ್ನು ಒದಗಿಸಿ ಕೊಟ್ಟಷ್ಟೂ ಭೇಟಿ ನೀಡುವವರ ಸಂಖ್ಯೆಯೂ ಹೆಚ್ಚುತ್ತದೆ. ಒಂದು ಪ್ರವಾಸಿ ತಾಣ ಅಭಿವೃದ್ಧಿ ಹೊಂದಿತು ಎಂದರೆ ಅದರ ಸುತ್ತ-ಮುತ್ತ ಅನೇಕ ಉದ್ಯಮಗಳು ತಲೆ ಎತ್ತುತ್ತವೆ. ಉದಾಹರಣೆಗೆ ಹೋಟೆಲ್ ಉದ್ಯಮವನ್ನೇ ತೆಗೆದುಕೊಳ್ಳಿ, ಒಂದು ಊರಿನಲ್ಲಿ ಒಂದು ಹೋಟೆಲ್ ತಲೆಯೆತ್ತಿ ನಿಂತರೆ, ಅದರೊಂದಿಗೆ ಟಿಶ್ಯೂ ಪೇಪರ್‌ನಿಂದ ಹಿಡಿದು ಟಾಯ್ಲೆಟ್ ಕ್ಲೀನರ್‌ವರೆಗೆ, ಲಾಂಡ್ರಿಯಿಂದ ಹಿಡಿದು ಟ್ಯಾಕ್ಸಿಯವರೆಗೆ, ಕಿರಾಣಿಯಿಂದ ಹಿಡಿದು ಗಿರಣಿಯವರೆಗೆ, ಹಾಲಿನಿಂದ ಹಿಡಿದು ಹೂವಿನವರೆಗಿನ ವ್ಯಾಪಾರ ಅಭಿವೃದ್ಧಿಯಾಗುತ್ತದೆ. ಅಲ್ಲಿಗೆ ಕೇವಲ ಒಂದು ಪ್ರವಾಸಿ ತಾಣವಷ್ಟೇ ಅಲ್ಲ, ಆ ಊರು ಅಥವಾ ಪಟ್ಟಣ ಅಥವಾ ನಗರ ಅಭಿವೃದ್ಧಿಯಾಗುತ್ತದೆ. ದುಬೈ ಇದಕ್ಕೆ ಉತ್ತಮವಾದ ಉದಾಹರಣೆ.

ದುಬೈನಲ್ಲಿ ಏನಿದೆ, ಏನಿಲ್ಲ ಎಂದು ಕೇಳಿದರೆ, ಮರಳುಗಾಡು ಮತ್ತು ತೈಲ ಬಿಟ್ಟು ಏನೂ ಇಲ್ಲ, ಆದರೆ ಎಲ್ಲವೂ ಇದೆ ಎನ್ನಬಹುದು. ತನ್ನಲ್ಲಿರುವ ಮರುಭೂಮಿಯ ಮರಳಿನ ರಾಶಿಯನ್ನೇ ಪ್ರವಾಸಿ ತಾಣವನ್ನಾಗಿ ಪರಿವರ್ತಿಸಿದ ಕೀರ್ತಿ ಏನಾದರೂ ಇದ್ದರೆ ಅದು ದುಬೈಗೆ ಸೇರಬೇಕು. ದುಬೈನಲ್ಲಿ ತೈಲ ದೊರೆತರೂ ದುಬೈ ಹೆಸರಾದದ್ದು ಮಾತ್ರ ಪ್ರವಾಸೋದ್ಯಮಕ್ಕೆ. ಅದಕ್ಕೆ ಕಾರಣ ಅಲ್ಲಿಯ ರಾಜನ ಅಥವಾ ಸರಕಾರದ ದೂರದರ್ಶಿತ್ವ. ದುಬೈಗೆ ಹೋದ ಪ್ರವಾಸಿಗನಿಗೆ ಏನನ್ನೂ ಹುಡುಕುವ ಕೆಲಸ ಇಲ್ಲ. ಎಲ್ಲ ಪ್ರವಾಸಿ ತಾಣದ ಮಾಹಿತಿಗಳು ಸುಲಭವಾಗಿ ದೊರೆಯುತ್ತವೆ. ಅಷ್ಟಕ್ಕೂ ದುಬೈನಲ್ಲಿರುವ ಬಹುತೇಕ ಪ್ರವಾಸಿ ತಾಣಗಳು ಕೃತಕವಾದದ್ದು. ಭಾರತದಂತೆ ನೈಸರ್ಗಿಕವಾದದ್ದಲ್ಲ. ಭಾರತದಲ್ಲಿ ಬೆಟ್ಟಗುಡ್ಡಗಳಿವೆ, ಸಮುದ್ರ ತಟಗಳಿವೆ, ಮರುಭೂಮಿ ಇದೆ, ಹಸಿರು, ನದಿ, ಪ್ರಪಂಚದಲ್ಲಿ ಇರಬೇಕಾದ ಬಹುತೇಕ ಎಲ್ಲವೂ ಇವೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯನ್ನೇ ತೆಗೆದುಕೊಳ್ಳಿ, ಮಲೆನಾಡು, ಕರಾವಳಿ, ಬಯಲುಸೀಮೆ ಈ ಮೂರನ್ನೂ ಹೊಂದಿದ ಉತ್ತರ ಕನ್ನಡದಲ್ಲಿ ಬೆಟ್ಟ-ಗುಡ್ಡಗಳು, ನದಿ-ಜಲಪಾತ-ಹಿನ್ನೀರು, ಕಾಡು-ವನ್ಯಜೀವಿಗಳು, ಇತಿಹಾಸ-ದೇವಸ್ಥಾನ, ಕೃಷಿ ಎಲ್ಲವೂ ಇವೆ. ಭಾರತದಲ್ಲಿ ಇರುವಂಥದ್ದು, ಉತ್ತರ ಕನ್ನಡದಲ್ಲಿ ಇಲ್ಲವಾದದ್ದು ಎಂದರೆ ಮರಳುಗಾಡು ಮಾತ್ರ. ಆದರೂ ಪ್ರವಾಸೋದ್ಯಮದಲ್ಲಿ ಉತ್ತರ ಕನ್ನಡದ ಹೆಸರನ್ನು ಹೇಳುವವರು ಬಹಳ ಕಡಿಮೆ. ಅದಕ್ಕೆ ಪ್ರಮುಖವಾದ ಎರಡು ಕಾರಣಗಳು, ಪ್ರಚಾರ ಮತ್ತು ಮೂಲಭೂತ ಸೌಕರ್ಯದ ಕೊರತೆ. ಉತ್ತರ ಕನ್ನಡ ಅಥವಾ ಕರ್ನಾಟಕದಲ್ಲಿ ಇರುವಂಥ ಪ್ರೇಕ್ಷಣೀಯ ಸ್ಥಳಗಳು ಅಮೆರಿಕದಲ್ಲೋ ಅಥವಾ ಇನ್ಯಾವುದೇ ದೇಶದಲ್ಲೋ ಇದ್ದಿದ್ದರೆ, ಅಲ್ಲಿಯ ಸರಕಾರಗಳು ಕೋಟಿ ಕೋಟಿ ದೋಚಿಬಿಡುತ್ತಿದ್ದವು.

ನಾವು ವಿದೇಶದಲ್ಲಿ ಎಷ್ಟೋ ಪ್ರವಾಸಿ ತಾಣಗಳಿಗೆ ಹೋದಾಗ, 'ಇದೇ ಜಲಪಾತ, ಇದೇ ಬೆಟ್ಟಗುಡ್ಡ, ಇದೇ ನದಿ ನಮ್ಮೂರಿನಲ್ಲಿ ಇನ್ನೂ ಚೆನ್ನಾಗಿದೆ' ಎಂದು ಎಷ್ಟೋ ಬಾರಿ ಅಂದುಕೊಂಡಿರುತ್ತೇವೆ. ಆದರೆ ಅದರ ಹಿಂದಿನ ಕಾರಣ ನಮಗೆ ತಿಳಿದಿರುವುದಿಲ್ಲ.

ನಿಮಗೆ ತಿಳಿದಿರಲಿ, ದುಬೈನಲ್ಲಿ ಪ್ರವಾಸೋದ್ಯಮ ಆರಂಭವಾಗಿ ನಾಲ್ಕು ದಶಕ ಆಗಿದ್ದಷ್ಟೇ. ಅದಕ್ಕೂ ಮೊದಲು ದುಬೈಗೆ ಪ್ರವಾಸಕ್ಕೆಂದು ಹೋಗುತ್ತಿದ್ದವರು ತೀರಾ ಕಡಿಮೆ. ಕಳೆದ ವರ್ಷವನ್ನೇ ನೋಡಿ, ಭಾರತಕ್ಕೆ ಬಂದ ವಿದೇಶಿ ಪ್ರವಾಸಿಗರ ಸಂಖ್ಯೆ ಸುಮಾರು ಒಂದು ಕೋಟಿ. ಅದೇ ದುಬೈನಂಥ ಸಣ್ಣ ನಗರಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ ಒಂದು ಕೋಟಿ ಎಪ್ಪತ್ತೈದು ಲಕ್ಷ. ಅದರಲ್ಲಿ ಭಾರತೀಯರ ಸಂಖ್ಯೆಯೇ ಸುಮಾರು ಇಪ್ಪತ್ತು ಲಕ್ಷ! ನಾಲ್ಕು ಸಾವಿರ ಚದರ ಕಿಲೋಮೀಟರ್ ವಿಸ್ತೀರ್ಣವುಳ್ಳ ದುಬೈ ಪ್ರವಾಸೋದ್ಯಮದಿಂದ ತನ್ನ ದೇಶದ ಆರ್ಥಿಕತೆಗೆ ಶೇ. 9ರಷ್ಟನ್ನು ಕೊಡುಗೆಯಾಗಿ ನೀಡುತ್ತಿದೆ. ಅದೇ 33 ಲಕ್ಷ ಚದರ ಕಿಲೋಮೀಟರ್ ವಿಸ್ತೀರ್ಣ ಹೊಂದಿದ್ದು, ನೈಸರ್ಗಿಕವಾಗಿ ಎಲ್ಲವನ್ನೂ ಪಡೆದ ಭಾರತದಲ್ಲಿ ಪ್ರವಾಸೋದ್ಯಮದಿಂದ ದೇಶದ ಆರ್ಥಿಕತೆಗೆ ಬರುವ ಕೊಡುಗೆ ಐದು ಪ್ರತಿಶತ ಮಾತ್ರ. ಅದೂ ವೈದ್ಯಕೀಯ, ಧಾರ್ಮಿಕ, ಶೈಕ್ಷಣಿಕ ಪ್ರವಾಸೋದ್ಯಮಗಳೂ ಸೇರಿ.

ಒಂದಂತೂ ಸತ್ಯ, ಇತ್ತೀಚಿನ ದಿನಗಳಲ್ಲಿ ಪ್ರವಾಸೋದ್ಯಮ ಹೆಚ್ಚು ಲಾಭ ತಂದುಕೊಡುವ, ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿಕೊಡುವ ಕ್ಷೇತ್ರ. ಆದರೆ ಅದು ರಾತ್ರೋ-ರಾತ್ರಿ ಬೆಳೆಯುವ ಉದ್ಯಮವಲ್ಲ. ಅದಕ್ಕೆ ಪರಿಪಕ್ವವಾದ ಯೋಚನೆ, ಯೋಜನೆ, ನಿಷ್ಠೆ, ಬದ್ಧತೆ ಬೇಕು. ಪ್ರವಾಸೋದ್ಯಮದ ಮಂತ್ರಿಗಳಿಗೆ, ಇಲಾಖೆಯ ಅಧಿಕಾರಿಗಳಿಗೆ ಆಸಕ್ತಿ ಇರಬೇಕು. ಪ್ರವಾಸೋದ್ಯಮದ ಮಂತ್ರಿಯಾದವರು ರಾಜ್ಯದಲ್ಲಿ, ಅಥವಾ ರಾಜಕೀಯ ಕಾರಣಗಳಿಗೆ ದೆಹಲಿಗೆ ಪ್ರವಾಸ ಮಾಡಿದರೆ ಸಾಕಾಗುವುದಿಲ್ಲ, ವಿದೇಶಗಳಿಗೂ ಪ್ರವಾಸ ಮಾಡಬೇಕು. ಕಳೆದ 4-5 ದಶಕಗಳ ಕರ್ನಾಟಕದ ಇತಿಹಾಸದಲ್ಲಿ ಪ್ರವಾಸೋದ್ಯಮದ ಮಂತ್ರಿಗಳಾದವರು ಎಷ್ಟು ಪ್ರವಾಸ ಮಾಡಿದ್ದಾರೆ, ಎಷ್ಟು ದೇಶ ಸುತ್ತಿದ್ದಾರೆ, ಪ್ರವಾಸೋದ್ಯಮದ ಅಭಿವೃದ್ಧಿಗೆ ಎಷ್ಟು ಯೋಜನೆಗಳನ್ನು ರೂಪಿಸಿದ್ದಾರೆ ಎಂದು ನೋಡಿದರೆ ಅರ್ಥವಾಗುತ್ತದೆ. ಅಷ್ಟಕ್ಕೂ ಬಯಲುಸೀಮೆಯವರು ಅರಣ್ಯ, ಮಲೆನಾಡಿನವರು ಮೀನುಗಾರಿಕೆ, ಶಾಲೆಗೇ ಹೋಗದವರು ಶಿಕ್ಷಣ, ಪ್ರವಾಸವನ್ನೇ ಮಾಡದವರು ಪ್ರವಾಸೋದ್ಯಮ ಮಂತ್ರಿಯಾದರೆ, ದೇವರೇ ಕಾಪಾಡಬೇಕು.

ಬಾಡಿಗೆ ಪಿಸ್ತೂಲ್ ಹಿಡಿದಾಕೆಯ ಕೊರಳಿಗೆ ಜೋಡಿ ಪದಕ

ರಾಜಬೀದಿ
ವಿನಾಯಕ ಮಠಪತಿ
vveditoped@gmail.com

ಆಕೆಗೆ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಭಾರತದ ಬಾವುಟವನ್ನು ಬಾನೆತ್ತರಕ್ಕೆ ಹಾರಿಸಬೇಕೆನ್ನುವ ಅದಮ್ಯ ಉತ್ಸಾಹ. ಕೈಗೆ ಪಿಸ್ತೂಲ್ ಸಿಕ್ಕರೆ ಗುರಿಯಿಟ್ಟು ಹೊಡೆಯಬೇಕೆನ್ನುವ ಚಡಪಡಿಕೆ. ಕೊನೆಗೂ ಅವಳ ಕೈಗೆ ಸಿಕ್ಕಿದ್ದು ಬಾಡಿಗೆ ಪಿಸ್ತೂಲು. ಆದರೆ ಪಿಸ್ತೂಲ್ ಬಳಕೆಗೆ ಪರವಾನಗಿ ಪಡೆಯಲು ಮತ್ತದೇ ಸಂಕಷ್ಟ. ಕಚೇರಿಗೆ ಅಲೆದಲೆದು ಆಕೆಯ ತಂದೆಯ ಚಪ್ಪಲಿ ಸವೆದಿತ್ತಾದರೂ, ಒಪ್ಪಿಗೆ ಪತ್ರ ಸಿಕ್ಕಿರಲಿಲ್ಲ. ಇಷ್ಟೆಲ್ಲ ಹೋರಾಟದ ನಂತರ ಆಕೆ ತನ್ನ ಮೊದಲ ಅಂತಾರಾಷ್ಟ್ರೀಯ ಸ್ಪರ್ಧೆಯನ್ನು ಬಾಡಿಗೆ ಪಿಸ್ತೂಲಿನಿಂದಲೇ ಪ್ರಾರಂಭಿಸಿದ್ದಳು.

ಇಷ್ಟೆಲ್ಲ ಪೀಠಿಕೆ ಹಾಕಲು ಕಾರಣ, ಕಳೆದ ಒಂದು ವಾರದಿಂದ ಭಾರತೀಯರ ಪಾಲಿಗೆ ಯಶಸ್ಸಿನ ಶಿಖರದಂತೆ ಪ್ರಜ್ವಲಿಸುತ್ತಿರುವ ಮನು ಭಾಕರ್ ಎಂಬ ಹರಿಯಾಣ ಮೂಲದ ಕ್ರೀಡಾಪಟುವಿನ ಸಾಧನೆಯ ಮೈಲಿಗಲ್ಲು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕ ಗೆದ್ದು ಶೂಟಿಂಗ್ ವಿಭಾಗದಲ್ಲಿ ಐತಿಹಾಸಿಕ ಸಾಧನೆ ಮಾಡಿರುವ ಮನು ಭಾಕರ್ ಅವರ ಕ್ರೀಡಾಬದುಕಿನ ಆರಂಭಿಕ ಹಾದಿ ಅಷ್ಟೇನೂ ಸರಾಗವಾಗಿರಲಿಲ್ಲ. ಆದರೆ ಎಲ್ಲಾ ಸವಾಲುಗಳನ್ನು ಮೆಟ್ಟಿನಿಂತು ಸಾಧನೆಯ ಶಿಖರವೇರಿದಾಕೆ ಮನು ಭಾಕರ್.

ಮನು ಭಾಕರ್ ತಮ್ಮ ಮೊದಲ ಅಂತಾರಾಷ್ಟ್ರೀಯ ಪಂದ್ಯ ಆಡಿದ್ದು ಬಾಡಿಗೆ ಪಿಸ್ತೂಲ್‌ನಿಂದ. ಆದರೆ ಅದೇ ಪಿಸ್ತೂಲಿನ ಪರವಾನಗಿ ಪಡೆಯಲು ಅವರ ತಂದೆ ಕಚೇರಿ ಅಲೆಯುತ್ತಿದ್ದುದರ ಕುರಿತು ತಾಯಿ ಸುಮೇಧಾ ಭಾಕರ್ ಸಂದರ್ಶನ ಒಂದರಲ್ಲಿ ಹೇಳಿಕೊಂಡಿದ್ದಾರೆ. ಇತ್ತ ಏಷ್ಯನ್ ಗೇಮ್ಸ್ ಸಮೀಪಿಸುತ್ತಿತ್ತು, ಅತ್ತ ಪಿಸ್ತೂಲ್ ಪರವಾನಗಿ ನೀಡಲು ಅಧಿಕಾರಿಗಳು ಸತಾಯಿಸುತ್ತಿದ್ದರು. ಅವರ ಈ ನಡೆಗೆ ಬೇಸತ್ತ ಮನು ತಂದೆ ರಾಮ್‌ಕಿಶನ್ ಭಾಕರ್ ಹರಿಯಾಣ ಸಿಎಂ ಕಚೇರಿ, ಶಿಕ್ಷಣ ಸಚಿವರು ಮತ್ತು ಕ್ರೀಡಾ ಸಚಿವರಿಗೆ ಟ್ವೀಟ್ ಮೂಲಕ ತಮ್ಮ ಸಮಸ್ಯೆಯನ್ನು ತೋಡಿಕೊಂಡಿದ್ದರು. ಇದಾದ 2 ತಿಂಗಳ ನಂತರ ಮನು ಭಾಕರ್‌ಗೆ ಪರವಾನಗಿ ಪತ್ರ ಲಭಿಸಿತು.

ಶೂಟಿಂಗ್ ವಿಭಾಗದಲ್ಲಿ ಮನು ಅವರದ್ದು ಯಶಸ್ವಿ ಪಯಣವೇ. ಆದರೆ 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಪಿಸ್ತೂಲ್ ಕೈಕೊಟ್ಟ ಕಾರಣ ಮನು ಭಾಕರ್ ಹೀನಾಯವಾಗಿ ಸೋತು ಸ್ಪರ್ಧೆಯಿಂದ ಹೊರನಡೆಯಬೇಕಾಯಿತು. ಅದಕ್ಕೂ ಮುಂಚಿನ ಕಾಮನ್‌ವೆಲ್ತ್ ಕ್ರೀಡಾಕೂಟ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ಗೆದ್ದಿದ್ದರೂ, ಟೋಕಿಯೋ ಒಲಿಂಪಿಕ್ಸ್‌ನಲ್ಲಿನ ಸೋಲಿನಿಂದಾಗಿ ಮನು ಕುಸಿದಿದ್ದರು. ಶೂಟಿಂಗ್ ಬಿಟ್ಟು ಬೇರಾವುದಾದರೂ ಆಯ್ಕೆಯೆಡೆಗೆ ಕಣ್ಣುಹಾಯಿಸಬೇಕು ಎಂದುಕೊಂಡ ಅವರಿಗೆ ಮರು ಉತ್ಸಾಹ ನೀಡಿದ್ದು ಭಗವದ್ಗೀತೆ. 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬ ಗೀತೆಯ ಒಂದು ಸಾಲು ಮನುವನ್ನು ಗುರಿಯೆಡೆಗೆ ಸಾಗುವಂತೆ ಮಾಡಿತು. ಒಂದು ಸೋಲು ಮನುವಿನ ಗುರಿಯನ್ನೇ ಬದಲಿಸುವಷ್ಟು ಸಂಕಟ ಕೊಟ್ಟಿತ್ತು, ಆದರೆ ಭಗವದ್ಗೀತೆಯ ಓದಿನಿಂದ ಉತ್ಸಾಹಿತರಾದ ಮನು ಮೊದಲಿನಂತೆ ಪುಟಿದೆದ್ದರು. ಸೋಲನ್ನು ಮರೆತು ಗೆಲುವಿಗಾಗಿ ನಿರಂತರ ಅಭ್ಯಾಸ ಮಾಡಿದ ಫಲವಾಗಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ದಾಖಲೆ ನಿರ್ಮಿಸಿದರು. ಜೋಡಿಪದಕ ಗೆಲ್ಲುವ ಮೂಲಕ ಸಾಧನೆಯ ಶಿಖರವೇರಿದ ಮಹಿಳೆಯಾಗಿ ಹೊರಹೊಮ್ಮಿದರು. 'ಬದುಕಿನಲ್ಲಿ ಎಲ್ಲವೂ ಮುಗಿಯಿತು' ಎಂದು ಹತಾಶರಾಗುವವರಿಗೆ ಮನು ಭಾಕರ್ ಸ್ಫೂರ್ತಿಯ ಚಿಲುಮೆ. 'ನನಗೆ ಹೇಗೆ ಶೂಟ್ ಮಾಡಬೇಕೆಂಬುದು ತಿಳಿದಿತ್ತು. ಯಾವುದೇ ಪರಿಸ್ಥಿತಿಯನ್ನು ನಿಭಾಯಿಸಬಹುದು ಎಂದು ನಾನು ಭಾವಿಸಿದೆ. ನೀವು ಉತ್ಸಾಹವನ್ನು ಹೊಂದಿದ್ದರೆ ಯಾವುದೇ ಕಷ್ಟವನ್ನು ಜಯಿಸಬಹುದು' ಎಂದು ಅತ್ಯಂತ ಧೈರ್ಯದಿಂದ ಹೇಳುವ ಮನು ಭಾಕರ್, ಗೆಲುವಿಗೆ ಏಕಾಗ್ರತೆ ಮುಖ್ಯ, ನಿರಂತರ ಪರಿಶ್ರಮ ನಮ್ಮನ್ನು ಉಚ್ಛ್ರಾಯ ಸ್ಥಿತಿಗೆ ಕರೆದೊಯ್ಯುತ್ತದೆ ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದ್ದಾರೆ.

• • •



ಭಾರತವು ಸ್ವತಂತ್ರಗೊಂಡ ನಂತರದಲ್ಲಿ, ಒಂದೇ ಒಲಿಂಪಿಕ್ ಕ್ರೀಡಾಕೂಟದಲ್ಲಿ ಎರಡು ಪದಕ ಗೆದ್ದು ಇತಿಹಾಸ ನಿರ್ಮಿಸಿದ ಮನು ಭಾಕರ್‌ರನ್ನು ಸದ್ಯ ಇಡೀ ದೇಶವೇ ಕೊಂಡಾಡುತ್ತಿದೆ. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಒಂದೇ ಅವಧಿಯಲ್ಲಿ ಎರಡು ಒಲಿಂಪಿಕ್ ಪದಕ ಗೆದ್ದ ಕ್ರೀಡಾಪಟು ನಾರ್ಮನ್ ಪ್ರಿಚರ್ಡ್ ಅವರನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ನಾರ್ಮನ್ ಪ್ರಿಚರ್ಡ್ ಮೂಲತಃ ಭಾರತೀಯ. 1875ರ ಜೂನ್ 23ರಂದು ಕಲ್ಕತ್ತಾದಲ್ಲಿ ಜನಿಸಿದ ಇವರು ಕ್ಸೇವಿಯರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪೂರೈಸಿ, ಹರ್ಡಲ್ಸ್ ಮತ್ತು ಸ್ಪ್ರಿಂಟ್ (ಓಟ) ಆಟಗಳಲ್ಲಿ ಖ್ಯಾತರೆನಿಸಿಕೊಂಡರು. 1900ರ ವರ್ಷದಲ್ಲಿ ಪ್ಯಾರಿಸ್‌ನಲ್ಲಿ ನಡೆದ ಬೇಸಿಗೆ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಭಾರತದ ಪರವಾಗಿ ಭಾಗವಹಿಸಿದ್ದ ಇವರು, 200 ಮೀಟರ್ ಸ್ಪ್ರಿಂಟ್ ಹಾಗೂ 200 ಮೀಟರ್ ಹರ್ಡಲ್ಸ್‌ನಲ್ಲಿ ಎರಡು ಬೆಳ್ಳಿ ಪದಕ ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದ್ದರು. ನಾರ್ಮನ್ ಪ್ರಿಚರ್ಡ್ ಇಷ್ಟು ದೊಡ್ಡ ಸಾಧನೆ ಮಾಡಿದರೂ ಅದು ಒಂದು ಸಣ್ಣ ವಿವಾದಕ್ಕೆ ಕಾರಣವಾಯಿತು. ಇದಕ್ಕೆ ಪ್ರಮುಖ ಕಾರಣ, 1900ರ ಕಾಲಘಟ್ಟದಲ್ಲಿ ಭಾರತವು ಬ್ರಿಟಿಷ್ ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟಿತ್ತು. ಹೀಗಾಗಿ ನಾರ್ಮನ್ ಪ್ರಿಚರ್ಡ್ ಗೆದ್ದ ಒಲಿಂಪಿಕ್ ಪದಕಗಳು ಇಂಗ್ಲೆಂಡ್‌ಗೆ ಸಲ್ಲಬೇಕು ಎಂದು ಬ್ರಿಟಿಷ್ ಒಲಿಂಪಿಕ್ ಇತಿಹಾಸಕಾರ ಇಯಾನ್ ಬುಕಾನನ್ ತಕರಾರು ತೆಗೆದ. ಆದರೆ ಒಲಿಂಪಿಕ್ ಸಮಿತಿ ಮಾತ್ರ ನಾರ್ಮನ್ ಪ್ರಿಚರ್ಡ್ ಗಳಿಸಿದ್ದ ಪದಕ ಭಾರತಕ್ಕೆ ಸಲ್ಲುತ್ತದೆ ಎಂದು ಸ್ಪಷ್ಟಪಡಿಸಿತು.

ಫುಟ್ಬಾಲ್ ಕ್ರೀಡೆಯಲ್ಲೂ ಆಸಕ್ತಿ ಹೊಂದಿದ್ದ ನಾರ್ಮನ್ ಪ್ರಿಚರ್ಡ್ 1900-1902ರ ಅವಧಿಯಲ್ಲಿ ಭಾರತೀಯ ಫುಟ್ಬಾಲ್ ಅಸೋಸಿಯೇಷನ್‌ನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ನಂತರ ಅಮೆರಿಕಕ್ಕೆ ತೆರಳಿ ಚಿತ್ರರಂಗದಲ್ಲಿ ಗುರುತಿಸಿಕೊಂಡ ಅವರು ನಾರ್ಮನ್ ಟ್ರೆವರ್ ಎಂಬ ಹೆಸರಿನಲ್ಲಿ ನಟನೆಯಲ್ಲಿಯೂ ತಮ್ಮ ವೃತ್ತಿಬದುಕು ಪ್ರಾರಂಭಿಸಿದರು. ಮಿದುಳು ಸಂಬಂಧಿತ ಕಾಯಿಲೆಯಿಂದ ಬಳಲುತ್ತಿದ್ದ ನಾರ್ಮನ್ ಪ್ರಿಚರ್ಡ್ 1929ರ ಅಕ್ಟೋಬರ್ 30ರಂದು ಲಾಸ್ ಏಂಜಲೀಸ್‌ನಲ್ಲಿ ನಿಧನರಾದರು.

• • •

ಭಾರತ ಬದಲಾಗಿದೆ. ಸ್ವಾತಂತ್ರ್ಯಾನಂತರದಲ್ಲಿ ಇಡೀ ಜಗತ್ತು ಸದ್ಯ ಭಾರತವನ್ನು ನೋಡುವ ದೃಷ್ಟಿಕೋನ ಮೊದಲಿನಂತಿಲ್ಲ. ಈ ಹಿಂದೆ ಭಾರತೀಯ ಕ್ರೀಡಾಪಟುಗಳು ಮತ್ತು ಸೈನಿಕರು ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ, ಕ್ರಮವಾಗಿ ಕ್ರೀಡಾಂಗಣ ಮತ್ತು ಯುದ್ಧಭೂಮಿಯಲ್ಲಿ ಹೋರಾಡಿ ಇತಿಹಾಸ ನಿರ್ಮಿಸಿದ್ದು ಗೊತ್ತಿರುವಂಥದ್ದೇ. ಆದರೆ ವರ್ತಮಾನದಲ್ಲಿ, ಒಲಿಂಪಿಕ್ಸ್ ಕ್ರೀಡಾಕೂಟದಂಥ ಮಹತ್ವದ ವೇದಿಕೆಯಲ್ಲಿ ಭಾರತದ ಪ್ರದರ್ಶನ ಹೇಳಿಕೊಳ್ಳುವಷ್ಟು ಸಮಾಧಾನಕರವಾಗಿಲ್ಲ. ಕ್ರಿಕೆಟ್ ಆಟದಲ್ಲಿ ನಮಗೆ ದಕ್ಕುತ್ತಿರುವ ಪರಿಣತಿ, ಯಶಸ್ಸು ಮತ್ತು ಖ್ಯಾತಿ, ಬೇರೆ ಕ್ರೀಡಾವಿಭಾಗದಲ್ಲಿ ಏಕೆ ಸಾಧ್ಯವಾಗುತ್ತಿಲ್ಲ ಎಂಬುದು ನಿಜಕ್ಕೂ ಯಕ್ಷಪ್ರಶ್ನೆಯಾಗಿದೆ.

ಇದೇ ವರ್ಷದಲ್ಲಿ ಭಾರತ ಕ್ರಿಕೆಟ್ ತಂಡವು ಚುಟುಕು ಕ್ರಿಕೆಟ್ ವಿಭಾಗದಲ್ಲಿ ವಿಶ್ವಕಪ್ ಗೆದ್ದು ಬೀಗಿತು. ದೇಶದ 140 ಕೋಟಿ ಜನರು ಕುಣಿದು ಕುಪ್ಪಳಿಸಿ ಈ ಗೆಲುವನ್ನು ಸಂಭ್ರಮಿಸಿದರು. ಆದರೆ ಒಲಿಂಪಿಕ್ಸ್‌ನಲ್ಲಿ ನಮ್ಮ ಸಾಧನೆ ಹೇಳಿಕೊಳ್ಳುವಂತಿಲ್ಲ. ಕ್ರಿಕೆಟ್‌ನಂಥ ಹೊಡಿ-ಬಡಿ ಆಟವನ್ನು ಭಾರತೀಯರು ಹೆಚ್ಚು ಸಂಭ್ರಮಿಸುತ್ತಾರೆ. ಆದರೆ ಟೆನಿಸ್, ಬಾಸ್ಕೆಟ್ ಬಾಲ್, ಆರ್ಚರಿ, ಶೂಟಿಂಗ್, ಓಟದ ಸ್ಪರ್ಧೆ ಸೇರಿದಂತೆ ಮಿಕ್ಕ ಕ್ರೀಡೆಗಳಲ್ಲಿ ಭಾರತೀಯರದ್ದು ನಿರಾಸಕ್ತಿ ಎನ್ನಬೇಕಾ? ಅಥವಾ ಈ ಆಟಗಳ ಕುರಿತಾದ ಸಾಮಾನ್ಯ ಜ್ಞಾನ, ಮೂಲಸೌಕರ್ಯ, ಪ್ರೋತ್ಸಾಹ ಇಲ್ಲದಿರುವುದೇ ಒಲಿಂಪಿಕ್ಸ್‌ನಲ್ಲಿನ ನಮ್ಮ ಕಳಪೆ ಸಾಧನೆಗೆ ಕಾರಣವಾ? ಬಲ್ಲವರು ಈ ಪ್ರಶ್ನೆಗಳಿಗೆ ಉತ್ತರಿಸಬೇಕಿದೆ.

ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿ ಹೇಳುವುದಾದರೆ, ಈಗಿನ ಶಾಲಾ ಮಕ್ಕಳಲ್ಲಿ ಬಹುತೇಕರು ಕ್ರಿಕೆಟ್ ಬಗ್ಗೆ ತಿಳಿದುಕೊಂಡಷ್ಟು ಬೇರೆ ಕ್ರೀಡೆಗಳ ಬಗ್ಗೆ ಅರಿತಿಲ್ಲ. ಬಾಲ್ಯದಿಂದಲೇ ವಿವಿಧ ಕ್ರೀಡೆಗಳ ಕುರಿತು ಆಸಕ್ತಿ ಮೂಡಿದರೆ ಭವಿಷ್ಯದಲ್ಲಿ ಆ ಕುರಿತು ಒಲವು ವರ್ಧನೆಯಾಗಲು ಸಾಧ್ಯ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಕ್ರೀಡೆಗಳ ಬಗೆಗಿನ ಸಂಕ್ಷಿಪ್ತ ತಿಳಿವಳಿಕೆ ನೀಡಿದ ನಂತರ, ಅವರ ಆಸಕ್ತಿಯ ಆಟದ ಆಯ್ಕೆಗೆ ಅವಕಾಶ ಕಲ್ಪಿಸುತ್ತಾರೆ ಮತ್ತು ತರಬೇತಿಗೆ ಅನುವು ಮಾಡಿಕೊಡುತ್ತಾರೆ. ಆದರೆ ನಮ್ಮಲ್ಲಿ ಹಾಗಿಲ್ಲ. ಬಾಲ್ಯದಲ್ಲಿ ಕ್ರೀಡೆಗಳ ಕುರಿತು ಸಾಮಾನ್ಯ ಜ್ಞಾನವನ್ನು ನೀಡುವುದಿಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡೆಗೆ ಸಂಬಂಧಿಸಿದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಭಾರತವು ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕಗಳನ್ನು ಗೆಲ್ಲಲಿ ಎಂದು ಆಶಿಸುವುದು ಎಷ್ಟು ಸರಿ?

(ಲೇಖಕರು ಪತ್ರಕರ್ತರು)

ಗುಣಗಾನ

ಜಯಪ್ರಕಾಶ ಪುತ್ತೂರು

ಮರೆಯಲಾಗದ ಮಾಸ್ತರು

ನಿಗದಿತ ಕರ್ತವ್ಯದಲ್ಲಿ ತೊಡಗಿಸಿಕೊಂಡ ವ್ಯಕ್ತಿಯು ತನ್ನ ಸೇವೆಯ ಮೂಲಕ ಹೆಸರು ಸಂಪಾದಿಸುವುದು ತುಂಬಾ ಕಠಿಣವಾದ ಬಾಬತ್ತು. ಆದರೆ, ಅಂಥವರಲ್ಲಿ ಒಳ್ಳೆಯ ಮನಸ್ಸು ಮತ್ತು ಹೃದಯವಂತಿಕೆ ಎರಡೂ ಇದ್ದಾಗ, ಸಮರ್ಥ-ಸದೃಢ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅವರು ಯಶಸ್ವಿಯಾದಾಗ, ಅದಕ್ಕೆ ಜನಮನ್ನಣೆ ದೊರೆಯುತ್ತದೆ. ಅಂಥ ಓರ್ವ ಸಾಧಕರಾಗಿ ಸಮಾಜದಲ್ಲಿ ಗುರುತಿಸಿಕೊಂಡವರು ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಡೆನ್ನಿಸ್ ಡಿಸೋಜಾ. ಅವರು ಇಂದು ನಮ್ಮ ಕಣ್ಣಮುಂದೆ ಇಲ್ಲದಿದ್ದರೂ, ಅವರ ಸೇವೆಯ ಮಹತ್ತರ ಮುಖಗಳು ಇಂದಿಗೂ ಅವರ ಗುಣಗಾನ ಮಾಡುತ್ತಿವೆ.

ಪುತ್ತೂರಿನ ಸೇಂಟ್ ಫಿಲೋಮಿನಾ ಬಾಲಕರ ಶಾಲೆಯ ಪ್ರಧಾನ ಗುರುಗಳಾಗಿದ್ದ ಡೆನ್ನಿಸ್ ಡಿಸೋಜಾ ಅವರದ್ದು 32 ವರ್ಷಗಳ ಅವಿರತ ಸೇವೆ. ಶಿಷ್ಯರಿಗೆಲ್ಲಾ ಅವರು ಗುರು 'ದ್ರೋಣ'ರೆಂದರೆ ಹೆಚ್ಚು ಸಮಂಜಸ. ಏಕೆಂದರೆ, ಅವರ ಗರಡಿಯಲ್ಲಿ ಪಳಗಿದವರೆಲ್ಲರೂ ಅರ್ಜುನರೇ! ಜೀವನದ ಕಠಿಣ ದಿನಗಳಲ್ಲೂ ಡಿಸೋಜಾ ಅವರು ಮಾಡಿದ ಸಾಧನೆಗೆ ಸರಿಸಾಟಿಯಾಗಬಲ್ಲ ಸಾಧನೆ ಮಾಡಿದವರು ಬೇರೊಬ್ಬರು ಇಲ್ಲವೆಂದೇ ಹೇಳಬೇಕು. 'ಏಳಿರೆಲ್ಲಾ ಭಾರತದ ವೀರಯೋಧರೇ, ರಾಷ್ಟ್ರಕ್ಕಾಗಿ ಒಂದುಗೂಡಿ ಬನ್ನಿರೆಲ್ಲರೂ..' ಎಂಬ ಅವರ ಹಾಡು ಶಾಲೆಯ ಗೋಡೆಗಳ ಮೇಲೆ ಈಗಲೂ ರಾರಾಜಿಸುತ್ತಿರುವುದಲ್ಲದೆ, ಸಾವಿರಾರು ಹಳೆಯ ವಿದ್ಯಾರ್ಥಿಗಳ ಕಿವಿಗಳಲ್ಲಿ ಇಂದಿಗೂ ಅನುರಣಿಸುತ್ತಿರುವುದು ವಿಸ್ಮಯ!

ಯುವಕರಾಗಿದ್ದಾಗಲೇ ಶಾಲೆಯ ಚುಕ್ಕಾಣಿ ಹಿಡಿದವರು ಡಿಸೋಜಾ. ಶಾಲೆಗೆ ಅದಮ್ಯ ನಾಯಕತ್ವ ನೀಡಿದ ಮಹಾಚೈತನ್ಯದ ಸೆಲೆಯಾಗಿದ್ದ ಅವರು ಸ್ವತಃ ಕ್ರೀಡಾಪಟುವಾಗಿದ್ದರ ಜತೆಗೆ ಸಂಗೀತ, ಗಾಯನ ಹೀಗೆ ಹತ್ತು ಹಲವು ವಿಚಾರಗಳಲ್ಲಿ ಅತೀವ ಆಸಕ್ತಿ ಹೊಂದಿದ್ದ ಅಪರೂಪದ ವ್ಯಕ್ತಿ. ಅದೇನೋ ಒಂದು ಛಲ ಅವರೊಳಗೆ ತುಡಿಯುತ್ತಿತ್ತು. ಅಪರಿಮಿತವಾದ ಜೀವನೋತ್ಸಾಹದಿಂದಲೇ ತಮ್ಮೊಳಗಿನ ಕನಸುಗಳನ್ನು ನನಸಾಗಿಸುತ್ತಿದ್ದ ಅವರು, ತಮ್ಮ ಶಾಲೆಯನ್ನು ಪ್ರಗತಿಪಥದೆಡೆಗೆ ಒಯ್ಯುವ ನಿಟ್ಟಿನಲ್ಲಿ ದಣಿವರಿಯದೆ ದುಡಿದ ಆದರ್ಶ ಜೀವಿ ಮತ್ತು ಛಲಗಾರ. ತಮ್ಮ ಸೇವಾವಧಿಯಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿ, ಅವರು ಎಲ್ಲಾ ಚಟುವಟಿಕೆಗಳಲ್ಲಿಯೂ ಪ್ರತಿಭಾವಂತರಾಗಿ ಬೆಳೆಯುವಂತೆ ಹುರಿದುಂಬಿಸಿದ ಡಿಸೋಜಾ ತನ್ಮೂಲಕ ಶಾಲೆಯ ಖ್ಯಾತಿ ರಾಜ್ಯದ ಉದ್ದಗಲಕ್ಕೆ ಹಬ್ಬುವಂತೆ ಮಾಡಿದರು. ಡಿಸೋಜಾ ಅವರ ಪಾದರಸದಂಥ ವ್ಯಕ್ತಿತ್ವ, ಮಾತುಗಳು ಹಾಗೂ ವಿಚಾರಗಳಿಗೆ ಮಾರುಹೋಗದವರೇ ಇರಲಿಲ್ಲ. ಗ್ರಾಮೀಣ ಶಾಲೆಯೊಂದರ ಪ್ರಧಾನ ಗುರುಗಳು ಜ್ಞಾನ ಬೆಳಗುವ ಕೇಂದ್ರವಾಗಿಬಿಟ್ಟರೆ ವಿದ್ಯಾರ್ಥಿಗಳು ಮಾತ್ರವಲ್ಲ ಸಹಶಿಕ್ಷಕರು ಕೂಡ ಪ್ರಭಾವಿತರಾಗುತ್ತಾರೆ ಮತ್ತು ಶಾಲೆಗಾಗಿ ಉತ್ತಮ ಸೇವೆ ಸಲ್ಲಿಸುತ್ತಾರೆ ಎಂಬುದನ್ನು ತೋರಿಸಿಕೊಟ್ಟವರು ಡಿಸೋಜಾ ಅವರು.

ಶಾಲೆ ಎಂದರೆ ಕೇವಲ ನಾಲ್ಕು ಗೋಡೆಗಳಿಗೆ ಸೀಮಿತವಾಗಿರುವಂಥ ವ್ಯವಸ್ಥೆಯಲ್ಲ ಎಂಬುದು ಸರ್ವವಿದಿತ. ತಮ್ಮನ್ನು ನಂಬಿದವರಿಗೆ ಮಹತ್ತರವಾದುದನ್ನು ಬಿಟ್ಟುಹೋಗಬೇಕು ಎಂಬ ವಿಚಾರಧಾರೆ ಡಿಸೋಜಾ ಅವರಲ್ಲಿ ಮನೆಮಾಡಿತ್ತು. ಹೀಗಾಗಿ, ತಾವು ಸೇವೆ ಸಲ್ಲಿಸುವವರೆಗೂ ಶಾಲೆಯ ಪರಿಪೂರ್ಣತೆಗೆ ಬೇಕಾದ ಎಲ್ಲಾ ಅವಶ್ಯಕ ಸೌಲಭ್ಯಗಳನ್ನು ಆಯಾ ಕಾಲಕ್ಕೆ ಒದಗಿಸುವ ನಿಟ್ಟಿನಲ್ಲಿ ಶ್ರಮ ವಹಿಸಿದರು ಡಿಸೋಜಾ. ಈ ಕಾರಣದಿಂದಾಗಿಯೇ ಆ ಶಾಲೆಯು ಸರ್ವಾಂಗೀಣ ಪ್ರಗತಿಯನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಯಿತು, ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ಎಲ್ಲರೂ ಮೆಚ್ಚಿಕೊಳ್ಳುವಂಥ ಒಂದು ಆದರ್ಶ ಶಾಲೆಯಾಗಿ ರೂಪಾಂತರಗೊಂಡಿತು. ಇಂಥ ಅಪರೂಪದ ಸಾಧಕ, ಹೃದಯವಂತ ಹಾಗೂ ಛಲಗಾರ ಶಿಕ್ಷಕರನ್ನು ಎಂದಿಗೂ ಮರೆಯಲಾಗದು.

(ಲೇಖಕರು ಮಾಜಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಎಡಿಎ ಮತ್ತು ಡಿಆರ್‌ಡಿಒ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 89

ದುರಂತ ಸ್ಥಳದಲ್ಲಿ ಮನೆಗಳ್ಳರ ಹಾವಳಿ | ಸಂತ್ರಸ್ತರಿಗೆ ಉಚಿತ ಪಡಿತರ ಘೋಷಣೆ | 1546 ಎಕರೆ ಬೆಳೆ ಭೂಕುಸಿತಕ್ಕೆ ನಾಶ | ಪತ್ತೆಯಾಗದ 49 ಮಕ್ಕಳು

ಕೆಂಪಾದ ಚಾಲಿಯಾರ್ ನದಿ; ತೇಲಿ ಬರುತ್ತಿವೆ ಹೆಣಗಳು

ವಯನಾಡು: ಕೇರಳದ ವಯನಾಡಿನ ಬೆಪ್ಪಾಡಿ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿ 6 ದಿನಗಳೇ ಕಳೆದಿವೆ. ಈ ಭಾಗದ ಜೀವನದಿ ಚಾಲಿಯಾರ್ ಇಲ್ಲಿನ ಜನರಿಗೆ ಈಗ ಅತಿ ಭೀಕರ ಎನಿಸಿದೆ. ನದಿಯ ಹರಿವನ್ನು ನೋಡುವುದೇ ಕಷ್ಟ ಎನ್ನುವಂತಾಗಿದೆ.

ಕಾರಣ ಏನೆಂದರೆ, ಭೂಕುಸಿತದಲ್ಲಿ ಬಲಿಯಾದವರ ಮೃತದೇಹಗಳು, ದೇಹದ ಭಾಗಗಳು ಚಾಲಿಯಾರ್ ನದಿಯಲ್ಲಿ ಈಗಲೂ ನಿತ್ಯ ತೇಲಿ ಬರುತ್ತಲೇ ಇವೆ. ಇನ್ನೂ ಅದೆಷ್ಟು ಮೃತದೇಹಗಳನ್ನು ಚಾಲಿಯಾರ್ ನದಿ ಹೊತ್ತು ತರಲಿದೆಯೋ ಎಂಬ ಆತಂಕ ವ್ಯಕ್ತವಾಗಿದೆ.

ಭಾನುವಾರವೂ 3 ಮೃತದೇಹಗಳು ಹಾಗೂ 13 ದೇಹದ ತುಂಡಾದ ಭಾಗಗಳು ಚಾಲಿಯಾರ್ ನದಿಯಲ್ಲಿ ತೇಲಿ ಬಂದಿವೆ. ಚಾಲಿಯಾರ್ ನದಿಯಲ್ಲಿ ಈವರೆಗೆ ಒಟ್ಟು 205 ಮೃತದೇಹ ಮತ್ತು ದೇಹಗಳ ಭಾಗಗಳು ತೇಲಿಬಂದಿವೆ. ಪ್ರವಾಹದ ನೀರಿನಲ್ಲಿ ಕೊಚ್ಚಿ ಹೋದ ಎಷ್ಟೋ ಮೃತದೇಹಗಳನ್ನು ನದಿ ಒಂದೊಂದಾಗಿ ದಡಕ್ಕೆ ದೂಡುತ್ತಿದೆ. ಭೂಕುಸಿತ ಸ್ಥಳದಲ್ಲಿ ರಕ್ಷಣಾ ಪಡೆಗಳು 6ನೇ ದಿನವೂ ಕಾರ್ಯಾಚರಣೆ ನಡೆಸುತ್ತಿವೆ.

ಅಂತ್ಯಸಂಸ್ಕಾರಕ್ಕೆ ಮಾರ್ಗಸೂಚಿ

ಗುರುತು ಪತ್ತೆಯಾಗದ ಮೃತದೇಹಗಳ ಅಂತ್ಯಸಂಸ್ಕಾರಕ್ಕೆ ಕೇರಳ ಸರಕಾರ ಮಾರ್ಗ ಸೂಚಿ ಪ್ರಕಟಿಸಿದೆ. ಮೃತದೇಹ ಪತ್ತೆಯಾದ 72 ಗಂಟೆಗಳಲ್ಲಿ ಅಂತ್ಯಸಂಸ್ಕಾರ ನೆರವೇರಿಸುವಂತೆ ಸರಕಾರ ತಿಳಿಸಿದೆ. ಗುರುತು ಸಿಗದ ಮೃತದೇಹಗಳಿಗೆ ನಂಬರ್ ನೀಡಿ, ಡಿಎನ್ಎ ಮಾದರಿ, ಫೋಟೊ, ಯಾವುದಾದರೂ ಆಭರಣ, ಮಚ್ಚೆ ಪತ್ತೆಯಾದಲ್ಲಿ ದಾಖಲಿಸಿಕೊಳ್ಳುವಂತೆ ಸೂಚಿಸಲಾಗಿದೆ. ಗುರುತು ಸಿಗದ ಮೃತದೇಹಗಳನ್ನು ದಹಿಸದೇ ಮಣ್ಣಲ್ಲಿ ಹೂಳುವಂತೆ, ಅಂತ್ಯಕ್ರಿಯೆ ವೇಳೆ ಸರ್ವಧರ್ಮ ಪ್ರಾರ್ಥನೆ ಸಲ್ಲಿಸುವಂತೆ ಸೂಚಿಸ ಲಾಗಿದೆ. ಭೂಕುಸಿತದಲ್ಲಿ ಬಲಿಯಾದವರ ಬಹಳಷ್ಟು ಕುಟುಂಬಗಳಿಗೆ ತಮ್ಮವರ ಮೃತದೇಹದ ಭಾಗಗ ಳಷ್ಟೇ ಸಿಕ್ಕಿವೆ. ಅದಕ್ಕೇ ವಿಧಿವಿಧಾನ ಪಾಲಿಸಿ ಅಂತ್ಯಕ್ರಿಯೆ ನಡೆಸಿದ್ದು ನೋಡುಗರ ಮನಕಲಕುವಂತಿತ್ತು.

ದುರಂತ ಸ್ಥಳದಲ್ಲೇ ಕಳ್ಳತನ ಜಿಲ್ಲಾಡಳಿತ ಕಠಿಣ ಕ್ರಮ

ಭೂಕುಸಿತವಾದ 4 ಗ್ರಾಮಗಳಲ್ಲಿದ್ದ ಮನೆಗಳು ಬಹುತೇಕ ನೆಲಸಮವಾಗಿವೆ. ಅಲ್ಲಿನ ಜನರನ್ನು ಆಶ್ರಯ ಕೇಂದ್ರಗಳಿಗೆ ರವಾನಿಸಲಾಗಿದೆ. ಆದರೆ ಈ ಸಂದರ್ಭ ಬಳಸಿಕೊಂಡ ಕಳ್ಳರು, ಖಾಲಿ ಮನೆಗಳಿಗೆ ನುಗ್ಗಿ ಸಿಕ್ಕಿದ್ದನ್ನು ದೋಚುತ್ತಿದ್ದಾರೆ, ಅಲ್ಲದೇ, ಸಂತ್ರಸ್ತರಿಗೆ ನೆರವಾಗುವ ನೆಪದಲ್ಲಿ ಮೌಲ್ಯಯುತ ವಸ್ತುಗಳನ್ನು ಕದಿಯುತ್ತಿದ್ದಾರೆ ಎಂಬ ದೂರುಗಳು ಬಂದಿವೆ. ಚೂರಲ್‌ಮಲಾ ಗ್ರಾಮದ ತಮ್ಮ ಮನೆಯಲ್ಲಿ ಹಣ-ಕೆಲವು ದಾಖಲೆ ಕಳುವಾಗಿವೆ ಎಂದು ಮನೆ ಮಾಲೀಕರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಹಾಗಾಗಿ ಸ್ವಯಂ ಸೇವಕರು ಕೂಡಾ ರಾತ್ರಿ ವೇಳೆ ಭೂಕುಸಿತ ಪ್ರದೇಶಕ್ಕೆ ಅನುಮತಿ ಇಲ್ಲದೇ ತೆರಳುವಂತಿಲ್ಲ, ರಕ್ಷಣಾ ಕಾರ್ಯದಲ್ಲಿ ಭಾಗಿಯಾಗುವವರು ಕಡ್ಡಾಯ ನೋಂದಣಿ ಮಾಡಿಸಬೇಕು ಎಂದು ಜಿಲ್ಲಾಡಳಿತ ಆದೇಶ ಹೊರಡಿಸಿದೆ.

ಉಚಿತ ಪಡಿತರ: ಮುಂಡಕ್ಕೈ ಮತ್ತು ಚೂರಲ್‌ಮಲಾ ಗ್ರಾಮದ ಜನರಿಗೆ ಆಗಸ್ಟ್‌ನಲ್ಲಿ ಉಚಿತ ಪಡಿ ತರ ವಿತರಿಸುವುದಾಗಿ ಕೇರಳ ಸರಕಾರ ಘೋಷಿಸಿದೆ.

ಯುಡಿಎಫ್ ಶಾಸಕರ ವೇತನ ದೇಣಿಗೆ

ವಯನಾಡಿನ ದುರಂತದಿಂದ ತತ್ತರಿಸಿದ ಜನರ ನೆರವಿಗೆ ಸಾಕಷ್ಟು ಜನರು ಧನಸಹಾಯ ಮಾಡಿದ್ದಾರೆ. ಯುಡಿಎಫ್ ಶಾಸಕರು ಒಂದು ತಿಂಗಳ ವೇತನವನ್ನು ಮುಖ್ಯಮಂತ್ರಿ ವಿಪತ್ತು ನಿರ್ವಹಣಾ ನಿಧಿಗೆ ನೀಡುವುದಾಗಿ ಘೋಷಿಸಿದ್ದಾರೆ. ಕೇರಳದ ಮುಸ್ಲಿಂ ಲೀಗ್ ಆಪ್ ಬಿಡುಗಡೆ ಮಾಡಿ ಮನೆ ನಿರ್ಮಾಣಕ್ಕೆ ಅಗತ್ಯ ನೆರವು ಒದಗಿಸಲು ಹಣ ಸಂಗ್ರಹಿಸುತ್ತಿದೆ. ತೆಲುಗು ಚಿತ್ರತಾರೆ ಚಿರಂಜೀವಿ ಮತ್ತು ಪುತ್ರ ಚರಣ್ ಒಟ್ಟು 2 ಕೋಟಿ ರು., ನಟ ಅಲ್ಲು ಅರ್ಜುನ್ 25 ಲಕ್ಷ ರು. ಮತ್ತು ನಟ ಜಯರಾಮ್ 5 ಲಕ್ಷ ರು. ಸೇರಿದಂತೆ ಹಲವು ಕಲಾವಿದರು ದೇಣಿಗೆ ನೀಡಿದ್ದಾರೆ.

ದಾನಿಯ ಅಂಗಾಂಗ ಸಾಗಣೆ ಮಾರ್ಗಸೂಚಿ

ದೆಹಲಿ: ಜೀವರಕ್ಷಣೆಗಾಗಿ ತೆಗೆದ ಮಾನವ ದೇಹದ ಅಂಗಾಂಗಗಳ ಸಾಗಣೆಗೆ ಸಂಬಂಧಿಸಿದಂತೆ ಕೇಂದ್ರ ಆರೋಗ್ಯ ಇಲಾಖೆ ಇದೇ ಮೊದಲ ಬಾರಿಗೆ ಮಾರ್ಗಸೂಚಿ ಪ್ರಕಟಿಸಿದೆ. ವಾಯು, ರಸ್ತೆ, ಮೆಟ್ರೋ, ರೈಲ್ವೆ ಹಾಗೂ ಜಲಮಾರ್ಗ ಸೇರಿದಂತೆ ವಿವಿಧ ಮಾರ್ಗಗಳ ಮೂಲಕ ಮಾನವ ದೇಹದ ಜೀವಂತ ಅಂಗಾಂಗ ಸಾಗಣೆಗೆ ಸಂಬಂಧಿಸಿ ಪ್ರಕಟಿಸಲಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ ದೇಶಾದ್ಯಂತ ಮಾರ್ಗಸೂಚಿಯಾಗಿ ಕಾರ್ಯನಿರ್ವಹಿಸಲಿದೆ. ಈ ವಿಧಾನಗಳು ಅಂಗಾಂಗ ಕಸಿ ಸಂಸ್ಥೆ ಹಾಗೂ ಅಂಗಾಂಗ ದಾನ ಪಡೆದುಕೊಳ್ಳುವವರಿಗೆ ಸಹಕಾರಿಯಾಗಲಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ಅಪೂರ್ವ ಚಂದ್ರ ತಿಳಿಸಿದ್ದಾರೆ. ನೀತಿ ಆಯೋಗ, ಇಲಾಖೆ ಸಚಿವರು, ಅಂಗಾಂಗ ಕಸಿ ತಜ್ಞರ ಸಲಹೆಗಳನ್ನು ಪಡೆದು ಈ ಮಾರ್ಗಸೂಚಿ ರಚಿಸಲಾಗಿದೆ.

ಮಾರ್ಗಸೂಚಿ ಏನು?

- ವಾಯುಮಾರ್ಗದಲ್ಲಿ ಜೀವಂತ ಅಂಗಾಂಗ ಸಾಗಿಸುವಾಗ ಆದ್ಯತೆ ಮೇರೆಗೆ ಟೇಕಾಫ್ ಹಾಗೂ ಲ್ಯಾಂಡಿಂಗ್‌ಗೆ ಮನವಿ ಮಾಡಬಹುದು. ಜೀವಂತ ಅಂಗಾಂಗದ ಬಾಕ್ಸ್ ಹೊತ್ತವರಿಗೆ ಮೊದಲ ಸಾಲಿನ ಸೀಟು ನೀಡಬೇಕು. ಉಳಿದ ಪ್ರಯಾಣಿಕರಿಗೆ ಈ ಬಗ್ಗೆ ಮಾಹಿತಿ ನೀಡಬೇಕು.
- ಅಂಗಾಗ ಹೊತ್ತು ಸಾಗುವ ವಿಮಾನದ ಪೈಲಟ್‌ಗಳು ಲ್ಯಾಂಡ್ ಆಗುವ ನಿಲ್ದಾಣದ ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ನೀಡಬೇಕು.
- ಆ್ಯಂಬುಲೆನ್ಸ್‌ನಿಂದ ವಿಮಾನದವರೆಗೆ ಸಾಗಲು ತಡೆರಹಿತ ಕಾರಿಡಾರ್ ನಿರ್ಮಿಸಿ, ಟ್ರಾಲಿ ವ್ಯವಸ್ಥೆ ಮಾಡಬೇಕು. ಅಂಗಾಂಗ ಹಂಚಿಕೆ ಪ್ರಾಧಿಕಾರ (ಆರ್ಗನ್ ಡೊನೇಷನ್ ಅಥಾರಿಟಿ) ಗ್ರೀನ್ ಕಾರಿಡಾರ್ ವ್ಯವಸ್ಥೆಗೆ ಸೂಚನೆ ನೀಡಬಹುದು. ಈ ವ್ಯವಸ್ಥೆಗೆ ಪೊಲೀಸ್ ಇಲಾಖೆ ನೋಡಲ್ ಅಧಿಕಾರಿ ನೇಮಿಸಬಹುದು.
- ಮೆಟ್ರೋದಲ್ಲಿ ಅಂಗಾಂಗ ಸಾಗಿಸುವಾಗ ಮೆಟ್ರೋದಲ್ಲಿ ನಿರ್ದಿಷ್ಟ ಸ್ಥಳ ಗುರುತಿಸಿ ಆರೋಗ್ಯ ಸಿಬ್ಬಂದಿಯನ್ನು ಮೆಟ್ರೊ ಸಿಬ್ಬಂದಿ ಕರೆತರಬೇಕು.

ಪ್ರಧಾನಿ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ಬಾಂಗ್ಲಾ ಘರ್ಷಣೆಗೆ 79 ಬಲಿ

ಢಾಕಾ: ಬಾಂಗ್ಲಾದೇಶದ ರಾಜಧಾನಿ ಢಾಕಾ ಸೇರಿದಂತೆ ದೇಶದ ವಿವಿಧೆಡೆ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆಗೆ ಆಗ್ರಹಿಸಿ ಭಾನುವಾರ ನಡೆದ ಪ್ರತಿಭಟನೆ ಘರ್ಷಣೆಯ ರೂಪು ತಳೆದಿದೆ. 7 ಪೊಲೀಸ್ ಸಿಬ್ಬಂದಿ ಸೇರಿ ಘರ್ಷಣೆಯಲ್ಲಿ ಒಟ್ಟು 79 ಮಂದಿ ಜೀವ ಕಳೆದುಕೊಂಡಿದ್ದಾರೆ.

ರಾಜಧಾನಿ ಢಾಕಾ ನಗರದಲ್ಲಿ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿದವರು ಹಾಗೂ ಆಡಳಿತಾರೂಢ ಅವಾಮಿ ಲೀಗ್ ಬೆಂಬಲಿಗರ ನಡುವೆ ಭಾನುವಾರ ಘರ್ಷಣೆ ನಡೆದಿದ್ದು ಭಾನುವಾರ ಸಂಜೆ 6 ಗಂಟೆಯಿಂದ ಅನಿರ್ದಿಷ್ಟಾವಧಿ ರಾಷ್ಟ್ರವ್ಯಾಪಿ ಕರ್ಫ್ಯೂ ಜಾರಿ ಮಾಡಲಾಗಿದೆ. ಇನ್ನೊಂದೆಡೆ, ಮುನ್ಷಿಗಂಜ್‌ನಲ್ಲಿ ಪ್ರತಿಭಟನಾಕಾರರು ಮತ್ತು ಅವಾಮಿ ಲೀಗ್ ಬೆಂಬಲಿಗರ ನಡುವಿನ ಘರ್ಷಣೆಯಲ್ಲಿ 24 ಮಂದಿ ಸಾವನ್ನಪ್ಪಿ ದ್ದಾರೆ. 30 ಮಂದಿ ಗಾಯಗೊಂಡಿದ್ದಾರೆ ಎಂದು 'ಢಾಕಾ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ. ಪ್ರಧಾನಿ ರಾಜೀನಾಮೆಗೆ ಆಗ್ರಹಿಸಿ 'ಅಸಹಕಾರ ಚಳವಳಿ' ನಡೆಸಲು ನೂರಾರು ಪ್ರತಿಭಟನಾಕಾರರು ಬಂದಿದ್ದರು. ಅವಾಮಿ ಲೀಗ್, ಛಾತ್ರ ಲೀಗ್ ಮತ್ತು ಜುಬೋ ಲೀಗ್ ಕಾರ್ಯಕರ್ತರು ಚಳವಳಿ ವಿರೋಧಿಸಿದಾಗ ಘರ್ಷಣೆ ಉಂಟಾಯಿತು. ಪೊಲೀಸರು ಗುಂಪು ಚದುರಿಸಲು ಅಶ್ರುವಾಯು ಹಾಗೂ ಸ್ಟನ್ ಗ್ರೆನೇಡ್‌ಗಳ ಪ್ರಯೋಗ ಮಾಡಿದ್ದಾರೆ. ಸೈನ್ಸ್ ಲ್ಯಾಬ್, ಧನ್ಮಂಡಿ, ಮೊಹಮ್ಮದ್‌ಪುರ, ಟೆಕ್ನಿಕಲ್, ಮೀರ್‌ಪುರ-10, ರಾಂಪುರ, ತೇಜಗಾಂವ್, ಫಾರ್ಮರ್ ಗೇಟ್, ಪಂಪ್‌ಥ್, ಜತ್ರಾಬರಿ ಮತ್ತು ಢಾಕಾ ಉತ್ತರದಲ್ಲಿಯೂ ರ್‍ಯಾಲಿ ಹಮ್ಮಿಕೊಳ್ಳುವುದಾಗಿ ಎಂದು ಪ್ರತಿಭಟನೆಯ ಸಂಘಟಕರು ತಿಳಿಸಿದ್ದಾರೆ.

3ನೇ ತರಗತಿ ಬಾಲಕನ ಪತ್ರ ವೈರಲ್

ರಕ್ಷಣಾ ಕಾರ್ಯನಿರತ ಸೇನಾಪಡೆಗೆ ಬಾಲಕ ರಾಯನ್ ಬಿಗ್ ಸೆಲ್ಯೂಟ್!



ವಯನಾಡ್: ಕೇರಳದ ವಯನಾಡಿನ ಭೂಕುಸಿತಕ್ಕೆ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆ ಬಿರುಸಾಗಿ ಸಾಗಿದ್ದು, ಭಾರತೀಯ ಸೇನೆ ಯೋಧರು ಪ್ರಾಣ ಪಣಕ್ಕಿಟ್ಟು ಶ್ರಮಿಸುತ್ತಿದ್ದಾರೆ. ಸೇನೆಯ ಅವಿರತ ಶ್ರಮ ಮೆಚ್ಚಿ ರಾಜ್ಯದ 3ನೇ ತರಗತಿ ವಿದ್ಯಾರ್ಥಿಯೊಬ್ಬ ಭಾರತೀಯ ಸೇನೆಗೆ ಪತ್ರ ಬರೆದು 'ಬಿಗ್ ಸೆಲ್ಯೂಟ್' ಸಲ್ಲಿಸಿದ್ದಾನೆ. ಪುಟ್ಟ ಬಾಲಕ ಮಾಸ್ಟರ್ ರಾಯನ್ ಬರೆದ ಹೃದಯಸ್ಪರ್ಶಿ ಪತ್ರಕ್ಕೆ ಸೇನಾಧಿಕಾರಿಗಳೂ ಭಾವುಕರಾಗಿ ಧನ್ಯವಾದ ಹೇಳಿದ್ದಾರೆ.

ಕೇರಳದ ಎಎಂಎಲ್‌ಪಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ರಾಯನ್, ಮಲಯಾಳಂನಲ್ಲಿ ಬರೆದ ಪತ್ರ, ಅದರ ಇಂಗ್ಲಿಷ್ ಅನುವಾದವನ್ನೂ ಜೊತೆಗಿಟ್ಟು ಭಾರತೀಯ ಸೇನೆಯ ಸದರನ್ ಕಮಾಂಡ್ 'ಎಕ್ಸ್' ಸಂದೇಶದಲ್ಲಿ ಮೆಚ್ಚುಗೆ ಸೂಚಿಸಿದೆ. ಬಾಲಕನ ಪತ್ರ ವೈರಲ್ ಆಗಿದೆ. 'ಆತ್ಮೀಯ ಭಾರತೀಯ ಸೇನೆ, ನನ್ನ ಪ್ರೀತಿಯ ವಯನಾಡ್ ಭಾರಿ ಭೂಕುಸಿತದಿಂದ ಸಂಕಷ್ಟಕ್ಕೀಡಾಗಿದೆ. ಕೆಸರು ಮಣ್ಣು, ಶಿಲಾರಾಶಿಗಳಡಿ ಸಿಲುಕಿದ ಜನರನ್ನು ನೀವು ಶ್ರಮಪಟ್ಟು ರಕ್ಷಿಸುತ್ತಿರುವುದನ್ನು ನೋಡಿ ನನಗೆ ಹೆಮ್ಮೆ ಮತ್ತು ಸಂತೋಷ ವಾಗಿದೆ. ನೀವು ಬಿಸ್ಕತ್ ತಿಂದೇ ಹಸಿವು ನೀಗಿಸಿಕೊಂಡು ರಕ್ಷಣಾ ಕಾರ್ಯದಲ್ಲಿ ನಿರಂತರ ತೊಡಗಿರುವುದನ್ನು ವಿಡಿಯೋದಲ್ಲಿ ನೋಡಿದೆ. ಜನರ ರಕ್ಷಣೆಗಾಗಿ ಸೇತುವೆ ಕೂಡಾ ಬೇಗ ನಿರ್ಮಿಸಿದ್ದೀರಿ. ಆ ದೃಶ್ಯ ನನ್ನ ಮನಸ್ಸಿಗೆ ನಾಟಿದೆ. ಮುಂದೊಂದು ದಿನ ನಾನೂ ಭಾರತೀಯ ಸೇನೆ ಸೇರಲು, ರಾಷ್ಟ್ರವನ್ನು ರಕ್ಷಿಸಲು ಬಯಸುತ್ತೇನೆ' ಎಂದು ರಾಯನ್ ಬರೆದಿದ್ದಾನೆ.

ಸೇನೆ ಪ್ರತಿಕ್ರಿಯೆ

ಬಾಲಕನ ಹೃದಯಸ್ಪರ್ಶಿ ಪತ್ರಕ್ಕೆ ಭಾರತೀಯ ಸೇನೆಯೂ ಪ್ರತಿಕ್ರಿಯಿಸಿದೆ. 'ಯುವ ಯೋಧನಿಗೆ ಧನ್ಯವಾದ'. ನಿನ್ನ ಹೃತ್ಪೂರ್ವಕ ಮಾತುಗಳು ನಮ್ಮನ್ನು ಆಳವಾಗಿ ಮುಟ್ಟಿವೆ. ಪ್ರತಿಕೂಲ ಸಮಯದಲ್ಲಿ, ನಾವು ಭರವಸೆಯ ದಾರಿದೀಪವಾಗಲು ಗುರಿ ಹೊಂದಿದ್ದೇವೆ. ನಿನ್ನ ಪತ್ರ ಈ ಧ್ಯೇಯವನ್ನು ಪುನರುಚ್ಚರಿಸುತ್ತದೆ. ನೀನು ಸೇನಾ ಸಮವಸ್ತ್ರ ಧರಿಸುವ ದಿನವನ್ನು ನಾವು ಕಾತುರದಿಂದ ಕಾಯುತ್ತಿದ್ದೇವೆ. ನೀನು ತೋರಿದ ಧೈರ್ಯ ಮತ್ತು ನೀಡಿದ ಸ್ಫೂರ್ತಿಯಿಂದ ನಾವು ಒಟ್ಟಾಗಿ ರಾಷ್ಟ್ರ ಹೆಮ್ಮೆಪಡುವಂತೆ ಮಾಡುತ್ತೇವೆ ಎಂದಿದೆ.

ಮಹಾ ಚುನಾವಣೆ: ಕಾಂಗ್ರೆಸ್ ನಾಯಕರ ಮಹತ್ವದ ಸಭೆ

ಮುಂಬೈ: ವರ್ಷಾಂತ್ಯದಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಹಾಗೂ ಇಂಡಿ ಒಕ್ಕೂಟದ ಪಕ್ಷಗಳ ನಾಯ ಕರು ಭಾನುವಾರ ಮುಂಬೈನಲ್ಲಿ ಮಹತ್ವದ ಸಭೆ ನಡೆಸಿ ಚರ್ಚಿಸಿದ್ದಾರೆ. ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿ ರಮೇಶ್ ಚೆನ್ನಿತಾಲ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚುನಾವಣೆಗೆ ಸೀಟು ಹಂಚಿಕೆ ಸೇರಿ ಮಹತ್ವದ ವಿಚಾರಗಳು ಚರ್ಚೆಯಾಗಿವೆ. ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ, ಪೃಥ್ವಿರಾಜ್ ಚವಾಣ್, ಬಾಲಾಸಾಹೇಬ್ ಥೋರಟ್, ನಾಸೀಮ್ ಖಾನ್, ನಿತಿನ್ ರಾವುತ್ ಸೇರಿ ಹಲವು ನಾಯಕರು ಭಾಗಿಯಾಗಿದ್ದರು.

ಆ.7ರಂದು ಮಹಾವಿಕಾಸ್ ಅಘಾಡಿ ಸಭೆ ಕರೆದಿದ್ದು , ಅಂದು ಕಾಂಗ್ರೆಸ್ ಜತೆ ಸೀಟು ಹಂಚಿಕೆ ವಿಚಾರ ಕೂಡ ಚರ್ಚೆ ಯಾಗಲಿದೆ ಎಂದು ಹೇಳಲಾಗಿದೆ.

ಆ.20ಕ್ಕೆ ಕಾಂಗ್ರೆಸ್ ಕಹಳೆ: ಆ.20ರಂದು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಜಯಂತಿ ಇರುವುದರಿಂದ ಅದೇ ದಿನ ಕಾಂಗ್ರೆಸ್ ಮಹಾರಾಷ್ಟ್ರದಲ್ಲಿ ಚುನಾವಣಾ ರಣಕಹಳೆ ಮೊಳಗಿಸಲು ಸಿದ್ಧತೆ ನಡೆಸಿದೆ ಎನ್ನಲಾಗಿದೆ. ಅಂದು ಮುಂಬೈನಲ್ಲಿ ಕಾಂಗ್ರೆಸ್ ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಎನ್‌ಸಿಪಿ (ಎಸ್‌ಪಿ) ನಾಯಕ ಶರದ್ ಪವಾರ್, ಶಿವಸೇನೆ (ಯುಬಿಟಿ) ಉದ್ಧವ್ ಠಾಕ್ರೆ ಅವರಿಗೂ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಗಿದೆ. ರಾಜೀವ್ ಮುಂಬೈನಲ್ಲಿ ಜನಿಸಿದ ಕಾರಣ ಈ ಬಾರಿ ಮುಂಬೈನಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮ ರೂಪಿಸಲಾಗಿದೆ. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಸೇರಿ ಅನೇಕ ನಾಯಕರು ಭಾಗಿಯಾಗಲಿದ್ದಾರೆ ಎನ್ನಲಾಗಿದೆ.

ಕರ್ನಾಟಕ ಸಿಎಂಗೆ ಕೇರಳ ಸಿಎಂ ವಿಜಯನ್ ಪತ್ರ

ಲಾರಿ ಚಾಲಕನ ಶೋಧಕ್ಕೆ ಒತ್ತಾಯ

ತಿರುವನಂತಪುರಂ: ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಶಿರೂರು ಬಳಿ ಹೆದ್ದಾರಿ ಬಳಿ ಸಂಭವಿಸಿದ ಗುಡ್ಡ ಕುಸಿತದಲ್ಲಿ ಕಾಣೆಯಾಗಿರುವ ಕೇರಳದ ಲಾರಿ ಚಾಲಕ ಅರ್ಜುನ್ ಪತ್ತೆಗಾಗಿ ಮರಳಿ ಶೋಧ ಕಾರ್ಯಾಚರಣೆ ಆರಂಭಿಸುವಂತೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇರಳ ಸಿಎಂ ಪಿಣರಾಯಿ ವಿಜಯನ್ ಪತ್ರ ಬರೆದು ಒತ್ತಾಯಿಸಿದ್ದಾರೆ.

ಅರ್ಜುನ್ ನಾಪತ್ತೆಯಾಗಿ ಬಹಳ ದಿನಗಳೇ ಕಳೆದಿವೆ. ಅವರ ಕುಟುಂಬದವರು ತೀವ್ರ ಆತಂಕದಲ್ಲೇ ದಿನ ದೂಡುತ್ತಿದ್ದಾರೆ. ಅವರ ದುಃಖ ನೋಡಲಾಗುತ್ತಿಲ್ಲ. ಹಾಗಾಗಿ ನಿಮಗೆ ಈ ಪತ್ರ ಬರೆಯುತ್ತಿರುವೆ. ಚಾಲಕ ಅರ್ಜುನ್ ಪತ್ತೆಗಾಗಿ ಮರಳಿ ಶೋಧ ಕಾರ್ಯಾಚರಣೆ ಆರಂಭಿಸಿ ಎಂದು ಮನವಿ ಮಾಡುತ್ತೇನೆ ಎಂದು ವಿಜಯನ್ ಪತ್ರದಲ್ಲಿ ಬರೆದಿದ್ದಾರೆ.

ಇದಕ್ಕೂ ಮುನ್ನ ಸಿಎಂ ವಿಜಯನ್, ಲಾರಿ ಚಾಲಕ ಅರ್ಜುನ್ ಮನೆಗೆ ಭೇಟಿ ನೀಡಿ ಕುಟುಂಬದವರ ಜತೆ ಮಾತುಕತೆ ನಡೆಸಿದ್ದರು. ಕರ್ನಾಟಕ ಸರಕಾರದ ಜತೆ ಚರ್ಚಿಸಿ ಶೋಧ ಕಾರ್ಯ ಪುನಾರಂಭಕ್ಕೆ ಯತ್ನಿಸುವುದಾಗಿ ಕುಟುಂಬದವರಿಗೆ ಭರವಸೆ ನೀಡಿದ್ದರು. ಆ ನಂತರದಲ್ಲೇ ಕರ್ನಾಟಕ ಸಿಎಂಗೆ ಪತ್ರ ಬರೆದಿದ್ದಾರೆ.

ಜುಲೈ 16ರ ಬೆಳಗ್ಗೆ 8.45ರಲ್ಲಿ ಶಿರೂರು ಹೆದ್ದಾರಿಯಲ್ಲಿ ಗುಡ್ಡ ಕುಸಿದು ಚಹಾ ಅಂಗಡಿ, ಅರ್ಜುನನ ಲಾರಿ ಅವಶೇಷಗಳಡಿ ಸಿಲುಕಿದ್ದವು. ಬಳಿಕ ನದಿಯಲ್ಲಿ ಪ್ರವಾಹ ಉಂಟಾಗಿ ಲಾರಿ ಕೊಚ್ಚಿಕೊಂಡು ಹೋಗಿತ್ತು. ಲಾರಿ ನದಿ ದಡದಿಂದ 60 ಮೀ. ದೂರ, 5 ಮೀ. ಆಳದಲ್ಲಿ ಸಿಲುಕಿರುವುದು ಪತ್ತೆಯಾಗಿದೆ. ಆದರೆ, ಚಾಲಕ ಅರ್ಜುನ್ ಸುಳಿವು ಈವರೆಗೂ ಸಿಕ್ಕಿಲ್ಲ.

ಕೇರಳ ಸಿಎಂ ಪಿಣರಾಯಿ ವಿಜಯನ್, ಲಾರಿ ಚಾಲಕ ಅರ್ಜುನ್ ಮನೆಗೆ ಭೇಟಿ ನೀಡಿ ಕುಟುಂಬದವರ ಜತೆ ಮಾತುಕತೆ ನಡೆಸಿದರು.

ಪುತ್ರಿ ಅನುಸೂಯಾ ಮಂಜುನಾಥ್ ಸಾಥ್

ದೆಹಲಿ ಮೆಟ್ರೋದಲ್ಲಿ ದೇವೇಗೌಡರ ಸಂಚಾರ

ದೆಹಲಿ: ಮಾಜಿ ಪ್ರಧಾನಿ, ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರು ಭಾನುವಾರ ದೆಹಲಿ ಮೆಟ್ರೋದಲ್ಲಿ ಸಂಚರಿಸಿ ಮೆಚ್ಚುಗೆ ವ್ಯಕ್ತಪಡಿಸಿ ದರು. ಲೋಕ ಕಲ್ಯಾಣ ಮಾರ್ಗದಿಂದ ಮೆಟ್ರೊ ಪ್ರಯಾಣ ಆರಂಭಿಸಿದ ಜೆಡಿಎಸ್ ವರಿಷ್ಠ ದೇವೇಗೌಡ ಅವರು, ಮೆಟ್ರೊ ಅಧಿಕಾರಿಗಳ ಜತೆ ನಗುತ್ತಾ ಮಾತನಾಡಿ ಮೆಟ್ರೋ ಸೇವೆ ಬಗ್ಗೆ ಮಾಹಿತಿ ಸಂಗ್ರಹಿಸಿದರು. ತಂದೆ ಜತೆ ಪುತ್ರಿ ಅನುಸೂಯಾ ಮಡನಾಥ್ ಅವರೂ ಇದ್ದರು.

ಸಂಸತ್ ಅಧಿವೇಶನದಲ್ಲಿ ಭಾಗಿಯಾಗಲು ದೆಹಲಿಯಲ್ಲಿರುವ ಎಚ್‌ಡಿ, ಪ್ರಧಾನಮಂತ್ರಿ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದರು. ವಸ್ತು ಸಂಗ್ರಹಾಲಯ ಅದ್ಭುತ ಅನುಭವ ನೀಡಿತು. ಇಂಥ ಐತಿಹಾಸಿಕ ವಸ್ತು ಸಂಗ್ರಹಾಲಯ ನಿರ್ಮಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅಭಿನಂದನಾರ್ಹರು ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿದ್ದರು. ದೇವೇಗೌಡ ಅವರು ಮ್ಯೂಸಿಯಂಗೆ ಭೇಟಿ ನೀಡಿದ ವಿಚಾರ ತಿಳಿದು ಬಹಳ ಸಂತಸವಾಯಿತು ಎಂದು ಪ್ರಧಾನಿ ಮೋದಿ ಪ್ರತಿಕ್ರಿಯಿಸಿದ್ದಾರೆ. ಕರ್ನಾಟಕದ ಕುಗ್ರಾಮದ ಬಡ ಕುಟುಂಬದಲ್ಲಿ ಜನಿಸಿದ ನಾನು ಇಂಥ ಅದ್ಭುತ ದೇಶಕ್ಕೆ ಪ್ರಧಾನಿಯಾಗಿದ್ದೇ ಹೆಮ್ಮೆಯ ವಿಷಯ. ಪ್ರಜಾಪ್ರಭುತ್ವದ ಶಕ್ತಿ, ಜನರ ಆಶೀರ್ವಾದದಿಂದ ಇದು ಸಾಧ್ಯವಾಗಿದೆ. ಇಂಥ ಅದ್ಭುತ ಮ್ಯೂಸಿಯಂನಲ್ಲಿ ನನ್ನ ಮಾಹಿತಿಯೂ ಇರುವುದು ಖುಷಿ ತಂದಿದೆ. ದೇಶಕ್ಕಾಗಿ ಶಕ್ತಿಮೀರಿ ಕೆಲಸ ಮಾಡಿದ್ದೇನೆಂಬ ತೃಪ್ತಿ ಇದೆ ಎಂದೂ ಬರೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಉ.ಪ್ರದೇಶ: ಬಸ್, ಕಾರು ಡಿಕ್ಕಿ-7 ಸಾವು

ಇಟಾವಾ: ಉತ್ತರ ಪ್ರದೇಶದ ಲಖನೌ-ಆಗ್ರಾ ಎಕ್ಸ್‌ಪ್ರೆಸ್ ವೇನ ಉಸ್ರಾಹಾರ್ ಪ್ರದೇಶದಲ್ಲಿ ಭಾನುವಾರ ಡಬಲ್ ಡೆಕ್ಕರ್ ಬಸ್ ಹಾಗೂ ಕಾರಿನ ನಡುವೆ ಅಪಘಾತವಾಗಿದ್ದು, 7 ಪ್ರಯಾಣಿಕರು ಸಾವನ್ನಪ್ಪಿದ್ದಾರೆ. 25ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಒಬ್ಬ ಗಾಯಾಳು ಸ್ಥಿತಿ ಗಂಭೀರವಾಗಿದೆ. ರಾಯಬರೇಲಿಯಿಂದ ದೆಹಲಿಗೆ ಬರುತ್ತಿದ್ದ ನಾಗಾಲ್ಯಾಂಡ್ ಮೂಲದ ಬಸ್‌ಗೆ ತಪ್ಪಾದ ಲೇನ್‌ನಲ್ಲಿ ಬರುತ್ತಿದ್ದ ಕಾರು ಮುಖಾಮುಖಿ ಡಿಕ್ಕಿಯಾಗಿದೆ. ಪರಿಣಾಮ ನಿಯಂತ್ರಣ ತಪ್ಪಿದ ಬಸ್ ಪಲ್ಟಿಯಾಗಿದೆ. ಲಖನೌದಿಂದ ಆಗ್ರಾಕ್ಕೆ ತೆರಳುತ್ತಿದ್ದ ಕಾರಿನ ಚಾಲಕ ನಿದ್ದೆ ಹೋಗಿದ್ದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಬಸ್‌ನಲ್ಲಿದ್ದ ನಾಲ್ವರು ಹಾಗೂ ಕಾರಿನಲ್ಲಿದ್ದ ಮೂವರು ಸಾವನ್ನಪ್ಪಿದ್ದಾರೆ.

ಮ.ಪ್ರದೇಶ: ಗೋಡೆ ಕುಸಿದು 9 ಮಕ್ಕಳ ಸಾವು

ಭೋಪಾಲ್: ಮಧ್ಯಪ್ರದೇಶದ ಸಾಗರದ ಶಹಾಪುರದಲ್ಲಿ ಧಾರ್ಮಿಕ ಕಾರ್ಯಕ್ರಮ ವೇಳೆ ದೇವಸ್ಥಾನದ ಗೋಡೆ ಕುಸಿದು 9 ಮಕ್ಕಳು ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹರದೌಲ್ ಬಾಬಾ ದೇವಸ್ಥಾನದ ಶಿಥಿಲಗೊಂಡಿದ್ದ ಗೋಡೆ ಭಾರಿ ಮಳೆಗೆ ಹಠಾತ್ ಕುಸಿದಿದೆ. ಧಾರ್ಮಿಕ ಕಾರ್ಯಕ್ರಮಕ್ಕೆ ಬಂದಿದ್ದವರಲ್ಲಿ 9 ಮಕ್ಕಳು ಜೀವ ಕಳೆದುಕೊಂಡಿದ್ದಾರೆ. ಮೃತರೆಲ್ಲಾ 10-15 ವರ್ಷದೊಳಗಿನವರು ಎಂದು ತಿಳಿದುಬಂದಿದೆ. ಮಧ್ಯಪ್ರದೇಶ ಸಿಎಂ ಮೋಹನ್ ಯಾದವ್ ಘಟನೆ ಬಗ್ಗೆ ಸಂತಾಪ ಸೂಚಿಸಿ, ಮೃತರ ಕುಟುಂಬಕ್ಕೆ ತಲಾ 4 ಲಕ್ಷ ರು. ಪರಿಹಾರ ಘೋಷಿಸಿದ್ದಾರೆ.

ಆತ್ಮಾಹುತಿ ಬಾಂಬ್ ದಾಳಿ; 32 ಸಾವು

ಮೊಗದಿಶು: ಸೋಮಾಲಿಯಾದ ರಾಜಧಾನಿ ಮೊಗದಿಶುವಿನಲ್ಲಿ ಕಡಲ ತೀರದ ಹೋಟೆಲ್ ಮೇಲೆ ಶನಿವಾರ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, 32 ಮಂದಿ ಸಾವನ್ನಪ್ಪಿದ್ದಾರೆ. ಒಬ್ಬ ಯೋಧ ಸೇರಿದಂತೆ 63 ಜನರು ಗಾಯಗೊಂಡಿದ್ದಾರೆ. ಅಲ್-ಖೈದಾದ ಪೂರ್ವ ಆಫ್ರಿಕಾ ಅಂಗಸಂಸ್ಥೆ ಅಲ್-ಶಬಾಬ್ ತಾನೇ ದಾಳಿ ನಡೆಸಿದ್ದಾಗಿ ಹೇಳಿಕೊಂಡಿದೆ. ಬಾಂಬ್ ದಾಳಿಯಲ್ಲಿ ಒಬ್ಬ ಯೋಧ, 31 ನಾಗರಿಕರು ಜೀವ ತೆತ್ತಿದ್ದಾರೆ ಎಂದು ಪೊಲೀಸ್ ಮೇಜರ್ ಅಬ್ದಿಫತಾ ಆದಾನ್ ಹಸನ್ ಪತ್ರಕರ್ತರಿಗೆ ತಿಳಿಸಿದ್ದಾರೆ. ಬಾಂಬ್ ಸ್ಫೋಟದ ನಂತರ ಗುಂಡಿನ ದಾಳಿಯೂ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ವಿಶಾಖಪಟ್ಟಣಂ; 3 ರೈಲು ಬೋಗಿ ಭಸ್ಮ

ವಿಶಾಖಪಟ್ಟಣಂ: ನಗರದ ರೈಲು ನಿಲ್ದಾಣದಲ್ಲಿ ನಿಲುಗಡೆಯಾಗಿದ್ದ ರೈಲಿಗೆ ಭಾನುವಾರ ಬೆಳಗ್ಗೆ ಬೆಂಕಿ ಹೊತ್ತಿಕೊಂಡಿದ್ದು, 3 ಬೋಗಿಗಳು ಬಹುತೇಕ ಸುಟ್ಟು ಹಾನಿಗೀಡಾಗಿವೆ. ಕೊಬಾರ್-ವಿಶಾಖಪಟ್ಟಣಂ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಕಾರಣ ತಿಳಿದುಬಂದಿಲ್ಲ. ರೈಲಿನ ಮೂರು ಹವಾನಿಯಂತ್ರಿತ ಬೋಗಿಗಳು ಸುಟ್ಟು ಭಸ್ಮವಾಗಿವೆ. ರೈಲು ನಿಲ್ದಾಣ ತಲುಪಿದ ನಂತರ ಪ್ರಯಾಣಿಕರೆಲ್ಲಾ ಇಳಿದುಹೋಗಿದ್ದರು. ಆ ಬಳಿಕವೇ ಬೆಂಕಿ ಅವಘಡ ಸಂಭವಿಸಿದೆ. ಹಾಗಾಗಿ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಕಾಶ್ಮೀರ ಮೇಘ ಸ್ಫೋಟ: ಶ್ರೀನಗರ ಹೆದ್ದಾರಿ ಬಂದ್

ಶ್ರೀನಗರ: ಜಮ್ಮು-ಕಾಶ್ಮೀರದ ಗಂದರ್‌ಬಾಲ್ ಜಿಲ್ಲೆಯಲ್ಲಿ ಭಾನುವಾರ ನಸುಕಿನಲ್ಲಿ ಮೇಘಸ್ಫೋಟವಾಗಿದ್ದು, ಧಾರಾಕಾರ ಮಳೆಯಿಂದಾಗಿ ಪ್ರಮುಖ ರಸ್ತೆಗಳು ಹಾನಿಗೀಡಾಗಿವೆ. ಗಂದರ್ಬಾಲ್ ಜಿಲ್ಲೆಯ ಕಚೆರ್‌ವಾನ್‌ನಲ್ಲಿ ರಸ್ತೆ ಹಾನಿಗೊಳಗಾಗಿದೆ. ಶ್ರೀನಗರ-ಲೇಹ್ ರಾಷ್ಟ್ರೀಯ ಹೆದ್ದಾರಿ ತಾತ್ಕಾಲಿಕವಾಗಿ ಮುಚ್ಚಲಾಗಿದ್ದು, ಲೇಹ್ ರಸ್ತೆಯಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಮೇಘಸ್ಫೋಟದಿಂದ ಉಂಟಾದ ಹಠಾತ್ ಪ್ರವಾಹದಿಂದಾಗಿ ವಸತಿ ಗೃಹಗಳು ಸೇರಿದಂತೆ ಕೆಲವು ಕಟ್ಟಡಗಳಿಗೂ ಹಾನಿ ಯಾಗಿದೆ. ಹೆದ್ದಾರಿ ಸಂಚಾರ ಸ್ಥಗಿತಗೊಳಿಸಿದ್ದರಿಂದ ಲಡಾಖ್ ಕೇಂದ್ರಾಡಳಿತ ಪ್ರದೇಶದಿಂದ ಕಾಶ್ಮೀರ ಕಣಿವೆಯ ಸಂಪರ್ಕ ಕಡಿತಗೊಂಡಿದೆ. ಅಮರನಾಥ ಯಾತ್ರೆಗಾಗಿ ಬಾಲ್ಟಾಲ್ ಬೇಸ್ ಕ್ಯಾಂಪ್ ಸಹ ಪ್ರವೇಶಿಸಲಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

{ ಅಭಿಷೇಕ್ ಮನು ಸಿಂಘ್ವಿ } ಕಾಂಗ್ರೆಸ್ ನಾಯಕ

ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಬಂಧಿಸಿದರೆ ಬಿಜೆಪಿ ಶವಪೆಟ್ಟಿಗೆ ಸೇರುತ್ತದೆ. ರಾಹುಲ್‌ರನ್ನು ಇ.ಡಿ ಬಂಧಿಸುವುದಿರಲಿ, ಬಂಧಿಸುವ ಆಲೋಚನೆ ಮಾಡಿದರೇ ದೇಶದ ಜನ ಬಿಜೆಪಿ ಶವಪೆಟ್ಟಿಗೆಗೆ ಕೊನೆ ಮೊಳೆ ಹೊಡೆಯುತ್ತಾರೆ. ಬಿಜೆಪಿಯವರು ಎಂದಿಗೂ ಅಂಥ ಆಲೋಚನೆ ಮಾಡಬಾರದು.

ಕಾಂಗ್ರೆಸ್‌ಗೆ ಪ್ರತಿಪಕ್ಷ ಸ್ಥಾನವೇ ಗಟ್ಟಿ

2029ರಲ್ಲೂ ಬಿಜೆಪಿಗೆ ಗೆಲುವು ನಿಶ್ಚಿತ: ಶಾ

ದೆಹಲಿ: 2029ರ ಲೋಕಸಭೆ ಚುನಾವಣೆಯಲ್ಲೂ ಎನ್‌ಡಿಎ 4ನೇ ಅವಧಿಗೆ ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್ ಪಕ್ಷಕ್ಕೆ ಆಗಲೂ ಪ್ರತಿಪಕ್ಷ ಸ್ಥಾನವೇ ಗಟ್ಟಿಯಾಗಲಿದೆ ಎಂದು ಅಮಿತ್ ಶಾ ಭವಿಷ್ಯ ನುಡಿದಿದ್ದಾರೆ. ದೆಹಲಿಯಲ್ಲಿ ಭಾನುವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ 3ನೇ ಅವಧಿಗೆ ಜೂ.9ರಂದು ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಅಧಿಕಾರ ಪೂರ್ಣಗೊಳಿಸಲ್ಲ. ಅಸ್ಥಿರತೆ ಎದುರಾಗಿದೆ ಎಂದು ಕಾಂಗ್ರೆಸ್‌ನವರು ಹೇಳುತ್ತಲೇ ಇದ್ದಾರೆ. ಅವರಿಗೆ ಒಂದು ಮಾತು ಹೇಳಲು ಇಚ್ಛಿಸುತ್ತೇನೆ. ನರೇಂದ್ರ ಮೋದಿ ನೇತೃತ್ವದ ಸರಕಾರ ಅಧಿಕಾರ ಪೂರ್ಣಗೊಳಿಸುತ್ತದೆ. ಎನ್‌ಡಿಎ ಆಡಳಿತ ಮತ್ತೂ ಮುಂದುವರಿಯಲಿದೆ. ಮೋದಿ ಅವರೇ ಪ್ರಧಾನಿಯಾಗಲಿದ್ದಾರೆ ಎಂದು ಹೇಳಿದರು. 2019ರ ಚುನಾವಣೆಯಲ್ಲಿ ಬಿಜೆಪಿ 303 ಕ್ಷೇತ್ರ ಗೆದ್ದಿತ್ತು. 2024ರಲ್ಲಿ 240ಕ್ಕೆ ಇಳಿಕೆಯಾಯಿತು. ಕಾಂಗ್ರೆಸ್ 2019ರಲ್ಲಿ 52 ಸ್ಥಾನಕ್ಕೆ ಮಿತಿಗೊಂಡಿತ್ತು. ಈ ಬಾರಿ ಸಂಸದರ ಬಲವನ್ನು 99ಕ್ಕೆ ಏರಿಸಿಕೊಂಡಿದೆ. ಈ ಲೆಕ್ಕಾಚಾರದ ಮೇಲೆಯೇ ಕಾಂಗ್ರೆಸ್ 2029ರ ಬಗ್ಗೆ ವಿಶ್ವಾಸ ವ್ಯಕ್ತಪಡಿಸುತ್ತಿದೆ.

ಗೃಹ ಸಚಿವಾಲಯ ಅಧಿಕೃತ ಆದೇಶ

ಬಿಎಸ್‌ಎಫ್ ನೂತನ ಮುಖ್ಯಸ್ಥ ದಲ್ಜಿತ್ ಸಿಂಗ್

ದೆಹಲಿ: ಗಡಿ ಭದ್ರತಾ ಪಡೆ(ಬಿಎಸ್‌ಎಫ್) ನೂತನ ಮುಖ್ಯಸ್ಥರಾಗಿ ಐಪಿಎಸ್ ಅಧಿಕಾರಿ ದಲ್ಜಿತ್ ಸಿಂಗ್ ಚೌಧರಿ ನೇಮಕಗೊಂಡಿದ್ದಾರೆ. ಈ ಬಗ್ಗೆ ಕೇಂದ್ರ ಗೃಹಸಚಿವಾಲಯ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಅವರು ಇದಕ್ಕೂ ಮುನ್ನ ಸಶಸ್ತ್ರ ಸೀಮಾ ಬಲ(ಎಸ್‌ಎಸ್‌ಬಿ) ಮುಖ್ಯಸ್ಥರಾಗಿ ದ್ದರು. ಚೌಧರಿ ಉತ್ತರ ಪ್ರದೇಶ ಕೇಡರ್‌ನ 1990ರ ತಂಡದ ಐಪಿಎಸ್ ಅಧಿಕಾರಿ. 34 ವರ್ಷಗಳ ವೃತ್ತಿಜೀವನದಲ್ಲಿ ಉತ್ತರಪ್ರದೇಶದಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಚೌಧರಿ 2017ರಿಂದ ಇಂಡೋ-ಟಿಬೆಟನ್ ಬಾರ್ಡರ್ ಪೊಲೀಸ್(ಐಟಿಬಿಪಿ)ನಲ್ಲಿ ಹೆಚ್ಚುವರಿ ಮಹಾನಿರ್ದೇಶಕರಾಗಿ ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಎಸ್‌ಡಿಜಿ ಆಗಿ ಸೇವೆ ಸಲ್ಲಿಸಿದ್ದಾರೆ. ಜಮ್ಮು ಪ್ರದೇಶದಲ್ಲಿ ಭಾರತ-ಪಾಕಿಸ್ತಾನ ಗಡಿಯಲ್ಲಿ ಒಳನುಸುಳುವಿಕೆ ಹೆಚ್ಚಿರುವ ಹಿನ್ನೆಲೆ ಮಹಾ ನಿರ್ದೇಶಕ ನಿತಿನ್ ಅಗರ್ವಾಲ್ ಮತ್ತು ಉಪ ವಿಶೇಷ ಮಹಾನಿರ್ದೇಶಕ (ಪಶ್ಚಿಮ) ವೈ.ಬಿ.ಖುರಾನಿಯರನ್ನು ಮಾತೃ ಇಲಾಖೆಗೆ ವರ್ಗಾಯಿಸಲಾಗಿದೆ. ಬಳಿಕ ಹೊಸ ಮುಖ್ಯಸ್ಥರ ನೇಮಕವಾಗಿದೆ.

27 ಸಾವಿರಕ್ಕೂ ಅಧಿಕ ಉದ್ಯೋಗ

ಅಸ್ಸಾಂಗೆ ಟಾಟಾ ಗ್ರೂಪ್ ಸೆಮಿ ಕಂಡಕ್ಟರ್ ಘಟಕ

ದೆಹಲಿ: ಅಸ್ಸಾಂ ರಾಜ್ಯದಲ್ಲಿ 27 ಸಾವಿರ ಕೋಟಿ ರು. ಬಂಡವಾಳ ಹೂಡಿಕೆಯೊಂದಿಗೆ ಸದ್ಯದಲ್ಲೇ ಆರಂಭಗೊಳ್ಳಲಿರುವ ಟಾಟಾ ಸಮೂಹದ ಸೆಮಿ ಕಂಡಕ್ಟರ್ ಘಟಕದಿಂದ 27 ಸಾವಿರಕ್ಕೂ ಅಧಿಕ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಅಸ್ಸಾಂನಲ್ಲಿ ಈ ಘಟಕ ಸ್ಥಾಪನೆಗೆ ಕೇಂದ್ರ ಸರಕಾರ ಅದಾಗಲೇ ಸಮ್ಮತಿಸಿದೆ. ಆ ಬಳಿಕ 5 ತಿಂಗಳೊಳಗೇ ಘಟಕ ನಿರ್ಮಾಣ ಕಾಮಗಾರಿ ಶುರುವಾಗಿದೆ. ಶನಿವಾರ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಉಪಸ್ಥಿತಿಯಲ್ಲಿ ಭೂಮಿಪೂಜೆ ನೆರವೇರಿದೆ. ಟಾಟಾದ ಈ ಸೆಮಿಕಂಡಕ್ಟರ್ ಘಟಕ ಒಂದು ದಿನದಲ್ಲಿ 4.83 ಕೋಟಿ ಚಿಪ್‌ಗಳನ್ನು ಸಿದ್ಧಪಡಿಸುವಷ್ಟು ಸಾಮರ್ಥ್ಯದ್ದಾಗಿರಲಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ವಿವರಿಸಿದರು. ಅಸ್ಸಾಂನ ಸೆಮಿಕಂಡಕ್ಟರ್ ಘಟಕದಲ್ಲಿ ತಯಾರಾಗುವ ಚಿಪ್‌ಗಳು 5ಜಿ ಸಾಧನಗಳು, ರೋಟರ್, ನೆಟ್‌ವರ್ಕ್ ಉಪಕರಣಗಳನ್ನು ತಯಾರಿಸುವ ಕಂಪನಿಗಳಲ್ಲಿ ಹಾಗೂ ವಿದ್ಯುತ್ ಚಾಲಿತ ವಾಹನಗಳಲ್ಲಿ ಹೆಚ್ಚು ಬಳಕೆಗೆ ಲಭ್ಯವಾಗಲಿವೆ ಎಂದು ಸಚಿವರು ವಿವರಿಸಿದರು.

ಸಂಕಷ್ಟದಲ್ಲಿ ಕೇಬಲ್ ಉದ್ಯಮ

ಕೇಬಲ್ ಟಿವಿಗೆ ಒಟಿಟಿ ಕಂಟಕ: ಟ್ರಾಯ್‌ಗೆ ದೂರು

ದೆಹಲಿ: ದೇಶದಲ್ಲಿ ಟಿವಿ ಹೊಂದಿರುವವರ ಸಂಖ್ಯೆ 2018ರಲ್ಲಿ 19.70 ಕೋಟಿ ಇತ್ತು. 2022ರಲ್ಲಿ 21 ಕೋಟಿಗೆ ಏರಿತ್ತು. ಆದರೆ ಕೇಬಲ್ ಟಿವಿ ಸೇವೆ ಬಳಸುವ ಮನೆಗಳ ಸಂಖ್ಯೆ 2018ರಲ್ಲಿ 12 ಕೋಟಿ ಇದ್ದಿದ್ದು 2020ರಲ್ಲಿ 9 ಕೋಟಿಗೆ ಇಳಿಕೆಯಾಗಿದೆ. ಈ ಸಂಖ್ಯೆ ಇಳಿಕೆ ಆಗುತ್ತಲೇ ಇದೆ ಎಂದು ದೆಹಲಿಯ ಲೋಕಲ್ ಕೇಬಲ್ ಆಪರೇಟರ್ ಅಸೋಸಿಯೇಷನ್ ಕಳವಳ ವ್ಯಕ್ತಪಡಿಸಿದೆ.

ಒಟಿಟಿ ವೇದಿಕೆಗಳಾದ ಡಿಸ್ನಿ ಪ್ಲಸ್ ಹಾಟ್‌ಸ್ಟಾರ್, ಜಿಯೋ ಟಿವಿ ಏರ್ ಲೀನಿಯರ್ ಕಂಟೆಂಟ್ ಹೆಚ್ಚು ಗ್ರಾಹಕರನ್ನು, ಅದರಲ್ಲೂ ಗೃಹಿಣಿ, ವಿದ್ಯಾರ್ಥಿ, ಯುವಜನರನ್ನು ಸೆಳೆದುಕೊಳ್ಳುತ್ತಿವೆ. ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ಜಿಯೋ ಟಿವಿಯ ಒಟಿಟಿ ವೇದಿಕೆಯಿಂದಾಗಿ ಕೇಬಲ್ ಟಿವಿ ಉದ್ಯಮ ಕಷ್ಟಕ್ಕೆ ಸಿಲುಕುತ್ತಿದೆ. ಜಿಯೋ ಟಿವಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಗೆ ದೂರು ಸಲ್ಲಿಸಿದೆ. ಜಿಯೋ ಟಿವಿ ತನ್ನ ಒಟಿಟಿ ವೇದಿಕೆಯಲ್ಲಿ ಭಾರತ-ಲಂಕಾ ಕ್ರಿಕೆಟ್ ಪಂದ್ಯಗಳನ್ನು ಉಚಿತ ವೀಕ್ಷಣೆಗೆ ನೀಡುತ್ತಿರುವುದರಿಂದ ಕೇಬಲ್ ಆಪರೇಟರ್‌ಗಳಿಗೆ ಸಮಸ್ಯೆಯಾಗಿದೆ. ಟೆನ್ ಸ್ಪೋರ್ಟ್ಸ್ ಲೈವ್ ಕಂಟೆಂಟ್‌ಗೆ 19 ರು. ಜತೆ ಜಿಎಸ್‌ಟಿಯನ್ನೂ ಕೇಬಲ್ ಟಿವಿ ಪಾವತಿಸಬೇಕಿದೆ ಎಂದು ಕೇಬಲ್ ಟಿವಿ ಆಪರೇಟರ್ಸ್ ಟ್ರಾಯ್ ಗಮನ ಸೆಳೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಪೈಲೆಟ್ ಯೋಜನೆಯಡಿ ಮನೆಗಳ ಹಂಚಿಕೆ

ಕಲಬುರಗಿ: ಮಹಾನಗರ ಪಾಲಿಕೆಯಲ್ಲಿ ರಾಜೀವ ಆವಾಸ ಪೈಲೇಟ್ ಯೋಜನೆಯ ಅಡಿಯಲ್ಲಿ ಕೋಟನೂರ (ಡಿ) ಗ್ರಾಮದಲ್ಲಿ ನಿರ್ಮಿಸಿದ 318(ಜಿ+3) ಮಾದರಿ ಮನೆಗಳ ಹಂಚಿಕೆಗೆ ಫಲಾನು ಭವಿಗಳ ಆಯ್ಕೆ ಕುರಿತಂತೆ, ಪಾಲಿಕೆಯಿಂದ ಪರಿಶೀ ಲಿಸಲಾಗಿದೆ ಎಂದು ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅದರಲ್ಲಿ ಅನುಮೋದಿತ ಡಿ.ಪಿ.ಆರ್ ಹಾಗೂ ಇತರೆ ಇಲಾಖೆ, ಗಣ್ಯ ವ್ಯಕ್ತಿಗಳ ಶಿಫಾರಸ್ಸು ಮತ್ತು ಎಚ್ ಎಫ್‌ಎ ಯೋಜನೆಯಡಿ ಅರ್ಜಿದಾರರನ್ನು ಮತ್ತು ಪಾಲಿಕೆಯ ವಲಯ ಆಯುಕ್ತರು ತಮ್ಮ ವ್ಯಾಪ್ತಿಯ ಅರ್ಜಿದಾರರನ್ನು ಪರಿಶೀಲಿಸಿ ತಾತ್ಕಾಲೀಕ ಅರ್ಹತೆ ಉಳ್ಳ 388 ತೈಯಾರಿಸಿ ಡಿ.ಎಲ್.ಸಿ.ಸಿ. ಸಭೆಯಲ್ಲಿ ಮಂಡಿಸಿದೆ. ಕಲಬುರಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆ ಯಲ್ಲಿ 2024 ಮಾರ್ಚ್ 5 ರಂದು ಡಿ.ಎಲ್.ಸಿ.ಸಿ. ಸಭೆಯಲ್ಲಿ ತಾತ್ಕಾಲಿಕ ಅರ್ಹಗೊಂಡ 318 ಫಲಾನು ಭವಿಗಳ ಯಾದಿಗೆ ಆಕ್ಷೇಪಣೆ ನೋಟಿಸ್ ಅನ್ನು ಜಾರಿಗೊಳಿಸಿ ನಿಯಮಾನುಸಾರ ಸಾರ್ವಜನಿಕರಲ್ಲಿ ಸದರಿ ತಾತ್ಕಾಲಿಕ ಪಟ್ಟಿಯಲ್ಲಿನ ಹೆಸರು ಮತ್ತು ಪತಿ/ಪತ್ನಿ ಹೆಸರಿನಲ್ಲಿ ಈಗಾಗಲೇ ನಿವೇಶನ/ಮನೆ ಹೊಂದಿದ್ದರೆ ಪೂರಕ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಲು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಚನ್ನಾರೆಡ್ಡಿ ಪಾಟೀಲ್ ವಿರುದ್ಧ ಕ್ರಮ ಕೈಗೊಳ್ಳಿ

ಜೇವರ್ಗಿ: ಯಾದಗಿರಿ ಶಾಸಕ ಚನ್ನಾರೆಡ್ಡಿ ಮತ್ತು ಅವರ ಪುತ್ರ ಪಂಪನಗೌಡ ಹಣದಾಸೆ, ಅಧಿಕಾರದ ದರ್ಪದಿಂದ ದಲಿತ ವರ್ಗಕ್ಕೆ ಸೇರಿದ ಪಿಎಸ್ಐ

ಪರಶುರಾಮ ಸಾವಾಗಿದೆ. ಅವರ ವಿರುದ್ಧ ತಕ್ಷಣ ಕಾನೂನು ಕ್ರಮ ಜರುಗಿ ಸಲು ದಲಿತ ಮುಖಂಡ ರಾದ ಮರೆಪ್ಪ ಖಂಡಳಕರ್ ಒತ್ತಾಯಿಸಿದರು. ಈ ಕುರಿತು ಸುದ್ದಿಗೊಷ್ಠಿಯಲ್ಲಿ ಮಾತನಾಡಿ, ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿ ಯಾಗಿದ್ದ ಪರಶುರಾಮಗೆ ಲಂಚದ ಬೇಡಿಕೆ ಇಟ್ಟಿದರು 30 ಲಕ್ಷ ಕೊಡದಿದ್ದರೆ, ಬೇರೆಡೆ ವರ್ಗಾಯಿ ಸುವ ಬೆದರಿಕೆಯೊಡ್ಡಿದ್ದರು. ಜಾತಿ ನಿಂದನೆ, ಏಕವ ಚನ ಪ್ರಯೋಗ ಮಾಡಿದ್ದರಿಂದಲೇ ಪರಶುರಾಮ ಅವರ ಸಾವಾಗಿದೆ. ತಕ್ಷಣ ಪಾರದರ್ಶಕ ತನಿಖೆ ನಡೆಸಿ, ಸಾವಿಗೆ ಕಾರಣರಾದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

ಒಳ ಮೀಸಲು: ಸುಪ್ರಿಂ ತೀರ್ಪು ಸ್ವಾಗತಾರ್ಹ

ಚಿತ್ತಾಪುರ: 2003ರಿಂದ ಅಧಿಕೃತವಾಗಿ ಸರಕಾರದ ಮಟ್ಟದಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ಅನುಗು ಣವಾಗಿ ಒಳಮೀಸಲಾತಿಯ ಜಾರಿಗಾಗಿ ನಡೆದಿದ್ದ

ಹೋರಾಟಕ್ಕೆ ನ್ಯಾಯಂಗ ದಿಂದಲೂ ಸಾಂವಿಧಾನಿಕ ಚೌಕಟ್ಟು ಪಡೆಯುವಲ್ಲಿ ಯಶ ಸಿಕ್ಕಿರುವುದು ಆ ಸಮಾಜಕ್ಕೆ ನ್ಯಾಯ ಸಿಕ್ಕಂ ತಾಗಿದೆ ಎಂದು ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ದೀಪಕ್ ಹೊಸ್ನೂರಕರ್ ಅವರು ಹರ್ಷ ವ್ಯಕ್ತಪಡಿಸಿದ್ದಾರೆ. ಕರ್ನಾಟಕದ ಮಟ್ಟಿಗೆ ಒಳಮೀಸಲಾತಿ ಹೋರಾಟವು ಅತ್ಯಂತ ಯಶಸ್ವಿ ಯಾಗಿ ನಡೆದುಕೊಂಡು ಬಂದಿದ್ದು ಇತಿಹಾಸದಲ್ಲಿ ಅಚ್ಚಳಿಯದೇ ಉಳಿದಿದೆ. ಆ ನಿಟ್ಟಿನಲ್ಲಿ ನಮ್ಮೆಲ್ಲರ ಹಕ್ಕು ಸಾಮಾಜಿಕ ನ್ಯಾಯಕ್ಕೆ ಹತ್ತಿರವಾಗಿದೆ. ಇದ ಕ್ಕೊಂದು ಪರಿಹಾರ ಕಂಡು ಹಿಡಿದು ಕೊನೆಯವ ರೆಗೂ ದಡ ಮುಟ್ಟಿಸಿದ ಕಿರ್ತಿ ಬಸವಮೂರ್ತಿ ಮಾದರ ಶ್ರೀಗಳು ಹಾಗೂ ಮಾದಿಗ ಸಮಾಜದ ಹಿರಿಯ ನಾಯಕರಾದ ಗೊವಿಂದ ಕಾರಜೋಳ ಮತ್ತು ಎ. ನಾರಾಯಣ ಸ್ವಾಮಿಯವರಿಗೆ ಸಲ್ಲುತ್ತದೆ ಎಂದರು.

ತರಕಾರಿ ಮಾರುಕಟ್ಟೆಗೆ ಶಾಸಕ ಪಾಟೀಲ್ ಭೇಟಿ

ಕಲಬುರಗಿ: ನಗರದ ಎಂ.ಎಸ್.ಕೆ.ಮಿಲ್ ಬಳಿ ನೂತನವಾಗಿ ನಿರ್ಮಿಸಲಾಗುತ್ತಿರುವ ಕಣ್ಣಿ ತರಕಾರಿ ಮಾರುಕಟ್ಟೆಗೆ ಕಲಬುರಗಿ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಅವರು ಭೇಟಿ ನೀಡಿ ಸ್ಥಳ ಪರೀವಿಕ್ಷಣೆ ಮಾಡಿ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿದರು. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನು ಕೂಲವಾಗುವಂತೆ ಲೋಕಾರ್ಪಣೆಗೊಳಿಸಲು ಅಧಿ ಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಆಲಂ ಖಾನ್, ಲಿಂಗರಾಜ್ ಕಣ್ಣಿ, ಕುಡಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಖಾಧಿಕಾರಿಗಳು ಲೋಕೋಪಯೋಗಿ ಇಲಾ ಖೆಯ ಕಾರ್ಯಪಾಲಕ ಅಭಿಯಂತರರು, ಸಹಾ ಯಕ ಕಾರ್ಯ ಪಾಲಕ ಅಭಿಯಂತರರು ಶಾಖಾ ಧಿಕಾರಿಗಳು ಹಾಜರಿದ್ದರು.

{ಈಶ್ವರ ಖಂಡ್ರೆ } ಸಚಿವ

ಕಳೆದ ಸಾಲಿನಲ್ಲಿ ಬೆಳೆ ಹಾನಿಯಾದ ರೈತರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ತಾಂತ್ರಿಕ ಸಮಸ್ಯೆಗಳು ಇದ್ದರೆ ಶೀಘ್ರದಲ್ಲೇ ಸರಿಪಡಿಸಬೇಕು. ರೈತರಿಗೆ ಬೆಳೆ ಕಟಾವು ಸಂದರ್ಭದಲ್ಲಿ ಮಷಿನ್ ಗಳ ಕೊರತೆಯಾಗದಂತೆ ಅಧಿಕಾರಿಗಳು ಎಚ್ಚರ ವಹಿಸಿ.

'ವಚನ ದರ್ಶನ 'ಪುಸ್ತಕ ಲೋಕಾರ್ಪಣೆ | ವಚನಗಳ ಚರ್ಚೆ ಮತ್ತು ಮಂಥನ ನಿಲ್ಲಬಾರದು: ಬಿ ಎಲ್ ಸಂತೋಷ್

ವಚನಗಳ ಕಾಲ ಇತಿಹಾಸ, ಸಾರ್ವಕಾಲಿಕ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ವಚನಗಳ ಕಾಲ ಇತಿಹಾಸ, ವಚನಗಳು ಸರ್ವ ಕಾಲಿಕ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರದಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅಭಿಪ್ರಾಯಪಟ್ಟರು.

ಪ್ರಜ್ಞಾ ಪ್ರವಾಹ, ಶರಣಬಸವ ವಿಶ್ವವಿದ್ಯಾ ಲಯ, ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ಸಂಘಟನೆಗಳ ಆಶ್ರಯದಲ್ಲಿ ಅಪ್ಪ ಪಬ್ಲಿಕ್ ಶಾಲಾ ಆವರಣದಲ್ಲಿರುವ ಪೂಜ್ಯ ಬಸವರಾ ಜಪ್ಪ ಅಪ್ಪ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದ್ದ ವಚನ ದರ್ಶನ ಪುಸ್ತಕ ಲೋಕಾರ್ಪಣೆ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವಿಚಾರ, ನಂಬಿಕೆಯಲ್ಲಿ ಭಿನ್ನತೆ ಇರಬಹುದು. ಆದರೆ, ಇತರರನ್ನು ಹಳಿಯಬಾರದು. ಇದನ್ನು ಬಸವಣ್ಣನವರು ಇದಿರ ಹಳಿಯಲು ಬೇಡ ಎಂದು ಅಂದೇ ಹೇಳಿದ್ದಾರೆ. ಯಾವುದೇ ವಿಚಾರ ಚರ್ಚೆ, ವಿಚಾರಕ್ಕೆ ಅತೀತವಲ್ಲ. ಅನುಭವ ಮಂಟಪ ಅದೊಂದು ಕೇವಲ ಕಟ್ಟಡವಲ್ಲ. ಇಂದಿನ ಸಮಸ್ಯೆ ಗಳಿಗೂ ಶರಣರ ವಿಚಾರಗಳು ಬೆಳಕಿನೋಪಾದಿ ಯಲ್ಲಿ ಕಂಡು ಬರುತ್ತವೆ. ಚೌಕಟ್ಟು ಮೀರಿದ, ಸೀಮಾತೀತ ಮಹಾತ್ಮರು ಹಾಗೂ ಸಾಧಕರನ್ನು ಚೌಕಟ್ಟಿಗೆ ಸಿಲಿಕಿಸುವ ತಂತ್ರ ಮೊದಲಿನಿಂದಲೂ ನಡೆದಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸಮಾಜದಲ್ಲಿನ ವಚನಗಳಿಗೆ ಮತ್ತು ವಿಚಾ ರಗಳಿಗೆ ವಿರೋಧವಿದ್ದರು, ಚರ್ಚೆ ಮತ್ತು ಮಂಥನ ಯಾವತ್ತೂ ನಿಲ್ಲಬಾರದು. ನಿಂತರೆ ವಿಷ ಅಮೃತ ವಾಗಲು ಸಾಧ್ಯವಿಲ್ಲ. 12ನೇ ಶತಮಾನದ ಕಾಲದ ಲ್ಲಿಯೂ ವಚನಗಳಿಗೆ ವಿರೋಧವಿತ್ತು. ಇಂದು ಸಹ ವಿರೋಧವಿದೆ ಮುಂದೆಯೂ ಸಹ ವಿರೋಧವಿ ರಲಿದೆ. ಒಳ್ಳೆಯ ವಿಚಾರಗಳು ಯಾವತ್ತೂ ಜೀವಂತ ವಿದ್ದು, ಕೆಟ್ಟದ್ದು ಮಾತ್ರ ನಶಿಸಿ ಹೋಗಲಿದೆ. ಅಂದಿನ ಕಾಲದ ಅನುಭವ ಮಂಟಪವನ್ನು ನಾವು ಯಾರು ಅದೊಂದು ಕಟ್ಟಡವೆಂದು ಭಾವಿಸಬಾರದು. ಬದಲಾಗಿ ಭಕ್ತಿ, ಕಾಯಕ ಮತ್ತು ದಾಸೋಹದ ಮೂಲಕ ಬೆಳೆಸುವ ಕೆಲಸವಾಗಬೇಕು ಎಂದು ಹೇಳಿದರು.

ಪೂಜ್ಯ ಬಸವರಾಜಪ್ಪ ಅಪ್ಪ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದ್ದ ವಚನ ದರ್ಶನ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವನ್ನು ಬಿ.ಎಲ್. ಸಂತೋಷ್ ಉದ್ಘಾಟಿಸಿದರು.

ಭಕ್ತಿ ಕಾಯಕ ಮತ್ತು ದಾಸೋಹಕ್ಕೆ ಶರಣರು ನೀಡಿದ ಗೌರವ ಅಪಾರವಾಗಿತ್ತು. ಭಕ್ತಿಗೆ ಶರಣರು ಗೌರವ ನೀಡಿದರೇ, ಕಾಯಕದಲ್ಲಿ ಯಾವತ್ತೂ ಮೇಲೂ ಕೀಳು ಇರಲಿಲ್ಲ. ಕಾಯಕದ ಪರಿಕಲ್ಪನೆಯಲ್ಲಿ ಎಲ್ಲದಕ್ಕೂ ಕೊನೆಯೆಂಬುದು ಇರಲಿಲ್ಲ. ಪ್ರಭು ಶ್ರೀರಾಮನು ಸಹ ಸಮಾಜ ಹಾಕಿದ ಗಡಿಯನ್ನು ಯಾವತ್ತೂ ದಾಟಲಿಲ್ಲ. ಅದರಂತೆ ಶರಣರು ಸಹ ಸಮಾಜದ ಯಾವುದೇ ಗಡಿಯನ್ನು ದಾಟದೇ ವಚನಗಳ ಮೂಲಕ ಸಮಾಜವನ್ನು ಕಟ್ಟಿ ಬೆಳೆಸುವ ಕೆಲಸ ಮಾಡಿದ್ದು, ಶರಣರ ಹಾಕಿದ ಮಾರ್ಗದಲ್ಲಿ ನಾವೆಲ್ಲರೂ ನಡೆಯುವ ಅವಶ್ಯಕತೆ ಬಹಳಷ್ಟಿದೆ ಎಂದು ಹೇಳಿದರು.

ಗದಗಿನ ಬ್ರಹ್ಮನಮಠದ ಜಗದ್ಗುರು ಶ್ರೀ ಸದಾಶಿವಾನಂದ ಸ್ವಾಮೀಜಿ ಮಾತನಾಡಿ, ನಾಗರ ಪಂಚಮಿ ಬರುತ್ತಿದೆ, ಇದೀಗ ಒಬ್ಬ ರಾಜಕಾರಣಿ ಬುದ್ಧ-ಬಸವ-ಅಂಬೇಡ್ಕರ್ ಹೆಸರಿನಲ್ಲಿ ಒಂದು ಲೋಟ ಹಾಲು ದಾನ ಮಾಡುವ ಮೂಲಕ ಬಸವ ಪಂಚಮಿ ಆಚರಣೆ ಮಾಡುತ್ತಾರೆ. ಆದರೆ, ಅದೇ ನಾಯಕ ಜನರನ್ನು ಹೆದರಿಸಿ ಸಾವಿರಾರು ಎಕರೆ ಭೂಮಿ ತನ್ನ ಕುಟುಂಬಕ್ಕೆ ಬರೆಸಿಕೊಳ್ಳುತ್ತಿದ್ದಾನೆ. ಇದು ಬಸವ ತತ್ವವೇ ಎಂದರು.

ಅಹಿಂಸೆಯೇ ಪರಮೋ ಧರ್ಮ ಎಂದು ಹೇಳಿದವರ ಹೆಸರನಲ್ಲಿ ಮಾಂಸ ಭಕ್ಷಣೆ ಮಾಡುತ್ತಾರೆ. ಈ ಬಗ್ಗೆ ಪ್ರಶ್ನಿಸಿದರೆ ಆಹಾರ ಸಂಸ್ಕೃತಿ ಎನ್ನುತ್ತಾರೆ. ನಾವು ಶುದ್ಧವಾಗಿರಬೇಕಾದರೆ ನಮ್ಮ ಆಹಾರ ಸಂಸ್ಕೃತಿ ಶುದ್ಧವಾಗಿರಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಕಾರ್ಯದರ್ಶಿ ಬಸವರಾಜ ದೇಶಮುಖ ಮಾತನಾಡಿದರು. ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಪ್ರಾಂತ ಕಾರ್ಯದರ್ಶಿ ಶಿವಶರಣ ಕೊಟ್ರಾಳ ಹಾಗೂ ಬಸವರಾಜ ಡೋಣುರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಪರಿಷತ್ತಿನ ಅಧ್ಯಕ್ಷ ಡಾ. ಸಂಗಮೇಶ್ ಪಾಟೀಲ್, ಪ್ರಜ್ಞಾ ಪ್ರವಾಹದ ಸಂಯೋಜಕ ಸತ್ಯಜೀತ ಕಿತ್ತೂರ, ವಿಭಾಗ ಪ್ರಚಾರಕ ವಿಜಯ್ ಮಹಾಂತೇಶ, ದತ್ತಾತ್ರೇಯ ಪಾಟೀಲ ರೇವೂರ, ಅಮರನಾಥ ಪಾಟೀಲ್, ಅರವಿಂದ ನವಲಿ, ಭರತ್ ಖಿಮಿತಕರ್, ಬಸವರಾಜ ಬೆಣ್ಣೂರ್, ಉಮೇಶ್ ಪಾಟೀಲ್, ಮಹಾದೇವ ಬೆಳಮಗಿ, ಸೂರ್ಯಕಾಂತ್ ಡೋಣಿ, ಮಹಾಂತೇಶ ಬಿರಾದಾರ, ನಾಗೇಂದ್ರ ಕಬಾಡೆ, ಮುಂಜುನಾಥ ಕಳಸಕರ್, ಬಸವರಾಜ ಮುನ್ನೊಳ್ಳಿ, ಸದಾನಂದ ಪೆರ್ಲ, ರಮೇಶ್ ತಿಪನೂರ, ಹರ್ಷಾನಂದ ಗುತ್ತೇದಾರ, ಶಿವಕಾಂತ ಮಹಾಜನ್, ಸಿದ್ದಾಜಿ ಪಾಟೀಲ್, ಮುರಳಿ ಪೂಜಾರ, ಸುಶಾಂತ್ ದೇಶಮುಖ, ಸತೀಶ್ ಮಾವೂರ, ಪ್ರಶಾಂತ್ ಗುಡ್ಡಾ, ಸಂತೋಷ್ ಹಾದಿಮನಿ, ಶ್ರೀನಿವಾಸ ದೇಸಾಯಿ, ರಾಮು ರೆಡ್ಡಿ, ಶಿವಾ ಅಷ್ಟಗಿ, ಅಂಬಾರಾಯ ಚಲಗೇರಾ ಇದ್ದರು.

ಕೃತಿ ಬಿಡುಗಡೆಗೆ ಪ್ರಗತಿ ಪರರಿಂದ ಪ್ರತಿಭಟನೆ

ವಚನ ದರ್ಶನ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಪ್ರಗತಿಪರರಿಂದ ವಿರೋಧ ವ್ಯಕ್ತವಾಯಿತು. ಕಾರ್ಯಕ್ರಮಕ್ಕೂ ಮುನ್ನ ಸಭಾಂಗಣದ ಎದುರು ಜಾಗತಿಕ ಲಿಂಗಾಯತ ಮಹಾಸಭಾ ಪದಾಧಿಕಾರಿಗಳು ಕಪ್ಪು ಬಟ್ಟೆ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು. ಇನ್ನು ಸಭಾಂಗಣದಲ್ಲಿ ಪುಸ್ತಕ ಬಿಡುಗಡೆ ಮಾಡುವಾಗ ಚಿಂತಕಿ ಕೆ.ನೀಲಾ, ಆರ್.ಕೆ.ಹುಡಗಿ, ಡಾ.ಮೀನಾಕ್ಷಿ ಬಾಳಿ ನೇತೃತ್ವದಲ್ಲಿ ಧಿಕ್ಕಾರ ಕೂಗಲಾಯಿತು. ಈ ವೇಳೆ ಕಾರ್ಯಕ್ರಮ ಕೆಲಕಾಲ ಗೊಂದಲದ ಗುಡಾಯಿತು. ಇದೀಗ ಆರ್‌ಎಸ್‌ಎಸ್‌ಗೆ ಬಸವಣ್ಣ ಹಾಗೂ ವಚನ ಸಾಹಿತ್ಯದ ಮೇಲೆ ಮೋಹವೇಕೆ ಎಂದು ಪ್ರಶ್ನಿಸಿದರು. ಈ ವೇಳೆ ಆರ್.ಜೆ.ಶೆಟಗಾರ, ಶಾಂತಪ್ಪ ಪಾಟೀಲ, ಪ್ರಭು ಖಾನಾಪುರ, ಸುನೀಲ ಮಾರುತಿ ಮಾನಪಡೆ, ರವೀಂದ್ರ ಶಬಾದಿ, ಲಕ್ಷ್ಮೀಕಾಂತ ಹುಬ್ಬಳ್ಳಿ, ಶರಣಗೌಡ ಪಾಟೀಲ, ಮಹಾಂತೇಶ್ ಕಲಬುರಗಿ, ಪ್ರಭುಲಿಂಗ ಮಾಹಗಾಂವಕರ, ಲವಿತ್ರಾ ವಸದ ಸೇರಿದಂತೆ ಐವತ್ತಕ್ಕೂ ಹೆಚ್ಚು ಜನರನ್ನು ಪೊಲೀಸರು ಬಂಧಿಸಿದರು. ಇಡೀ ಸಭಾಂಗಣದಲ್ಲಿ ಎಲ್ಲಡೆ ಪೊಲೀಸ್ ಭದ್ರತೆ ಮಾಡಲಾಗಿತ್ತು.

ನಮ್ಮ ದೇಶದಲ್ಲಿ ಎಲ್ಲ ಸಾಧಕರ ವಿಚಾರಗಳನ್ನು ಸಿಲುಕಿಸುವ ಕಾರ್ಯ ನಡೆದಿದ್ದು, ಸಿಲುಕಿಸುವವರು ಎಲ್ಲಾ ಕಾಲದಲ್ಲೂ ಇದ್ದಾರೆ. ರಾಮಾಯಣದಲ್ಲಿ ಶೂರ್ಪನಖಿ ಇದ್ದರೆ, ಮಹಾ ಭಾರತದಲ್ಲಿ ಶಕೂನಿಯೂ ಇದ್ದನು. ಎಷ್ಟೆ ವಿರೋಧವಿದ್ದರು, ಇಂತಹ ಪುಸ್ತಕಗಳು ಕಾಲಕಾಲಕ್ಕೆ ಹೊರಗಡೆ ಬರುತ್ತಲೆ ಇವೆ. ಹೀಗಾಗಿ ಶರಣರ ವಚನಗಳು ಎಂದೆಂದಿಗೂ ಸಾರ್ವಕಾಲಿಕ.

– ಬಿ.ಎಲ್.ಸಂತೋಷ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ, ಬಿಜೆಪಿ

ಕುರುಬರ ಸಂಘದಿಂದ ಶಕ್ತಿ ಪ್ರದರ್ಶನ ಇಂದು

ಕಲಬುರಗಿ: ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ರಾಜ್ಯಪಾಲರು ನೋಟಿಸ್ ಜಾರಿ ಮಾಡಿರುವುದನ್ನು ವಿರೋಧಿಸಿ ಆಗಸ್ಟ್ 5ರಂದು ನಗರದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಗುರುನಾಥ್ ಎಸ್. ಪೂಜಾರಿ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲರು ನೋಟಿಸ್ ಕೊಟ್ಟಿದ್ದನ್ನು ವಿರೋಧಿಸಿ ಅಂದು ನಗರದ ಜಗತ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವಿಚಾರವನ್ನು ಮುಂದಿಟ್ಟುಕೊಂಡು ಪಾರ್ವತಿ ಅವರಿಗೆ ನೀಡಿದ್ದರೆನ್ನಲಾದ ನಿವೇಶನ ವಿಚಾರವಾಗಿ ರಾಜ್ಯಪಾಲರು ಕೂಲಂಕುಷವಾಗಿ ಅಧ್ಯಯನ ಮಾಡದೇ ಏಕಪಕ್ಷೀಯ ನಿರ್ಣಯವನ್ನು ತೆಗೆದುಕೊಂಡು ಮುಖ್ಯಮಂತ್ರಿಗಳಿಗೆ ನೋಟಿಸ್ ಜಾರಿ ಮಾಡಿದ್ದು ಖಂಡನಾರ್ಹ ಎಂದು ಅವರು ಆಕ್ಷೇಪಿಸಿದರು.

ಹಿಂದುಳಿದ ವರ್ಗಗಳ ನೇತಾರ ಸಿದ್ಧರಾಮಯ್ಯ ಅವರಿಗೆ ಕೇಂದ್ರದ ಎನ್‌ಡಿಎ ಸರಕಾರ ಹಾಗೂ ರಾಜ್ಯಪಾಲರ ದ್ವೇಷದ ರಾಜಕಾರಣ ಹಾಗೂ ಅಪರಾಧಿ ಹಿನ್ನೆಲೆಯ ಟಿ.ಜೆ. ಅಬ್ರಾಹಂ ಆರ್‌ಟಿಐ ಕಾರ್ಯಕರ್ತನ ಮನವಿ ಮೇರೆಗೆ ರಾಜ್ಯಪಾಲರು ನೋಟಿಸ್ ಕೊಟ್ಟಿರುವುದರ ವಿರುದ್ಧವಾಗಿ ಪ್ರತಿಭಟನೆ ಮಾಡಲಾಗುವುದು ಎಂದು ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುನಾಥ್ ಎಸ್. ಪೂಜಾರಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಜಿಲ್ಲಾಧ್ಯಕ್ಷ ತಿಪ್ಪಣ್ಣ ಗುಂಡಗುರ್ತಿ, ಯುವ ಘಟಕದ ರಾಜ್ಯಾಧ್ಯಕ್ಷ ಭಗವಂತರಾಮ್‌ಗೌಡ ಪಾಟೀಲ್, ಈರಣ್ಣ ಝಳಕಿ ಧಂಗಾಪುರ, ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲಾ ಎಸ್. ಬರಗಾಲಿ, ನ್ಯಾಯವಾದಿ ನಾಗೇಂದ್ರಪ್ಪ ಎಸ್. ಪೂಜಾರಿ, ಕಾಶಿನಾಥ್ ಮರತೂರ್, ಶಿವಲಿಂಗಪ್ಪ ಎಂ. ವಗ್ಗಿ, ಮಹೇಶ್ ಧರಿ, ಧರ್ಮರಾಜ್ ಹೇರೂರ ಮುಂತಾದವರು ಉಪಸ್ಥಿತರಿದ್ದರು.

ಸರಕಾರಿ ಸೇವೆ ನೀಡುವಲ್ಲಿ ಕಲಬುರಗಿ ನಂ.1

ಕಲಬುರಗಿ: ಸಾರ್ವಜನಿಕರಿಗೆ ಕಾಲಮಿತಿಯಲ್ಲಿಯೇ ಸರಕಾರಿ ಸೇವೆ ಒದಗಿಸುವ ಸಕಾಲ ಯೋಜನೆಯಡಿ ಕಳೆದ ಜುಲೈ ಮಾಹೆಯ ಅರ್ಜಿ ವಿಲೇವಾರಿಯಲ್ಲಿ ಕಲಬುರಗಿ ಜಿಲ್ಲೆ ರಾಜ್ಯದಲ್ಲಿಯೇ ಮೊದಲನೇ ಸ್ಥಾನ

ಗಳಿಸಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

ಜುಲೈ ಮಾಹೆಯಲ್ಲಿ ಸಲ್ಲಿಕೆಯಾದ 1,58,990 ಅರ್ಜಿಗಳಲ್ಲಿ 1,46,088 ಅರ್ಜಿ ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗಿದ್ದು, ಮಾಸಾಂತ್ಯಕ್ಕೆ ಕೇವಲ 911 ಅರ್ಜಿ ಮಾತ್ರ ಬಾಕಿ ಉಳಿದುಕೊಂಡಿವೆ. ಕಾಲಮಿತಿಯಲ್ಲಿ ವಿಲೇವಾರಿಗೆ ಶೇ.30, ವಿಳಂಬಕ್ಕೆ ಶೇ.10, ತಿರಸ್ಕಾರಕ್ಕೆ ಶೇ.10, ಒಂದು ಲಕ್ಷ ಜನಸಂಖ್ಯೆಗೆ ಸಲ್ಲಿಕೆಯಾದ ಅರ್ಜಿಗಳಿಗೆ ಶೇ.30 ಹಾಗೂ ಬಾಕಿ ಅರ್ಜಿಗಳಿಗೆ ಶೇ.20 ಅಂಕಗಳನ್ನು ನೀಡಿ ಒಟ್ಟಾರೆ ರ್‍ಯಾಂಕಿಂಗ್ ತೆಗೆಯಲಾಗಿದ್ದು, ಕಲಬುರಗಿ ಮುಂಚೂಣಿಯಲ್ಲಿ ಹೊರಹೊಮ್ಮಿದೆ ಎಂದರು.

ಬೆಂಗಳೂರು, ಬೆಳಗಾವಿ ಹೊರತುಪಡಿಸಿದರೆ ಕಲಬುರಗಿ ಜಿಲ್ಲೆಯಲ್ಲಿ ಹೆಚ್ಚು ಅರ್ಜಿ ಸ್ವೀಕೃತಗೊಂಡಿದ್ದು, ವಿಲೇವಾರಿಯಲ್ಲಿಯೂ ಕಲಬುರಗಿ ಜಿಲ್ಲೆ ಮುಂದಿದೆ. ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿ-ಸಿಬ್ಬಂದಿಗಳ ಪ್ರಯತ್ನದ ಫಲವಾಗಿ ಜಿಲ್ಲೆ ಇಂದು ರಾಜ್ಯದಲ್ಲಿಯೆ ಮೊದಲನೇ ಸ್ಥಾನದಲ್ಲಿದ್ದು, ಇದಕ್ಕಾಗಿ ಶ್ರಮಿಸಿದ ಎಲ್ಲಾ ಅಧಿಕಾರಿ-ಸಿಬ್ಬಂದಿಗಳಿಗೆ ಡಿ.ಸಿ. ಅವರು ವೈಯಕ್ತಿಕವಾಗಿ ಅಭಿನಂದನೆ ಸಲ್ಲಿಸಿದ್ದಾರೆ.

ಇಂದು ನಾಳೆ ಇನ್ನಿಲ್ಲ, ಹೇಳಿದ ದಿನ ತಪ್ಪೊಲ್ಲ ! ಎಂಬ ಘೋಷವಾಕ್ಯದ ಸಕಾಲ ಯೋಜನೆಯಡಿ ರಾಜ್ಯದ 100 ಇಲಾಖೆ/ ಸಂಸ್ಥೆಗಳ 1,181 ಸೇವೆಗಳನ್ನು ಕಾಲಮಿತಿಯಲ್ಲಿ ನೀಡಲಾಗುತ್ತಿದೆ. ಕಾಲಮಿತಿಯಲ್ಲಿ ಸೇವೆ ಸಿಗದೆ ಅರ್ಜಿದಾರ ಮೇಲ್ಮನವಿ ಸಲ್ಲಿಸಿದಲ್ಲಿ ಪ್ರತಿ ದಿನದ ವಿಳಂಬಕ್ಕೆ ಅಧಿಕಾರಿ-ಸಿಬ್ಬಂದಿಗಳಿಗೆ ದಂಡ ವಿಧಿಸಿ ಆ ಹಣ ಅರ್ಜಿದಾರರಿಗೆ ನೀಡುವ ಅಪರೂಪದ ಯೋಜನೆ ಇದಾಗಿದೆ.

ಕಂದಾಯ ಸೇವೆಯಲ್ಲಿ ನಂ.1 ಅಬಾಧಿತ

ಜುಲೈ ಮಾಹೆಯ ಅರ್ಜಿ ವಿಲೇವಾರಿಯಲ್ಲಿ ಎಲ್ಲಾ ಇಲಾಖೆಯನ್ನೊಳಗೊಂಡಂತೆ ಕಲಬುರಗಿ ಜಿಲ್ಲೆ ನಂ. 1 ಸ್ಥಾನದಲ್ಲಿದ್ದರೆ, ಇತ್ತ ಸುಮಾರು 59 ಸೇವೆಗಳನ್ನು ನೀಡುವ ಸರಕಾರದ ಮಾತೃ ಇಲಾಖೆಯಾಗಿರುವ ಕಂದಾಯ ಇಲಾಖೆಯು ಕಳೆದ 6 ತಿಂಗಳಿಂದ ಅರ್ಜಿ ವಿಲೇವಾರಿಯಲ್ಲಿ ಸತತ ಪ್ರಥಮ ಸ್ಥಾನದಲ್ಲಿದೆ. ಜಾತಿ-ಆದಾಯ, ವಾಸಸ್ಥಳ, 371ಜೆ ಮೀಸಲಾತಿ, ಸಿಂಧುತ್ವ, ಪಹಣಿ, ಮೊಟೇಷನ್, ಖಾತಾ, ಕೃಷಿಯೇತರ ಭೂಮಿ ಪರಿವರ್ತನೆ ಹೀಗೆ ಅನೇಕ ಸೇವೆಗಳನ್ನು ಇಲಾಖೆ ಸಕಾಲನಡಿ ಕಾಲಮಿತಿಯಲ್ಲಿ ನೀಡುತ್ತಿದೆ ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ತಮ್ಮ ಇಲಾಖೆಯ ಸಾಧನೆ ಬಿಚ್ಚಿಟ್ಟರು.

ಪರಿವರ್ತನೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಅನನ್ಯ

ಚಿಂಚೋಳಿ: ಸಮೂಹ ಮಾಧ್ಯಮಗಳು ಯಾವಾಗಲೂ ಸಮಾಜದ ಮಹತ್ವದ ಸ್ಥಂಬಗಳಾಗಿ ಉಳಿದಿವೆ ಹಾಗೂ ಶೈಕ್ಷಣಿಕ ಸಾಮಾಜಿಕ ಕುರಿತಂತೆ ಎಲ್ಲಾ ಕ್ಷೇತ್ರಗಳ ಪ್ರಚಲಿತ ವಿದ್ಯಮಾನಗಳ ಬಗ್ಗೆ ವರದಿ ನೀಡುವುದಲ್ಲದೆ ಸಮಾಜದ ಸ್ವಾಸ್ಥ್ಯವನ್ನು ಎತ್ತಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಮಹಿಳಾ ಪ್ರಗತಿಪರ ಸಾಹಿತಿ ಜ್ಯೋತಿ ಡಿ ಭೆಮ್ಮಾ ಅಭಿಪ್ರಾಯಪಟ್ಟರು.

ಚಂದಾಪೂರದ ಸಮಾಜ ಕಲ್ಯಾಣ ಇಲಾಖೆಯ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರ ವಸತಿ ನಿಲಯದಲ್ಲಿ ಭಾರತ ಜನ-ಸಂಗಮ ಸಮಿತಿ ಹಾಗೂ ಯೂನಿಟಿ ಆಫ್ ಮೂಲನಿವಾಸಿ ಬಹುಜನ ಸಂಘಟನೆ ವತಿಯಿಂದ ಹಮ್ಮಿಕೊಂಡ ವಿದ್ಯಾರ್ಥಿಗಳ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪನ್ಯಾಸ ನೀಡಿ ಮಾತನಾಡಿದರು.

ಪ್ರಜಾಪ್ರಭುತ್ವದಲ್ಲಿ ಮಾಧ್ಯಮಗಳು ಪ್ರಮುಖವಾದ ಸ್ಥಾನವನ್ನು ಅಲಂಕರಿಸಿವೆ ಅದಕ್ಕಾಗಿ ವಿದ್ಯಾರ್ಥಿಗಳು ಸಮೂಹ ಮಾಧ್ಯಮಗಳ ಸದುಪಯೋಗ ಪಡೆದುಕೊಳ್ಳಬೇಕು ಆದರೆ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಸಮೂಹ ಮಾಧ್ಯಮಗಳಿಂದ ದುರುಪಯೋಗ ಪಡೆದುಕೊಂಡು ಜೀವನ ವ್ಯರ್ಥ ಹಾಳು ಮಾಡಿಕೊಳ್ಳುತ್ತಿದ್ದಾರೆ ತಮ್ಮ ಜೀವನದ ಉತ್ತಮ ಭವಿಷ್ಯಕ್ಕಾಗಿ ಮಾಧ್ಯಮಗಳು ಬಳಸಿಕೊಂಡಾಗ ಮಾತ್ರ ಆದರ್ಶ ವ್ಯಕ್ತಿಗಳಾಗಲು ಸಾಧ್ಯವೆಂದರು ಕಾರ್ಯಕ್ರಮವನ್ನು ಚಿಂಚೋಳಿ ಡಿ ವಾಯ ಎಸ್ಪಿಗಳಾದ ಸಂಗಮೇಶ ಹಿರೇಮಠ ಉದ್ಘಾಟಿಸಿ ಮಾತನಾಡಿದರು.

ಹಮ್ಮಿಕೊಂಡ ವಿದ್ಯಾರ್ಥಿಗಳ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಜ್ಯೋತಿ ಡಿ ಭೊಮ್ಮಾ ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾಗಿ ನರಸಮ್ಮ ಅವುಂಟಿ ವೀರಣ್ಣಾ ಸುಗಂದಿ ಶೈಲಜಾ ಸಾಗರ ಆನಂದಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾರುತಿ ಗಂಜಗಿರಿ ವಹಿಸಿದರು. ಪ್ರಾಸ್ತಾವಿಕವಾಗಿ ಗೋಪಾಲ ಗಾರಂಪಳ್ಳಿ ಮಾತನಾಡಿದರು ಮೋಹನ ಐನಾಪೂರ ಸ್ವಾಗತಿಸಿದರೆ ಮೌನೇಶ್ ಮುಸ್ತರಿ ಕಾರ್ಯಕ್ರಮ ನಿರೂಪಿಸಿದರು.

ಶ್ರಾವಣ ಮಾಸ ಪ್ರಾರಂಭ, ದೇವಸ್ಥಾನಕ್ಕೆ ಭಕ್ತರ ದಂಡು

ಕಲಬುರಗಿ: ಶ್ರಾವಣ ಮಾಸದ ಪ್ರಾರಂಭ ಹಾಗೂ ಭೀಮನ ಅಮಾವಾಸ್ಯೆ ಹಿನ್ನಲೆ ಭಾನುವಾರ ನಗರದಲ್ಲಿನ ಆರಾಧ್ಯ ದೈವ, ಮಹಾದಾಸೋಹಿ ಶ್ರೀ ಶರಣಬಸವೇಶ್ವರ ದೇವಸ್ಥಾನಕ್ಕೆ ಭಕ್ತರ ದಂಡೇ ಹರಿದು ಬಂತು.

ಶ್ರಾವಣ ಮಾಸದ ಮೊದಲ ದಿನ ಹಾಗೂ ಭೀಮನ ಅಮಾವಾಸ್ಯೆ ಅಂಗವಾಗಿ ಜನರು ನಗರದ ಶರಣಬಸವೇಶ್ವರ ದೇವಸ್ಥಾನದ ಜತೆಗೆ ವಿವಿಧ ದೇವಸ್ಥಾನಗಳಿಗೆ ತೆರಳಿ ತಮ್ಮ ಇಷ್ಟಾರ್ಥ ಸಿದ್ದಿಗಳಿಗಾಗಿ ಪೂಜೆ ಸಲ್ಲಿಸಿದರು. ಕಲಬುರಗಿ ಜಿಲ್ಲೆಯಷ್ಟೇ ಅಲ್ಲದೇ, ಪಕ್ಕದ ಯಾದಗಿರಿ, ಬೀದರ್ ಸೇರಿ ಸುತ್ತಮುತ್ತಲಿನ ಊರುಗಳ ಸಾವಿರಾರು ಭಕ್ತರು ಶ್ರೀ ಶರಣಬಸವೇಶ್ವರ ದೇವಸ್ಥಾನಕ್ಕೆ ಆಗಮಿಸಿ, ಸರತಿ ಸಾಲಿನಲ್ಲಿ ನಿಂತು ಶರಣಬಸವೇಶ್ವರರ ದರ್ಶನ ಪಡೆದರು.

ಬೆಳಗಿನ ಜಾವದಿಂದಲೇ ಶರಣಬಸವೇಶ್ವರರ ಕರ್ತೃ ಗದ್ದುಗೆಯ ಮೂರ್ತಿಗಳನ್ನು ಶುಚಿಗೊಳಿಸಿ, ನಾನಾ ಬಗೆಯ ಹೂಗಳಿಂದ ಅಲಂಕಾರ ಮಾಡಿ, ವಿಶೇಷ ಪೂಜೆ ನೆರವೇರಿಸಲಾಗಿತ್ತು. ದೂರದಿಂದಲೇ ಕಾಲ್ನಡಿಗೆಯಲ್ಲಿ ಬಂದ ಭಕ್ತರು ನೈವೇದ್ಯ ಅರ್ಪಿಸಿ, ತೆಂಗಿನಕಾಯಿ ಒಡೆದು ಭಕ್ತಿ ಸಮರ್ಪಿಸಿದರು.

ಅಮಾವಾಸ್ಯೆ ಪ್ರಯುಕ್ತ ಶರಣಬಸವೇಶ್ವರರ ದರ್ಶನಕ್ಕೆ ಆಗಮಿಸಿದ್ದ ಭಕ್ತಾದಿಗಳಿಗಾಗಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ವಿವಿಧೆಡೆಯಿಂದ ಭಕ್ತಾಧಿಗಳು ಆಗಮಿಸಿದ್ದರಿಂದ ದೇವಸ್ಥಾನದ ಆವರಣದಲ್ಲಿ ಜಾತ್ರೆಯ ವಾತಾವರಣ ನಿರ್ಮಾಣವಾಗಿತ್ತು.

ನಗರದ ಎಲ್ಲೆಡೆ ಭೀಮನ ಅಮಾವಾಸ್ಯೆ ಆಚರಣೆ

ಆಷಾಢ ಮಾಸದ ಕೊನೆಯ ದಿನ ಭೀಮನ ಅಮಾವಾಸ್ಯೆ ಆಚರಿಸಲಾಗುತ್ತದೆ. ಈ ಅಮಾವಾಸ್ಯೆಯನ್ನು ಭೀಮನ ಅಮಾವಾಸ್ಯೆ, ಜ್ಯೋತಿರ್ಭಿಮೇಶ್ವರ ಅಮಾವಾಸ್ಯೆ ಅಥವಾ ಆಷಾಢ ಅಮಾವಾಸ್ಯೆ ಎಂದು ಕರೆಯಲಾಗುತ್ತದೆ. ಭೀಮನ ಅಮಾವಾಸ್ಯೆಯ ಪ್ರಯುಕ್ತ ನಗರದಲ್ಲಿ ಹಲವಾರು ವಿವಾಹಿತ ಮಹಿಳೆಯರು ತಮ್ಮ ಪತಿಯ ಪಾದ ಪೂಜೆ ಮಾಡಿದರೆ, ಅವಿವಾಹಿತ ಮಹಿಳೆಯರು ಉತ್ತಮ ಪತಿ ಸಿಗಲೆಂದು ಹರಕೆ ಕಟ್ಟಿಕೊಂಡರು. ಇನ್ನೂ ಸಹೋದರ ಆಯಸ್ಸಿಗಾಗಿ ಸಹೋದರಿಯರು ವ್ರತ ಮಾಡಿದ್ದು ಕಂಡು ಬಂತು.

ಕಲಬುರಗಿ ಜನರ ಪವಿತ್ರ ಮಾಸ ಶ್ರಾವಣ

ಕಲ್ಯಾಣ ಕರ್ನಾಟಕದ ಆರಾಧ್ಯ ದೈವ, ಮಹಾ ದಾಸೋಹಿ ಶ್ರೀ ಶರಣಬಸವೇಶ್ವರರು ನೆಲಸಿರುವ ಕಲಬುರಗಿಯಲ್ಲಿ ಪ್ರತಿವರ್ಷ ಶ್ರಾವಣ ಮಾಸ ಬಂದರೆ, ಜಿಲ್ಲೆಯಲ್ಲಿ ಎಲ್ಲಿಲ್ಲದ ಸಡಗರ ಸಂಭ್ರಮ ಮನೆ ಮಾಡುತ್ತದೆ. ಕಲಬುರಗಿ ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಒಂದು ತಿಂಗಳು ಭಜನೆ ಕಾರ್ಯಕ್ರಮ ನಡೆಯುತ್ತವೆ. ಅಲ್ಲದೇ, ಜನರು ಪ್ರತಿ ಸೋಮವಾರ ಉಪವಾಸ ಆಚರಣೆ ಮಾಡಿ, ಪಾದಯಾತ್ರೆ ಮೂಲಕ ದೇವಸ್ಥಾನಕ್ಕೆ ಬಂದು ಆಶೀರ್ವಾದ ಪಡೆದು ಪುನೀತರಾಗುತ್ತಾರೆ. ಅದರಲ್ಲೂ ಮೂರನೇ ಸೋಮವಾರ ಶರಣಬಸವೇಶ್ವರರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಆಗ ಜಾತ್ರೆ ವಾತಾವರಣವೇ ನಿರ್ಮಾಣವಾಗುತ್ತದೆ. ಒಂದು ತಿಂಗಳ ಕಲಬುರಗಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಪವಿತ್ರ ಶ್ರಾವಣ ಮಾಸ ಆಚರಣೆ ಮಾಡುತ್ತಾರೆ.

ಉದ್ಯೋಗ ಪ್ರಾರಂಭಕ್ಕೆ ಸಾಲ ನೀಡಲು ಅರ್ಜಿ

ಚಿತ್ತಾಪೂರ: ಚಿತ್ತಾಪೂರ ಪಟ್ಟಣದಲ್ಲಿ ನಗರದ ಬಡತನ ರೇಖೆ ಗಿಂತ ಕೆಳಗಿರುವ ಕುಟುಂಬಗಳ ನಿರುದ್ಯೋಗ ಅಭ್ಯರ್ಥಿಗಳು ಕೆಳಕಂಡ ಸೌಲಭ್ಯ ಪಡೆಯಲು ಅರ್ಹ ಫಲಾನುಭಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಚಿತ್ತಾಪೂರ ಪುರಸಭೆ ಮುಖ್ಯಾಧಿಕಾರಿ ಅವರು ತಿಳಿಸಿದ್ದಾರೆ. ವೈಯಕ್ತಿಕ ಉದ್ಯೋಗ ಪ್ರಾರಂಭಿಸಲು ಸಾಲ ಬಡ್ಡಿ ಸಹಾಯಧನ ಗುಂಪು ಉದ್ಯೋಗ ಪ್ರಾರಂಭಿಸಲು ಸಾಲ ಮತ್ತು ಬಡ್ಡಿ ಸಹಾಯಧನ ಹಾಗೂ ಬ್ಯಾಂಕ್ ಲಿಂಕೇಜ್‌ನಲ್ಲಿ ಸಾಲ ಮತ್ತು ಬಡ್ಡಿ ಸಹಾಯಧನ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿದಾರರು ಚಿತ್ತಾಪೂರ ನಗರದ ಖಾಯಂ ನಿವಾಸಿಯಾಗಿರಬೇಕು. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರಬೇಕು ವಯೊಮಿತಿ 18 ರಿಂದ 40 ವರ್ಷದೊಳಗಿರಬೇಕು ವಾರ್ಷಿಕ ವರಮಾನ 2.00.000 ರು. ಮೀರಿರಬಾರದು. ಅರ್ಜಿದಾರರು ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ಅರ್ಹ ಫಲಾನುಭವಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಅಗತ್ಯ ದಾಖಲೆಗಳನ್ನು ಲಗತ್ತಿಸಿ 2024 ಅಗಸ್ಟ್ 17 ರೊಳಗಾಗಿ ಚಿತ್ತಾಪೂರ ಪಟ್ಟಣದ ಚಿತ್ತಾಪೂರ ಕಾರ್ಯಾಲಯದಲ್ಲಿ ಅರ್ಜಿ ಸಲ್ಲಿಸಬೇಕು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳೊಂದಿಗೆ ಲಗತ್ತಿಸಬೇಕಾದ ದಾಖಲೆಗಳು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಚಿತ್ತಾಪೂರ ಕಾರ್ಯಾಲಯದ ವೆಬ್‌ಸೈಟ್‌ನ್ನು ಹಾಗೂ ಪಟ್ಟಣದ ಬಡತನ ನಿರ್ಮೂಲನ ಕೋಶ ವಿಭಾಗಕ್ಕೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೊರಿದ್ದಾರೆ.

ಬಗರ್ ಹುಕುಂ: ಸ್ಮಶಾನ ಸ್ಥಳಾಂತರಕ್ಕೆ ಆಗ್ರಹ

ಕಲಬುರಗಿ: ತಾಲೂಕಿನ ಇಟಗಾ (ಕೆ) ಗ್ರಾಮದಲ್ಲಿ ಬರುವ ತಾಂಡಾದ ರೈತರು ಸುಮಾರು 70 ವರ್ಷಗಳಿಂದಲೂ ಸಾಗುವಳಿ ಮಾಡುತ್ತಿರುವ ಬಗರ್ ಹೂಕುಂ ಜಮೀನಿನಲ್ಲಿ ಸ್ಮಶಾನ ಭೂಮಿ ಮಾಡಿರುವುದನ್ನು ಖಂಡಿಸಿ ಹಾಗೂ ಇದನ್ನು ಇಲ್ಲಿಂದ ಸ್ಥಳಾಂತರಿಸಲು ಒತ್ತಾಯಿಸಿ ಅಖಿಲ ಭಾರತ ರೈತಕೃಷಿ ಕಾರ್ಮಿಕ ಸಂಘಟನೆ (ಎಐಕೆಕೆಎಂಎಸ್) ನೆತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ಕೈಗೊಳ್ಳಲಾಯಿತು. ಈಗಾಗಲೇ ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿರುವ ರೈತರು, ಸರ್ಕಾರಕ್ಕೂ ಅರ್ಜಿ ಹಾಕಿರುವ ಬಗರ್ ಹೂಕುಮ್ ಸಾಗುವಳಿದಾರರಿಗೆ ಹಕ್ಕು ಪತ್ರ ವಿತರಿಸಬೇಕು ಎಂಬ ಪ್ರಮುಖ ಬೇಡಿಕೆಯ ಮನವಿ ಪತ್ರವನ್ನು ಜಿಲ್ಲಾಡಳಿತದ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಮಹೇಶ ಎಸ್.ಬಿ, ವಿಶ್ವನಾಥ ಸಿಂಗೆ, ಶಿವರಾಮ ರಾಠೋಡ, ಪಾಂಡು ರಾಠೋಡ ಸೇರಿದಂತೆ ರೈತ ಕಾರ್ಮಿಕರು ಭಾಗವಹಿಸಿದ್ದರು.

ಅಕ್ರಮ ಅಕ್ಕಿ ಸಾಗಣೆ: ಪ್ರಕರಣ ದಾಖಲು

ಆಳಂದ: ನೆರೆಯ ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವ ಅಕ್ಕಿ ಗುಡ್ಸ್ ಗಾಡಿಯನ್ನು ಸಾರ್ವಜನಿಕರ ದೂರಿನ ಮೇರೆಗೆ ಆಳಂದ ಪೊಲೀಸರು ಕಾರ್ಯಚಾರಣೆ ನಡೆಸಿ ವಶಕ್ಕೆ ಘಟನೆ ಶನಿವಾರ ಮಧ್ಯೆ ನಡೆದಿದೆ. ಸಾರ್ವಜನಿಕರ ದೂರಿನ್ವಯ 112ಗೆ ಕರೆ ಮಾಡಿ ಕಲಬುರಗಿ ಯಿಂದ ಸೋಲಾಪೂರಕ್ಕೆ ಹೋಗುವ ಆಳಂದ ಚೆಕ್‌ಪೋಸ್ಟ್ ಸಮೀಪದಲ್ಲಿ ಕೆಎ 32 ಡಿ 3307 ಎಂಬ ಟಾಟಾ ಗುಡ್ಸ್ ಗಾಡಿಯಲ್ಲಿ ಅಕ್ರಮ ಪಡಿತರ ಚೀಟಿ, ಅಂಗನವಾಡಿ, ಬಿಸಿಯೂಟ ಸಂಬಂಧಿಸಿದ ಅಕ್ಕಿ ಸಾಗಾಣಿಕೆ ಆಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ವಶಕ್ಕೆ ಪಡೆಸಿಕೊಂಡಿದ್ದಾರೆ. ಪೊಲೀಸರ ಮಾಹಿತಿ ಅರಿತು ಆಹಾರ ಶಿರಸ್ತೇದಾರ ಭಾನುವಾರ ಮಧ್ಯಾಹ್ನ ಹೊತ್ತಿಗೆ ಠಾಣೆ ಧಾವಿಸಿ ಗುಡ್ಸ್ ಗಾಡಿಯಲ್ಲಿನ ಅಕ್ಕಿಯನ್ನು ಪರಿಶೀಲಿಸಿ ಪಡಿತರ ಚೀಟಿ ಅಕ್ಕಿಯಂದು ಖಚಿಸಿ ಪಡಿಸಿ ಒಟ್ಟು 173 ಕ್ವಿಂಟಲ್ ಆಗಿದ್ದು ಇದರ ಮೌಲ್ಯ 6.3 ಲಕ್ಷ ರು. ಹಾಗೂ ವಾಹನ ಮೌಲ್ಯ 5 ಲಕ್ಷ ರೂ ಎಂದು ಅಂದಾಜಿಸಿಲಾಗಿದೆ. ಗುಡ್ಸ್ ಗಾಡಿ ವಾಹನ ಚಾಲಕ ಜುಮೈದ ಫಜಲ್ ಶೇಖ , ಅಕ್ರಮ ದಾಸ್ತಾನು ಮಾಡಿದ ಶರಣು ಕಲಬುರಗಿ ಮತ್ತು ವಾಹನ ಮಾಲೀಕ ಲಾಯಕ ಅಲಿ ಇವರುಗಳ ವಿರುದ್ಧ ಪೊಲೀಸ ಠಾಣೆಯಲ್ಲಿ ಚಾಲಕ ಹೇಳಿಕೆ ಮೇರೆಗೆ ಪ್ರಕರಣ ದಾಖಲಿಸಲಾಗಿದೆ ಎಂದು ಆಹಾರ ಶಿರಸ್ತೇದಾರ ಅಂಬರೀಶ ಅವರು ತಿಳಿಸಿದ್ದಾರೆ. ಪಿಓ ಮಹಾದೇವ, ಎಎಸ್ಐ ಮೊಹ್ಮದ, ಪಿಸಿಗಳಾದ ಗಣಪತರಾವ, ಹಣಮಂತ ಇದ್ದರು.

ಸಂಗೊಳ್ಳಿ ರಾಯಣ್ಣ ಜಯಂತಿ ಆ.18 ರಂದು

ಆಳಂದ: ಕ್ರಾಂತಿವೀರ ಸಂಗೋಳ್ಳಿ ರಾಯಣ್ಣ ಅವರ 228 ನೇ ಜಯಂತಿ ಉತ್ಸವ ಆ 18 ರಂದು ಪಟ್ಟಣದಲ್ಲಿ ಆಚರಿಸಲಾ ಗುವುದು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ

ತಾಲೂಕು ಅಧ್ಯಕ್ಷ ಸಿದ್ದು ಪೂಜಾರಿ ಅವರು ತಿಳಿಸಿದ್ದಾರೆ. ಭಾನುವಾರ ಪಟ್ಟಣದಲ್ಲಿ ಹೇಳಿಕೆ ನೀಡಿರುವ ಅವರು, ಅಂದು ನಡೆಯುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಲಹೆಗಾರ ಮತ್ತು ಶಾಸಕ ಬಿ.ಆರ್ .ಪಾಟೀಲ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಬೀದರ ಸಂಸದ ಸಾಗರ ಖಂಡ್ರೆ, ಕುರಿ ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವೇಂದ್ರ ಮರತೂರ ಸೇರಿದಂತೆ ಸಮಾಜದ ಗಣ್ಯರನ್ನು ಆವ್ಹಾನಿಸಲಾಗುವದು. ಕುರುಬರ ಸಂಘದ ವಿವಿಧ ಪರ ಸಂಘಟನೆಗಳು ಈ ಉತ್ಸವದಲ್ಲಿ ಪಾಲ್ಗೊಳ್ಳುವವರು , ಡೋಳ್ಳು ಕುಣಿತ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸುವರು ಎಂದು ತಿಳಿಸಿದ್ದಾರೆ. ಕ್ರಾಂತಿವೀರ ಸಂಗೋಳ್ಳಿ ರಾಯಣ್ಣ ಅವರ 228 ನೇ ಜಯಂತಿ ಉತ್ಸವ ಆ 18 ರಂದು ಪಟ್ಟಣದಲ್ಲಿ ಆಚರಿಸಲಾಗುವುದು ಎಂದು ಹೇಳಿದ್ದಾರೆ. ಸಮಾಜದ ಪ್ರಮುಖರಾದ ಬೀರಣ್ಣಾ ಪೂಜಾರಿ, ತುಕಾರಾಮ ವಗ್ಗೆ ಸೇರಿದಂತೆ ಇತರರು ಜತೆಯಲ್ಲಿ ಇದ್ದರು.

ಸಮಾಚಾರ ಸಣ್ಣದಲ್ಲ

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಬಳ್ಳಾರಿ: ಕುಡತಿನಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಸಹಾಯಧನಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕುಡತಿನಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ತಿಳಿಸಿದ್ದಾರೆ. ಆಸಕ್ತರು ಆ.9ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಕುಡತಿನಿ ಪಟ್ಟಣ ಪಂಚಾಯಿತಿ ಕಚೇರಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೋನ್ ಇನ್ ಕಾರ್ಯಕ್ರಮ ಇಂದು

ಬಳ್ಳಾರಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದಿಂದ ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣ ಕರ ಕುಂದು ಕೊರತೆಗಳನ್ನು ಆಲಿಸಲು ಆ.5 ರಂದು ಫೋನ್ ಇನ್ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಂದು ಮಧ್ಯಾಹ್ನ 3.30 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣ ಕರ ಬಸ್ ಸೌಕರ್ಯದ ಕುರಿತು ಕುಂದು ಕೊರತೆ, ಸಮಸ್ಯೆಗಳಿದ್ದಲ್ಲಿ ಮೊ.7760992152, 6366423885 ಗೆ ಕರೆ ಮಾಡಿ ತಿಳಿಸಬಹುದು. ಬಳ್ಳಾರಿ ವಿಭಾಗದ ವ್ಯಾಪ್ತಿಯಲ್ಲಿ ಪ್ರತಿ ತಿಂಗಳ 1ನೇ ಸೋಮವಾರದಂದು ಬಳ್ಳಾರಿ, ಸಿರುಗುಪ್ಪ, ಕುರುಗೋಡು, ಕಂಪ್ಲಿ ಮತ್ತು ಸಂಡೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಯಾಣ ಕರ ಬಸ್ ಸೌಕರ್ಯದ ಕುರಿತು ಕುಂದು–ಕೊರತೆಗಳನ್ನು ಆಲಿಸಲು ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಸಾರ್ವಜನಿಕ ಪ್ರಯಾಣ ಕರ ಬಸ್ ಸೌಕರ್ಯದ ಕುರಿತು ಕುಂದು ಕೊರತೆಗಳಿದ್ದಲ್ಲಿ ಆಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಪ್ರಯಾಣ ಕರು ಫೋನ್ ಇನ್ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕಕರಸಾ ನಿಗಮ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ತಿಳಿಸಿದ್ದಾರೆ.

ಪರೀಕ್ಷೆಗಳಿಗೆ ತರಬೇತಿ: ನೋಂದಣಿಗೆ ಆಹ್ವಾನ

ಬಳ್ಳಾರಿ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿ ಶಿಬಿರ ಏರ್ಪಡಿಸಲಾಗಿದ್ದು ಆಸಕ್ತರು ನೋಂದಾಯಿಸಿಕೊಳ್ಳಬಹುದು. ಕೆಇಎ (ಕರ್ನಾಟಕ ಪರೀಕ್ಷಾ ಪ್ರಾಧಿಕಾರ)ಮೂಲಕ ನಡೆಸಲಿರುವ ರಾಜ್ಯ ಮಟ್ಟದ ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ(ಕೆ–ಸೆಟ್)ಹಾಗೂ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ–ನೆಟ್) ಮತ್ತು ಕಿರಿಯ ಶಿಷ್ಯವೇತನ ಸಂಶೋಧನಾ ಸಹಾಯಕರ (ಜೆಆರ್‌ಎಫ್) ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತದೆ. ಆಸಕ್ತರು ಆ.9 ರೊಳಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.0821–2515944 ಗೆ ಸಂಪರ್ಕಿಸಬಹುದು ಎಂದು ಕರಾಮುವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ ತಿಳಿಸಿದ್ದಾರೆ.

ತಿಮ್ಮಯ್ಯ ನಗದು ಪ್ರಶಸ್ತಿಗೆ ಅರ್ಜಿ

ಬಳ್ಳಾರಿ: ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ ಜನರಲ್ ಕೆಎಸ್ ತಿಮ್ಮಯ್ಯ ನಗದು ಪ್ರಶಸ್ತಿ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಮಾಜಿ ಸೈನಿಕರ ಮಕ್ಕಳು ಅಕ್ಟೋಬರ್ 30ರ ಒಳಗಾಗಿ ಆಫ್‌ಲೈನ್ ಮೂಲಕ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಆವರಣದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಧಾರವಾಡ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಅಥವಾ ದೂ.0836–2440176 ಗೆ ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬಳ್ಳಾರಿ: ನಗರ ಜೆಸ್ಕಾಂ ಉಪವಿಭಾಗ–1ರ ವ್ಯಾಪ್ತಿಯ 220/11 ಕೆವಿ ಅಲ್ಲಿಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್–2ನ ಎಫ್–34 ನ ತುರ್ತು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಆ.5 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಇತರೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಕಾರ್ಯನಿರ್ವಾಹಕ ಎಂಜಿನಿಯರ್ ಎ.ಟಿ. ಲಕ್ಷ್ಮೀ ತಿಳಿಸಿದ್ದಾರೆ.

{ಬಿ.ವೈ. ರಾಘವೇಂದ್ರ} ಸಂಸದರು

ಶಿಕ್ಷಣ ಸಚಿವ ಮಧು ಬಂಗಾರಪ್ಪ ಎನ್‌ಡಿಎ ಪಾದಯಾತ್ರೆ ಬಗ್ಗೆ ಮಾತನಾಡಿದ್ದಾರೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು 1 ವರ್ಷ 4 ತಿಂಗಳು ಆಗಿದೆ. ವಾಲ್ಮೀಕಿ ಹಗರಣದಲ್ಲಿ ಚಂದ್ರಶೇಖರನ್ ಅವರನ್ನು ಬಲಿ ಪಡೆದಿದೆ. ಮುಡಾ ಹಗರಣದಲ್ಲಿ ಸಿಎಂ ಕುಟುಂಬ ಭಾಗಿಯಾಗಿದೆ. ಪಿಎಸ್‌ಐ ಪರಶುರಾಮ್ ಸಾವಿಗೆ ಲಂಚದ ಬೇಡಿಕೆ ಕಾರಣ ಎಂಬ ದೂರಿದೆ. ಸಚಿವರು ಇವುಗಳ ಬಗ್ಗೆ ಮಾತಾಡಲಿ.

ವಾರಾಂತ್ಯದ ದಿನಗಳಲ್ಲಿ ಹೆಚ್ಚಿನ ಜನ ಆಗಮನ | ಭೀಮನ ಅಮಾವಸ್ಯೆ | ವಿರೂಪಾಕ್ಷ, ರಾಮದೇವರ ದರ್ಶನ ಪಡೆದ ಭಕ್ತರು

ಪ್ರಸಿದ್ಧ ಹಂಪಿಯ ಜಲ ವೈಭವ ಕಣ್ತುಂಬಿಕೊಂಡ ಪ್ರವಾಸಿಗರು

ಹೊಸಪೇಟೆ: ಕಳೆದ ಹಲವು ದಿನಗಳಿಂದ ತುಂಗಭದ್ರೆ ಜಲಾಶಯದಿಂದ ಅಪಾರ ಪ್ರಮಾಣದಲ್ಲಿ ನದಿಗೆ ನೀರು ಹರಿಸಿದ್ದು ಹಂಪಿಯ ಸ್ಮಾರಕಗಳು ಜಲಾವೃತಗೊಂಡ ಹಿನ್ನೆಲೆಯಲ್ಲಿ ಸಾಕಷ್ಟು ಜನರು ಹಂಪಿಗೆ ಭೇಟಿ ನೀಡಿ ನದಿಯ ಪರಿಸರದ ಸೊಬಗನ್ನು ಸವಿಯುತ್ತಿದ್ದಾರೆ.



ಭೀಮನ ಅಮಾವಸ್ಯೆವಿರೂಪಾಕ್ಷ, ರಾಮದೇವರ ದರ್ಶನ ಪಡೆದದ ಭಕ್ತರು.

ವಾರದ ಕೊನೆಯ ದಿನಗಳಾದ ಶನಿವಾರ ಹಾಗೂ ಭಾನುವಾರ ಹಂಪಿಗೆ ಸಾಕಷ್ಟು ಪ್ರವಾಸಿಗರು ಆಗಮಿಸಿದ್ದರು. ಹಂಪಿ ಐತಿಹಾಸಿಕ, ಪ್ರವಾಸಿ ತಾಣಮಾತ್ರವಲ್ಲದೆ ಪ್ರಮುಖ ಪುಣ್ಯ ಕ್ಷೇತ್ರವೂ ಆದ ಹಿನ್ನೆಲೆಯಲ್ಲಿ ಆಷಾಢ ಮಾಸದ ಕೊನೆಯ ಶನಿವಾರ ಹಾಗೂ ಭಾನುವಾರ ಭೀಮಾನ ಅಮಾವಸ್ಯೆ ನಿಮಿತ್ತ ಜಿಲ್ಲೆ ಸೇರಿದಂತೆ ನೆರೆಯ ಜಿಲ್ಲೆ ಹಾಗೂ ಆಂಧ್ರ, ತೆಲಂಗಾಣ ಭಾಗದ ಹಲವಾರು ಭಕ್ತರು ಹಂಪಿಗೆ ಆಗಮಿಸಿ ತುಂಗಭದ್ರಾ ನದಿಗೆ ವಿಶೇಷ ಪೂಜೆ ಸಲ್ಲಿಸಿದರು.

ಹಂಪಿಯ ನದಿ ತಟದಲ್ಲಿ ಕೆಲ ಕಾಲ ಕಳೆದ ಪ್ರವಾಸಿಗರು ಬಳಿಕ ಸಾಸುವೆ ಕಾಳು ಗಣಪತಿ, ಕಡಲೆಕಾಳು ಗಣಪತಿ, ವಿಜಯವಿಠಲ ದೇವಸ್ಥಾನದ ಕಲ್ಲಿನ ತೇರು, ಪುರಂದರ ಮಂಟಪ ಬಳಿ ತೆರಳಿ ಹಂಪಿಯ ಸೊಬಗನ್ನು ಕಣ್ತುಂಬಿಕೊಂಡರು.

ಪುಣ್ಯ ಸ್ನಾನ ಹಾಗೂ ದೇವರ ದರ್ಶನ

ಹಲವರು ಪುಣ್ಯ ಸ್ನಾನವನ್ನು ನೆರವೇರಿಸಿ ಕ್ಷೇತಾಧಿಪತಿ ಶ್ರೀಪಂಪಾ ವಿರೂಪಾಕ್ಷೇಶ್ವರ, ಶ್ರೀಪಂಪಾದೇವಿ, ತಾಯಿ ಭುವನೇಶ್ವರಿ ದೇವಿಗೆ ವಿಶೇಷ ಫಲ ಸಮರ್ಪಿಸಿ ದರ್ಶನ ಪಡೆದರು. ಜತೆಗೆ ಚಕ್ರತೀರ್ಥ ಸಮೀಪದ ಶ್ರೀಕೋದಂಡ ರಾಮದೇವರ, ಶ್ರೀಯಂತ್ರೋದ್ಧಾರಕ ಆಂಜನೇಯ ದೇಗುಲಕ್ಕೂ ತೆರಳಿ ಪೂಜೆ ಸಲ್ಲಿಸಿ ದರ್ಶನ ಪಡೆದರು.

ನಾಯಕತ್ವದ ಗುಣ ಬೆಳೆಸುವ ಎನ್‌ಎಸ್‌ಎಸ್ ಶಿಬಿರಗಳು

ಅರಸಿಕೇರೆ ಗ್ರಾಮದ ಎ. ಎಚ್ .ಎ .ಎಚ್ . ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಪ್ರಸಕ್ತ ಶೈಕ್ಷಣಿಕ ಸಾಲಿನ ವಾರ್ಷಿಕ ವಿಶೇಷ ಶಿಬಿರ ಸಮಾರೋಪ ಸಮಾರಂಭ ವಿದ್ಯಾರ್ಥಿಗಳಿಗೆ ಚಂದ್ರಶೇಖರ್ ಸಲಹೆ ನೀಡಿದರು

ಹರಪನಹಳ್ಳಿ: ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ದೈಹಿಕ ಸಾಮರ್ಥ್ಯದ ಜತೆಗೆ ನಾಯಕತ್ವ ಗುಣಗಳನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳು ಸ್ವಚ್ಛತೆಗೆ ಸಾರ್ವಜನಿಕರಲ್ಲಿ ಆರೋಗ್ಯದ ಮಹತ್ವದ ಕುರಿತು ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕು ಎಂದರು. ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ ಚಂದ್ರಶೇಖರ್ ಹೇಳಿದರು.

ತಾಲೂಕಿನ ಅರಸಿಕೇರೆ ಗ್ರಾಮದ ಎ. ಎಚ್ .ಎ .ಎಚ್ . ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಪ್ರಸಕ್ತ ಶೈಕ್ಷಣಿಕ ಸಾಲಿನ ವಾರ್ಷಿಕ ವಿಶೇಷ ಶಿಬಿರ ಸಮಾರೋಪ ಸಮಾರಂಭ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಹಡಗಲಿ ತಾಲೂಕು ಕಾರ್ಯನಿರ್ವಾಹಣಾಧಿಕಾರಿ ಶಿವ ಮೂರ್ತ್ಯಪ್ಪ ಮಾತನಾಡಿ, ಶಾಲಾ ಕಾಲೇಜುಗಳಲ್ಲಿ ನಿತ್ಯ ಯೋಗದ ಕುರಿತು ಜಾಗೃತಿ ಮೂಡಿಸಬೇಕು. ಸಾರ್ವಜನಿಕರು ಡೆಂಗ್ಯೂ, ಮಲೇರಿಯದಂತ ಸಾಂಕ್ರಾಮಿಕ ರೋಗಗಳಿಗೆ ಭಯಗೊಳ್ಳದೆ, ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಚನ್ನಬಸಯ್ಯ, ಸಲಾಂ ಸಾಬ್, ವೀರೇಶ್, ಬಾಲಾಜಿ, ಸಿದ್ದಣ್ಣ, ಪರಸಪ್ಪ, ಮಲ್ಲಣ್ಣ, ಬಸವರಾಜ್, ಸಂದೀಪ್ ಗೌಡ, ಉಮೇಶ್ ಉಪಸ್ಥಿತರಿದ್ದರು.

ಸಿಎಂ ವಿಚಾರಕ್ಕೆ ಬಿಜೆಪಿ ಕೈ ಹಾಕಿದರೆ ರಕ್ತಪಾತ

ಹರಪನಹಳ್ಳಿ: ರಾಜ್ಯ ಬಿಜೆಪಿ ನಾಯಕರು ಸಿ.ಎಂ.ಸಿದ್ದರಾಮಯ್ಯನವರು ವಿರುದ್ಧ ಪಿತೂರಿ ನಡೆಸಿದರೆ ರಾಜ್ಯ ರಕ್ತ ಪಾತ ಆಗುತ್ತದೆ ಎಂದು ತಾಲೂಕು ಬ್ಲಾಕ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಹೇಳಿದರು.

ಪಟ್ಟಣ ಪ್ರವಾಸಿ ಮಂದಿರದಲ್ಲಿ ತಾಲೂಕು ಬ್ಲಾಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಸುದ್ದಿ ಗೋಷ್ಠಿ ನಡೆಸಲಾಯಿತು.

ಪಟ್ಟಣ ಪ್ರವಾಸಿ ಮಂದಿರದಲ್ಲಿ ತಾಲೂಕು ಬ್ಲಾಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಜನರಿಂದ ಆಯ್ಕೆಯಾದ ಸರಕಾರವನ್ನು ಬಿಜೆಪಿಯವರು ಯಾವುದೇ ಆರೋಪ ಇಲ್ಲದಿದ್ದರೂ ಸಹ ಸುಳ್ಳು ಆರೋಪ ಸೃಷ್ಟಿಮಾಡಿಕೊಂಡು ಮುಖ್ಯ ಮಂತ್ರಿ ಸಿದ್ದರಾಮಯ್ಯನವರ ವಿರುದ್ದ ಬಿಜೆಪಿಯವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿಯವರ ವಿರುದ್ದ ಕಿಡಿಕಾರಿದರು.

ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ರಾಜ್ಯದ ಗಲ್ಲಿಗಲ್ಲಿ ಚುನಾವಣೆ ಪ್ರಚಾರ ಮಾಡಿದರು ಬಿಜೆಪಿಗೆ ಬಹುಮತ ಬರಲಿಲ್ಲಸಕ್ಕೆ ಸಿ.ಎಂ.ಸಿದ್ದರಾಮಯ್ಯನವರ ವಿರುದ್ದ ಬಿಜೆಪಿಯವರು ಪಿತೂರಿ ನಡೆಸುತ್ತಿದ್ದಾರೆ.

ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿಶ್ ಶಾ ರವರಿಗೆ ಸಿದ್ದರಾಮಯ್ಯನವರನ್ನು ನೋಡಿದರೆ ಬಯ ಜಾಸ್ತಿ ಬಯ ಇರುವುದರಿಂದ ಸಿದ್ದರಾಮಯ್ಯನವರ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ.

ದೇಶದ ಹಣಕಾಸು ಸಚಿವೆ ನಿರ್ಮಲ ಸಿತಾರಮ್ ಮತ್ತು ಪ್ರಧಾನಿ ನರೇಂದ್ರ ಮೋದಿಯವರು ಇಚ್ಚಿಗೆ ಮಂಡಿಸಿದ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯಕ್ಕೆ ಚೆಂಬು ಉಡುಗರೆಯಾಗಿ ನೀಡಿದ್ದಾರೆ ಅವರ ವಿರುದ್ದ ಹೋರಾಟ ಮಾಡಬೇಕಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದಾರಮಯ್ಯನವರು ಯಾವುದೇ ರೀತಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿಲ್ಲ ಆಧಾರ ರಹಿತ ಆರೋಪ ಮಾಡಿರುವುದು ಸರಿಯಲ್ಲ.
-ಬಿ.ಗೋಣಿಬಸಪ್ಪ, ವಕೀಲ

ಟಿ.ವೆಂಕಟೇಶ ವಕೀಲರು ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಆಡಳಿ ಪಕ್ಷ ಬಲಿಷ್ಠವಾಗಿ ರಬೇಕಾದರೆ ಸರಕಾರದ ವಿರುದ್ದ ವಿರೋಧ ಪಕ್ಷದವರ ವಿರೋದವು ಬಲಿಷ್ಠವಾಗಿರಬೇಕೆ ಹೊರತು ಪಿತೂರಿ ಮಾಡುವುದಕ್ಕೆ ವಿರೋಧ ಪಕ್ಷ ಆಡಳಿತ ನಡೆಸಬಾರದು ಎಂದರು.

ಈ ಹಿಂದೆ ವಾಮಮಾರ್ಗ ಮೂಲಕ ಆಡಳಿತ ನಡೆಸಿದ ಬಿಜೆಪಿ ಸರಕಾರದಲ್ಲಿ ಅನೇಕ ಭ್ರಷ್ಟಾಚಾರ ನಡೆಸಿರುವ ಇತಿಹಾಸವಿದೆ ಅವರ ಬಗ್ಗೆ ಮೊದಲ ಮಾತನಾಡಲಿ ,ದೇಶದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ ಮುಖ್ಯ ಮಂತ್ರಿ ಸಿದ್ದರಾಮಯ್ಯನವರ ವಿರುದ್ದ ಮಾಡುತ್ತಿರುವ ಆರೋಪ ಆದಾರ ರಹಿತ ಆರೋಪವಾಗಿದೆ ಎಂದರು. ಪುರಸಭೆ ಸದಸ್ಯ ಡಿ.ಅಬ್ದುಲ್ ರಹಮಾನ್ ಮಾತನಾಡಿ, ಬಿಜೆಪಿ ವಾಮ ಮಾರ್ಗದ ಮೂಲಕ ಅಧಿಕಾರ ಹಿಡಿಯಲು ಬಿಜೆಪಿ ಯವರು ಅಹಿಂದ ನಾಯಕ ಸಿದ್ದರಾಮಯ್ಯನವರು ವಿರುದ್ದ ಮಾಡಿರುವ ಸತ್ಯಕ್ಕೆ ದೂರವಾದ ಸಂಗತಿ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಎಂ.ವಿ.ಆಂಜಿನಪ್ಪ ಚಿಗಟೇರಿ ಬ್ಲಾಕ್, ಕುಬೇರ ಗೌಡ, ಪುರಸಭೆ ಸದಸ್ಯರಾದ ಅಬ್ದುಲ್ ರಹಮಾನ್, ಟಿ. ವೆಂಕಟೇಶ್, ಗಣೇಶ್, ಗೊಂಗಡಿ ನಾಗರಾಜ್, ಲಾಟಿ ದಾದಾಫೀರ್, ಬಿ.ಗೋಣಿಬಸಪ್ಪ ಮುಜುಬರ್, ಚಿಕ್ಕೇರಿ ಬಸಣ್ಣ, ವಸಂತಪ್ಪ, ಶಶಿಕುಮಾರ್ ನಾಯ್ಕ, ಟಿ.ಅಂಜಿನಪ್ಪ, ಓ.ರಾಮಪ್ಪ, ಸಿ.ಪರಸುರಾಮಪ್ಪ, ನಾಗರಾಜ್, ಅಶೋಕ್, ಚಂದ್ರಪ್ಪ, ಜಾವೀದ್, ಎಲ್. ಮಂಜ್ಯಾನಾಯ್ಕ, ಸೊಂಬ್ಲನಾಯ್ಕ, ಎನ್. ಶಂಕರ್, ಹನುಮಂತಪ್ಪ ವಿರ್ಯನಾಯ್ಕ,, ನೀಲಗುಂದ ವಾಗೇಶ್, ವಕೀಲ ಟಿ.ಹೆಚ್.ಎಂ. ಮಂಜುನಾಥ್, ಓ ಮಾಹಂತೇಶ್, ದೇವಿಂದ್ರ ಗೌಡ್ರು, ದುರುಗಪ್ಪ, ಶಿರಾವರಾಜ್ ಇದ್ದರು.

ಒಳ ಮೀಸಲು ತೀರ್ಪು ಸ್ವಾಗತಿಸಿ ಸಂಭ್ರಮ

ಹೂವಿನಹಡಗಲಿ: ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಲ್ಲಿ ಅತಿ ಹಿಂದುಳಿದ ಜಾತಿಗಳಿಗೆ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದ ಮಿಸಲಾತಿಯಲ್ಲಿ ರಾಜ್ಯ ಸರಕಾರಗಳು ಒಳಮಿಸಲು ನೀಡಬ ಹುದು ಎಂದು ನೀಡಿರುವ ಸುಪ್ರೀಂ ಕೋರ್ಟ್ ನಿರ್ದಾರ ಮಹತ್ವದ ತೀರ್ಪುನ್ನು ಸ್ವಾಗತಿಸಿ ಪಟ್ಟಣದ ಶಾಸ್ತ್ರಿ ಸರ್ಕಲ್ ಮತ್ತು ಅಂಬೇಡ್ಕರ್ ಸರ್ಕಲ್‌ನಲ್ಲಿ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಸದಸ್ಯರುಗಳು ದಲಿತ ಸಮಾಜದ ಮುಖಂಡರುಗಳು ಪರಸ್ಪರ ಸಿಹಿ ಹಂಚಿ ಪಟಾಕಿ ಸಿಡಿಸಿ ಹರ್ಷ ವ್ಯಕ್ತಪಡಿಸಿ ಸಂಭ್ರಮಿಸಿದರು.

ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಸದಸ್ಯರುಗಳು ದಲಿತ ಸಮಾಜದ ಮುಖಂಡರುಗಳು ಪರಸ್ಪರ ಸಿಹಿ ಹಂಚಿ ಪಟಾಕಿ ಸಿಡಿಸಿ ಹರ್ಷ ವ್ಯಕ್ತಪಡಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮುಖಂಡ ಹೆಚ್.ಪೂಜಪ್ಪ ಮಾತನಾಡಿ, ದಲಿತಪರ ಸಂಘಟನೆಗಳು ಸುಮಾರು ವರ್ಷಗಳಿಂದ ಮೀಸಲಾತಿ ವರ್ಗೀಕರಣ ಹೋರಾಟ ನಿರಂತರ ಪ್ರತಿಫಲವಾಗಿದೆ. ಈ ತೀರ್ಪು ಮಹತ್ವದ ತೀರ್ಪಾಗಿದ್ದು ಏಳು ಮುಖ್ಯ ನ್ಯಾಯಮೂರ್ತಿಗಳು ಕೂಲಂಕುಶವಾಗಿ ಪರಿಶೀಲಿಸಿ ಯಾರಿಗೂ ಯಾವ ಜಾತಿಗೂ ಅನ್ಯಾಯ ಮಾಡದ ಹಾಗೆ ನೀಡಿದ ತೀರ್ಪಾಗಿದೆ. ಇದನ್ನು ಕೂಡಲೇ ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತರಬೇಕು ಎಂದು ಹೇಳಿದರು.

ಮುಖಂಡ ಹಲಗಿ ಸುರೇಶ್ ಮಾತನಾಡಿ, ಹಲವಾರು ವರ್ಷಗಳಿಂದ ಒಗ್ಗಟ್ಟಾಗಿ ಹೋರಾಟ ಮಾಡಿದರ ಪ್ರತಿಫಲವಾಗಿ ಸತ್ಯಕ್ಕೆ ನ್ಯಾಯ ಸಿಕ್ಕಿದೆ ಈ ಕೂಡಲೇ ಜಾರಿ ಮಾಡಿ ಅನುಷ್ಠಾನಗೊಳಿಸಬೇಕು ಮುಖ್ಯನ್ಯಾಯ ಮೂರ್ತಿ ಡಿ.ವೈ.ಚಂದ್ರಚೂಡ ನೇತೃತ್ವದ 7 ಜನ ನ್ಯಾಯಮೂರ್ತಿಗಳು ಸುಪ್ರೀಂಕೋರ್ಟ್ ಪೀಠವು 6.1ರ ಅನುಪಾತದಲ್ಲಿ ತೀರ್ಪು ನೀಡಿದ್ದು ಪ.ಜಾತಿ.ಪ.ಪಂಗಡದ ಉಪವರ್ಗೀಕರಣ ಮಾಡಬಹುದಾಗಿದ್ದು. ಮಂದಕೃಷ್ಣ ಮಾದಿಗರವರ ನೇತೃತ್ವದಲ್ಲಿ ನೆಡದ ಹೋರಾಟದ ಫಲವೇ ಈ ತೀರ್ಪಾಗಿ ಬಂದಿದೆ ಎಂದರು.

ರಾಜ್ಯದ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರವರು ಒಳಮಿಸಲಾತಿ ಕುರಿತು ಕೇಂದ್ರಕ್ಕೆ ಶೀಪರಸ್ಸು ಮಾಡಿದ್ದರು, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಮಿಸಲಾತಿ ಕುರಿತು ಸುಪ್ರೀಂ ನಿಡಿರುವ ತೀರ್ಪುನ್ನು ಎತ್ತಿಹಿಡಿದು ಕೂಡಲೇ ಅನುಷ್ಠಾನ ಗೊಳಿಸಲು ಮುಂದಾಗಬೇಕೇಂದರು.
-ಹಲಗಿ ಸುರೇಶ್, ಮುಖಂಡ

ಸಮಾಜದ ಮುಖಂಡರು ಸುಪ್ರೀಂ ಕೋರ್ಟ್ ತೀರ್ಪುನ್ನು ಸ್ವಾಗತಿ ಸಿಹಿ ಹಂಚಿ ಪಟಾಕಿ ಸಿಡಿಸಿ ಹರ್ಷ ವ್ಯಕ್ತಪಡಿಸಿದರು. ದಲಿತ ಮುಖಂಡರಾದ ಹುಚ್ಚಂಗೆಪ್ಪ. ಪಿ.ನಿಂಗಪ್ಪ. ಕೆ.ಲಲಿತಮ್ಮ. ಜೆ.. ಶಿವರಾಜ. ತುಂಬಪ್ಪ ಕೊಳಚಿ. ಎ. ಕೆ.ಹೊನ್ನೂರಪ್ಪ, ಗಾಳಪ್ಪ.ನಾಗರಾಜ, ನವಲಿ ಶಶಿಧರ್. ನಾಗಪ್ಪ. ಎಂಟುಮನಿ ಭರಮಪ್ಪ. ಆನಂದ. ಕಾಗನೂರ ಮಲ್ಲೇಶ್. ಲಕ್ಷ್ಮಣಾ. ದೊಡ್ಡನಿಂಗಪ್ಪ. ಹೊಳಗುಂದಿ ದುರುಗೇಶ. ಹನುಮಂತ ಹಲಗಿ. ಮಾರುತಿ ಮಾಗಳ. ಗ್ರಾಮ ಪಂಚಾಯಿತಿ ಸದಸ್ಯೆ ಸುಜಾತಾ ಹಕ್ಕಂಡಿ ಇತರರಿದ್ದರು.

ಪತಂಜಲಿ ಯೋಗ ಸಮಿತಿಯಿಂದ ಜಡಿ ಬೂಟಿ ದಿವಸ್ ಆಚರಣೆ

ಗಿಡಮೂಲಿಕೆಗಳ ಮಹತ್ವ ಅರಿತು, ಬಳಸಿರಿ

ಹೊಸಪೇಟೆ: ನಮ್ಮ ಮನೆಯ ಸುತ್ತಮುತ್ತಲಿನಲ್ಲೇ ಬೆಳೆಸಬಹುದಾದ ಮತ್ತು ಬೆಳೆದಿರುವ ಗಿಡಮೂಲಿಕೆ ಸಸ್ಯಗಳ ಮಹತ್ವ ನಾವು ತಿಳಿದುಕೊಳ್ಳಬೇಕು ಮತ್ತು ಅವುಗಳನ್ನು ಬಳಸಿ ನಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಹಾಗೂ ಪತಂಜಲಿ ಯೋಗ ಸಮಿತಿಯ ಜಿಲ್ಲಾ ಪ್ರಭಾರಿ ಪ್ರೊ.ಎಫ್.ಟಿ.ಹಳ್ಳಿಕೇರಿ ಹೇಳಿದರು.

ಪತಂಜಲಿ ಆಯುರ್ವೇದ ಸಂಶೋಧನಾ ಸಂಸ್ಥೆಯ ಮುಖ್ಯಸ್ಥ ಆಚಾರ್ಯ ಬಾಲಕೃಷ್ಣ ಅವರ ಜನ್ಮದಿನ ಪ್ರಯುಕ್ತ ಭಾನುವಾರ ಪತಂಜಲಿ ಯೋಗ ಸಮಿತಿ ವಿಜಯನಗರ ಜಿಲ್ಲಾ ಘಟಕ ಇಲ್ಲಿನ ಕೊಟ್ಟೂರು ಸ್ವಾಮಿ ಮಠದ ಆವರಣದಲ್ಲಿ ಹಮ್ಮಿಕೊಂಡಿದ್ದ ಜಟಿ ಬೂಟಿ ದಿವಸ್ ಕಾರ್ಯಕ್ರಮದಲ್ಲಿ ಗಿಡಗಳನ್ನು ಹಂಚಿ ಅವರು ಮಾತನಾಡಿದರು.

ಎಲ್ಲರಿಗೂ ಔಷಧೀಯ ಗಿಡಗಳನ್ನು ವಿತರಿಸಲಾಯಿತು.

ಪತಂಜಲಿ ಸಂಸ್ಥೆಯ ವತಿಯಿಂದ ಯೋಗ ಮತ್ತು ಆಯುರ್ವೇದದಲ್ಲಿ ಸಹ ಸಾಕಷ್ಟು ಅಧ್ಯಯನ, ಸಂಶೋಧನೆ ನಡೆದಿದೆ. ಇದೆಲ್ಲದರ ರೂವಾರಿಗಳು ಬಾಬಾ ರಾಮ್‌ದೇವ್ ಮತ್ತು ಆಚಾರ್ಯ ಬಾಲಕೃಷ್ಣ. ಪ್ರತಿಯೊಬ್ಬರೂ ಯೋಗ, ಗಿಡಮೂಲಿಕೆಗಳ ಮಹತ್ವ ತಿಳಿಯುವ ಮೂಲಕ ಈ ಸಾಧಕರ ಕೊಡುಗೆಯನ್ನು ಮನೆ ಮನೆಗೆ ತಲುಪಿಸುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಭಾರತ ಸ್ವಾಭಿಮಾನ್ ಟ್ರಸ್ಟ್‌ನ ಉತ್ತರ ಕರ್ನಾಟಕ ಪ್ರಭಾರಿ ಬಾಲಚಂದ್ರ ಶರ್ಮಾ ಮಾತನಾಡಿ, 60 ಸಾವಿರಕ್ಕೂ ಅಧಿಕ ಗಿಡಮೂಲಿಕೆಗ ಕುರಿತಂತೆ ಆಚಾರ್ಯ ಬಾಲಕೃಷ್ಣ ಅವರು ವಿಶ್ವಕೋಶ ಸಿದ್ಧಪಡಿಸಿದ್ದು, ಅದರ 150 ಸಂಪುಟಗಳು ಪ್ರಕಟವಾಗಿವೆ. ಭಾರತ ಮಾತ್ರವಲ್ಲ, ಜಗತ್ತಿನ ಎಲ್ಲೆಡೆಯ ಗಿಡಮೂಲಿಕೆಗ ಕುರಿತ ಮಾಹಿತಿ ಅದರಲ್ಲಿದೆ. ರಾಸಾಯನಿಕ ಮುಕ್ತ ಆಹಾರ, ಔಷಧ ಬಳಕೆಗಾಗಿ ಅವರು ಇಷ್ಟೆಲ್ಲ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಪತಂಜಲಿ ಕಿಸಾನ್ ಸೇವಾ ಸಮಿತಿಯ ಜಿಲ್ಲಾ ಪ್ರಭಾರಿ ಕೃಷ್ಣ ನಾಯಕ್ ಅವರು ಹಲವು ಮೂಲಿಕಾ ಗಿಡಗಳ ಔಷಧೀಯ ಗುಣಗಳ ಬಗ್ಗೆ ಮಾಹಿತಿ ನೀಡಿದರು.

ಪತಂಜಲಿ ಯುವ ಭಾರತ ರಾಜ್ಯ ಪ್ರಭಾರಿ ಕಿರಣ್ ಕುಮಾರ್, ಪತಂಜಲಿ ಮಹಿಳಾ ಸಮಿತಿಯ ಜಿಲ್ಲಾ ಪ್ರಭಾರಿ ಮಂಗಳಮ್ಮ, ಯೋಗ ಸಾಧಕ ಅನಂತ ಜೋಷಿ, ವೆಂಕಟೇಶ ವಾಸಿ ಸೇರಿದಂತೆ ಯೋಗ ಶಿಕ್ಷಕರ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ರಾಘವರ 144ನೇ ಜಯಂತಿ ಸಮಾರಂಭಕ್ಕೆ ಚಾಲನೆ

ಬಳ್ಳಾರಿ: ನಗರದ ರಾಘವ ಕಲಾ ಮಂದಿರದಲ್ಲಿ ಹಮ್ಮಿಕೊಂಡಿರುವ ನಾಟ್ಯ ಕಲಾ ಪ್ರಪೂರ್ಣ ಬಳ್ಳಾರಿ ರಾಘವರ 144ನೇ ಜಯಂತಿ ಮತ್ತು ರಾಘವರ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾ ನ್ಯಾಯಾಧೀಶೆ ಕೆ.ಜಿ.ಶಾಂತಿ ಚಾಲನೆ ನೀಡಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ರಾಘವರು ವಕೀಲರಾಗಿದ್ದು ಸಂತಸ ತಂದಿದೆ. ಅವರು ರಂಗಕಲಾವಿದರಾಗಿ ವಿಶ್ವ ಮಟ್ಟದಲ್ಲಿ ಬೆಳಗಿದ್ದು ಹೆಮ್ಮೆಯ ಸಂಗತಿ, ಸಾಹಿತ್ಯ, ಸಾಂಸ್ಕೃತಿಕವಾಗಿ ನನಗೆ ಹೆಚ್ಚಿನ ಅರಿವು ಇಲ್ಲದಿದ್ದರೂ, ರಾಘವರ ಬಗ್ಗೆ ತಿಳಿದು ಸಂತಸಗೊಂಡೆ, ನಾವೆಲ್ಲ ಕಲಾರಂಗಕ್ಕೆ ಪ್ರೋತ್ಸಾಹದಾಯಕವಾಗಿ ನಿಲ್ಲಬೇಕು ಎಂದರು. ವಿಜಯನಗರ ಶ್ರೀಕೃಷ್ಣದೇವರಾಯ ವಿವಿ ಕುಲಸಚಿವ ಎಸ್.ಎನ್. ರುದ್ರೇಶ್ ಮಾತನಾಡಿ, ವಿವಿಯಲ್ಲಿ ನಿರ್ಮಾಣ ಮಾಡುತ್ತಿರುವ ಬಯಲ ರಂಗ ಮಂದಿರಕ್ಕೆ ಬಳ್ಳಾರಿ ರಾಘವರ ಹೆಸರು ಇಡಲು ಶಿಫಾರಸ್ಸು ಮಾಡಲೆಂದು ಹೇಳಿದರು. ಸಮಾರಂಭದ ಅಧ್ಯಕ್ಷತೆವಹಿಸಿದ್ದ ರಾಘವ ಮೆಮೋರಿಯಲ್ ಅಸೋಸಿಯೇಷನ್ ಗೌರವ ಅಧ್ಯಕ್ಷ ಕೆ.ಚೆನ್ನಪ್ಪ ಮಾತನಾಡಿ, 2008 ರಿಂದ ರಾಘವ ಮೆಮೋರಿಯಲ್ ಅಸೋಸಿಯೇಷನ್ ಪ್ರತಿವರ್ಷ ಕನ್ನಡ ಮತ್ತು ತೆಲುಗು ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ನೀಡುತ್ತಾ ಬಂದಿದೆ ಎಂದರು.

ಪ್ರಶಸ್ತಿ ಪ್ರದಾನ ಸಮಾರಂಭದ ನಂತರ ರಾಜೇಂದ್ರ ಕಾರಂತರ ನಿರ್ದೇಶನದಲ್ಲಿ ಮರಣ ಮೃದಂಗ ನಾಟಕ ಪ್ರದರ್ಶನಗೊಂಡಿತು. ನಾಟಕ ರಾಜಕೀಯ ಜೀವನದ ಸ್ಥಿತ್ಯತಂತರ ಮತ್ತು ಜೀವನದ ನೋವು ನಲಿವುಗಳ ಬಗ್ಗೆ ಮನೋಪರಿವರ್ತನೆಯ ಕುರಿತು ಮನೋಜ್ಞವಾಗಿ ಪ್ರದರ್ಶಿತಗೊಂಡಿತು.

ಶಿಷ್ಯ ವೇತನಕ್ಕಾಗಿ ಅರ್ಜಿ ಆಹ್ವಾನ

ಬಳ್ಳಾರಿ: ಪ್ರಸ್ತಕ ಸಾಲಿಗೆ ಮಿಲಿಟರಿ ಪಿಂಚಣಿ ರಹಿತ ಕರ್ನಾಟಕದ ಮಾಜಿ ಸೈನಿಕರ ಹಾಗೂ ಕರ್ನಾಟಕದಲ್ಲಿ ನೆಲೆಸಿರುವ ಹೊರರಾಜ್ಯದ ಪಿಂಚಣ ದಾರ ಮಾಜಿ ಸೈನಿಕರ ಮಕ್ಕಳಿಗೆ ಕಲ್ಯಾಣ ನಿಧಿ ಮತ್ತು ವಿಶೇಷ ನಿಧಿಗಳಿಂದ ಶಿಷ್ಯವೇತನ ಮಂಜೂರು ಮಾಡಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಸರಕಾರದಿಂದ ಮಾನ್ಯತೆ ಪಡೆದ ಶಾಲಾ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಿಲಿಟರಿ ಪಿಂಚಣಿ ರಹಿತ ಕರ್ನಾಟಕದ ಮಾಜಿ ಸೈನಿಕರ ಹಾಗೂ ಕರ್ನಾಟಕದಲ್ಲಿ ನೆಲೆಸಿರುವ ಹೊರರಾಜ್ಯದ ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ ನೀಡಲು ಉದ್ದೇಶಿಸಲಾಗಿದೆ. ಕಲ್ಯಾಣ ನಿಧಿಯಿಂದ ಒಂದನೇ ತರಗತಿಯಿಂದ ಪಿಯುಸಿ ಎರಡನೇ ವರ್ಷದವರೆಗೆ ಓದುವ ಮಕ್ಕಳಿಗೆ(ಅಧಿಕಾರಿಗಳನ್ನು ಹೊರತುಪಡಿಸಿ) ಪುಸ್ತಕ ಅನುದಾನ ಮತ್ತು ವಿಶೇಷ ನಿಧಿಯಿಂದ ಡಿಗ್ರಿ, ಡಿಪ್ಲೋಮಾ ಜೆಓಸಿ ಹಾಗೂ ಪ್ರೊಫೆಷನಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ (ಅಧಿಕಾರಿಗಳನ್ನು ಹೊರತುಪಡಿಸಿ) ಮಕ್ಕಳು ಅರ್ಹರಾಗಿರುತ್ತಾರೆ. ಶುಲ್ಕ ರಹಿತ ಅರ್ಜಿಗಳನ್ನು ಧಾರವಾಡದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಚೇರಿಯಿಂದ ಪಡೆದು ಭರ್ತಿ ಮಾಡಿ ಅಕ್ಟೋಬರ್ 30 ರೊಳಗೆ ಇದೇ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ.0836–2440176 ಗೆ ಸಂಪರ್ಕಿಸಬಹುದು ಎಂದು ಧಾರವಾಡ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಒಳ ಮೀಸಲು ತೀರ್ಪು ಬಿಜೆಪಿ ವಿಜಯೋತ್ಸವ

ಹಗರಿಬೊಮ್ಮನಹಳ್ಳಿ: ಸುಪ್ರೀಂ ಕೋರ್ಟ್ ಒಳಮೀಸಲಾತಿ ಕುರಿತು ನೀಡಿರುವ ತೀರ್ಪು ಸಂವಿಧಾನದ ಸಮಾನತೆಯ ಆಶಯವಾಗಿದೆ. ಇದರಿಂದ ಕಟ್ಟಕಡೆಯ ವ್ಯಕ್ತಿಗೂ ಮೀಸಲಾತಿ ಅನ್ವಯ ಸೌಲಭ್ಯಗಳು ದೊರೆಯುತ್ತವೆ ಎಂದು ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಬಲ್ಲಾಹುಣ್ಸಿ ರಾಮಣ್ಣ ತಿಳಿಸಿದರು. ಸ್ಥಳೀಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಬಿಜೆಪಿ ಪಕ್ಷದಿಂದ ಆಯೋಜಿಸಿದ್ದ ಒಳಮೀಸಲಾತಿ ಜಾರಿ ವಿಜಯೋತ್ಸವದಲ್ಲಿ ಮಾತನಾಡಿದರು.

ಕಳೆದ 30 ವರ್ಷಗಳ ಒಳಮೀಸಲಾತಿ ಹೋರಾಟಕ್ಕೆ ತಾರ್ಕಿಕ ಅಂತ್ಯ ಕಂಡಿದೆ. ಕಾಂಗ್ರೆಸ್ ಈ ಹಿಂದೆ ಪರಿಶಿಷ್ಟರ ಬೇಡಿಕೆ ಈಡೇರಿಸುವುದಾಗಿ ಬರೀ ಭರವಸೆ ನೀಡುತ್ತಲೇ ಬಂದಿತ್ತು. ಸಾಮಾಜಿಕ ನ್ಯಾಯದ ಪರಿಕಲ್ಪನೆ ಬಗ್ಗೆ ಮಾತನಾಡುವ ಸಿಎಂ ಸಿದ್ದರಾಮಯ್ಯ, ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಒಳಮೀಸಲಾತಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಬಿಜೆಪಿ ಮಂಡಲ ಅಧ್ಯಕ್ಷ ಬೆಣ್ಣೆಕಲ್ಲು ಪ್ರಕಾಶ್, ಎಸ್ಸಿ ಮೋರ್ಚಾದ ಅಧ್ಯಕ್ಷ ಮರಿಯಪ್ಪ, ಮಾದೂರು ಮಹೇಶ್ ಮಾತನಾಡಿದರು. ಮುಖಂಡರಾದ ಆನಂದ್, ರಮೇಶ್, ಮಂಜುನಾಥ, ಸುಬ್ರಮಣ್ಯ, ಹನುಮಂತಪ್ಪ, ಎಚ್.ಬಸಪ್ಪ, ಉಪ್ಪಾರಗಟ್ಟಿ ಬುಳ್ಳಪ್ಪ, ಗಾಳೆಪ್ಪ, ನಾಗಪ್ಪ ಇತರರಿದ್ದರು. ಬಿಜೆಪಿ ಕಚೇರಿಯಲ್ಲಿ ಪೂಜೆ ಸಲ್ಲಿಸಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಲಾಯಿತು.

ನಿಮಗಾಗಿ ನಾವು ಸಂಸ್ಥೆ: ಗಿಡ ನೆಡುವ ಕಾರ್ಯಕ್ರಮ

ಬಳ್ಳಾರಿ: ನಿಮಗಾಗಿ ನಾವು ಸಂಸ್ಥೆಯಿಂದ ಮಳೆಗಾಲ ಪೂರ್ಣ ಸಸಿ ನೆಡುವ ಮತ್ತು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಗರದ ವಾಜಪೇಯಿ ಬಡವಾಣೆಯಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಂಸ್ಥೆಯ ಅಧ್ಯಕ್ಷ ವಿನಯ್ ಕುಮಾರ್ ಮಾತನಾಡಿ, ಸಂಸ್ಥೆಯಿಂದ ಹಲವಾರು ಜನಪರ ಕಾಳಜಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕಳೆದ 9 ವರ್ಷಗಳಿಂದ ನಮ್ಮ ಪರಿಸರ ಕಾರ್ಯಕ್ರಮದಡಿ ' ಬಳ್ಳಾರಿ ನಗರದಲ್ಲಿ ಸಸಿ ನೆಡುವ ಕೆಲಸವನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ನಗರದ ವಾಜಪೇಯಿ ಬಡಾವಣೆಯಲ್ಲಿ 30ಕ್ಕೂ ಹೆಚ್ಚು ಸಸಿಗಳನ್ನು ಸಂಸ್ಥೆಯಿಂದ ಇತರಿಸಲಾಯಿತು.

ಪ್ರತಿಯೊಬ್ಬರೂ ಕನಿಷ್ಟ ವರ್ಷಕ್ಕೆ ಐದರಂತೆ ಸಸಿ ನೆಟ್ಟು ಪೋಷಿಸಿದರೆ ಸಾಕು ಅದು ಪ್ರಕೃತಿಗೆ ನಾವು ನೀಡುವ ದೊಡ್ಡ ಕೊಡುಗೆ ದಯವಿಟ್ಟು ಎಲ್ಲರೂ ಸಸಿ ನೆಟ್ಟು ಪೋಷಿಸಿ ಎಂದು ಮನವಿಮಾಡಿದರು. ಕಾರ್ಯದರ್ಶಿ ಗೋಡೆ ಶಿವರಾಜ್ ಮಾತನಾಡಿ, ಪರಿಸರವನ್ನ ನಮ್ಮ ಕೈಲಾದ ಮಟ್ಟಿಗೆ ಹಸಿರಾಗಿಸೋಣ ಎಲ್ಲರೂ ತಪ್ಪದೇ ಗಿಡ, ಮರಗಳನ್ನು ಬೆಳೆಸೋಣ ಎಂದರು. ಮುಖಂಡರಾದ ಡಾ. ಕೇದಾರ್ ನಾಥ್, ಸಂದೀಪ್, ಜಯಸಿಂಹ, ಸಂಜೀವ್, ನಾಗರಾಜ್, ಶ್ರೀಧರರೆಡ್ಡಿ, ಮೆಹಬೂಬ್ ಬಾಷಾ, ನಿವೃತ್ತ ಯೋಧರಾದ ಪ್ರಹ್ಲಾದ್ ರೆಡ್ಡಿ, ಶೇಕ್ ಸಾಬ್ ಇತರರಿದ್ದರು.

ಆದರ್ಶ ವಿದ್ಯಾಲಯದ ದಾಖಲಾತಿಗೆ ಕೌನ್ಸೆಲಿಂಗ್

ಬಳ್ಳಾರಿ: ನಗರದ ಹಿರಾಳ್‌ಕುಡಂನ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಪ್ರಸ್ತಕ ಸಾಲಿಗೆ 6 ನೇ ತರಗತಿ ದಾಖಲಾತಿಗಾಗಿ ಖಾಲಿ ಇರುವ 23 ಸೀಟುಗಳಿಗೆ ಆ.13 ಮತ್ತು 14 ರಂದು ಕೌನ್ಸಲಿಂಗ್ ಪ್ರಕ್ರಿಯೆ ನಡೆಯಲಿದ್ದು, ಈಗಾಗಲೇ ಖಾಲಿ ಇರುವ ಸೀಟುಗಳ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಜರಾಗಬೇಕು ಎಂದು ವಿದ್ಯಾಲಯದ ಮುಖ್ಯಗುರುಗಳು ತಿಳಿಸಿದ್ದಾರೆ. ಈಗಾಗಲೇ ಖಾಲಿ ಇರುವ ಸೀಟುಗಳಿಗೆ 1, 2, 3 ನೇ ಸುತ್ತಿನ ದಾಖಲಾತಿ ಪೂರ್ಣಗೊಂಡು 23 ಖಾಲಿ ಸೀಟುಗಳು ಉಳಿದಿದ್ದು, ಈ ಸ್ಥಾನಗಳಿಗೆ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಜೇಷ್ಠತೆ ಆಧಾರದ ಮೇಲೆ ವಿದ್ಯಾವಾಹಿನಿಯಲ್ಲಿ ಪ್ರಕಟಿಸಿರುವ 1:20 ಅನುಪಾತದ ಅರ್ಹ ಮಕ್ಕಳ ಪಟ್ಟಿಯನ್ನು ಶಾಲೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಆ.13 ರಂದು ಬೆಳಿಗ್ಗೆ 10 ಗಂಟೆಗೆ 11 ಸಾಮಾನ್ಯ ಸೀಟುಗಳಿಗೆ ಹಾಗೂ ಆ.14 ರಂದು ಬೆಳಿಗ್ಗೆ 10 ಗಂಟೆಗೆ 12 ಮೀಸಲಾತಿ (ಎಸ್‌ಸಿ–03, ಎಸ್‌ಟಿ–03, ಪ್ರವರ್ಗ1– 01, 2ಎ–03, 3ಎ–02 ಸೀಟುಗಳು) ಇರುವ ಸೀಟುಗಳಿಗೆ ನಗರದ ಹಿರಾಳ್‌ಕುಡಂನ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಕೌನ್ಸಲಿಂಗ್ ಪ್ರಕ್ರಿಯೆ ನಡೆಯಲಿದ್ದು, ಪಟ್ಟಿಯಲ್ಲಿರುವ ವಿದ್ಯಾರ್ಥಿಗಳು ಕೌನ್ಸಲಿಂಗ್‌ಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ ಮೊ. 9449463870 ಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯಗುರುಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವವಾಣಿ
@vishwavaninews
ಬೆಂಗಳೂರು ಸೋಮವಾರ 05 | 08 | 2024
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ನೆಮ್ಮದಿಯ ಬದುಕಿನ ರಹದಾರಿ

ಬದುಕಿನಲ್ಲಿ ಎದುರಾಗುವ ಅನೇಕ ನೋವು ಸಂಕಟಗಳಿಗೆ ನಾವು ಭಾವನಾತ್ಮಕವಾಗಿ ಬೆಸೆದುಕೊಂಡಿರುವ ಸಂಗತಿಯೇ ಪ್ರಧಾನವಾಗಿರುತ್ತದೆ. ನಾವು ಪ್ರೀತಿಯಿಂದ ಬಳಸುತ್ತಿರುವ ತೀರ ಸಾಮಾನ್ಯ ಬೆಲೆಯ ಪೆನ್ನೊಂದು ಕಳೆದು ಹೋದಾಗ, ನಾವು ದಿನವೂ ಬಳಸುವ ಅಚ್ಚುಮೆಚ್ಚಿನ ಚಹಾ ಕುಡಿಯುವ ಕಪ್ಪೊಂದು ಒಡೆದು ಹೋದಾಗ, ಬಹಳ ಕಾಲದಿಂದ ಜಾಗರೂತೆಯಿಂದ ಬಳಸುತ್ತಿದ್ದ ಸವೆದ ಚಪ್ಪಲಿ ಕಿತ್ತು ಹೋದಾಗ ಮನಸ್ಸು ಕಸಿವಿಸಿಗೊಳ್ಳುತ್ತದೆ. ಇತರರ ದೃಷ್ಟಿಯಲ್ಲಿ ತೀರ ಸಾಮಾನ್ಯವೆನಿಸುವ ಇಂತಹ ಹಲವು ಸಂಗತಿಗಳು ಕೂಡ ನಮ್ಮನ್ನು ದುಃಖದ ಅಂಚಿಗೆ ತಂದು ನಿಲ್ಲಿಸಿ ಬಿಡುತ್ತವೆ. ವಸ್ತುಗಳೊಂದಿಗೆ ನಾವು ವಾಸ್ತವಿಕ ನೆಲೆಗಟ್ಟಿನ ಮೇಲೆ ಯೋಚಿಸದೇ, ಭ್ರಾಮಕತೆಗೆ ಒಳಗಾಗುವ ನಮ್ಮ ಮನೋಸ್ಥಿತಿಯೇ ಇವೆಲ್ಲ ಅವಗಢಗಳಿಗೆ ಕಾರಣ. ಬದುಕಿನಲ್ಲಿ ನಮ್ಮ ಸುತ್ತಲಿನ ಪರಿಸರದಲ್ಲಿ ಜನರು ತಮ್ಮ ಅಗತ್ಯಕ್ಕೆ ತಕ್ಕಂತೆ ಬದಲಾಗುತ್ತಿರುತ್ತಾರೆ. ಘಟನೆಗಳು ಕೂಡ ಹಾಗೆ ಅವು ತಮ್ಮ ಪಾಡಿಗೆ ತಾವು ಸಂಭವಿಸುತ್ತಲೇ ಇರುತ್ತವೆ. ನಿಜ ಅರ್ಥದಲ್ಲಿ ಯಾವುದೇ ಘಟನೆಗಳು ನಮ್ಮನ್ನು ಬಾಧಿಸಲಾರವು. ಇದಕ್ಕೆ ಬದಲಾಗಿ ನಾವು ಅವುಗಳನ್ನು ಹೇಗೆ ವ್ಯಾಖ್ಯಾನಿಸುತ್ತೇವೆ, ಸ್ವೀಕರಿಸುತ್ತೇವೆ ಮತ್ತು ಪ್ರತಿಕ್ರಿಯಿಸುತ್ತೇವೆ ಎಂಬುದಕ್ಕೆ ನೇರವಾಗಿ ಸಂಬಂಧಿಸಿರುತ್ತದೆ.

ನಮ್ಮ ನಿರೀಕ್ಷೆಯಂತೆ ಯಾವುದೇ ಘಟನೆಗಳು ಸಂಭವಿಸಲಾರದು. ಜನರು ವರ್ತಿಸಲಾರರು. ಯಾವಾಗಲೂ ನಮ್ಮ ಇಚ್ಛೆಯಂತೆ ಬದುಕು ನಡೆಯಬೇಕೆಂದು ಬಯಸುವದು ಒಪ್ಪಿತವಲ್ಲದ ಸಂಗತಿಯಾಗಿದೆ. ಇವೆಲ್ಲವುಗಳಿಂದ ಹೊರಬರುವ ಸುಲಭ ದಾರಿಯೆಂದರೆ ವಾಸ್ತವಿಕ ನೆಲೆಗಟ್ಟಿನ ಮೇಲೆ ವಿಶ್ಲೇಷಿಸುವುದು ಮತ್ತು ನಮ್ಮ ಭಾವನೆಗಳು ಮತ್ತು ಯೋಚನೆಗಳನ್ನು ವಿಚಲಿತಗೊಳಿಸದಂತೆ ತಡೆದು ಗಟ್ಟಿಗೊಳಿಸುವುದಾಗಿದೆ. ಅವುಗಳು ಹೇಗೆ ಇರುತ್ತವೆಯೋ ಹಾಗೆ ಒಪ್ಪಿಕೊಳ್ಳಬೇಕೆಂಬ ಸತ್ಯ ಸಂಗತಿಯನ್ನು ನಮ್ಮಷ್ಟಕ್ಕೆ ನಾವು ಮನದಟ್ಟು ಮಾಡಿಕೊಳ್ಳಬೇಕು. ಸತ್ಯದ ಬೆಳಕಿನಲ್ಲಿ ಮಾತ್ರವೇ ನೆಮ್ಮದಿಯ ಬದುಕನ್ನು ಕಂಡುಕೊಳ್ಳಬಹುದಾಗಿದೆ.

● ಮಹಾದೇವ ಬಸರಕೋಡ

ಇತಿಹಾಸಕ್ಕೊಂದು ಕಿಂಡಿ

ಜರ್ಮನಿಯ ಮ್ಯೂನಿಕ್‌ನಲ್ಲಿ 1972ರಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡಾ ಕೂಟವು ಭಯಾನಕ ಹತ್ಯಾಕಾಂಡದಿಂದಾಗಿ ಕುಖ್ಯಾತಿಯನ್ನು ಪಡೆದಿದೆ. ಪ್ಯಾಲೆಸ್ಟೀನ್ ಹೋರಾಟಗಾರರ ಪರವಾಗಿದ್ದ ಭಯೋತ್ಪಾದಕರ ಒಂದು ತಂಡವು ಕ್ರೀಡಾಗ್ರಾಮದೊಳಗೆ ನುಸುಳಿ, ಇಸ್ರೇಲಿನ 11 ಜನ ಕ್ರೀಡಾಪಟುಗಳನ್ನು ಮತ್ತು ತರಬೇತಿದಾರರನ್ನು ಅಪಹರಿಸಿತು. ಅವರಲ್ಲಿ ಇಬ್ಬರನ್ನು ತಕ್ಷಣ ಸಾಯಿಸಿತು. ಭಯೋತ್ಪಾದಕರ ಕೈಗೆ ಸಿಕ್ಕಿಬಿದ್ದವರನ್ನು ಬಿಡಿಸುವ ಪ್ರಯತ್ನ ನಡೆದಾಗ, ಇತರ ಒಂಬತ್ತು ಮಂದಿ ಒತ್ತೆಯಾಳುಗಳು ಸಹ ಗುಂಡೇಟಿಗೆ ಬಲಿಯಾದರು. ಐವರು ಭಯೋತ್ಪಾದಕರನ್ನು ಜರ್ಮನಿಯ ಪೊಲೀಸರು ಗುಂಡಿಟ್ಟು ಕೊಂದರು. ಇಸ್ರೇಲಿನ ಜೈಲಿನಲ್ಲಿದ್ದ ಪ್ಯಾಲೆಸ್ಟೀನ್ ಮೂಲದ 234 ಜನರನ್ನು ಬಿಡುಗಡೆ ಮಾಡಬೇಕು ಎಂಬುದು ಭಯೋತ್ಪಾದಕರ ಬೇಡಿಕೆಯಾಗಿತ್ತು; ಆದರೆ, ಭಯೋತ್ಪಾದಕರ ಜತೆ ಯಾವುದೇ ಕಾರಣಕ್ಕೂ ಸಂಧಾನ ಇಲ್ಲ ಎಂಬ ಇಸ್ರೇಲಿನ ಬಿಗಿ ನಿಲುವಿನಿಂದಾಗಿ, ಗುಂಡಿನ ಚಕಮಕಿ ಮತ್ತು ಪೊಲೀಸರ ಕಾರ್ಯಾಚರಣೆಯಲ್ಲಿ, ಎಲ್ಲಾ ಕ್ರೀಡಾಪಟುಗಳೂ ಮೃತರಾದರು. ಒಲಿಂಪಿಕ್ಸ್ ಇತಹಾಸದಲ್ಲಿ ಇದೊಂದು ಭೀಕರ ಘಟನೆ ಎಂದು ದಾಖಲಾಗಿದೆ.

ಯುವ ಕಾವ್ಯ

ರೆಕ್ಕೆ ಬಲಿತ ಹಕ್ಕಿ

ಈಗಷ್ಟೇ
ಮೊಟ್ಟೆಯೊಡೆದು ಹೊರಬಂದು
ಕತ್ತು ತಿರುಗಿಸುತ್ತಾ, ಕಣ್ಣಗಲಿಸಿ
ಜಗತ್ತು ನೋಡಿದ ಪುಟ್ಟ ಹಕ್ಕಿಯ
ರೆಕ್ಕೆಗಳೀಗ ಬಲಿತಿವೆ
ಬಾನೆತ್ತರ ನೆಗೆಯುವ ಕನಸಿಗೂ
ಜೀವ ಬಂದಿದೆ

ಮೊದಲಾದರೆ...
ತಾಯಿ ಹಕ್ಕಿಯ ಜೊತೆ
ಕುಪ್ಪಳಿಸಿ ಸಂಭ್ರಮಿಸುತ್ತಿದ್ದ ಮರಿ
ಈಗೀಗ ಸ್ವಚ್ಛಂದ
ತಿರುಗಾಟಕ್ಕೆ ಅಣಿಯಾಗಿದೆ
ಎತ್ತರದಲ್ಲಿ ಹಾರಿ, ಗಿರಕ್ಕನೆ ತಿರುಗುವ
ಬೆರಗು, ಪುಳಕಕ್ಕೆ ಮರಿ ವಿಸ್ಮಯ

ರೆಕ್ಕೆಯಗಲಿಸಿ
ಹಾರಲು ಕಲಿತ
ಕರುಳ ಕುಡಿ ಕಂಡು
ತಾಯ ಹಕ್ಕಿಗೆ ಕಣ್ತುಂಬ ಖುಷಿ

ಎಷ್ಟೇ ಎತ್ತರೆತ್ತರಕ್ಕೇರಲಿ ಮರಿ
ರೆಕ್ಕೆ ಬಿಚ್ಚಿ ಹಾರಲಿ ದೂರ ದೂರ
ಹದ್ದಿನ ಕಾಕದೃಷ್ಟಿಗೆ ತಾಕದಿರಲಿ
ಬೇಟೆಗಾರನ ಬಲೆಗೆ ಬೀಳದಿರಲಿ
ಇದಿಷ್ಟೇ ತಾಯ ಹಾರೈಕೆ!

● ನಾಗೇಶ್ ಜೆ. ನಾಯಕ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಕೆಳಗೆ ಬೀಳುವ ನೀರು ಒಮ್ಮೆಗೇ ಮೇಲಕ್ಕೆ ಚಲಿಸತೊಡಗಿದರೆ, ನೋಡುವವರಿಗೆ ವಿಸ್ಮಯ ಎನಿಸುವುದಿಲ್ಲವೆ? ಹಿಮ್ಮೂಖವಾಗಿ ಚಲಿಸುವ ಈ ಜಲಪಾತದ ಸೋಜಿಗಕ್ಕೆ ಬಿರುಸಾಗಿ ಬೀಸುವ ಗಾಳಿಯೇ ಕಾರಣ.

ಗಾಳಿಯ ಚಮತ್ಕಾರ ಈ ಜಲಪಾತ!



● ಡಾ. ಕರವೀರಪ್ರಭು ಕ್ಯಾಲಕೊಂಡ

ಪುಣೆಯಲ್ಲಿ ಜರುಗಿದ ರಾಷ್ಟ್ರೀಯ ಮಕ್ಕಳ ಸಮ್ಮೇಳನಕ್ಕೆ ಹೋಗಿದ್ದೆ. ಬಹಳ ದಿನಗಳಿಂದ ಮನಸ್ಸಿನಲ್ಲಿ ಹುದುಗಿದ್ದ ಆಸೆ ಇಡೇರಿಸಿಕೊಳ್ಳಲು ಅವಕಾಶ ಒದಗಿ ಬಂತು. ಗೆಳೆಯರೊಡನೆ ನಾನೇಘಾಟ್‌ದಲ್ಲಿರುವ ರಿವರ್ಸ್ ವಾಟರ್ ಫಾಲ್ಸ್ ನೋಡಲು ಸಜ್ಜಾದೆವು. ನಾನೇಘಾಟ್ ಚಾರಣ ಪ್ರದೇಶವು ಘಾಟ್ ಘಾರ್ ಅಭಯಾರಣ್ಯದ ಭಾಗವಾಗಿದ್ದು, ಪುಣೆಯಿಂದ 150 ಕಿ.ಮೀ.ದೂರದಲ್ಲಿದೆ. ಮುಂಬೈಯಿಂದ 120 ಕಿ.ಮೀ. ದೂರದಲ್ಲಿದೆ. ಹೋಗಿ ಬರಲು ಬಸ್ಸುಗಳ ವ್ಯವಸ್ಥೆಯೂ ಇದೆ. ಇದು ಜುನಾರ ಸಮೀಪದಲ್ಲಿದ್ದು, ಹಾದಿಯಲ್ಲಿ ಐತಿಹಾಸಿಕ ಗುಹೆಗಳು, ಕಲ್ಲಿನ ಮಡಿಕೆಗಳು ಕಾಣಸಿಗುತ್ತವೆ.

ರಿವರ್ಸ್ ವಾಟರ್ ಫಾಲ್ಸ್‌ನ್ನು ನೋಡುವಾಗ ನಮ್ಮ ಮನಸ್ಸಿನ ತರ್ಕ ಹಿಂದು ಮುಂದಾಗುತ್ತದೆ! ಈ ಜಲಪಾತವು ಗುರುತ್ವಾಕರ್ಷಣೆಯನ್ನು ವಿರೋಧಿಸುವ ಜಲಪಾತವೇ ಎಂಬ ಅಚ್ಚರಿಯೂ ಆಗಬಹುದು! ಈ ರೀತಿಯ ಪ್ರಾಕೃತಿಕ ವಿಸ್ಮಯಗಳು ಹೆಚ್ಚು ಇಲ್ಲದಿರುವ ಕಾರಣ, ಇದನ್ನು ನೋಡಿದವರೆಲ್ಲರೂ ವಿಸ್ಮಯಕ್ಕೆ ಒಳಗಾಗಬಹುದು.

ನಿಜ ಹೇಳಬೇಕೆಂದರೆ, ಇದು ಗುರುತ್ವಾಕರ್ಷಣ ಶಕ್ತಿಯ ವಿರುದ್ಧವಾಗಿದೆ ಎನ್ನುವದಕ್ಕಿಂತ ವಾಯುದೇವನ ಚಮತ್ಕಾರ ಎನ್ನಬಹುದು. ಮನ್ಸೂನ್ ಋತುವಿನಲ್ಲಿ ಗಾಳಿಯು ರಭಸದಿಂದ ಬೀಸಿ ಸಾಂದರ್ಭಿಕವಾಗಿ ನೀರು ಗುರುತ್ವಾಕರ್ಷಣೆಯನ್ನು ವಿರೋಧಿಸುತ್ತದೆ ಮತ್ತು ನೀರನ್ನು ಹಿಮ್ಮುಕ ದಿಕ್ಕಿನಲ್ಲಿ ಹರಿಯುವಂತೆ ಮಾಡುತ್ತದೆ. ಇದ್ಹೇಗೆ ಸಾಧ್ಯ ಅನ್ನುತ್ತೀರೇನು? ನೀವು ಕಾರನ್ನು ಮಳೆ ಬರುವಾಗ ವೇಗವಾಗಿ ಚಲಿಸುತ್ತಿದ್ದೀರಿ ಅಂದುಕೊಳ್ಳಿ. ಆಗ ಕಾರಿನ ಮುಂದಿನ ಗ್ಲಾಸ್ ಮೇಲೆ ಬಿದ್ದ ಹನಿಗಳು ಕೆಳಕ್ಕೆ ಇಳಿಯುವುದಿಲ್ಲ. ಗಾಳಿಯ ರಭಸಕ್ಕೆ ಅವು ಮೇಲ್ಮುಖವಾಗಿ ಚಲಿಸುತ್ತವೆ. ಇದೇ ತತ್ವ ರಿವರ್ಸ್ ವಾಟರ್ ಫಾಲ್ಸ್‌ಗೆ ಅನ್ವಯವಾಗುವುದು. ಗಾಳಿಯು ತಾಸಿಗೆ 75 ಕಿ.ಮೀ. ವೇಗದಿಂದ ಬೀಸುವಾಗ ಇಂಥ ಅದ್ಭುತ ದೃಶ್ಯ ನಿರ್ಮಾಣವಾಗುವುದು.



ನಾನೇಘಾಟ್ ರಿವರ್ಸ್ ವಾಟರ್ ಫಾಲ್ಸ್ ಎರಡು ಪರ್ವತಗಳ ನಡುವಿನ ಜಲಪಾತದಿಂದ ನೀರು ಕೆಳಕ್ಕೆ ಹರಿಯುವ ಬದಲು ಮೇಲಕ್ಕೆ ಹರಿಯುವುದನ್ನು ಚಿತ್ರಿಸುತ್ತದೆ. ಹಾಗೆ ನೋಡಿದರೆ, ಬಹುತೇಕ ಸಾರ್ವಜನಿಕರಿಗೆ ಅಪರಿಚಿತವಾಗಿ ಉಳಿದಿರುವ ಜಲಪಾತವೆಂದರೆ ಮಹಾರಾಷ್ಟ್ರದ ನಾನೇಘಾಟದಲ್ಲಿಯ ಜಲಪಾತ. ಮಹಾರಾಷ್ಟ್ರದ ಪಶ್ಚಿಮ ಘಟ್ಟದಲ್ಲಿ ನಾನೇಘಾಟ ಚಾರಣ ಪ್ರಿಯರ ತಾಣ.

ನಾನೇಘಾಟಕ್ಕೆ ನಡೆದುಕೊಂಡು ಹೋಗುವಾಗ ಹಾದಿ ಯುದ್ದಕ್ಕೂ ಸೃಷ್ಟಿಯ ಸೊಬಗನ್ನು ಸವಿಯುತ್ತ, ವನ್ಯಜೀವಿಗಳ ನೋಡುತ್ತ, ಹಕ್ಕಿಗಳ ಹಾಡು ಕೇಳುತ್ತಾ ದಣಿವಾಗದಂತೆ ಚಾರಣ ಮಾಡಬಹುದು. ಕಡಿದಾದ ಬಂಡೆ ಹತ್ತುವಾಗ ಕಾಲಿಗೆ ಗ್ರಿಪ್ ಆಗಲು ಗುಣಮಟ್ಟದ ಶೂ ಧರಿಸಿ ಬೆಟ್ಟ ಹತ್ತುವುದು ಸುರಕ್ಷತೆಯ ದೃಷ್ಟಿಯಿಂದ ಒಳ್ಳೆಯದು. ಮಳೆಗಾಲದ ಈ ಮನಮೋಹಕ ದೃಶ್ಯ ಸವಿಯಲು ನೀವೂ ಸಜ್ಜಾಗಿ.

ಆಸಕ್ತಿ, ಶ್ರಮ ಹಾಕುವ ಮನಸ್ಸು, ಅಭಿರುಚಿ ಇದ್ದರೆ ಗಂಗೊಳ್ಳಿಯಂತಹ ಗ್ರಾಮೀಣ ಪ್ರದೇಶದಲ್ಲೂ ವಿಭಿನ್ನವಾಗಿ ನಾಟಕಗಳನ್ನು ಪ್ರಸ್ತುತಪಡಿ ಸಬಹುದು ಎಂಬುದಕ್ಕೆ 'ಮೃಡ' ಒಂದು ಸಾಕ್ಷಿ.

ಹಳ್ಳಿಯೂರಿನ ರಂಗ ಸಾಹಸ!

● ಅಜಯ್

ಇತ್ತೀಚೆಗೆ ಗಂಗೊಳ್ಳಿಯ ಬಿಲ್ಲವರ ಹಿತ ರಕ್ಷಣಾ ವೇದಿಕೆ ಆಶಯದಲ್ಲಿ ನರೇಂದ್ರ ಎಸ್ ಗಂಗೊಳ್ಳಿಯವರ ರಚನೆ ಮತ್ತು ನಿರ್ದೇಶನದಲ್ಲಿ ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಕುಂದಾಪುರ ತಾಲೂಕಿನ ಗಂಗೊಳ್ಳಿಯಲ್ಲಿ ಪ್ರದರ್ಶಿಸಿದ 'ಮೃಡ' ನಾಟಕ ಜನರ ಮನಸೆಳೆಯಿತು; ಜತೆಗೆ ಚಿಂತನೆಗೆ ಹಚ್ಚಿಸುವಲ್ಲಿ ಯಶಸ್ವಿಯಾಯಿತು.

ಸೃಜನಶೀಲತೆಯಿಂದ ಮಕ್ಕಳನ್ನು ಕಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಉತ್ತಮವಾದ ಮೌಲಿಕ ಸಂದೇಶಗಳನ್ನು ಪರಿಣಾಮಕಾರಿಯಾಗಿ ಸಮಾಜಕ್ಕೆ ನೀಡಬಹುದು ಎನ್ನುವುದಕ್ಕೆ ಸಾಕ್ಷಿಯಾಗಿ ಈ ನಾಟಕ ಮೂಡಿ ಬಂದಿತ್ತು.

ಚಾರುಕೀರ್ತಿ ಹೆಸರಿನ ನಾಯಕ ತಾನೊಬ್ಬ ಮಹಾನ್ ಶಿವ ಭಕ್ತ, ಹಾಗಾಗಿ ಪುರಾಣದ ಪ್ರಸಿದ್ಧ ಭಕ್ತರ ಹೆಸರಿನಂತೆ ತನ್ನ ಹೆಸರು ಕೂಡ ರಾರಾಜಿಸಬೇಕು ಎನ್ನುವ ಅಹಂಕಾರದಲ್ಲಿ ಹೆಂಡತಿ ಮಗನನ್ನು ತೊರೆದು ಶಿವನನ್ನು ಹುಡುಕಿಕೊಂಡು ಅಘೋರಿಗಳ ತಾಣವನ್ನು ಸೇರಿ ಅನುಮಾನ, ಕ್ರೋಧ, ಮೋಹ, ಲಾಲಸೆಗಳಿಗೆ ಕಟ್ಟುಬಿದ್ದು ತಪ್ಪುಗಳನ್ನು ಮಾಡಿ ಕೊನೆಗೆ ಅಹಂಕಾರದ ಮದ ಕರಗಿ ಸಾವನ್ನು ತಾನೇ ಆಹ್ವಾನಿಸುವ ಪರಿಸ್ಥಿತಿಗೆ ಬಂದು ಜೀವನದ ಸತ್ಯದರ್ಶನವಾಗುವ ಕಥೆಯನ್ನು ಹೊಂದಿರುವ 'ಮೃಡ' ನಾಟಕ ತನ್ನ ಭಿನ್ನ ಪ್ರಸ್ತುತಿ, ಅರ್ಥಗರ್ಭಿತ ಸಂಭಾಷಣೆಗಳು, ಹಲವು ತಿರುವುಗಳು ಮತ್ತು ಆಕರ್ಷಕವಾದ ವಿಶೇಷ ಪಾತ್ರಗಳು ಹಾಗು ಸನ್ನಿವೇಶಗಳಿಂದ ಗಮನ ಸೆಳೆಯಿತು. ವಿದ್ಯಾರ್ಥಿಗಳ ಅಭಿನಯ ಮತ್ತು ಹಿನ್ನೆಲೆ ಸಂಗೀತ ನಾಟಕದ ಪ್ಲಸ್ ಪಾಯಿಂಟ್ ಆಗಿತ್ತು. ಎರಡನೇ ಪ್ರಯೋಗದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡು ನಲವತ್ತು ವಿದ್ಯಾರ್ಥಿಗಳ ತಂಡ ನಾಟಕವನ್ನು ಯಶಸ್ವಿಯಾಗಿ ಪ್ರಸ್ತುತಪಡಿಸಿದ ರೀತಿ ಗ್ರಾಮೀಣ ಪ್ರತಿಭೆಗಳ ಸಾಮರ್ಥ್ಯಕ್ಕೆ ಕನ್ನಡಿಯಂತಿತ್ತು.

ಸೀಮಿತ ಅವಕಾಶಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ನಾಟಕವನ್ನು ರಚಿಸಿ ನಿರ್ದೇಶಿಸಿ ಗ್ರಾಮೀಣ ಭಾಗದಲ್ಲಿಯೂ ಪ್ರದರ್ಶಿಸಿ ಯಶಸ್ಸನ್ನು ಕಾಣಬಹುದು ಎನ್ನುವುದನ್ನು ತಮ್ಮ ಮೈಸೂರು ಮಲ್ಲಿಗೆ, ಮರಣ ಮಾಂಟೆ ಮತ್ತು ಈ ನಾಟಕದ ಮೂಲಕ ನರೇಂದ್ರ ಎಸ್. ಗಂಗೊಳ್ಳಿ ತೋರಿಸಿದ್ದಾರೆ.

(ಫೋಟೋ ಕೃಪೆ : ಸುರಭಿ ಕೃಷ್ಣ ಗಂಗೊಳ್ಳಿ)

ನನ್ನ ಮಾತು ಒಂದಿಷ್ಟು ಕೇಳಿ!

● ಚಿದಾನಂದ ಪಡದಾಳೆ



ನಾನು ನಿಮ್ಮೆಲ್ಲರನ್ನೂ ಕಾಯುತ್ತಿರುವ, ಸಾಕುತ್ತಿರುವ, ಪ್ರತಿ ಕ್ಷಣವೂ ನಿಮ್ಮನ್ನು ಉಳಿಸಿಕೊಳ್ಳುತ್ತಿರುವ ಮೂಕ ರಕ್ಷಕನಾಗಿದ್ದೇನೆ. ನೀವು ಉಸಿರಾಡುತ್ತಿರುವ ಆಮ್ಲಜನಕದಿಂದ ಹಿಡಿದು ಕುಡಿಯುವ ನೀರಿನವರೆಗೆ, ಮನೆ ಕಟ್ಟಲು ಬೇಕಾಗುವ ಕಚ್ಚಾ ವಸ್ತುಗಳಿಂದ ಹಿಡಿದು, ಓಡಾಡಲು ಬೇಕಾದ ರಸ್ತೆಯವರೆಗೂ ಎಲ್ಲವನ್ನು ಒದಗಿಸಿರುವೆ. ನನ್ನೊಡಲ ಸರ್ವಸ್ವವನ್ನೂ ನಿಮಗೆ ಅರ್ಪಿಸಿದ್ದೇನೆ. ನಾನು ನಿಮ್ಮ ಭೂಮಿ.

ಹಾಗಿದ್ದರೂ, ಮೇಲೂ ನಿಮಗೆ ಯಾಕಿಷ್ಟು ದುರಾಸೆ? ನನ್ನ ಮೇಲೆ ಯಾಕಿಷ್ಟು ದೌರ್ಜನ್ಯ? ನನ್ನ ದೇಹದ ಪ್ರತಿಯೊಂದು ಅಂಗವನ್ನು ಅಗೆದು-ಬಗೆದು ಮುಗಿಸುವರೆಗೂ ನಿಮಗೆ ಸಮಾಧಾನ ಆಗುವಂತೆ ಕಾಣುತ್ತಿಲ್ಲ. ನನ್ನ ದೇಹದ ಬಹುಮುಖ್ಯ ಭಾಗವಾದ ಅರಣ್ಯ ನಿಮಗೇನು ಕಡಿಮೆ ಮಾಡಿದೆ? ವಿಷದಂತಿರುವ ಕಾರ್ಬನ್ ಡೈಆಕ್ಸೈಡ್‌ನ್ನು ಹೀರಿಕೊಂಡು ನಿಮಗೆ ಉಸಿರಾಡಲೂ ಬೇಕಾದ ಪ್ರಾಣವಾಯು ಆಮ್ಲಜನಕ ನೀಡಿದೆ. ಹಲವು ರೀತಿಯ ತಿನಿಸುಗಳನ್ನು, ಹಣ್ಣು, ಕಾಯಿ, ಬೇರು ಮತ್ತು ಆಹಾರ ಮೂಲಗಳನ್ನು ಒದಗಿಸಿದೆ. ನೀವಿರುವ ಪರಿಸರವನ್ನು ಸಮತೋಲಿತವಾಗಿಡಲು ಬೇಕಾದ ಎಲ್ಲವನ್ನೂ ನೀಡಿದರೂ ನಿಮ್ಮ ದುರಾಸೆ ಮಾತ್ರ ಅಂತ್ಯಗೊಂಡಿಲ್ಲ.

ನರನೆ ಇರಲಿ ನನ್ನ ಮೇಲೆ ಸ್ವಲ್ಪವಾದರೂ ಕರುಣೆ;
ಧರೆಯೆ ಹತ್ತಿ ಉರಿಯತೊಡಗೆ ಬದುಕಲೆಲ್ಲಿ ಓಡುವೆ?

ಪರಿಣಾಮವಾಗಿ ನೀವು ಸಧ್ಯಕ್ಕೆ ಅನುಭವಿಸುತ್ತಿರುವ ಪ್ರವಾಹ ಮತ್ತು ಭೂಕೂಸಿತಗಳೇ ಇದಕ್ಕೆ ಮೂಕ ಸಾಕ್ಷಿ.

ನೀವು ನನ್ನನ್ನು ಬಹು ಲಘುವಾಗಿ ಪರಿಗಣಿಸಿದ್ದೀರಿ. ಅರಣ್ಯ ನಾಶದಿಂದ ನಮ್ಮ ಸೂಕ್ಷ್ಮ ಸಮತೋಲನತನಕ್ಕೆ ಧಕ್ಕೆಯಾಗಿ ಹವಾಮಾನ ವೈಪರೀತ್ಯ ಮಿತಿ ಮೀರಿರುವುದರ ಪರಿಣಾಮವೇ ಇದು. ನೀವು ನಿಮ್ಮನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗದೇ ಕೊನೆಗೆ, ಅಂದರೆ ಎಲ್ಲವೂ ಕೈ ಮೀರಿ ಹೋದಾಗ 'ಪ್ರಾಕೃತಿಕ ವಿಕೋಪ' 'ಮುನಿದ ಪ್ರಕೃತಿ' 'ಭೂತಾಯಿಗೆ ಕೋಪ' ಎನ್ನುತ್ತಾ ವಿವಿಧ ವಿಶೇಷಣಗಳನ್ನು ಬಳಸಿ, ನನ್ನನ್ನೇ ತೆಗಳುತ್ತೀರಿ.

ನೀವು ನನ್ನ ಮಕ್ಕಳಾಗಿದ್ದು, ನನಗೆ ನಿಮ್ಮ ಮೇಲೆ ಸಿಟ್ಟಿಲ್ಲ. ನನ್ನಲ್ಲಿ ಅಗಾಧವಾದ ತಾಳ್ಮೆ ಇದೆ. ಅದು ಕಟ್ಟೆಯೊಡೆದಾಗ ಮಾತ್ರ ಹೀಗಾಗುತ್ತದೆ. ನಾನಾದರೂ ಎಷ್ಟು ಸಹಿಸಿಕೊಳ್ಳಲಿ? ನೀವು ನನ್ನನ್ನು ರಕ್ಷಿಸುವುದೆಂದರೆ ನಿಮ್ಮನ್ನು ನೀವೆ ರಕ್ಷಿಸಿಕೊಳ್ಳುವುದು ಎಂದರ್ಥ. ಈ ಸತ್ಯ ನಿಮಗ್ಯಾಕೆ ಅರ್ಥವಾಗುತ್ತಿಲ್ಲ? ಸ್ವಯಂ ಪ್ರೇರಣೆಯಿಂದ ನೀವೆಲ್ಲ ಒಗ್ಗಟ್ಟಾಗಿ ನನ್ನ ಒಳಿತಿಗಾಗಿ ನಿಂತಾಗ ಮಾತ್ರ ನಿಮಗೆ ಒಳಿತಾಗಬಲ್ಲದು.

ನನ್ನ ನೈಸರ್ಗಿಕ ಆವಾಸ ಸ್ಥಾನಗಳನ್ನು ಸಂರಕ್ಷಿಸಿ; ಎಲ್ಲೆಂದರಲ್ಲಿ ತ್ಯಾಜ್ಯವನ್ನು ಎಸೆಯುವುದನ್ನು ಕೈಬಿಡಿ; ಅನಗತ್ಯ ಎನಿಸುವ ಅಭಿವೃದ್ಧಿ ಕೆಲಸಗಳ ನೆಪ ಮಾಡಿಕೊಂಡು ದಡ್ಡರಂತಾಡುವುದನ್ನು ಬಿಡಿ. ತಿಳಿದೂ ತಪ್ಪು ಮಾಡಬೇಡಿ. ನನ್ನಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಗೌರವಿಸಿ, ನನ್ನ ಒಡಲನ್ನು ಬರಿದು ಮಾಡಬೇಡಿ, ನಿಮ್ಮ ಮುಂದಿನ ಪೀಳಿಗೆಗೆ ನನ್ನಲ್ಲಿನ ಸಂಪತ್ತಿನ ಸ್ವಲ್ಪ ಭಾಗವನ್ನಾದರೂ ಉಳಿಸಿ, ಮುಂದಿನ ಜನರೂ ನಿಮ್ಮ ರೀತಿ ಸುಖವಾಗಿರಬೇಕೆಂಬ ವಿಚಾರ ನಿಮ್ಮ ಮನದಲ್ಲಿರಲಿ, ಅದನ್ನು ಗಮನದಲ್ಲಿಟ್ಟುಕೊಂಡೇ ಅಭಿವೃದ್ಧಿ ಎಂಬ ಮರೀಚಿಕೆಯ ಬೆನ್ನು ಹತ್ತಿ. ಈ ಮೂಲಕ ನಿಮ್ಮ 'ಸುಸ್ಥಿರ ಅಭಿವೃದ್ಧಿ'ಯೂ ಸಾಧ್ಯವಾಗುವುದು. ಕೊನೆ ಮಾತು, ನನ್ನ ತಾಳ್ಮೆ ಪರೀಕ್ಷಿಸಬೇಡಿ. ಏಕೆಂದರೆ, ನಿಮ್ಮೆಲ್ಲರನ್ನೂ ನನ್ನ ಒಡಲಲ್ಲಿ ಹಾಕಿಕೊಂಡು ನಿಮ್ಮನ್ನು ಪಳೆಯುಳಿಕೆಗಳನ್ನಾಗಿ ಮಾಡುವ ತಾಕತ್ತು ನನಗಿದೆ. ನಿಮಗೆಲ್ಲ ಒಳ್ಳೆಯದಾಗಲಿ.

ಅಮೃತ ಧಾರೆ

● ಮಮತಾ ಶೃಂಗೇರಿ

ಆಗಸ್ಟ್ ಒಂದರಿಂದ ಆಗಸ್ಟ್ ಏಳನೇ ದಿನಾಂಕದವರೆಗೆ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಆಚರಿಸಲಾಗುತ್ತಿದೆ.

ಜಗತ್ತು ಎಷ್ಟೇ ಮುಂದುವರಿದರೂ ಕೆಲವಾರು ವಿಚಾರಗಳಲ್ಲಿ ಸುಲಭವಾಗಿ ಬದಲಾಗುವುದು ಸಾಧ್ಯವಿಲ್ಲ. ಅದರಲ್ಲಿ ಒಂದು, ಈ ಸ್ತನ್ಯಪಾನ ವಿಚಾರ ಕೂಡ. ಎಷ್ಟೋ ಹೆಣ್ಣು ಮಕ್ಕಳಿಗೆ ತಾವು ತಾಯಿಯಾಗುವುದು ಒಂದು ಜವಾಬ್ದಾರಿ ಎಂಬ ಅರಿವಿಲ್ಲದೆಯೇ, ಮಗುವಿನ ತಾಯಿಯಾಗುತ್ತಾರೆ. ಆದರೆ ಮಗುವಿಗೆ ಗರ್ಭಾವಸ್ಥೆಯಲ್ಲಿ ಹೇಗೆ ಪೋಷಣೆ ಮಾಡಬೇಕು, ಸದೃಢವಾಗಿರುವ ಶಿಶು ಜನಿಸಲು, ತಾವು

ಮಾನಸಿಕವಾಗಿ ಹೇಗೆ ತಯಾರಾಗಬೇಕು, ಎಂತಹ ವಾತಾವರಣದಲ್ಲಿ ಇರಬೇಕು ಎಂಬ ಆಲೋಚನೆ ಅಷ್ಟಾಗಿ ಇರುವುದಿಲ್ಲ. ಮಗುವಿಗೆ ಗರ್ಭಾವಸ್ಥೆಯಲ್ಲಿಯೇ ಉತ್ತಮ ಪೋಷಣೆ ಸಿಗುವುದರ ಜೊತೆಗೆ ಮಗು ಜನಿಸಿದ ಅರ್ಧ ಗಂಟೆಯ ಒಳಗೆ ಮಗುವಿಗೆ ತಾಯಿಯ ಅಮೃತಸಮಾನ ಎದೆ ಹಾಲನ್ನು ಮಾತ್ರ ಕುಡಿಸಬೇಕು. ಕೆಲವು ಕುಟುಂಬದಲ್ಲಿ ಇದನ್ನೆಲ್ಲಾ ಹಿರಿಯರೇ ನೋಡಿಕೊಳ್ಳುತ್ತಾರೆ; ಆದರೆ, ಕೆಲವು ಹಿರಿಯರು ಮಗುವಿಗೆ ತಾಯಿ ಹಾಲು ಕುಡಿಸುವಲ್ಲಿ ಅಡ್ಡಗಾಲು ಹಾಕುತ್ತಾರೆ. ಜನಿಸಿದ ಮಗುವಿಗೆ ಜೇನುತುಪ್ಪ, ನೀರು, ಆಕಳ ಹಾಲು ಹೀಗೆ ಏನೇನೋ ನೀಡಲು ಮುಂದಾಗುತ್ತಾರೆ. ಇದು ಸರಿಯಲ್ಲ.

ಹಿಂಜರಿಕೆ ಬೇಡ: ಈಗ ಹೆಚ್ಚಾಗಿ ಎಲ್ಲರೂ ಆಸ್ಪತ್ರೆಯಲ್ಲೇ ಮಗುವಿಗೆ ಜನ್ಮ ನೀಡುವುದರಿಂದ, ಆಸ್ಪತ್ರೆಯ ಸಿಬ್ಬಂದಿ ಅದರ ಬಗ್ಗೆ ತಿಳುವಳಿಕೆಯನ್ನು ನೀಡಿ, ಮಗುವಿಗೆ ಆರು ತಿಂಗಳ ಕಾಲ ತಾಯಿಯ ಹಾಲನಲ್ಲದೇ ಇನ್ನೇನನ್ನೂ ಕೊಡಬಾರದು, ಎಂದು ಹೇಳುವುದರಿಂದ, ಮಾರ್ಗದರ್ಶನ ಸಿಗುತ್ತಿದೆ. ಆದರೂ ಮಗುವಿಗೆ ತಾಯಿ ಹಾಲು ಕುಡಿಸುವಾಗ ಯಾರೂ ನೋಡಬಾರದು ಎನ್ನುವ ಮನೋಭಾವ ನಮ್ಮ ಸಮಾಜದಲ್ಲಿ ಹೆಚ್ಚಾಗಿರುವುದರಿಂದ, ಎಷ್ಟೋ ಬಾರಿ ಮಗು ಹಸಿವಾಗಿ ಅಳುತ್ತಿದ್ದರೂ, ಹಾಲುಣಿಸಲು ತಾಯಿ ಹಿಂದೆ ಮುಂದೆ ನೋಡುವಂತೆ ಆಗುತ್ತದೆ. ಮಗುವನ್ನು ಕರೆದುಕೊಂಡು ಹೊರಗಡೆ ಹೊರಟಾಗ,ಹಾಲುಣಿಸಲೇಬೇಕಾದ ಪರಿಸ್ಥಿತಿ ಇದ್ದಾಗ, ಯಾರೋ ನೋಡುತ್ತಾರೆ ಎಂದು ಹಿಂಜರಿಯಬಾರದು. ಎದೆ ಹಾಲು ಕುಡಿಸುವ ಪ್ರತ್ಯೇಕ ಕೋಣೆ ವ್ಯವಸ್ಥೆ ಇದ್ದಾಗ, ಅದರ ಸದುಪಯೋಗ ಪಡಿಸಿಕೊಳ್ಳುವುದು ಒಳ್ಳೆಯದು.

ಹಾಗೆಯೇ ಶಿಶುವಿಗೆ ಆರು ತಿಂಗಳವರೆಗೆ ತಾಯಿ ಹಾಲು ಉತ್ತಮ ಆಹಾರ. ಬೇರೆ ಏನನ್ನು ಕೊಟ್ಟರೂ ಮಗುವಿಗೆ ಅದನ್ನು ಜೀರ್ಣ ಮಾಡಿಕೊಳ್ಳುವ ಶಕ್ತಿ ಇರುವುದಿಲ್ಲ. ತಾಯಿಯನ್ನು ಕಳೆದುಕೊಂಡ ಇಲ್ಲವೇ ಬೇಕಾದಷ್ಟು ತಾಯಿಯ ಎದೆಹಾಲು ಸಿಗದೇ ಇರುವಂತಹ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುತ್ತಾರೆ, ಅದಕ್ಕೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ತಾಯಿ ಹಾಲಿನ ಬ್ಯಾಂಕನ್ನು ತೆರೆಯಲಾಗಿದೆ; ವಾಣಿ ವಿಲಾಸ ಆಸ್ಪತ್ರೆ, ಬೆಂಗಳೂರು ಇಲ್ಲಿ ತಾಯಿ ಹಾಲಿನ ಘಟಕ 'ಅಮೃತ ಧಾರೆ' ಯೋಜನೆ ಇದ್ದು, ಅದರ ಮಾಹಿತಿ ಅಷ್ಟಾಗಿ ಪ್ರಚಾರ ಪಡೆದಿಲ್ಲ; ಅದನ್ನು ಪರಿಪೂರ್ಣವಾಗಿ ಜಾರಿಗೆ ತರುವಲ್ಲಿ ಹಾಗೂ ಅವಶ್ಯಕತೆ ಇರುವವರಿಗೆ ಪೂರೈಸಲು, ಹಾಲನ್ನು ಸಂಗ್ರಹಿಸಲು ಅನೇಕ ಸಮಸ್ಯೆಗಳು ಮತ್ತು ಇಚ್ಛಾ ಶಕ್ತಿಯ ಕೊರತೆ ಇರುವುದರಿಂದ ಅದರ ಉಪಯೋಗ ಪೂರ್ಣ ಪ್ರಮಾಣದಲ್ಲಿ ಆಗುತ್ತಿಲ್ಲ.

ಸ್ತನ್ಯ ಪಾನ ಮಾಡಿಸುವ ತಾಯಂದಿರು: ಆರೋಗ್ಯದಿಂದಿರುವುದು ಬಹಳ ಮುಖ್ಯ. ವೈದ್ಯರ ಸಲಹೆ ಇಲ್ಲದೆ ಔಷಧಿಯನ್ನು ತೆಗೆದುಕೊಳ್ಳುವುದು ಮಾಡಬಾರದು. ಅತಿಯಾದ ಪಥ್ಯ ಮಾಡುವುದರಿಂದ ಎದೆಹಾಲಿನ ಉತ್ಪತ್ತಿ ಕಡಿಮೆಯಾಗಿ ಮಗುವಿಗೆ ಅಪೌಷ್ಟಿಕತೆ ಉಂಟಾಗುವ ಸಾಧ್ಯತೆ ಇರುವುದರಿಂದ, ತಾಯಿ ಉತ್ತಮ ಆಹಾರ, ನಿದ್ರೆ, ಮುಂತಾದವುಗಳ ಕಡೆ ಗಮನಹರಿಸುವುದು ಅಗತ್ಯ. ಪ್ರತಿ ಮಗುವಿಗೂ ಒಳ್ಳೆಯ ಕೌಟುಂಬಿಕ ಭದ್ರತೆಯ ಜೊತೆಗೆ, ತಾಯಿ ಹಾಲಿನ ಪೋಷಣೆ ಸಿಗಲಿ ಎಂದು ಆಶಿಸೋಣ.

ವಾಲ್ ಶ್ರೀಜೇಶ್ ಕಮಾಲ್

ಸೆಮಿಸ್‌ಗೆ ಲಗ್ಗೆ ಹಾಕಿದ ಭಾರತ

ಕ್ವಾ.ಫೈನಲ್‌ನಲ್ಲಿ 10 ಆಟಗಾರರೊಂದಿಗೆ ಆಡಿದ ಭಾರತ | ಶೂಟೌಟ್‌ನಲ್ಲಿ 4-2ರಿಂದ ಗೆಲುವು

ಪ್ಯಾರಿಸ್: ಶ್ರೀಜೇಶ್ ಅವರ ಭರ್ಜರಿ ಗೋಲ್‌ಕೀಪಿಂಗ್ ಹಾಗೂ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತೀಯರು ದಾಖಲಿಸಿದ ಭರ್ಜರಿ ಗೋಲುಗಳಿಂದ ಭಾರತದ ಪುರುಷರ ಹಾಕಿ ತಂಡ ಅಮೋಘ ಗೆಲುವು ಸಾಧಿಸಿದ್ದು, ಸೆಮಿಫೈನಲ್ ಪ್ರವೇಶಿಸಿದೆ. ಈ ಮೂಲಕ ಪದಕದ ಆಸೆ ಜೀವಂತವಾಗಿರಿಸಿದೆ. ಕೇವಲ 10 ಮಂದಿ ಆಟಗಾರರನ್ನು ಒಳಗೊಂಡ ಹರ್ಮನ್‌ಪ್ರೀತ್ ಸಿಂಗ್ ಪಡೆ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಗ್ರೇಟ್ ಬ್ರಿಟನ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 4-2 ಗೋಲುಗಳ ಅಂತರದಿಂದ ಮಗುಚಿ ಹಾಕಿತು.

ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಗೆಲುವಿನೋಟ ಮುಂದುವರಿಸುವ ಮೂಲಕ ಭಾರತಕ್ಕೆ 11ನೇ ಬಂಗಾರವನ್ನು ತರುವಂತೆ ಆಡುತ್ತಿರುವ ಭಾರತದ ಹಾಕಿ ತಂಡವು, ಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ಭರ್ಜರಿ ಗೆಲುವು ಸಾಧಿಸಿ ಸೆಮಿಸ್‌ಗೆ ಲಗ್ಗೆ ಹಾಕಿದೆ. ಭಾನುವಾರ ನಡೆದ ಪಂದ್ಯದಲ್ಲಿ ಭಾರತ ಭರ್ಜರಿ ಪ್ರದರ್ಶನ ತೋರಿತು. ಪಂದ್ಯದಲ್ಲಿ 4 ಕ್ವಾರ್ಟರ್ ಮುಕ್ತಾಯದ ವೇಳೆ 1-1 ಗೋಲುಗಳಿಂದ ಪಂದ್ಯ ಟೈಗೊಂಡ ಕಾರಣ ಫಲಿತಾಂಶ ನಿರ್ಣಾಯಕ್ಕೆ ಪೆನಾಲ್ಟಿ ಶೂಟ್‌ಔಟ್ ಮೊರೆಹೋಗಲಾಯಿತು. ಇಲ್ಲಿ ಭಾರತ ಮೇಲುಗೈ ಸಾಧಿಸಿ ಜಯಭೇರಿ ಮೊಳಗಿಸಿತು. ಕಳೆದ ಟೋಕಿಯೊ ಒಲಿಂಪಿಕ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿಯೂ ಭಾರತ ತಂಡ ಬ್ರಿಟನ್ ತಂಡವನ್ನೇ ಮಣಿಸಿ ಸೆಮಿಫೈನಲ್ ಪ್ರವೇಶಿಸಿತ್ತು.

ರೆಡ್ ಕಾರ್ಡ್ ಪಡೆದ ಅಮಿತ್

ಕ್ವಾರ್ಟರ್‌ಫೈನಲ್ ಪಂದ್ಯದ ಪ್ರಾರಂಭದಿಂದಲೇ ಬ್ರಿಟನ್ ತಂಡ ಆಕ್ರಮಣಕಾರ ಆಟ ಪ್ರಾರಂಭಿಸಿತು. ಆರಂಭದಿಂದಲೂ ಬ್ರಿಟನ್ ತನ್ನ ಗೋಲು ಪಟ್ಟಿಗೆ ಹತ್ತರ ಚೆಂಡನ್ನು ಆಡಿಸುತ್ತಿತ್ತು. ಅದರಲ್ಲೂ ಸುಮಾರು 17ನೇ ನಿಮಿಷದ ವೇಳೆ ಎದುರಾಳಿ ತಂಡದ ಆಟಗಾರ ಕಲ್ಲಾನ್‌ನ ಮುಖಕ್ಕೆ ಹಾಕಿ ಸ್ಟಿಕ್ ತಾಗಿಸಿದ ಪರಿಣಾಮ ಅಮಿತ್‌ಗೆ ಅಂಪೈರ್ ರೆಡ್ ಕಾರ್ಡ್ ನೀಡಿದರು. ಹೀಗಾಗಿ ಅವರು ಪಂದ್ಯ ದಿಂದ ಹೊರಗುಳಿಯಬೇಕಾಯಿತು. ಇದರೊಂದಿಗೆ ಭಾರತ ಕೇವಲ 10 ಮಂದಿ ಆಟಗಾರರೊಂದಿಗೆ ಪಂದ್ಯವನ್ನಾಡಿತು. ಮೊದಲ ಕ್ವಾರ್ಟರ್‌ನಲ್ಲಿಯೇ ಭಾರತಕ್ಕೆ ಈ ಆಘಾತ ಎದುರಾಯಿತು. ಈ ಕ್ವಾರ್ಟರ್‌ನಲ್ಲಿ ಉಭಯ ತಂಡಗಳಿಗೆ ಗೋಲು ಬಾರಿಸುವ ಹಲವು ಅವಕಾಶ ಇತ್ತಾದರೂ ಕೂಡ ಇದನ್ನು ಸದುಪಯೋಗಪಡಿಸುವಲ್ಲಿ ವಿಫಲ ರಾದರು.

ಮಿಂಚಿದ ಶ್ರೀಜೇಶ್

ದ್ವಿತೀಯ ಕ್ವಾರ್ಟರ್‌ನಲ್ಲಿ ಭಾರತ ಮೊದಲ ಗೋಲು ಬಾರಿಸುವಲ್ಲಿ ಯಶಸ್ಸು ಕಂಡಿತು. ನಾಯಕ ಹರ್ಮನ್‌ಪ್ರೀತ್ ಸಿಂಗ್ ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಬಾರಿಸಿದರು. ಇನ್ನೇನು ದ್ವಿತೀಯ ಕ್ವಾರ್ಟರ್ ಮುಕ್ತಾಯ ಕಾಣಲು ಕೆಲವೇ ನಿಮಿಷ ಬಾಕಿ ಇರುವಾಗ ಲೀ ಮಾರ್ಟನ್ ಗೋಲು ಬಾರಿಸಿ ಪಂದ್ಯವನ್ನು 1-1 ಸಮಬಲಕ್ಕೆ ತಂದರು.

ಮೂರನೇ ಕ್ವಾರ್ಟರ್ ಮುಕ್ತಾಯಕ್ಕೆ 4 ನಿಮಿಷವಿರುವಾಗ ಬ್ರಿಟನ್‌ಗೆ ಪೆನಾಲ್ಟಿ ಕಾರ್ನರ್ ಅವಕಾಶ ಸಿಕ್ಕರೂ ಕೂಡ ಇದನ್ನು ಗೋಲಾಗಿ ಪರಿವರ್ತಿಸುವಲ್ಲಿ ವಿಫಲ ವಾಯಿತು. ವಿದಾಯದ ಒಲಿಂಪಿಕ್ಸ್ ಆಡುತ್ತಿರುವ ಗೋಲ್‌ಕೀಪರ್ ಶ್ರೀಜೇಶ್ ಹೀಗೆ ಹಲವು ಗೋಲುಗಳನ್ನು ತಡೆದದ್ದು ಪಂದ್ಯದ ಆಕರ್ಷಣೆಗಳಲ್ಲಿ ಒಂದಾಗಿತ್ತು. ಪೆನಾಲ್ಟಿ ಶೂಟೌಟ್‌ನಲ್ಲಿಯೂ ಗೋಲುಗಳನ್ನು ತಡೆದು ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ರಕ್ಷಣಾತ್ಮಕ ಆಟಕ್ಕಿಳಿದ ಭಾರತ

ರೆಡ್ ಕಾರ್ಡ್ ಪಡೆದ ನಂತರ ಭಾರತ ಕೇವಲ 10 ಮಂದಿ ಆಟಗಾರರೊಂದಿಗೆ ಆಟ ಮುನ್ನಡೆಸಿತು. ಆಟದ ವೇಳೆ ಅಪ್ಪಿತಪ್ಪಿ ಹಾಕಿ ಸ್ಟಿಕ್ ಎದುರಾಳಿ ಆಟಗಾರನ ಮುಖಕ್ಕೆ ಬಡಿದರೂ ಅಮಿತ್ ಅವರಿಗೆ ರೆಡ್ ಕಾರ್ಡ್ ನೀಡಿದ್ದು, ವಿವಾದಕ್ಕೆ ಕಾಣವಾಗಿತ್ತು. ಇದರಿಂದ ಬೆಸತ್ತ ಭಾರತದ ಆಟಗಾರರು ಪರಿಣಾಮವಾಗಿ ಭಾರತ ಮೊದಲ ಗೋಲ ಬಾರಿಸಿ ಮುನ್ನಡೆ ಸಾಧಿಸಿತು. ಆದರೆ ಒಂದು ಗೋಲು ಬಾರಿಸುತ್ತಿದ್ದಂತೆ ಬ್ರಿಟನ್ ಆಟಗಾರರು ಎಚ್ಚೆತ್ತುಕೊಂಡರು.

ಎರಡನೇ ಕ್ವಾರ್ಟರ್ ಅಂತ್ಯದಿಂದ ಹಾಕಿ ಚೆಂಡನ್ನು ಭಾರತದ ಆಸುಪಾಸಿಗೂ ಬಿಡಲಿಲ್ಲ. ಒಂದುವೇಳೆ ಚೆಂಡು ಭಾರತದ ಹತ್ತಿರ ಬಂದರೂ ಅದನ್ನು ಕಸಿದುಕೊಳ್ಳುವಲ್ಲಿ ಯಶಸ್ವಿಯಾದರು. ಇದರ ಪರಿಣಾಮವಾಗಿ ಎರಡನೇ ಕ್ವಾರ್ಟರ್‌ನ ಅರ್ಧ ಹಾಗೂ ಮೂರನೇ ಕ್ವಾರ್ಟರ್‌ನಲ್ಲಿ ಭಾರತ ಬರೀ ತಡೆಯೊಡ್ಡುವ ಆಟವಾಡಬೇಕಾಯಿತು. ಭಾರತದ ಗೋಲ್‌ಕೀಪರ್ ಅಂದಾಜು 8 ಗೋಲುಗಳನ್ನು ತಡೆದರು. ಆದರೆ ಬ್ರಿಟನ್ 4 ಕ್ವಾರ್ಟರ್ ಬಾರಿಸಲು ಸಾಧ್ಯವಾಯಿತು. ಮೂರನೇ ಕ್ವಾರ್ಟರ್‌ನಲ್ಲಿಯೂ ಎರಡ ತಂಡಗಳ ಬಲಿಷ್ಠ ರಕ್ಷಣಾತ್ಮಕ ಆಟದಿಂದಾಗಿ ಗೋಲು ದಾಖಲಾಗಲಿಲ್ಲ. ನಾಲ್ಕನೇ ಹಾಗೂ ಅಂತಿಮ ಕ್ವಾರ್ಟರ್‌ನಲ್ಲಿ ಜಿದ್ದಾಜಿದ್ದಿನ ಪೈಪೋಟಿ ಕಂಡುಬಂದರೂ ಕೂಡ ಉಭಯ ತಂಡಗಳಿಗೂ ಗೋಲು ಬಾರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಪಂದ್ಯವು 1-1 ಗೋಲುಗಳಿಂದ ಟೈಗೊಂಡಿತು.

ಪೆನಾಲ್ಟಿ ಶೂಟೌಟ್

ಪಂದ್ಯ ಟೈಗೊಂಡ ನಂತರ ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಅದರಲ್ಲಿ ಮೊದಲ ಅವಕಾಶವನ್ನು ಬ್ರಿಟನ್‌ಗೆ ನೀಡಲಾಯಿತು. ಮೊದಲ ಹೊಡೆತದಲ್ಲಿ ಬ್ರಿಟನ್ ಆಟಗಾರರು ಯಶಸ್ವಿಯಾದರು. ಅದರಂತೆ ನಾಯಕ ಹರ್ಮನ್‌ಪ್ರೀತ್ ಸಹ ಮೊದಲ ಗೋಲು ಬಾರಿಸಿದರು. ಎರಡನೇ ಶೂಟನಲ್ಲೂ ಭಾರತ ಹಾಗೂ ಬ್ರಿಟನ್ ಆಟಗಾರರು ಗೋಲು ದಾಖಲಿಸಲು ಯಶಸ್ವಿಯಾದರು. ಆದರೆ ಮೂರನೇ ಹಾಗೂ ನಾಲ್ಕನೇ ಗೋಲು ಬಾರಿಸುವಲ್ಲಿ ಭಾರತ ಮಾತ್ರ ಯಶಸ್ವಿಯಾಯಿತು. ಬ್ರಿಟನ್ ಬಾರಿಸದ ಗೋಲನ್ನು ತಡೆಯುವಲ್ಲಿ ಶ್ರೀಜೇಶ್ ಯಶಸ್ವಿಯಾದರು.

ಶೂಟೌಟ್‌ನಲ್ಲಿ ಗೋಲು ಬಾರಿಸಿದ ಆಟಗಾರರು: ಹರ್ಮನ್‌ಪ್ರೀತ್, ಲಲಿತ್, ಸುಖಜೀತ್, ಅಭಿಷೇಕ್ ಮತ್ತು ರಾಜ್‌ಕುಮಾರ್ ಗೋಲು ಬಾರಿಸಿದರು. ಬ್ರಿಟನ್ ಪರ ಜೇಮಸ್ ಆಲ್ಬೆ, ವಾಲಸ್ ಗೋಲು ಬಾರಿಸಿದರು.

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	3	3
ಚೀನಾ	18	15	9	42
ಅಮೆರಿಕ	16	25	25	66
ಫ್ರಾನ್ಸ್	12	14	16	42
ಆಸ್ಟ್ರೇಲಿಯಾ	12	8	7	27
ಗ್ರೇಟ್ ಬ್ರಿಟನ್	10	12	15	37
ದಕ್ಷಿಣ ಕೊರಿಯಾ	10	7	7	24
ಜಪಾನ್	8	5	10	23
ಇಟಲಿ	6	8	5	19
ನೆದರ್ಲೆಂಡ್ಸ್	6	5	4	15

ಮೈಕ್ರೋ ಮಾಹಿತಿ

ಹಾಕಿ

ಪೆನಾಲ್ಟಿ ಶೂಟೌಟ್ ಎಂದರೇನು?

60 ನಿಮಿಷ ಪಂದ್ಯದ ಪೈಪೋಟಿ

4 ಕ್ವಾರ್ಟರ್‌ಗಳಲ್ಲಿ 60 ನಿಮಿಷಗಳ ಪಂದ್ಯ ವಿಂಗಡಿಸಲಾಗಿದೆ.

15 ನಿಮಿಷ ಸಮಯವನ್ನು ಪ್ರತಿ ಕ್ವಾರ್ಟರ್ ಹೊಂದಿರುತ್ತದೆ.

4 ಕ್ವಾರ್ಟರ್‌ಗಳ ನಂತರ ಹೆಚ್ಚು ಗೋಲು ಬಾರಿಸಿದ ತಂಡ ಗೆಲ್ಲುತ್ತದೆ.

ಗೋಲುಗಳು ಸಮವಾಗಿದ್ದರೆ, ಪೆನಾಲ್ಟಿ ಶೂಟೌಟ್ ಮೊರೆ

- ಶೂಟೌಟ್‌ನಲ್ಲಿ ಕೇವಲ ಗೋಲ್‌ಕೀಪರ್ ಮಾತ್ರ ಗೋಲುಪೆಟ್ಟಿ ಕಾವಲಿಗಿರುತ್ತಾನೆ.
- ತಂಡದ ಏಕೈಕ ಆಟಗಾರ ಮಾತ್ರ ಒಂದು ಬಾರಿ ಶೂಟ್ ಮಾಡಬೇಕು.
- ಗೋಲು ಪೆಟ್ಟಿಗೆಯಿಂದ 23 ಮೀ. ದೂರದಿಂದ ಚೆಂಡನ್ನು ತರುತ್ತಾನೆ.



- ಪ್ರತಿ ತಂಡಕ್ಕೆ 5 ಪೆನಾಲ್ಟಿ ಶೂಟೌಟ್‌ಗಳನ್ನು ನೀಡಲಾಗುತ್ತದೆ.
- 5ರಲ್ಲಿ ಹೆಚ್ಚು ಗೋಲು ಬಾರಿಸಿದ ತಂಡ ಪಂದ್ಯ ಗೆಲ್ಲುತ್ತದೆ.
- ಪೆನಾಲ್ಟಿಯಲ್ಲೂ ಸ್ಕೋರ್ ಟೈ ಆದರೆ, ಎರಡೂ ತಂಡಕ್ಕೆ ಒಂದೊಂದು ಪೆನಾಲ್ಟಿ ಶೂಟೌಟ್ ನೀಡಲಾಗುತ್ತದೆ.

ಸಮಾಚಾರ ಸಣ್ಣದಲ್ಲ

ಡಿಎನ್‌ಎ ದೋಷಪೂರಿತ

ಪ್ಯಾರಿಸ್: ಅಂತಾರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ ಕಳೆದ ವರ್ಷ ನಡೆಸಿದ್ದ ಇಬ್ಬರು ಬಾಕ್ಸರ್‌ಗಳ ಡಿಎನ್‌ಎ ಪರೀಕ್ಷೆ ದೋಷಪೂರಿತವಾಗಿತ್ತು ಎಂದು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಹೇಳಿದೆ. ಅಲ್ಜೀರಿಯಾದ ಇಮಾನೆ ಖೆಲಿಫ್ ಮತ್ತು ತೈವಾನ್‌ನ ಲಿನ್ ಯು-ಟಿಂಗ್ ಅವರ ಡಿಎನ್‌ಎ ಪರೀಕ್ಷೆ ವೇಳೆ ಪುರುಷರ ಕ್ರೋಮೋಸೋಮ್ ಅಂಶಗಳು ಕಂಡುಬಂದಿದ್ದವು. ಹೀಗಾಗಿ ಈ ಇಬ್ಬರನ್ನೂ ವಿಶ್ವ ಚಾಂಪಿಯನ್‌ಶಿಪ್‌ಗೆ ಅನರ್ಹಗೊಳಿಸಲಾಗಿತ್ತು. ಆದಾಗ್ಯೂ, ಇವರಿಬ್ಬರೂ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಸಮ್ಮತಿಸಿತ್ತು. ಈ ಬಗ್ಗೆ ಬಾಕ್ಸಿಂಗ್ ವಲಯದಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದವು. ಖೆಲಿಫ್ ಹಾಗೂ ಲಿನ್ ಅವರ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಟೀಕಾ ಪ್ರಹಾರ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಐಒಸಿ, ಐಬಿಎ ನಡೆಸಿದ ಡಿಎನ್‌ಎ ಪರೀಕ್ಷೆಯು ದೋಷದಿಂದ ಕೂಡಿತ್ತು. ಅದರ ಪ್ರಕ್ರಿಯೆಯು ಕಾನೂನಾತ್ಮಕವಾಗಿ ಇರಲಿಲ್ಲ ಎಂದು ಹೇಳಿದೆ.

ಇಂದು ಕಣದಲ್ಲಿ

- ಶೂಟಿಂಗ್: ಸ್ಕೀಟ್ ಮಿಶ್ರ ತಂಡ: 12.30 ಗಂಟೆಗೆ
- ಟೇಬಲ್ ಟೆನಿಸ್: ಮಹಿಳಾ ತಂಡ: 1.30 ಗಂಟೆಗೆ
- ಓಟ: ಮಹಿಳೆಯರ 400 ಮೀಟರ್: 3.25 ಗಂಟೆಗೆ
- ಸೇಲಿಂಗ್: ಮಹಿಳೆಯರ ಡಿಂಘಿ ಮಧ್ಯಾಹ್ನ 3.45 ಗಂಟೆಗೆ
- ಪುರುಷರ ಡಿಂಘಿ ರೇಸಿಂಗ್ - ವಿಷ್ಣು ಸರವಣನ್: ಸಂಜೆ 6.10 ಗಂಟೆಗೆ
- ಬ್ಯಾಡ್ಮಿಂಟನ್: ಪುರುಷರ ಕಂಚಿನ ಸುತ್ತು: ಸಂಜೆ 6.00 ಗಂಟೆಗೆ
- ಅಥ್ಲೆಟಿಕ್ಸ್: ಪುರುಷರ ಸ್ಟೀಪಲ್ ಚೇಸ್ 3000 ಮೀಟರ್ ಮೊದಲ ಸುತ್ತು: ರಾತ್ರಿ 11.34 ಗಂಟೆಗೆ

ಬಾಕ್ಸಿಂಗ್ ಸವಾಲು ಅಂತ್ಯ

ಕ್ವಾ.ಫೈನಲ್‌ನಲ್ಲಿ ಲವ್ಲಿನಾಗೂ ಸೋಲು

ಪ್ಯಾರಿಸ್: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಲವ್ಲಿನಾ ಬೊರ್ಗೊಹೈನ್ ಅವರೂ ನಿರಾಸೆ ಅನುಭವಿಸಿದ್ದು, ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಲುವ ಮೂಲಕ ಒಲಿಂಪಿಕ್ ಅಭಿಯಾನ ಮುಕ್ತಾಯಗೊಳಿಸಿದ್ದಾರೆ. ಭಾರತದ ಬಾಕ್ಸರ್‌ಗಳು ಏಷ್ಯನ್ ಹಾಗೂ ಕಾಮನ್‌ವೆಲ್ತ್ ಗೇಮ್‌ಗಳಲ್ಲಿ ಭರ್ಜರಿ ಪ್ರದರ್ಶನ ತೋರುವುದರೊಂದಿಗೆ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ನಿರೀಕ್ಷೆ ಮೂಡಿಸಿದ್ದರು. ಆದರೆ ಎಲ್ಲ ಬಾಕ್ಸರ್‌ಗಳೂ ನಿರಾಸೆ ಮೂಡಿಸಿದ್ದು, ಬರಿಗೈಲ್ಲೇ ವಾಪಾಸ್ಸಾಗಿದ್ದಾರೆ. ಭಾನುವಾರ ನಡೆದ ಮಹಿಳೆಯರ 75 ಕೆ. ಜಿ ವಿಭಾಗದ ಸ್ಪರ್ಧೆಯಲ್ಲಿ ಭಾರತದ ಲವ್ಲಿನಾ ಅವರು ಚೀನಾದ ಲಿ ಕಿಯಾನ್ ವಿರುದ್ಧ ಕಠಿಣ ಹೋರಾಟದ ನಂತರ ಸೋತರು. ಇದರೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಬಾಕ್ಸರ್‌ಗಳ ಅಭಿ ಯಾನವು ಪದಕವಿಲ್ಲದೆ ಕೊನೆಗೊಂಡಿತು. ಈ ವಿಭಾಗದಲ್ಲಿ ಹಾಲಿ ವಿಶ್ವ ಚಾಂಪಿಯನ್ ಬೊರ್ಗೊಹೈನ್, ಟೋಕಿಯೊ ಕ್ರೀಡಾಕೂಟದ ಬೆಳ್ಳಿ ವಿಜೇತೆ 34 ವರ್ಷದ ಆಟಗಾರ್ತಿಯ ವಿರುದ್ಧ 1-4 ಅಂತರದಿಂದ ಸೋತರು. ಇಬ್ಬರೂ ಬಾಕ್ಸರ್‌ಗಳಿಗೆ ಹಿಡಿತಕ್ಕಾಗಿ ಪದೇಪದೆ ಎಚ್ಚರಿಕೆ ನೀಡಲಾಗಿತ್ತು. ಕೊನೆಗೆ ಲವ್ಲಿನಾ ತಲೆಬಾಗಿದರು.

ನಾಲ್ಕು ಮಹಿಳೆಯರು ಮತ್ತು ಇಬ್ಬರು ಪುರುಷರನ್ನು ಒಳಗೊಂಡ ಆರು ಬಲಿಷ್ಠ ಬಾಕ್ಸಿಂಗ್ ತಂಡವು ಕ್ರೀಡಾಕೂಟದಲ್ಲಿ ದೇಶವನ್ನು ಪ್ರತಿನಿಧಿಸುತ್ತಿತ್ತು. ಈ ಪೈಕಿ ನಾಲ್ವರು ಪ್ರಾಥಮಿಕ ಹಂತದಲ್ಲಿಯೇ ಸೋಲು ಕಂಡಿದ್ದರು. ಬಾಕ್ಸರ್‌ಗಳು ಮೊದಲ ದಾಳಿ ಪ್ರಾರಂಭಿಸಲು ಸಿದ್ಧರಿರಲಿಲ್ಲ. ಪಂದ್ಯದ ಆರಂಭದಲ್ಲಿಯೇ ಅಂಕಕ್ಕಿಂತ ಹಿಡಿತವೇ ಹೆಚ್ಚಾಯಿತು. ಇಬ್ಬರು ಬಾಕ್ಸರ್‌ಗಳನ್ನು ಬೇರ್ಪಡಿಸಲು ರೆಫರಿ ಪದೇ ಪದೇ ಹೆಜ್ಜೆ ಹಾಕಬೇಕಾಯಿತು.

ಮೊದಲ ಸುತ್ತಿನ ಕೊನೆಯಲ್ಲಿ ಚೀನಿ ಆಟಗಾರ್ತಿ ಸ್ವಚ್ಛ ಹೊಡೆತಗಳು ಹೊಡೆದು 3-2 ಮುನ್ನಡೆ ಸಾಧಿದ್ದರು. ಎರಡನೇ ಸುತ್ತಿನಲ್ಲಿ ಬೊರ್ಗೊಹೈನ್ ಅತಿಯಾದ ಹಿಡಿತಕ್ಕಾಗಿ ಎರಡು ಬಾರಿ ಎಚ್ಚರಿಕೆ ಪಡೆದರು. ಹೀಗಾಗಿ ಎರಡನೇ ಹಂತವೂ 3-2 ರಿಂದ ಕಿಯಾನ್ ಪರವಾಯಿತು. ಮೂರನೇ ಸುತ್ತಿನಲ್ಲಿಯೂ ಹಿಡಿತ ಮತ್ತು ಗೆಲುವು ಮುಂದುವರಿಯಿತು. ಕೊನೆಯಲ್ಲಿ ಬೊರ್ಗೊಹೈನ್, 1-4ರಿಂದ ಸೋಲೊಪ್ಪಿಕೊಂಡರು.

ನಿಶಾಂತ್‌ಗೆ ವಿವಾದಾತ್ಮಕ ಸೋಲು

ಒಲಿಂಪಿಕ್ಸ್ ಕ್ರೀಡಾಕೂಟದ ಬಾಕ್ಸಿಂಗ್ ಸ್ಪರ್ಧೆಯ 71 ಕೆ.ಜಿ. ವಿಭಾಗದಲ್ಲಿ ಶನಿವಾರ ಕ್ವಾರ್ಟರ್ ಫೈನಲ್ ಹಂತದಲ್ಲಿ ಸೋಲು ಅನುಭವಿಸಿರುವ ಬಗ್ಗೆ ಬಾಕ್ಸರ್ ನಿಶಾಂತ್ ದೇವ್ ತೀರ್ಪುಗಾರರ ನಿರ್ಣಯಗಳ ಬಗ್ಗೆ ಗಂಭೀರ ಆರೋಪ ಮಾಡಿದ್ದಾರೆ. ಈ ಹಂತದಲ್ಲಿ ಗೆದ್ದಲ್ಲಿ ನಿಶಾಂತ್‌ಗೆ ಪದಕ ಖಚಿತವಾಗಿತ್ತು. ಭಾರತದ ಪಾಲಿಗೆ ಶನಿವಾರ ಬೇಸರದ ದಿನವಾಗಿದ್ದು, ಮೆಕ್ಸಿಕೋದ ಮಾರ್ಕೊ ವೆಡೆರ್ ಅಲ್ವರೆಝ್ ವಿರುದ್ಧ ವಿಭಜಿತ ತೀರ್ಪಿನಲ್ಲಿ ನಿಶಾಂತ್ ಸೋಲು ಅನುಭವಿಸಿದ್ದರು. ಮೊದಲ ಸುತ್ತನ್ನು ಸುಲಭವಾಗಿ ಗೆದ್ದ ನಿಶಾಂತ್, ಎರಡನೇ ಸುತ್ತಿನಲ್ಲೂ ಬೌಟ್‌ನಲ್ಲಿ ಸಂಪೂರ್ಣ ನಿಯಂತ್ರಣ ಸಾಧಿಸಿದ್ದರು. ಮೆಕ್ಸಿಕೊ ಪಟುವಿಗೆ ದೈತ್ಯ ಹೊಡೆತಗಳ ಮೂಲಕ ಆಘಾತ ನೀಡಿದರೂ, ತೀರ್ಪುಗಾರರು ಅಲ್ವರೆಝ್ ಪರವಾಗಿ ಈ ಸುತ್ತಿನಲ್ಲಿ ತೀರ್ಪು ನೀಡಿ 3-2 ಮುನ್ನಡೆಗೆ ಕಾರಣರಾಗಿದ್ದರು ಎಂದು ಆರೋಪ ಮಾಡಲಾಗಿತ್ತು. ಅಂತಿಮವಾಗಿ ಅಲ್ವರೆಝ್ ಗೆಲುವು ಸಾಧಿಸಿದರು.

ಲಾಂಗ್‌ಜಂಪ್‌ನಲ್ಲಿ ಸೋಲುಂಡ ಜೆಸ್ವಿನ್ ಆಲ್ಡ್ರಿನ್

ಮುಂದುವರಿದ ನಿರಸ ಪ್ರದರ್ಶನ

ಪ್ಯಾರಿಸ್: ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಭಾರತದ ನಿರಸ ಪ್ರದರ್ಶನ ಮುಂದುವರಿಯಿತು. ಮಹಿಳೆಯರ 3000 ಮೀಟರ್ಸ್ ಸ್ಟೀಪಲ್ಚೇಸ್‌ನಲ್ಲಿ ಪಾರುಲ್ ಚೌಧರಿ ಮತ್ತು ಲಾಂಗ್ಜಂಪ್‌ನಲ್ಲಿ ಜೆಸ್ವಿನ್ ಆಲ್ಡ್ರಿನ್ ಅವರು ಹೀಟ್ಸ್ ಹಂತದಲ್ಲಿ ಮುಗ್ಗರಿಸಿದ್ದಾರೆ.

ಪಾರುಲ್ ತಮ್ಮ ಹೀಟ್ ರೇಸ್‌ನಲ್ಲಿ ಎಂಟನೇ ಸ್ಥಾನದಲ್ಲಿ ಮುಗಿಸಿ ಒಟ್ಟಾರೆ 21ನೇ ಸ್ಥಾನದಲ್ಲಿ ಆಟ ನಿಲ್ಲಿಸಿದರು. 29 ವರ್ಷದ ಪಾರುಲ್, ಕ್ರೀಡೆಗಳಿಗೆ ಸಜ್ಜುಗೊಳ್ಳಲು ಕೆಲವು ತಿಂಗಳಿಂದ ಅಮೆರಿಕದ ಎತ್ತರದ ಪ್ರದೇಶದಲ್ಲಿ ತರಬೇತಿ ಪಡೆದಿದ್ದರು. ಅವರು 3000 ಮೀ.ಸ್ಟೀಪಲ್ಚೇಸ್ ಸ್ಪರ್ಧೆಯನ್ನು 9ನಿ.23.39 ಸೆ.ಗಳಲ್ಲಿ ಕ್ರಮಿಸಿದರು. ಇದು ಅವರ ಈ ವರ್ಷದ ಉತ್ತಮ ಓಟ ಎನಿಸಿತು. ಆದರೆ ಅವರ ವೈಯಕ್ತಿಕ ಶ್ರೇಷ್ಠ ಸಮಯ 9ನಿ.15.31 ಸೆ. ಮೀರಲಾಗಲಿಲ್ಲ. ಮೂರು ಹೀಟ್ ರೇಸ್‌ಗಳಲ್ಲಿ ಮೊದಲ ಐದು ಸ್ಥಾನ ಪಡೆದವರು ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ. ಹಾಲಿ ಚಾಂಪಿಯನ್ ಪೆರುತ್ ಚೆಮುತ್ಯೆ ಅವರು ಹೀಟ್ಸ್ ರೇಸ್ ಒಂದರಲ್ಲಿ 9ನಿ.10.51 ಸೆ. ತೆಗೆದುಕೊಂಡು ಗೆದ್ದರೆ, ಹೀಟ್ ರೇಸ್ ಎರಡರಲ್ಲಿ ಕೆನ್ಯಾದ ಫೇತ್ ಚೆರೊಟಿಚ್ 9:10.57 ಅವಧಿಯೊಡನೆ ಮತ್ತು ಮೂರನೇ ಹೀಟ್ ರೇಸ್‌ನಲ್ಲಿ ಜರ್ಮನಿಯ ಗೆಸಾ ಫೆಲಿಸಿಟಾಸ್ ಕ್ರಾಸೆ 9:10.68 ಅವಧಿಯೊನೆ ಅಗ್ರ ಸ್ಥಾನ ಪಡೆದರು. 5000 ಮೀ. ಓಟದಲ್ಲೂ ಪಾರುಲ್ ಹೀಟ್ಸ್‌ನಲ್ಲಿ ಹೊರಬಿದ್ದಿದ್ದರು. ಅಂಕಿತಾ ಧ್ಯಾನಿ ಕೂಡ ವಿಫಲರಾಗಿದ್ದರು. ಸ್ಟೀಪಲ್ಚೇಸ್‌ನಲ್ಲಿ ಒಲಿಂಪಿಕ್ಸ್ ಪ್ರವೇಶಕ್ಕೆ ಬೇಕಾದ ಅರ್ಹತಾ (9:23.00) ಸಾಧಿಸಿ ಪಾರುಲ್ ನೇರವಾಗಿ ಅರ್ಹತೆ ಪಡೆದಿದ್ದರು.



ಅಲ್ಡ್ರಿನ್ ವಿಫಲ: ಪುರುಷರ ಲಾಂಗ್ಜಂಪ್ನಲ್ಲಿ ಮೊದಲೆರಡು ಯತ್ನಗಳಲ್ಲಿ ಫೌಲ್ ಮಾಡಿದ ಜೆಸ್ವಿನ್ ಆಲ್ಡ್ರಿನ್, ಮೂರನೇ ಯತ್ನದಲ್ಲಿ 7.61 ಮೀ. ದೂರ ಜಿಗಿದರು. ಗ್ರೂಪ್ ಬಿ ಕಾಲ್ವಿಫಿಕೇಷನ್ನಲ್ಲಿ ಅವರು 16 ಸ್ಪರ್ಧಿಗಳ ಪೈಕಿ 13ನೇ ಸ್ಥಾನ ಪಡೆದರು. ಒಟ್ಟಾರೆ 26ನೇ ಸ್ಥಾನಕ್ಕೆ ಸರಿದರು.

4ನೇ ಚಿನ್ನ ಗೆದ್ದ ಫ್ಲೋರಿನ್ ಕುಟುಂಬ

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಫ್ಲೋರಿನ್ ಕುಟುಂಬ ಸಂಚಲನ ಮೂಡಿಸಿದ್ದು, ಒಲಿಂಪಿಕ್ ಚಾಂಪಿಯನ್ ಪಟ್ಟದಿಂದ ಎಮ್ಮಾ ಟ್ವಿಗ್ ಅವರನ್ನು ಕೆಳಗಿಳಿಸಿದ ಡಚ್ ರೋಯಿಂಗ್ ಸ್ಪರ್ಧಿ ಕರೋಲಿನ್ ಫ್ಲೋರಿನ್ ಅವರು ಮಹಿಳೆಯರ ಸಿಂಗಲ್ ಸ್ಕಲ್ಸ್ ಚಿನ್ನ ಗೆದ್ದಿದ್ದಾರೆ. ಆ ಮೂಲಕ ಈ ಕುಟುಂಬ ನಾಲ್ಕನೇ ಚಿನ್ನವನ್ನು ಗೆದ್ದುಕೊಂಡಿದೆ. ಎರಡು ಬಾರಿಯ ವಿಶ್ವ ಚಾಂಪಿಯನ್, 26 ವರ್ಷದ ಫ್ಲೋರಿನ್, 7 ನಿಮಿಷ 17.28 ಸೆಕೆಂಡುಗಳಲ್ಲಿ ನಿಗದಿತ ದೂರ ಕ್ರಮಿಸಿದ್ದು, ನ್ಯೂಜಿಲೆಂಡ್‌ನ ಸ್ಪರ್ಧಿಗಿಂತ ಎರಡು ಸೆಕೆಂಡು ಮೊದಲೇ ಗುರಿಮುಟ್ಟಿ ಚಿನ್ನ ಗೆದ್ದರು. ಲಿಥುವೇನಿಯಾದ ವಿಕ್ಟೋರಿಯಾ ಸೆಂಕುಂಟೆ (7:20.85) ಕಂಚಿನ ಪದಕ ಗೆದ್ದರು. ಇದು ರೋಯಿಂಲ್‌ನಲ್ಲಿ ಲಿಥುವೇನಿಯಾಕ್ಕೆ ಮೊದಲ ಪದಕವಾಗಿದೆ. ನ್ಯೂಜಿಲೆಂಡ್‌ನ ಟ್ವಿಗ್ ನಾಲ್ಕನೇ ಸ್ಥಾನಕ್ಕೆ ಸರಿದರು. 500 ಮೀ. ಕ್ರಮಿಸಿದ ನಂತರ ಮುನ್ನಡೆ ಗಿಟ್ಟಿಸಿದ ಫ್ಲೋರಿನ್ ನಂತರ ಲೀಡ್ ಬಿಟ್ಟುಕೊಡಲಿಲ್ಲ. ಫ್ಲೋರಿನ್ ಅವರ ಅಣ್ಣ ಫಿನ್ ಫ್ಲೋರಿನ್ ಈ ವಾರದ ಆರಂಭದಲ್ಲಿ ಕ್ವಾಡ್ರಪಲ್ ಸ್ಕಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಇವರ ತಂದೆ ರೊನಾಲ್ಡ್ ಫ್ಲೋರಿನ್ ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಆಗಿದ್ದಾರೆ. ಅವರು 1988ರ ಸೋಲ್ ಮತ್ತು 1996ರ ಅಟ್ಲಾಂಟಾ ಕ್ರೀಡೆಗಳಲ್ಲಿ ಚಾಂಪಿಯನ್ ಆಗಿದ್ದರು.

ಸೆಮಿಸ್ ನಿರಾಸೆ ಕಂಚು ಸುತ್ತಿಗೆ ಸೇನ್

ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸೆನ್ ವಿರುದ್ಧ ನೇರ ಸೆಟ್‌ಗಳಿಂದ ಸೋಲು

ಪ್ಯಾರಿಸ್: ಪುರುಷರ ಸಿಂಗಲ್ಸ್ ಬ್ಯಾಡ್ಮಿಂಟನ್ ಸೆಮಿಫೈನಲ್ ನಲ್ಲಿ ಭಾರತದ ಲಕ್ಷ್ಯ ಸೇನ್ ವೀರೋಚಿತ ಸೋಲು ಅನುಭವಿಸಿದ್ದಾರೆ. ಹಾಲಿ ಒಲಿಂಪಿಕ್ ಚಾಂಪಿಯನ್ ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್ ವಿರುದ್ಧ ಸೇನ್ 22-20, 21-14 ನೇರ ಸೆಟ್‌ಗಳಿಂದ ಸೋತಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಅದ್ದೂರಿಯಾಗಿ ಅಭಿಯಾನ ಆರಂಭಿಸಿದ್ದ ಸೇನ್ ಅವರಿಂದ ಭಾರತ ಚಿನ್ನ ಅಥವಾ ಬೆಳ್ಳಿ ಪದಕದ ನಿರೀಕ್ಷೆಯಲ್ಲಿತ್ತು. ಆದರೆ ಸೆಮಿಸ್ ಹಂತದಲ್ಲಿ ಅವರು ಸೋಲನುಭವಿಸಿದ್ದು, ಸೋಮವಾರ ಕಂಚಿನ ಪದಕಕ್ಕಾಗಿ ಸೇನ್ ಸ್ಪರ್ಧಿಸಲಿದ್ದಾರೆ. ಸೆಮಿಫೈನಲ್ ಪಂದ್ಯವನ್ನು ಅಬ್ಬರದಂದ ಆರಂಭಿಸಿದ ಸೇನ್ ಅದ್ಭುತ ಶಾಟ್‌ಗಳ ಮೂಲಕ ಗಮನ ಸೆಳೆದರು. ಮೊದಲ ಸೆಟ್‌ನ ಮಧ್ಯ ವಿರಾಮದ ವೇಳೆಗೆ 11-9 ಅಂಕಗಳೊಂದಿಗೆ 2 ಅಂಕಗಳ ಮುನ್ನಡೆ ಪಡೆದರು. ಇದಾದ ಬಳಿಕವೂ ಅಮೋಘ ಪ್ರದರ್ಶನ ನೀಡಿದ ಎದುರಾಳಿ ಆಟಗಾರನಿಗೆ ಯಾವುದೇ ಅವಕಾಶ ನೀಡಲಿಲ್ಲ.

> ಲಕ್ಷ್ಯ ಸೇನ್ ಅವರು ಅವರು ಭರ್ಜರಿ ಪ್ರದರ್ಶನ ತೋರಿದ್ದಾರೆ. ಅವರ ಸವಾಲು ನಿಜಕ್ಕೂ ಕಷ್ಟಕರವಾಗಿತ್ತು. ಸೇನ್ ಅವರಲ್ಲಿ ಉತ್ತಮ ಕೌಶಲ್ಯ ಗಳಿವೆ. 2028ರ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಪ್ರಭಲ ಸ್ಪರ್ಧಿಯಾಗಲಿದ್ದಾರೆ. ಅವರು ಇನ್ನಷ್ಟು ಸಾಧನೆ ಮಾಡಲಿ.
>
> **-ವಿಕ್ಟರ್ ಅಕ್ಸೆಲ್ಸೆನ್,** ಪಂದ್ಯ ಗೆದ್ದ ಷಟ್ಲರ್

ಮುನ್ನಡೆ ಸಾಧಿಸಿದ್ದ ಸೇನ್

ಮೊದಲ ಸೆಟ್‌ನ ಒಂದು ಹಂತದಲ್ಲಿ ಲಕ್ಷ್ಯ 18-15ರಲ್ಲಿ ಮುನ್ನಡೆ ಸಾಧಿಸಿದ್ದರು. ಆದರೆ ವಿಕ್ಟರ್ ಬಲವಾದ ಪುನರಾಗಮನ ಮಾಡಿ ಸ್ಕೋರ್ ಅನ್ನು 20-20ರಲ್ಲಿ ಸಮಗೊಳಿಸಿದರು. ನಂತರ ಸತತ ಎರಡು ಗೇಮ್ ಪಾಯಿಂಟ್‌ಗಳನ್ನು ಪಡೆಯುವ ಮೂಲಕ ಮೊದಲ ಸೆಟ್ ಅನ್ನು 22-20 ರಿಂದ ಗೆದ್ದರು. ಉಭಯ ಆಟಗಾರರ ನಡುವಿನ ಎರಡನೇ ಸೆಟ್ ಕೂಡ ರೋಚಕವಾಗಿತ್ತು. ಎರಡನೇ ಗೇಮ್ನಲ್ಲಿ, 7-0 ಅಂತರದಲ್ಲಿ ಹಿನ್ನಡೆಯಾದ ನಂತರ ಅಕ್ಸೆಲ್ಸನ್ ಅದ್ಭುತ ಪುನರಾಗಮನ ಮಾಡಿದರು. ಆದರೆ, ಮಧ್ಯ ವಿರಾಮದವರೆಗೂ ಲಕ್ಷ್ಯ ಸೇನ್ 11-10 ರಿಂದ ಮುನ್ನಡೆ ಸಾಧಿಸಿದರು. ಮತ್ತೊಮ್ಮೆ ಸೇನ್ ತಮ್ಮ ಮುನ್ನಡೆಯನ್ನು ಕಳೆದುಕೊಂಡರು. ಹೀಗಾಗಿ ಎರಡನೇ ಸೆಟ್ ಅನ್ನು ವಿಕ್ಟರ್ ಅಕ್ಸೆಲ್ಸನ್ ವಿರುದ್ಧ 14-21 ರಿಂದ ಸೋತು ಸೆಮಿಫೈನಲ್‌ನಿಂದ ಹೊರಬಿದ್ದರು. ಚೊಚ್ಚಲ ಒಲಿಂಪಿಕ್ಸ್ ಆಡುತ್ತಿರುವ ಲಕ್ಷ್ಯ ಸೇನ್ ಅವರು ಸೋಮವಾರ ಕಂಚಿನ ಪದಕಕ್ಕಾಗಿ ಮಲೇಷ್ಯಾದ ಲೀ ಝಿ ಜಿಯಾ ಅವರನ್ನು ಎದುರಿಸಲಿದ್ದಾರೆ.

ಡಿಂಗಿ: 7ನೇ ರೇಸ್‌ನಲ್ಲಿ 7ನೇ ಸ್ಥಾನ ಪಡೆದ ವಿಷ್ಣು

ಪ್ಯಾರಿಸ್: ಪುರುಷರ ಡಿಂಗಿ ಸ್ಪರ್ಧೆಯ 7ನೇ ರೇಸ್‌ನಲ್ಲಿ ಭಾರತೀಯ ನಾವಿಕ ವಿಷ್ಣು ಸರವಣನ್ ಅವರು ಏಳನೇ ಸ್ಥಾನ ಗಳಿಸಿದ್ದು, ಭಾರೀ ಮುನ್ನಡೆ ಸಾಧಿಸಿದ್ದಾರೆ. ಈ ಹಿಂದೆ ಒಲಿಂಪಿಕ್‌ಗೂ ಮುನ್ನ ಭರ್ಜರಿ ಪ್ರದರ್ಶನ ತೋರುವ ಮೂಲಕ ಪದಕದ ಆಸೆ ಮೂಡಿಸಿದ್ದ ಅವರು, ಇಲ್ಲಿನ ಮೊದಲ ರೇಸ್‌ಗಳಲ್ಲಿ ನಿರಾಸೆ ಅನುಭವಿಸಿದ್ದರು. ಆದರೆ ಇದೀಗ ಅವರ ಶ್ರೇಯಾಂಕ ದಲ್ಲಿ ಭಾರೀ ವೃದ್ಧಿಯಾಗಿದೆ. ಆ ಮೂಲಕ ಪದಕದ ಆಸೆ ಜೀವಂತವಾಗಿರಿಸಿದ್ದಾರೆ. ಶನಿವಾರ ನಡೆದ ರೇಸ್‌ನಲ್ಲಿ ಭರ್ಜರಿ ಪ್ರದರ್ಶನ ತೋರಿದ ಅವರು 7ನೇ ಸ್ಥಾನ ಪಡೆದರು. ಆ ಮೂಲಕ ಅಂಕಪಟ್ಟಿಯಲ್ಲಿ 23 ರಿಂದ 14 ನೇ ಸ್ಥಾನಕ್ಕೆ ಒಂಬತ್ತು ಸ್ಥಾನಗಳ ಭಡ್ತಿ ಪಡೆದರು. ಆರಂಭಿಕ ಸರಣಿಯ ಟಾಪ್ 10 ಬೋಟ್‌ಗಳು ಮಾತ್ರ ಪದಕ ರೇಸ್‌ನಲ್ಲಿ ಕಾಣಿಸಿಕೊಳ್ಳುತ್ತವೆ.

ಸ್ಕೋರ್: ವಿಷ್ಣು ಸರವಣನ್ ಪುರುಷರ ಡಿಂಗಿ ಸ್ಪರ್ಧೆಯ 7ನೇ ಸುತ್ತಿನಲ್ಲಿ ಏಳನೇ ಸ್ಥಾನ ಪಡೆದರು. ಸರವಣನ್ ಅಂಕಪಟ್ಟಿಯಲ್ಲಿ 14ನೇ ಸ್ಥಾನಕ್ಕೆ ಏರಿದರು.

ಶೂಟಿಂಗ್: ವಿಜಯವೀರ್‌ಗೆ ನಿರಾಸೆ

ಪ್ಯಾರಿಸ್: ಪುರುಷರ 25 ಮೀಟರ್ ರ್‍ಯಾಪಿಡ್ ಫೈಯರ್ ಪಿಸ್ತೂಲ್ ಅರ್ಹತಾ ಸುತ್ತಿನಲ್ಲಿ ಭಾರತದ ವಿಜಯವೀರ್ ಸಿಧು ಅವರು ಒಂಬತ್ತನೇ ಸ್ಥಾನ ಪಡೆದಿದ್ದು, ಫೈನಲ್ನಲ್ಲಿ ಸ್ಥಾನ ಪಡೆಯಲು ಸಾಧ್ಯವಾಗಲಿಲ್ಲ. ಭಾನುವಾರ ನಡೆದ ಪಂದ್ಯದಲ್ಲಿ 22 ವರ್ಷದ ಭಾರತೀಯ ಶೂಟರ್ ಎರಡು ಹಂತಗಳ ನಂತರ ಒಟ್ಟು 583-26 ಅಂಕಗಳೊಂದಿಗೆ 9ನೇ ಸ್ಥಾನ ಪಡೆದರು. ಅಗ್ರ ಆರು ಶೂಟರ್‌ಗಳು ಮಾತ್ರ ಫೈನಲ್ ಪ್ರವೇಶಿಸಿದರು. ಒಂದು ಹಂತಿನಲ್ಲಿ ನಂತರ, ವಿಜಯವೀರ್ ಐದನೇ ಶ್ರೇಯಾಂಕವನ್ನು ಪಡೆದಿದ್ದರು. ಆದಾಗ್ಯೂ, ಕೊನೆಯ ಸುತ್ತಿನಲ್ಲಿ 92 ಅಂಕ ಗಳಿಸುವ ಮೂಲಕ ಪದಕ ಸ್ಪರ್ಧೆಯಲ್ಲಿ ಸ್ಥಾನ ಪಡೆಯುವ ಅವಕಾಶ ಕಳೆದುಕೊಂಡರು.